
ಕಲಾವಿದ ಎಲ್. ಶಿವಲಿಂಗಪ್ಪನವರ

ಜೀವನ ಮತ್ತು ಕಲಾಕೃತಿಗಳು

ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಶೋಧನ ಪ್ರಬಂಧ



ಮಾರ್ಗದರ್ಶಕರು
ಡಾ. ಎಸ್. ಸಿ. ಪಾಟೀಲ
[illegible]ಸಕರು ಮತ್ತು ಮುಖ್ಯಸ್ಥರು
[illegible]ಕಲಾ ವಿಭಾಗ

ಸಂಶೋಧಕರು
ಎಸ್. ವಾದಿರಾಜ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೦

ಕಲಾವಿದ ಎಲ್. ಶಿವಲಿಂಗಪ್ಪನವರ

ಜೀವನ ಮತ್ತು ಕಲಾಕೃತಿಗಳು

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ಎಸ್. ವಾದಿರಾಜ

ಮಾರ್ಗದರ್ಶಕರು

ಡಾ. ಎಸ್.ಸಿ. ಪಾಟೀಲ

ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು

ದೃಶ್ಯಕಲಾ ವಿಭಾಗ

ಲಲಿತಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೯-೧೦

873

<u>ದೃಢೀಕರಣ ಪತ್ರ</u>

"ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಮತ್ತು ಕಲಾಕೃತಿಗಳು" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಎಸ್. ವಾದಿರಾಜ** ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ. ಮತ್ತು ದೃಶ್ಯಕಲಾ ವಿಭಾಗದ ಮೂಲಕ ಈ ಸಂಪ್ರಬಂಧವನ್ನು ಅಧ್ಯಯನಾಂಗಕ್ಕೆ ಸಲ್ಲಿಸಲಾಗುತ್ತದೆ.

ದಿನಾಂಕ : ೧೫.೦೯.೨೦೧೦
ಸ್ಥಳ : ವಿದ್ಯಾರಣ್ಯ

(ಡಾ. ಎಸ್.ಸಿ. ಪಾಟೀಲ)
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪ್ರಮಾಣ ಪತ್ರ

“ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಮತ್ತು ಕಲಾಕೃತಿಗಳು” ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಡಾ. ಎಸ್.ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೧೫.೦೯.೨೦೧೦
ಸ್ಥಳ : ವಿದ್ಯಾರಣ್ಯ

(ಎಸ್. ವಾದಿರಾಜ)
ಸಂಶೋಧಕರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅನುಬಂಧಗಳು

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ

ಪೀಠಿಕೆ

"ಕಲೆ ಸುಸಂಸ್ಕೃತ ಜೀವನದ ಪ್ರತಿಬಿಂಬ, ನಾಗರೀಕ ಜೀವನದ ಪ್ರತಿನಿಧಿ. ಒಂದು ದೇಶದ ಕಲೆಯನ್ನು ಆ ದೇಶದ ಸಂಸ್ಕೃತಿಯ ಪಡಿನೆರಳಾಗಿರುತ್ತದೆ".[೧] ಮಾನವನು ತನ್ನ ಜೀವನದಲ್ಲಿ ಅನೇಕ ವಿಸ್ಮಯಕಾರಕವಾದ ಘಟನೆಗಳನ್ನು, ದಿನನಿತ್ಯದಲ್ಲಿ ನೋಡಿ ಅನುಭವಿಸಿ ಅವುಗಳನ್ನು ತನ್ನ ಮಾಧಮದಲ್ಲಿ ಸಂಗ್ರಹಿಸಿಕೊಂಡು ಒಂದು ರೂಪ ಕೊಡುತ್ತ ಬಂದಿದ್ದಾನೆ. ಅವು ಅಭಿವ್ಯಕ್ತಿಗೊಳ್ಳುವ ಮಾಧ್ಯಮಕ್ಕನುಗುಣವಾಗಿ ಬೇರೆ ಬೇರೆ ಮಾಧ್ಯಮದ ಕಲೆಗಳು ಹುಟ್ಟಿಬಂದಿವೆ. ಇವು "ಒಂದು ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಲು ಸಹಾಯಕ ವಾಗುತ್ತದೆ. ಇದರಿಂದ ಯಾವುದೇ ಒಂದು ನಾಡಿನ ಸಾಹಿತ್ಯ, ಕಲೆ ತತ್ವಜ್ಞಾನ ಮೊದಲಾದವು ಆ ದೇಶದ ಸಂಸ್ಕೃತಿ ತಿರುಳೇನೆಂದು ಜಗತ್ತಿಗೆ ಸಾರುವ ಕೃತಿಗಳಾಗುತ್ತವೆ. ದೇಶೀಯೊಬ್ಬನ್ನು ತನ್ನ ನಾಡಿನಲ್ಲಿ ಬಾಳಿ, ಬದುಕಿ ಅದರ ನೆಲದಲ್ಲಿ ನಡೆದು, ನೀರಲ್ಲಿ ಈಜಿ, ಗಾಳಿಯಲ್ಲಿ ಉಸಿರಾಡಿ, ಅಲ್ಲಿನ ಆವರಣವು ತನಗೆ ಒದಗಿಸುವ ಯಾವತ್ತೂ ಅನುಭವಗಳಿಂದ ತನ್ನ ಮನಸ್ಸನ್ನು ಬೆಳೆಸಿಕೊಂಡು ಪ್ರಬುದ್ಧನಾಗುತ್ತಾನೆ".[೨]

---

೧. ಡಾ. ಎಸ್.ಸಿ. ಪಾಟೀಲ, ವರ್ಣ ಸಂಚಯ, ಪು. ೩೮

೨. ಶ್ರೀಮತಿ ಲಕ್ಷ್ಮಿದೇವಿ ಗವಾಯಿ, ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಕಲಾಕೃತಿಗಳು ಒಂದು ಅಧ್ಯಯನ, ಪು. ೧೪೮

"ಕಲಾವಿದನ ಬದುಕು ಪರಿಸರ ವ್ಯಾಸಂಗ, ಧ್ಯೇಯ, ಧೋರಣೆ, ಸಾಧನೆ ಮತ್ತು ಸಿದ್ಧಿ ಮುಂತಾದವುಗಳು ಆತನ ಕಲಾಕೃತಿಯ ಸೃಷ್ಟಿಯ ಪರಿಕರಗಳಾಗಿರುತ್ತವೆ. ಕಲಾವಿದ ಅವುಗಳಿಗೆ ಅತೀತನಾಗಿ ಕಲಾಕೃತಿ ನಿರ್ಮಾಣಕ್ಕೆ ಅವುಗಳನ್ನು ಹೇಗೆ ದುಡಿಸಿಕೊಳ್ಳುತ್ತಾನೆ ಮತ್ತು ಕಲಾವಿದನ ಸ್ವಂತಿಕೆಯು ಹೇಗೆ ಅಲ್ಲಿ ಅಭಿವ್ಯಕ್ತಗೊಂಡಿರುತ್ತದೆ ಎಂಬುದು ಮುಖ್ಯವಾಗುತ್ತದೆ. ಕಲಾವಸ್ತುವಿನ ಆಯ್ಕೆಯಲ್ಲಿ ಕಲಾವಿದನ ಅಭಿರುಚಿಯೂ ಆ ವಸ್ತುವಿನ ಬಗ್ಗೆ ತೋರುವ ಆಸ್ಥೆ ಇಲ್ಲವೆ ಪ್ರತಿಕ್ರಿಯೆಯಲ್ಲಿ ಕಂಡುಬರುತ್ತದೆ".[೬] ಯಾವುದೇ ಕಲಾವಿದನ ಧೋರಣೆಯೂ ಅವನದೇ ಆದ ಅಭಿವ್ಯಕ್ತಿಯ ವೈಯಕ್ತಿಕತೆಯಡಿ ಅವನ ಕಲಾಸೃಷ್ಟಿಯ ವಿಶಿಷ್ಟತೆಯನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಕಲಾವಿದರ ಜೀವನ ಚರಿತ್ರೆಯ ಅಧ್ಯಯನವು ಇಲ್ಲಿ ಅಷ್ಟೇ ಮಹತ್ವದ್ದಾಗಿದೆ. ಕರ್ನಾಟಕದ ಚಿತ್ರಕಲೆ ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ್ದು, ಈ ಕ್ಷೇತ್ರದ ಕುರಿತು ನಡೆದ ಸಂಶೋಧನೆಗಳು ಬೆರಳಣಿಕೆಯಷ್ಟು ಮಾತ್ರ ಜೊತೆಯಲ್ಲಿಯೇ ಇರುವ ಸಂಗೀತ, ವಾಸ್ತುಶಿಲ್ಪ, ಸಾಹಿತ್ಯದಲ್ಲಿ ಸಾಕಷ್ಟು ರೀತಿಯ ಸಂಶೋಧನೆಗಳು ನಡೆದಿವೆ. ಆದರೆ ಚಿತ್ರಕಲೆಯ ಕ್ಷೇತ್ರದಲ್ಲಿ ಕಲೆಯ ಕುರಿತು ಕಲಾವಿದರ ಕುರಿತು ಇಲ್ಲಿಯವರೆಗೆ ಅಷ್ಟೊಂದು ಗಂಭೀರವಾದ ಅಧ್ಯಯನಗಳು ನಡೆಯದೇ ಇರುವುದನ್ನು ಗಮನಿಸಿ ಪ್ರಸ್ತುತ ಕಲಾವಿದರಾದ ಎಲ್. ಶಿವಲಿಂಗಪ್ಪನವರ ಜೀವನ ಮತ್ತು ಸಾಧನೆಗಳು ಕುರಿತು ಅಧ್ಯಯನ ಮಾಡಲಾಗುವುದು.

ಕರ್ನಾಟಕದಲ್ಲಿ ಕಲಾಸಾಹಿತ್ಯ ವಲಯದಲ್ಲಿ ಅನೇಕ ಮೌಲಿಕ ಕಲಾ ಸಾಹಿತಿಗಳು ಬೆಳಕಿಗೆ ಬರುವುದನ್ನು ಕಾಣಬಹುದು. ಇಂತಹ ಪ್ರಯತ್ನದಲ್ಲಿ ಚಿತ್ರಕಲಾವಿದರಾದ ಎಲ್. ಶಿವಲಿಂಗಪ್ಪನವರನ್ನು ವಿಶೇಷವಾಗಿ ಕರ್ನಾಟಕದಲ್ಲಿ ಕಾಣಬಹುದು. ಹಲವು ಪತ್ರಿಕೆಗಳಲ್ಲಿ ಕಲಾಲೇಖನ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಿಚಾರ ಸಂಕೀರಣದಲ್ಲಿ ಅನೇಕ ಮೌಲಿಕವಾದ ಪ್ರಬಂಧಗಳನ್ನು ಕಲೆ ಕುರಿತಾಗಿಯೇ ಮಂಡಿಸಿರುವುದನ್ನು ಕಾಣಬಹುದು. ಜೊತೆಗೆ ವಿಚಾರ ಸಂಕಿರಣದಲ್ಲಿ ಗೋಷ್ಠಿಯಲ್ಲಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದು, ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಾಸ್ತ್ರ ಹಾಗೂ ಸಾಹಿತ್ಯದ ಅನುಭವಗಳನ್ನು ಒಳಗೊಂಡ ಇವರು ಬಹುಮುಖ ಪ್ರತಿಭೆ ಉಳ್ಳವರಾಗಿದ್ದು, ಕರ್ನಾಟಕ ಕಲಾವಲಯದ ಆಸ್ತಿಯೆಂದು ಪರಿಗಣಿಸಿದ್ದಾರೆ. ಇಂತ ವ್ಯಕ್ತಿಯ ಅಧ್ಯಯನವು ದೃಶ್ಯಕಲಾ ಸಂಶೋಧನೆಗೆ ಅಗತ್ಯವಾಗಿದ್ದು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ಕರ್ನಾಟಕದ ಕಲಾಸಾಹಿತ್ಯ ವಲಯದಲ್ಲಿ ಅನೇಕ ಸಾಹಿತಿಗಳು, ಇತಿಹಾಸಕಾರರು ಹಾಗೂ ಹವ್ಯಾಸಿ ಬರಹಗಾರರು, ದೃಶ್ಯಕಲೆಯ ಕುರಿತಾಗಿ ಪುಸ್ತಕಗಳನ್ನು ಬೆಳಕಿಗೆ ತಂದಿದ್ದಾರೆ. ಆದರೆ ಕಲಾವಿದರೆ ಸ್ವತಃ ಕಲೆಗಳ ಕುರಿತಾಗಿ ಪುಸ್ತಕ ರಚನೆಗೆ ತೊಡಗುವುದು ವಿರಳ. ಅಂತಹ ಪ್ರಯತ್ನದಲ್ಲಿ ಕೆಲವರು ಮಾತ್ರ

---

೬. ಶ್ರೀಮತಿ ಲಕ್ಷ್ಮಿದೇವಿ ಗವಾಯಿ, ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಕಲಾಕೃತಿಗಳು ಒಂದು ಅಧ್ಯಯನ, ಪು. ೪

ಸಿಗುತ್ತಾರೆ. ಇತ್ತೀಚೆಗೆ ದೃಶ್ಯಕಲಾ ಸಂಶೋಧನೆಯಲ್ಲಿ ತೊಡಗಿದ ಅನೇಕ ಕಲಾವಿದರು ಪುಸ್ತಕ ರಚನೆಯಲ್ಲಿ ಮುಂದಾಗುತ್ತಿದ್ದಾರೆ. ಆದರೆ ಸಂಶೋಧನ ಕ್ಷೇತ್ರದ ಅರಿವು ಹೊಂದಿ ಕಲಾ ಸಾಹಿತ್ಯ ರಚಿಸಿದಲ್ಲಿ ಆ ಸಾಹಿತ್ಯಕ್ಕೆ ಇನ್ನು ಹೆಚ್ಚಿನ ಗೌರವವಿದೆ.

ಎಲ್. ಶಿವಲಿಂಗಪ್ಪನರು ಈ ಪ್ರಜ್ಞೆ ಹೊಂದಿದ ಕಲಾವಿದರಾಗಿದ್ದರು. ಇಂತಹವರ ಬಗ್ಗೆ ದೃಶ್ಯಕಲಾ ವಲಯದಲ್ಲಿ ವ್ಯಕ್ತಿ ಅಧ್ಯಯನ ಮಾಡುವುದು ಹಾಗೂ ಅವರು ಬರೆದ ಕಲಾಸಾಹಿತ್ಯ ಕೃತಿಗಳ ಕುರಿತು ವಿಶ್ಲೇಷಣಾತ್ಮಕವಾಗಿ ವಿಮರ್ಶೆಗೊಳಪಡಿಸುವುದು ಅಗತ್ಯವಾಗಿದೆ. ಅವರ ಬಹುಮುಖ ವ್ಯಕ್ತಿತ್ವದ ಕುರಿತು ಚಿತ್ರ ಕಲಾಕೃತಿ, ಶಿಲ್ಪ ಕಲಾಕೃತಿ, ಕಲಾಸಾಹಿತ್ಯವನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

"ಕಲೆಯ ನಿರ್ಮಾಣಕ್ಕೆ ಬೇಕಾಗುವ ಸಮನ್ವಯ ಪ್ರತಿಭೆಯನ್ನು ಕಲಾವಿದ ಉಳಿಸಿಕೊಂಡು ಹೋಗುವ ಮನೋಧರ್ಮವನ್ನು ಬೆಳೆಸಿಕೊಂಡಲ್ಲಿ ಆಗ ತನ್ನಿಂದ ರಚಿತವಾದ ಚಿತ್ರಕಲೆ ಇಂದ್ರ ಸೃಷ್ಟಿಯನ್ನೇ ನಿರ್ಮಿಸ ಬಲ್ಲದು. ಕಲೆಯಿಂದ ಸೌಂದರ್ಯ ತುಂಬುವ ಶಕ್ತಿ ಕಲಾರಾಧಕನಿಗೆ ಮಾತ್ರ ಸಾಧ್ಯ. ಅಂತೆಯೇ ಬಣ್ಣದ ಬದುಕಿನಲ್ಲಿಯೇ ಬಾಳಿ ಕಲ್ಪನಾಶಕ್ತಿಯಿಂದ ಅಳಿದುದ್ದನ್ನು ಸಹ ಜೀವಂತವಾಗಿರಿಸುವ ಪ್ರತಿಭೆಯನ್ನು ಕಲಾವಿದ ಕುಂಚದಿಂದ ಚಿತ್ರಿಸುವಾಗ ಜನರ ಕಣ್ಮನ ಸೆಳೆಯುವ ಚಿತ್ರಕಲೆಯಲ್ಲಿ ತನ್ನ ಅಪ್ರತಿಮ ಪ್ರತಿಭೆಯನ್ನು ಕಾಣಿಕೆಯಾಗಿ ನೀಡುತ್ತ ಬಂದಿದ್ದಾನೆ. ಇಂತಹ ಅನೇಕ ಕಲಾತಪಸ್ವಿಗಳು ಚಿತ್ತಾರ ಲೋಕಕ್ಕೆ ರೂವಾರಿ ಗಳಾಗಿದ್ದಾರೆ".[೪]

"ಕಲಾವಿದನ ಬದುಕು ಮತ್ತು ಕಲಾ ಸಾಹಿತಿಯೂ ಪರಿಸರ, ವ್ಯಾಸಂಗ, ಧ್ಯೇಯ, ಧೋರಣೆ, ಸಾಧನೆ, ಸಿದ್ಧಿ ಮುಂತಾದವುಗಳು ಆತನ ಕಲಾಕೃತಿಯ ನಿರ್ಮಾಣಕ್ಕೆ ಅವುಗಳನ್ನು ಹೇಗೆ ದುಡಿಸಿಕೊಳ್ಳುತ್ತಾನೆ ಮತ್ತು ಕಲಾವಿದರ ಸ್ವಂತಿಕೆಯು ಹೇಗೆ ಅಭಿವ್ಯಕ್ತಗೊಂಡಿರುತ್ತದೆ ಎಂಬುದು ಮುಖ್ಯವಾಗುತ್ತದೆ. ಕಲಾ ವಸ್ತುವಿನ ಆಯ್ಕೆಯಲ್ಲಿ ಕಲಾವಿದನ ಅಭಿರುಚಿಯೂ ಆ ವಸ್ತುವಿನ ಬಗ್ಗೆ ತೋರುವ ಆಸ್ಥೆ ಇಲ್ಲವೇ ಪ್ರತಿಕ್ರಿಯೆಯಲ್ಲಿ ಕಂಡುಬರುತ್ತದೆ".[೫] ಯಾವುದೇ ಕಲಾವಿದನ ಧೋರಣೆಯೂ ಅವನದೇ ಆದ ಅಭಿವ್ಯಕ್ತಿಯ ವೈಯಕ್ತಿತೆಯಲ್ಲಿ ಅವನ ಕಲಾ ಸೃಷ್ಟಿಯ ವಿಶಿಷ್ಟತೆಯನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಎಲ್. ಶಿವಲಿಂಗಪ್ಪನವರ ಜೀವನ ಚರಿತ್ರೆಯ ಅಧ್ಯಯನವು ಇಲ್ಲಿ ಅಷ್ಟೇ ಮಹತ್ವದ್ದಾಗಿದೆ.

ನಾಡಿನ ಸಂಸ್ಕತಿಯ ಜೀವಂತಿಕೆಯ ಹಿಂದೆ ಹಲವು ವ್ಯಕ್ತಿಗಳ ಕಾಯಕದ ಶಕ್ತಿ ಕಂಡುಬರುತ್ತದೆ. ಬದುಕನ್ನೇ ಕಲೆ, ಸಾಂಸ್ಕೃತಿಕವಾಗಿ ಮೀಸಲಾಗಿರಿಸಿದ ಪಲವಾರು ಜನ ಕಲಾವಿದರು ಮತ್ತು ಕಲಾ ಸಾಹಿತಿಗಳಲ್ಲಿ ಒಬ್ಬರಾದ ಎಲ್. ಶಿವಲಿಂಗಪ್ಪನವರು ಪ್ರಮುಖರು. ಚಿತ್ರಕಲೆಗಾಗಿ ಮತ್ತು ಕಲಾ ಸಾಹಿತ್ಯದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ಅರ್ಪಿಸಿಕೊಂಡವರು. ವೈವಿಧ್ಯಮಯವಾದ ಕಲಾ ಕೃತಿಗಳಿಂದ ಮತ್ತು ಕಲಾ

೪. ಎಂ.ವಿ. ಸೀತಾರಾಮಯ್ಯ, ಸಾಹಿತ್ಯ ಮತ್ತು ಚಿತ್ರಕಲೆ, ಪು. ೧೮

೫. ಡಾ. ಜಿ.ಎಸ್. ಶಿವರುದ್ರಪ್ಪ, ಸೌಂದರ್ಯ ಸಮೀಕ್ಷೆ, ಪು. ೨೪

ಸಾಹಿತ್ಯದಿಂದ ಶಿಲ್ಪಕಲೆಯಿಂದ ಹಲವಾರು ಜನಮನವನ್ನು ಸೂರೆಗೊಂಡು ಒಬ್ಬ ಗಮನಾರ್ಹ ಕಲಾವಿದರು, ಸಾಹಿತ್ಯ, ಸಾಂರ್ಧಭಿಕ ಚಿತ್ರಗಳು, ತೈಲವರ್ಣ, ಜಲವರ್ಣದಲ್ಲಿ ಹಾಗೂ ಶಿಲ್ಪಕಲೆಯಲ್ಲಿ ವಿಶಿಷ್ಟವಾದ ಕೊಡುಗೆಯನ್ನು ಕೊಟ್ಟವರು.

"ಚಿತ್ರಕಲೆಯು ಒಂದು ಯಾವುದೇ ಕಲಾಕೃತಿಯೊಂದರ ಅಧ್ಯಯನಕ್ಕೆ ಅವರ ಕರ್ತೃವಿನ ಜೀವನಾಭ್ಯಾಸವು ಅಗತ್ಯವಾಗಿರುತ್ತದೆ. ಕಲಾವಿದ ಬಾಳಿದ ಕಾಲ, ಪರಿಸರ, ಅಲ್ಲದೆ ಅವನ ಸಮಕಾಲೀನ ಅಂಶಗಳು ಹೇಗೆ ಕಲಾಕೃತಿಯಲ್ಲಿ ಒಡಮೂಡಿವೆ ಎಂಬ ಅಂಶಗಳನ್ನು ಅಭ್ಯಸಿಸಿದರೆ ಮಾತ್ರ ಕಲಾಕೃತಿಯನ್ನು ತಿಳಿದುಕೊಳ್ಳಲು ಸಾಧ್ಯ".[೬] ಇಲ್ಲಿ ಶಿವಲಿಂಗಪ್ಪನವರ ಸಾಂಸ್ಕೃತಿಕ ಪರಿಸರ, ಈ ಪರಿಸರದಲ್ಲಿ ಅವರಿಗೆ ಚಿತ್ರಕಲೆಯ ಕಡೆಗೆ ಒಲಿದ ಮನಸ್ಸು, ಅವರ ಬಾಲ್ಯ ಜೀವನದ ಕಲಾಸಕ್ತಿಗಳು, ಅವರಿಗೆ ಪ್ರೇರಣೆ ಪ್ರೋತ್ಸಾಹವನ್ನು ನೀಡಿದವರ ಕುರಿತು ಪ್ರಸ್ತುತ ಅಧ್ಯಯನ ಮಾಡುವ ಉದ್ದೇಶ ಹೊಂದಿದೆ.

ಅವರು ನಿಸರ್ಗ ಕಲಾಕೃತಿಗಳಿಂದ ಪ್ರಭಾವಿತರಾಗಿದ್ದಾರೆ. ಅವರ ಕಲಾ ಕೃತಿಗಳಲ್ಲಿಯ ವಸ್ತುವಿಷಯ, ತಂತ್ರಶೈಲಿ ಮತ್ತು ಅವರ ಕಲಾಚಟುವಟಿಕೆಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ಶಿವಲಿಂಗಪ್ಪನವರು ಶಿಲ್ಪ ಮತ್ತು ಚಿತ್ರ ರಚನೆಯಲ್ಲಿ ತೋರಿರುವ ತಾಂತ್ರಿಕತೆ, ಪ್ರಮಾಣಬದ್ಧತೆ, ಮಾಧ್ಯಮ ಮತ್ತು ನೈಜ ಕೌಶಲ್ಯವನ್ನು ನಾಡಿನ ಹಲವಾರು ಕಲಾವಿದರು ಮತ್ತು ಕಲಾ ಸಾಹಿತಿಗಳು ಮೆಚ್ಚಿದ್ದಾರೆ. ಮೈಸೂರು ಭಾಗದ ಕಲಾವಿದರಲ್ಲಿ ಇವರಿಗೆ ಪ್ರಮುಖ ಸ್ಥಾನವಿದೆ. ಇಂತಹ ಕಲಾವಿದರ ಕಲಾಕೃತಿಗಳೊಂದಿಗೆ ಆಧುನಿಕ ಯುಗದ ಸ್ಪರ್ಧಾತ್ಮಕ ಬದುಕಿನಲ್ಲಿ ಕಲಾಚಟುವಟಿಕೆಯಲ್ಲಿ ಸದಾ ನಿರತರಾಗಿದ್ದಾರೆ. ಬದಲಾದ ಕಲಾ ಸೃಷ್ಟಿಗಳು, ಸದಾ ಅವರ ಸನಿಹದಲ್ಲಿಯೇ ಸುತ್ತುತ್ತಿರುತ್ತವೆ ಎಂಬುದಕ್ಕೆ ಶಿಲ್ಪ ಮತ್ತು ಚಿತ್ರಗಳು ಸಾಕ್ಷಿಯಾಗಿವೆ. ಶಿವಲಿಂಗಪ್ಪನವರು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಖ್ಯಾತಿಯನ್ನು ಹೊಂದಿದ ಕಲಾವಿದರು ಮತ್ತು ಇವರಿಗೆ ಕನ್ನಡ ಅಭಿವೃದ್ಧಿ ಬಳಗ ೧೬ನೇ ವರ್ಷದ ವಾರ್ಷಿಕ ಸಮಾರಂಭದಲ್ಲಿ ಕುವೆಂಪು ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಬಸವ ಬಳಗ ಬಸವಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಅವರ ಸಾಧನೆಯನ್ನು ಇಲ್ಲಿ ಮುಖ್ಯವಾಗಿ ಗುರುತಿಸಬಹುದಾಗಿದೆ. ಅಲ್ಲದೇ ಎಲ್. ಶಿವಲಿಂಗಪ್ಪ ನವರ ಮೂಲಕ ಅವರ ಕಲಾಕೃತಿಗಳಲ್ಲಿ ನಮ್ಮ ಸಂಸ್ಕೃತಿಯ ಸಮಕಾಲೀನ ಸಾಂಸ್ಕೃತಿಕ ವಿವರಗಳು ಹೇಗೆ ದಾಖಲುಗೊಂಡಿವೆ ಎಂಬುದನ್ನು ಸಹ ಪ್ರಸ್ತುತ ಅಧ್ಯಯನದ ಮೂಲಕ ಕಂಡುಕೊಳ್ಳಲಾಗುವುದು.

ಪ್ರಸ್ತುತ ಸಂದರ್ಭದ ಗಮನಾರ್ಹ ಕಲಾವಿದರಲ್ಲೊಬ್ಬರಾದ ಮತ್ತು ಕಲಾ ಸಾಹಿತಿ ಹಾಗೂ ಚಿತ್ರಕಲಾವಿದ ಎಲ್. ಶಿವಲಿಂಗಪ್ಪನವರನ್ನು ಕುರಿತು ಇಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

---

೬. ಡಾ. ಎಸ್.ಸಿ. ಪಾಟೀಲ, ವಿ.ಡಿ. ಕಾಳೆ, ಪು. ೫೪

ಚಿತ್ರಕಲಾ ಕ್ಷೇತ್ರದಲ್ಲಿ ಇದುವರೆಗೆ ನಡೆದ ಅಧ್ಯಯನಗಳು

ಕರ್ನಾಟಕದ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ. ೯೦ರ ದಶಕದಲ್ಲಿ ಈ ಅಧ್ಯಯನಗಳು ತೀವ್ರಗೊಂಡು ಈಗಷ್ಟೇ ತನ್ನ ಶೈಶಾವಸ್ಥೆಯನ್ನು ಕಳೆದು ಯೌವ್ವನಕ್ಕೆ ಕಾಲಿಡುತ್ತಿದೆ. ೧೯೮೦ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಯ ಕುರಿತು ಸಂಶೋಧನಾತ್ಮಕ ಅಧ್ಯಯನ ಗಳು ಪ್ರಾರಂಭಗೊಂಡಿರುವುದು ಕಾಣಸಿಗುತ್ತದೆ.

೧. ಮಾಧ್ಯಮಿಕ ಕಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ ೧೯೮೩, ಡಾ. ಎಸ್.ಸಿ. ಪಾಟೀಲರ ಸಂಶೋಧನಾ ಕಿರು ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣ ವಿಭಾಗ, ಧಾರವಾಡ.

೨. ಕರ್ನಾಟಕ ಜನಪದ ಚಿತ್ರಕಲೆ, ೧೯೯೧, ಡಾ. ಎಸ್.ಸಿ. ಪಾಟೀಲ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩. ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ೧೯೯೫, ಡಾ. ಅ.ಲ.ನರಸಿಂಹನ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೪. ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲ ಚಿತ್ರಗಳು, ೧೯೯೭, ಡಾ. ಸಂಪದಾಭಟ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫. ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ್‌ರ ಜೀವನ ಮತ್ತು ಕಲಾಕೃತಿಗಳು, ೧೯೯೭, ಡಾ. ಪುಷ್ಪ ದ್ರಾವಿಡ, ಪಿಎಚ್.ಡಿ.ಮಹಾಪ್ರಬಂಧ, ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು.

೬. ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ: ಒಂದು ಅಧ್ಯಯನ, ೨೦೦೧, ಡಾ. ಯಾದಪ್ಪ ಪರದೇಶಿ.

೭. ಕರ್ನಾಟಕದ ಜನಪದ ಶಿಲ್ಪಕಲೆ: ಒಂದು ಅಧ್ಯಯನ, ೨೦೦೨, ಡಾ. ಶಿವಾನಂದ ಬಂಟನೂರು, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಬುಡಕಟ್ಟು ಚಿತ್ರಕಲೆ, ೨೦೦೨ ಡಾ. ಗೀರಿಶ್, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಕಲಾವಿದ ಎಂ.ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು : ಒಂದು ಅಧ್ಯಯನ, ೨೦೦೨, ಡಾ. ಲಕ್ಷ್ಮಿದೇವಿ ಗವಾಯಿ, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ೨೦೦೨, ಶರಣಪ್ಪ ಕೋಲ್ಕಾರ, ಪಿಎಚ್.ಡಿ.ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೧. ಕಲಾವಿದ ಆರ್.ಎಂ. ಹಡಪದ : ಒಂದು ಅಧ್ಯಯನ, ೨೦೦೩, ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ, ಪಿಎಚ್.ಡಿ.ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨. ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ, ೨೦೦೫, ಡಾ. ಶಶಿಕಲಾ ಹೂಗಾರ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ, ೨೦೦೫, ಡಾ. ಎಚ್.ಎಸ್. ಚಿತ್ರಗಾರ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಹೈದ್ರಾಬಾದ್ ಕರ್ನಾಟಕದ ರಂಗೋಲಿ ಚಿತ್ರಕಲೆ ಸಾಂಸ್ಕೃತಿಕ ಅಧ್ಯಯನ, ೨೦೦೬, ಡಾ. ವಿಶ್ವೇಶ್ವರಿ ತಿವಾರಿ, ಪಿಎಚ್.ಡಿ. ಮಹಾಪ್ರಬಂಧ. ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೫. ಸುರಪೂರ ಶೈಲಿ ಚಿತ್ರಕಲೆ : ಒಂದು ಅಧ್ಯಯನ, ೨೦೦೭, ಮಲ್ಲಿಕಾರ್ಜುನ ಬಾಗೋಡಿ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೬. ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ, ೨೦೦೮, ಡಾ. ಜಿ. ಲಕ್ಷ್ಮೀಪತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ವಿ.ಬಿ. ಹಿರೇಗೌಡರ ಕಲೆ ಮತ್ತು ಬದುಕು, ೨೦೦೮, ಡಾ. ರವೀಂದ್ರ ಕಮ್ಮಾರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಕಲಾವಿದ ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ, ೨೦೦೯, ಡಾ. ಸೂರ್ಯಕಾಂತ ಮಂಟಗಿ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೯. ಕರ್ನಾಟಕದ ಬಿದರಿಕಲೆ, ೨೦೦೯, ಡಾ. ರಹೆಮಾನ ಪಾಟೀಲ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೨೦. ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ, ೨೦೦೯, ಡಾ. ಜಿ. ಲಕ್ಷ್ಮೀಪತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೧. ಕಲಾವಿದ ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ : ಒಂದು ಅಧ್ಯಯನ, ಡಾ. ಸೂರ್ಯಕಾಂತ ಮಂಟಗಿಯವರ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೯

೨೨. ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ೨೦೧೦, ಶ್ರೀಮತಿ ಸುನಿತಾ ಪಾಟೀಲ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಕರ್ನಾಟಕದ ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ, ೨೦೧೦, ನಿಂಗಪ್ಪ ಎಂ. ಅಂಗಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ಕಲಾವಿದ ಎಂ.ಬಿ. ಪಾಟೀಲ ಜೀವನ ಮತ್ತು ಕಲಾಕೃತಿಗಳು : ಒಂದು ಅಧ್ಯಯನ, ೨೦೧೦, ಸಣ್ಣಮದಗಪ್ಪ ಎಸ್. ಗಡ್ಡಿಯವರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಈ ಮೇಲಿನ ಎಲ್ಲ ಮಹಾಪ್ರಬಂಧಗಳು ಸಲ್ಲಿಕೆಯಾದ ಚಿತ್ರಕಲೆಯ ಕುರಿತಾದ ಪಿಎಚ್.ಡಿ ಮಹಾಪ್ರಬಂಧಗಳಾಗಿವೆ.

೧. ಚಿತ್ರಕಲಾವಿದ ಜೆ.ಎಸ್. ಖಂಡೇರಾವ್ : ಒಂದು ಅಧ್ಯಯನ, ೨೦೦೨ ಮಲ್ಲಿಕಾರ್ಜುನ ಬಾಗೋಡಿ, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ, ೨೦೦೩, ಎ.ಎಸ್. ವಿಶ್ವನಾಥ, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಚಿತ್ರಕಲಾವಿದ ಡಿ.ವಿ. ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ೨೦೦೫, ಶಂಕರ ಕುಂದಗೋಳ, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಚಿತ್ರಕಲಾವಿದ ಎಂ.ವಿ. ಮಿಣಜಿಗಿಯವರ ಬದುಕು ಮತ್ತು ಕಲಾಕೃತಿಗಳು, ೨೦೦೫, ಸಿ.ಡಿ. ಜಟ್ಟೆಣ್ಣವರ, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ವಿಜಯನಗರ ಭಿತ್ತಿ ಚಿತ್ರಕಲೆ, ೨೦೦೬, ಸುಚಿತ್ರಾ ಲಿಂಗದಳ್ಳಿ, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಕಿನ್ನಾಳದ ಕಲೆ, ೨೦೦೬, ರವಿನಾಯ್ಕ್, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಜೈನ ಚಿತ್ರಕಲೆ, ೨೦೦೭, ಉಮೇಶ, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ನಿಪ್ಪಾಣಿವಾಡೆ ಭಿತ್ತಿ ಚಿತ್ರಕಲೆ, ೨೦೦೭, ಬಿ.ಎಂ. ಪಾಟೀಲ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಶೈಲ ಬರಡೊಲ, ಸಂತಸುಬ್ಬರಾಯ ಜೀವನ ಕಲಾಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಕೃಷ್ಣೇಗೌಡ ಎಚ್.ಎನ್., ೨೦೦೮, ಕರ್ನಾಟಕದಲ್ಲಿ ಟಿಬೇಟಿಯನ್ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ಗಿರಿಜಾ ಎಸ್. ಬಿರಾದಾರ, ಬಿಜಾಪುರ ಜಿಲ್ಲೆಯ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಮಹಾಕೂಟೇಶ್ವರ ಪಾಟೀಲ, ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ಬಸವರಾಜ ಗವಿಮಠ, ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಕೃಷ್ಣವೇಣಿ, ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ಮಹಾಂತೇಶ ಘಲದನ್ನಿ, ಲಜ್ಜಾಗೌರಿ ಶಿಲ್ಪಕಲೆ ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಸಂತೋಷ ಕುಲಕುರ್ಣಿ, ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಜೈರಾಜ್ ಚಿಕ್ಕಪಾಟೀಲ, ಕರ್ನಾಟಕದ ಜಾಹಿರಾತುಗಳ ಸಾಂಸ್ಕೃತಿ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಮಹೇಶ ಉಮತಾರ, ಬಿ.ಪಿ. ಬಾಯಿರಿ ಅವರ ಕಲಾಬದುಕು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯. ಸುರೇಶ ಎಸ್. ಬಡಿಗೇರ, ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಚಿತ್ರಕಲೆ ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಯೋಗಿಶ್ ಹೆಚ್., ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೧. ಶಾಮಜಮದಾರ, ಕಲಾವಿದ ಸಿ.ಎನ್. ಪಾಟೀಲ ಕಲೆ ಮತ್ತು ಬದುಕು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಕಾಂತರಾಜು, ತುಮಕೂರು ಜಿಲ್ಲೆಯ ಭಿತ್ತಿ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ವಿಶ್ವನಾಥ, ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ಕಲೆ ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ರಂಗಸ್ವಾಮಿ, ಕಲಾವಿದ ರುಮಾಲೆ ಚನ್ನಬಸವಯ್ಯ ಜೀವನ ಮತ್ತು ಕಲಾಕೃತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಈ ಮೇಲಿನ ಎಲ್ಲ ಸಂಪ್ರಬಂಧಗಳು ಚಿತ್ರಕಲೆಯ ಕುರಿತಾದ ಎಂ.ಫಿಲ್. ಸಂಪ್ರಬಂಧಗಳಾಗಿವೆ. ಬೆಂಗಳೂರು, ಗುಲಬರ್ಗಾ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಕನ್ನಡ ವಿಶ್ವವಿದ್ಯಾಲಯಗಳಲ್ಲಿ ಪಿಎಚ್.ಡಿ. ಅದ್ಯಯನಕ್ಕಾಗಿ ಸರಿ ಸುಮಾರು ೨೫ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ರಚನೆಯಾಗಿದೆ. ಇದೇ ರೀತಿ ೧೫ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೆ ವಿಶ್ವವಿದ್ಯಾಲಯಗಳ ಡಿಪ್ಲೊಮಾ ಪದವಿ ಅಂತಿಮ ವರ್ಷಕ್ಕೆ ಸಿದ್ಧಪಡಿಸುವ ಕಿರು ಯೋಜನಾ ವರದಿಗಳು, ಬಿ.ವಿ.ಎ. ಮತ್ತು ಬಿ.ಎಫ್.ಎ., ಬಿ.ವಿ.ಇಡಿ., ಪದವಿ ಹಾಗೂ ಎಂ.ವಿ.ಎ. ಮತ್ತು ಎಂ.ಎಫ್.ಎ. ಸ್ನಾತಕೋತ್ತರ ಹಂತದಲ್ಲಿ ಸುಮಾರು ೪೦೦ಕ್ಕೂ ಹೆಚ್ಚಿನ ಲಘುಶೋಧ ಪ್ರಬಂಧಗಳು ರಚನೆಗೊಂಡಿರುತ್ತವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಸಂಶೋಧನಾ ಅಧ್ಯಯನವು ಕಲಾಕ್ಷೇತ್ರದಲ್ಲಿ ಅನಿವಾರ್ಯವಾದ ಅಧ್ಯಯನವಾಗಿ ಬೆಳೆಯುತ್ತಿದೆ. ಪ್ರಸ್ತುತವಾಗಿ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ

ಮುನ್ನಡೆಯುತ್ತಿಲಿದ್ದು ಭವಿಷ್ಯದ ಮುಖ್ಯವಾಹಿನಿಯಲ್ಲಿ ಕಲಾ ಕ್ಷೇತ್ರವು ಸಂಶೋಧನಾತ್ಮಕವಾಗಿಯೂ ಇನ್ನಷ್ಟು ಬಲಗೊಳ್ಳುವ ಆಶಯವನ್ನು ಕಾಣಬಹುದು.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ವಿವರವನ್ನು ಇಲ್ಲಿ ಕೊಡಲಾಗುವುದು.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ, ಮೂಲ ಆಕರ ಸಾಮಗ್ರಿ ಹಾಗೂ ಆನುಷಂಗಿಕ ಅಕರ ಸಾಮಗ್ರಿಯ ಕುರಿತಂತೆ ವಿವರಣೆ ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಎಲ್. ಶಿವಲಿಂಗಪ್ಪನವರು ಜನಿಸಿದ ಮೈಸೂರು ಪರಿಸರದ ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಅವರ ಬಾಲ್ಯಜೀವನ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಮೈಸೂರಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಹಂತದ ಶಿಕ್ಷಣವನ್ನು ಜೊತೆಗೆ ಅವರು ಗುರುಗಳಾದ ನಾಗೇಂದ್ರ ಸ್ಥಪತಿ ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳ ಗುರುಕುಲದಲ್ಲಿ ಕೈಗೊಂಡ ಕಲಾಶಿಕ್ಷಣ ಅಲ್ಲಿಯ ಪಠ್ಯಕ್ರಮ ಅವರ ಸಮಕಾಲೀನ ಶಿಲ್ಪ ಕಲಾವಿದರು ಅವರ ಸ್ನೇಹಿತರು, ಅಲ್ಲಿ ಕೈಗೊಂಡ ಕಲಾ ಚಟುವಟಿಕೆಗಳನ್ನು ಗುರುಕುಲ ಮತ್ತು ಸಾಂಸ್ಕೃತಿಕ ವಾತಾವರಣ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಎಲ್. ಶಿವಲಿಂಗಪ್ಪನವರು ಬೆಂಗಳೂರಿನಲ್ಲಿರುವ ಬಿ.ಇ.ಎಂ.ಎಲ್. ಕಾರ್ಖಾನೆಯಲ್ಲಿ ಉದ್ಯೋಗದ ಜೊತೆ ಜೊತೆಗೆ ತಮ್ಮ ಕಲಾಬದುಕು ಪ್ರಾರಂಭಗೊಳಿಸುತ್ತಾರೆ. ಇವರಿಗೆ ಕಲೆಯ ಬಗ್ಗೆ ತಿಳಿದುಕೊಳ್ಳಬೇಕೆಂಬ ಹಂಬಲ ವೃದ್ಧಿಯಾಗುತ್ತಾ ಬಂತು. ಕಾರ್ಖಾನೆಯ ಕೆಲಸ ಮುಗಿದ ನಂತರ ಇವರು ಬಿಡುವು ಇದ್ದಾಗಲೆಲ್ಲಾ ಚಿತ್ರ ರಚಿಸುವುದರ ಜೊತೆಗೆ ಸಾಹಿತ್ಯದ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಶಿವಲಿಂಗಪ್ಪನವರು ಹೆಚ್ಚಿನ ಕಲಾ ಶಿಕ್ಷಣಕ್ಕಾಗಿ ಕಲಾಶಾಲೆಗೆ ಹೋಗಿ ಕಲಿಯಬೇಕೆಂದರೆ ದೈನಂದಿನ ಹಾಜರಿ ಅವಶ್ಯವಿತ್ತು. ಚಿತ್ರಕಲೆ ಮತ್ತು ಸಂಗೀತ ನೃತ್ಯ ತರಗತಿಗಳು ಬೆಳಗ್ಗೆ ಮತ್ತು ಸಂಜೆಯ ಸಮಯದವರೆಗೆ ನಡೆಸುತ್ತಿದ್ದರು. ಅದರಿಂದ ಇವರ ಕಲಾ ಬದುಕು ನಡೆಯುತ್ತಿತ್ತು. ಹೀಗೆ ಹಲವಾರು ವಿಷಯದ ಬಗ್ಗೆ ವಿವರವಾಗಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಎಲ್. ಶಿವಲಿಂಗಪ್ಪನವರು ರಚಿಸಿದ ಕಲೆಯ ಬಗ್ಗೆ ವಿವರಿಸಲಾಗಿದೆ. ಇಲ್ಲಿ ಜಲವರ್ಣ, ತೈಲವರ್ಣ ಹಾಗೂ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ವರ್ಣ ಚಿತ್ರಗಳ ಬಗ್ಗೆ ಮತ್ತು ಬಸವಣ್ಣನವರ ವಚನಗಳ ಆಧಾರಿತ ಚಿತ್ರಗಳು ಇಲ್ಲಿ ಚರ್ಚಿತವಾಗಿದೆ. ಶಿವಲಿಂಗಪ್ಪನವರು ಸಾಂಪ್ರದಾಯಕ ಕಲಾವಿದರಾಗಿದ್ದು, ನಮ್ಮ ನಾಡಿನ ಸಂಸ್ಕೃತಿ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದವರು. ಇಲ್ಲಿಯೂ ಸಹಿತ ಅಧ್ಯಯನಕ್ಕಾಗಿ ಉಪವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಅವು

ಬಸವಣ್ಣನವರ ವಚನದ ಚಿತ್ರಗಳು ಮತ್ತು ಅಕ್ಕಮಹಾದೇವಿಯ ವಚನಗಳ ಆಧಾರಿತ ಜೀವ ಮಾದರಿ ಚಿತ್ರಗಳು, ಸ್ಥಿರಚಿತ್ರಣ, ನಿಸರ್ಗ ಚಿತ್ರಣ, ಸಂಯೋಜನಾ ಚಿತ್ರಣಗಳು ಅದಲ್ಲಿ ಪುರಾಣ ಗ್ರಂಥ ಚಿತ್ರಣಗಳು, ಧಾರ್ಮಿಕ, ಐತಿಹಾಸಿಕ, ಸಾಮಾಜಿಕ ಚಿತ್ರಗಳು ಅವರ ಕಲಾಕೃತಿಗಳ ಸಂಯೋಜನಾ ರೀತಿ ಬಣ್ಣ ರೇಖೆಗಳ ಬಗ್ಗೆಯೂ ವಿವರವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಎಲ್. ಶಿವಲಿಂಗಪ್ಪ ರಚಿಸಿದ ಶಿಲ್ಪಗಳನ್ನು ಕುರಿತು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ. ೧. ಫೈಬರ್ ಶಿಲ್ಪಗಳು ೨. ಮರಳಚ್ಚು ಶಿಲ್ಪಗಳು ೩. ಕೊಳವೆ ಶಿಲ್ಪಗಳು ೪. ಥರ್ಮಾಕೋಲ ಶಿಲ್ಪಗಳು ಹೀಗೆ ವೈವಿಧ್ಯಮಯವಾದ ಶಿಲ್ಪಗಳನ್ನು ವಿಷಯವಾರು ಹಾಗೂ ಮಾಧ್ಯಮವಾರು ವರ್ಗೀಕರಿಸಿಕೊಂಡು ವಿವರವಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಆರನೆಯ ಅಧ್ಯಾಯದಲ್ಲಿ ಎಲ್. ಶಿವಲಿಂಗಪ್ಪನವರ ಕಲಾಕೃತಿಗಳ ರಚನೆಯ ಪರಿಸರ ಕಲಾ ವಾತಾವರಣ, ಕಲಾ ಗುರುಗಳ ಪ್ರೇರಣೆ ಪ್ರಭಾವ ಪರಿಣಾವಗಳ ಬಗ್ಗೆ ಇಲ್ಲಿ ವಿವರಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಎಲ್. ಶಿವಲಿಂಗಪ್ಪನವರ ದೃಶ್ಯಕಲಾ ಸಾಹಿತ್ಯದ ಕುರಿತು ಚರ್ಚೆ ಇದೆ. ಮಾಧ್ಯಮಗಳಲ್ಲಿ ಸಂದರ್ಶನ ವಿವಿಧ ಸ್ಮರಣ ಸಂಚಿಕೆಗಳಿಗೆ ಬರೆದ ಪ್ರೌಢ ಲೇಖನಗಳು. ವಿಚಾರ ಸಂಕೀರಣ ಗಳಲ್ಲಿ ಮಂಡಿಸಿದ ಪ್ರಬಂಧಗಳು, ಕಲಾಶಿಬಿರಗಳು, ಕಲಾವಿದರ ಬಗ್ಗೆ ಬರೆದ ೨೦ಕ್ಕೂ ಹೆಚ್ಚು ಪುಸ್ತಕಗಳ ಬಗ್ಗೆ ಸಮಗ್ರ ವಿವರಗಳನ್ನೊಳಗೊಂಡಿದೆ.

ಎಂಟನೆಯ ಅಧ್ಯಾಯವು ಸಮಾರೋಪವಾಗಿದ್ದು ಅಧ್ಯಯನದಿಂದ ಹೊರಬಂದ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಒಳಗೊಂಡಿರುತ್ತದೆ.

ಅಧ್ಯಯನದ ವಿಧಾನ

ಈ ಅಧ್ಯಯನಕ್ಕೆ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ

ಸಂಶೋಧನೆಯ ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ ಸ್ವತಃ ಕಲಾವಿದರ ಸಂದರ್ಶನದ ಚರ್ಚೆ, ಕಲಾಕೃತಿಗಳ ಛಾಯಾಚಿತ್ರಣ ಮಾಡುವುದು, ಅವರ ಕುರಿತು ಬಂದ ಸಂದರ್ಶನಗಳಿಂದ ವಿಷಯಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ.

ಸಂದರ್ಶನ : ವಿಶೇಷವಾಗಿ ಇಲ್ಲಿ ಕಲಾವಿದರಾದ ಎಲ್. ಶಿವಲಿಂಗಪ್ಪ ಅವರನ್ನು ಸಂದರ್ಶಿಸಿ ಅವರ ಸಾಂಸ್ಕೃತಿಕ ಪರಿಸರ, ಬಾಲ್ಯಜೀವನ, ಅವರು ಗುರುಕುಲದಲ್ಲಿ ಕಲಾಶಿಕ್ಷಣ, ಅಲ್ಲಿಯ ವಾತಾವರಣ, ಕಲೆಯ

ಕಡೆ ಒಲಿದ ಮನಸ್ಸು, ಕಲಾವಿದರು, ಕಲಾಸ್ನೇಹಿತರು, ಕಲಾಗುರುಗಳು, ಅಲ್ಲಿ ಅವರು ಕೈಗೊಂಡ ಕಲಾಚಟುವಟಿಕೆಗಳು ಅಲ್ಲಿಯ ವಾತಾವರಣದಿಂದ ಪಡೆದ ಅನುಭವಗಳು, ಪ್ರೇರಣೆ ನೀಡಿದ ಗುರುಗಳು, ಕಲಾವಿದರು, ಅವರ ವೃತ್ತಿಜೀವನ, ಈ ಹಂತದಲ್ಲಿ ಅವರು ರಚಿಸಿದ ಕಲಾಕೃತಿಗಳ ರಚನೆ, ಅವರ ಕಲಾಕೃತಿಗಳ ರಚನಾತಂತ್ರ, ವಸ್ತುವಿಷಯ, ವರ್ಣಗಾರಿಕೆಯ ಪ್ರಭಾವ ಹೀಗೆ ಹತ್ತು ಹಲವು ವಿಷಯಗಳನ್ನು ಮುಖತಃ ಸಂದರ್ಶಿಸಲಾಯಿತು.

ಅಲ್ಲದೇ ಅವರ ಕುಟುಂಬದವರಿಂದ ಅವರ ಸ್ನೇಹಿತ ವರ್ಗದವರಿಂದ ಅವರ ನಿಕಟ ವರ್ತಿಗಳಿಂದ ಸಂದರ್ಶನವನ್ನು ಕೈಗೊಂಡ ವಿಷಯವನ್ನು ಸಂಗ್ರಹಿಸಿಕೊಳ್ಳಲಾಗಿದೆ. ಇಷ್ಟಲ್ಲದೆ ಅವರ ವ್ಯಕ್ತಿತ್ವವನ್ನು ತಿಳಿದುಕೊಳ್ಳುವ ಸಲುವಾಗಿ ಪ್ರಶ್ನಾವಳಿಯನ್ನು ತಯಾರಿಸಿಕೊಂಡು ಶಿವಲಿಂಗಪ್ಪನವರ ಸಮಕಾಲೀನ ಕಲಾವಿದರು, ಆಪ್ತ ಪರಿಚಿತರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಕೊಂಡು ಕೈಗೊಳ್ಳಲಾಗಿದೆ.

ಛಾಯಾಚಿತ್ರಣ : ಕಲಾವಿದ ಎಲ್. ಶಿವಲಿಂಗಪ್ಪನವರ ಮನೆಗೆ ಹೋಗಿ ಅವರ ಮೂಲ್ಯ ಕಲಾಕೃತಿಗಳನ್ನು ಹಾಗೂ ಶಿಲ್ಪ ಕಲಾಕೃತಿಗಳನ್ನು ಛಾಯಾಚಿತ್ರ ಮಾಡಿಕೊಳ್ಳಲಾಯಿತು. ಇದರಲ್ಲಿ ಅಧ್ಯಯನ ಕಾಲದಲ್ಲಿ ರಚಿಸಿದ ಕಲಾಕೃತಿಗಳು, ವೃತ್ತಿಯಲ್ಲಿ ರಚಿಸಿದ ಕಲಾಕೃತಿಗಳು, ನಿವೃತ್ತಿಯ ನಂತರದಲ್ಲಿ ರಚಿಸಿದ ಕಲಾಕೃತಿಗಳು ಹಾಗೂ ಅವರು ಬರೆದ ಪುಸ್ತಕಗಳು, ಕಲಾವಿದರ ಜೀವನ ಹಾಗೂ ಕಲಾಕೃತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ

ಸಂಶೋಧನ ಮಹಾಪ್ರಬಂಧಗಳು ಪ್ರಕಟಿತಅಪ್ರಕಟಿತ ಕೃತಿಗಳು, ನಿಘಂಟುಗಳು, ಪತ್ರಿಕೆಗಳು, ಕಲಾವಿದರ ಕಲಾಕೃತಿಗಳನ್ನುದ್ದೇಶಿಸಿ ಪ್ರಕಟವಾದ ಕಲಾವಿಮರ್ಶೆ ಮತ್ತು ಅಭಿಪ್ರಾಯಗಳು, ಲೇಖನಗಳು ಸಂಶೋಧನ ಲೇಖನಗಳು, ಬೇರೆ ಬೇರೆ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗೆ ಹೋಗಿ ಅಲ್ಲಿಂದ ವಿಷಯವನ್ನು ಸಂಗ್ರಹಿಸಿಕೊಂಡು ಬಂದು ಈ ಸಂಪ್ರಬಂಧವನ್ನು ಸಿದ್ಧಪಡಿಸಲಾಗಿದೆ.



ಅಧ್ಯಾಯ ೨

ಕಲಾವಿದ ಎಲ್. ಶಿವಲಿಂಗಪ್ಪನವರ ಪರಿಸರ ಮತ್ತು ಬಾಲ್ಯ ಜೀವನ

"ವಿಜಯನಗರ ಸಾಮ್ರಾಜ್ಯವು ಪತನಗೊಂಡ ನಂತರ ಹುಟ್ಟಿದ್ದು ಮೈಸೂರು ಸಾಮ್ರಾಜ್ಯ. ಈ ದಿಸೆಯಲ್ಲಿ ಮೈಸೂರು ಕಾಲದಲ್ಲಿ ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಿರ್ಮಾಣಗೊಂಡ ಅರಮನೆ ಕ್ರಿ.ಶ. ೧೮೯೭-೧೯೧೨ ನಂತರದಲ್ಲಿ ಶ್ರೀ ಜಯಚಾಮರಾಜ ಒಡೆಯರ ಕಾಲದಲ್ಲಾದ ದೇವಾಲಯಗಳು ಮುಖ್ಯವಾಗಿದ್ದು ಅರಮನೆಯೊಳಗಿನ ಚಿತ್ರಕಲೆಗಳು ಮತ್ತು ದೇವಾಲಯದೊಳಗಿನ ಶಿಲ್ಪಕಲೆಗಳು. ಇವುಗಳು ಒಂದೊಂದು ಆ ಕಾಲದ ರಾಜರ ಆಳ್ವಿಕೆ ವಿಚಾರಗಳನ್ನು ಬದುಕು ಬವಣೆಗಳ ದೃಷ್ಟಿಯಿಂದ ಒಳಹೊಕ್ಕು ನೋಡಿದಾಗ ತೆರೆದುಕೊಳ್ಳುವ ವಿಚಾರಗಳು ಅಗಣಿತ ಅಪಾರ. ಈ ದೃಷ್ಟಿಯಿಂದ ಅವಲೋಕಿಸದಾಗ ಶ್ರೀ ಜಯಚಾಮರಾಜ ಒಡೆಯರ ಆಳ್ವಿಕೆಯಲ್ಲಿ ಇದೊಂದು ದೊಡ್ಡ ಮತ್ತು ಪ್ರಮುಖ ಪಟ್ಟಣ ಕೇಂದ್ರವಾಗಿತ್ತು. ಇಂತಹ ಒಂದು ಪ್ರಮುಖ ಪಟ್ಟಣವು ಮೈಸೂರು ಸಂಸ್ಕೃತಿ, ಸಾಹಿತ್ಯ, ಕಲೆ ಹಾಗೂ ಇತರೆ ಕಲೆಗಳಿಗೆ ರಾಜಾಶ್ರಯ ಸಿಕ್ಕಿ ವಿಜೃಂಭಿಸಿ ಬೆಳೆಯಿತೆನ್ನಬಹುದು".[೧] ಇಂತಹ ಪರಿಸರದಲ್ಲಿ ಬೆಳೆದ ಖ್ಯಾತ ಶಿಲ್ಪಿಗಳು, ಚಿತ್ರಕಲಾವಿದರು, ಕಲೆಯ ಸಾಧಕರ ಮೇಲೆ ಮೈಸೂರಿನ ಸಾಂಸ್ಕೃತಿಕ ಪರಿಸರ ಸಾಕಷ್ಟು ಪ್ರಭಾವ ಬೀರಿದೆ. ಇಂತಹ ಐತಿಹಾಸಿಕ, ಸಾಂಸ್ಕೃತಿಕ ಮಹತ್ವದ ಪರಿಸರದಿಂದ ಬಂದ

---

೧. ಪಿ.ಆರ್. ತಿಪ್ಪೇಸ್ವಾಮಿ ಪ್ರ.ಸಂ. ಚಿತ್ರಕಲಾ ಪ್ರಪಂಚ, ಪು. ೬೨೫

ಎಲ್.ಶಿವಲಿಂಗಪ್ಪನವರು ತಮ್ಮದೇ ವಿಶಿಷ್ಟ ಶೈಲಿಯಿಂದ ಗುರುತಿಸಿಕೊಂಡು ಅನೇಕ ಶಿಲ್ಪ ಚಿತ್ರಕಲಾಕೃತಿಗಳನ್ನು ರಚಿಸಿ ಬಹು ಎತ್ತರಕ್ಕೆ ಬೆಳೆದಿದ್ದಾರೆ. ಸಾಂಪ್ರದಾಯಿಕ ಶೈಲಿಯಲ್ಲಿ ಶಿವಲಿಂಗಪ್ಪನವರು ಬೆಳೆದುಬಂದು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಮನೆತನ

ಧಾರ್ಮಿಕ, ಸಾಂಸ್ಕೃತಿಕ ಆಚರಣೆಯಲ್ಲಿ ಬರುವ ಜನಪದ ಕಲೆಯಲ್ಲಿ ಒಂದಾದ ನಂದಿಧ್ವಜವನ್ನು ಆ ಭಾಗದಲ್ಲಿ ನಂದಿ ಕಂಬವೆಂದು ಕರೆಯುತ್ತಾರೆ. ಇದರೊಂದಿಗೆ ಕರಡಿ ವಾದ್ಯದ ಗೀಗಿ ಕುಣಿಸುವುದೊಂದು ಅಪೂರ್ವ ಕಲೆ. ಸುಮಾರು ೩೦-೩೫ ಅಡಿ ಉದ್ದವಿರುವುದಲ್ಲದೇ ಅದಕ್ಕೆ ಅನುಗುಣವಾಗಿ ಬಾವುಟ ಹರಡುವುದು. ಸುಮಾರು ೬೦-೭೦ ಕೆ.ಜಿ. ತೂಕದವರೆಗೂ ಇರುತ್ತದೆ. ಅದನ್ನು ಲೀಲಾಜಾಲವಾಗಿ ಕುಣಿಸುತ್ತಿದ್ದ ಶಿವಲಿಂಗಪ್ಪನವರ ತಂದೆ ಲಿಂಗಪ್ಪನವರು ಅನೇಕರಿಗೆ ತರಬೇತಿ ಸಹ ನೀಡಿದ್ದರು. ದಸರಾ ಮಹೋತ್ಸವದಲ್ಲಿ ಜಂಬು ಸವಾರಿ ಹೊರಡುವ ಮುನ್ನ ಪ್ರಥಮವಾಗಿ ಪೂಜೆ ಸಲ್ಲಿಸುವುದೇ ನಂದಿ ಕಂಬಕ್ಕೆ. ಆ ನಂದಿ ಕಂಬದ ಮುಂದಾಳತನ ಶಿವಲಿಂಗಪ್ಪನವರ ತಂದೆಯವರೇ ವಹಿಸಿಕೊಳ್ಳುತ್ತಿದ್ದರು. ಮನೆಯಲ್ಲಿ ಬಡತನವಿದ್ದರೂ ದಿನಕ್ಕೊಬ್ಬರಿಗಾದರೂ ಜಂಗಮರಿಗೆ ಅನ್ನದಾನ ನೀಡಿ ತಾವು ಮತ್ತು ಮನೆಯವರೆಲ್ಲರೂ ಸೇವಿಸುತ್ತಿದ್ದರು. ಇವರ ಮನೆಯಲ್ಲಿ ದಿನಾಲು ಬೆಳಿಗ್ಗೆ ಮತ್ತು ಸಂಜೆ ಇಷ್ಟಲಿಂಗ ಪೂಜೆ ಮಾಡುವುದು ಕಡ್ಡಾಯವಾಗಿತ್ತು. ಹೀಗೆ ಧಾರ್ಮಿಕ ನಿಯಮಗಳನ್ನು ಚಾಚು ತಪ್ಪದೇ ನಡೆಸಿಕೊಂಡು ಬರುತ್ತಿದ್ದ ಇಂತಹ ಪರಿಸರದ ಪ್ರಭಾವ ಕಲಾವಿದ ಶಿವಲಿಂಗಪ್ಪನವರ ಮೇಲಾಯಿತು. ಕಲಾವಿದ ಶಿವಲಿಂಗಪ್ಪನವರ ತಂದೆ ಲಿಂಗಪ್ಪ ಮತ್ತು ತಾಯಿ ವೀರಮ್ಮ ಮೂರು ಜನ ಗಂಡು ಮಕ್ಕಳಲ್ಲಿ ಹಿರಿಯ ಅಣ್ಣನಾದ ಚೆನ್ನಬಸವಣ್ಣ ಮತ್ತು ಗುರುಸ್ವಾಮಿ. ಒಬ್ಬಳು ಹೆಣ್ಣು ಮಗಳು ಅಕ್ಕ ಮಹಾದೇವಮ್ಮ, ಕಿರಿಯ ಮಗ ಎಲ್. ಶಿವಲಿಂಗಪ್ಪ. ಇವರು ಮೈಸೂರಿನಲ್ಲಿ ೧೯೪೬ರಲ್ಲಿ ನವೆಂಬರ್ ೨೪ನೇ ತಾರೀಖಿನಂದು ಜನಿಸಿದರು.

ಲಿಂಗಪ್ಪ ಎಂಬ ಹೆಸರಿನ ಹಿಂದೆ 'ಕರೋಟಿ' ಎಂಬ ಅಂಕಿತವೂ ಅಂಟಿಕೊಂಡಿತ್ತು. ಅರಮನೆಯ ದನ ಕರುಗಳನ್ನು ಕಟ್ಟಿ ಮೇಯಿಸುವ ಸ್ಥಳಕ್ಕೆ 'ಕರುಹಿನ ಹಟ್ಟಿ' ಎಂದು ಕರೆಯುತ್ತಿದ್ದರು. ಅದು ಕ್ರಮೇಣ ಜನರ ಬಾಯಿಂದ ಕರೋಟಿಯಾಯಿತು. ಇಲ್ಲಿ ಕೆಲಸ ಮಾಡುತ್ತಿದ್ದುದರಿಂದ ಕರೋಟಿ ಲಿಂಗಪ್ಪ ಎಂಬ ಹೆಸರು ಚಾಲ್ತಿಯಾಯಿತು. ಹಾಗೆಯೇ ಜೀವನೋಪಾಯಕ್ಕಾಗಿ ಹೋರಿಯನ್ನು ಕಟ್ಟಿಕೊಂಡಿದ್ದರಿಂದ ಹೋರಿ ಲಿಂಗಪ್ಪ ಎಂಬ ಹೆಸರು ಸಹ ಪ್ರಚಲಿತದಲ್ಲಿತ್ತು.[೨] ಆ ತೆರನ ಕಾಯಕದ ಮೂಲಕ ಪ್ರಕ್ರಿಯೆ ಆರಂಭವಾಗಿದ್ದು ೧೨ನೆಯ ಶತಮಾನದಿಂದ ಈಗಲೂ ಉತ್ತರ ಕರ್ನಾಟಕದ ಭಾಗದಲ್ಲಿ ಅವರ ಹೆಸರಿನ ಮುಂದೆ ಅಂಕಿತನಾಮವನ್ನು ಬಳಸುತ್ತಾರೆ. ಶಿವಲಿಂಗಪ್ಪನವರ ತಂದೆ ಅವರು ಅರಮನೆಯಲ್ಲಿ ನೌಕರರಾಗಿದ್ದರು

---

೨. ಡಾ. ಎಸ್.ಸಿ. ಪಾಟೀಲ, ಸಾಧನೆಯ ಸಮುಚ್ಚಯ ಎಲ್. ಶಿವಲಿಂಗಪ್ಪ, ಪು.

ಎಂದೊಡನೆಯೇ ಕೈತುಂಬಾ ಕಾಸು ಬರುವ ಕೆಲಸವೆಂದು ಭಾವಿಸಿದರೆ ಬಹುದೊಡ್ಡ ತಪ್ಪಾದೀತು. ಅರಮನೆಯಲ್ಲಿ ಲಿಂಗಪ್ಪನವರಿಗೆ ಪ್ರತಿ ತಿಂಗಳು ೧೦ ರೂಪಾಯಿಗಳಾಗಿ ಸಂಬಳ ಹಾಗೂ ಒಪ್ಪೊತ್ತಿನ ಊಟಕ್ಕೆ ಕೆಲಸ ಮಾಡಬೇಕಾಗಿತ್ತು. ಅನಿವಾರ್ಯತೆ ಈ ಪರಿಸ್ಥಿತಿಯಲ್ಲಿಯೇ ಲಿಂಗಪ್ಪನವರಿಗೆ ದೊಡ್ಡ ಕುಟುಂಬ ಇದ್ದುದರಿಂದ ತಿಂಗಳಿಗೆ ೧೦ ರೂ. ಸಂಬಳ ಸಾಕಾಗುತ್ತಿರಲಿಲ್ಲ. ಅದಕ್ಕೆ ಜೀವನೋಪಾಯಕ್ಕಾಗಿ ಹೋರಿಯೊಂದು ಸಾಕಿಕೊಂಡಿದ್ದರು. ಆಕಳು ಸಾಕಿದವರು ಸಂತಾನೋತ್ಪತ್ತಿಗಾಗಿ ಈ ಹೋರಿಯ ಹತ್ತಿರಕ್ಕೆ ಆಕಳು ತರಬೇಕಾಗುತ್ತಿತ್ತು. ಹೀಗಾಗಿ ಅದರಿಂದ ಬರುವ ಆದಾಯದಿಂದ ಜೀವನದ ಬಂಡಿಯನ್ನು ಸಾಗಿಸುತ್ತಿದ್ದರು. ಇಂತಹ ಕಷ್ಟಕರ ಜೀವನದ ಮಧ್ಯದಲ್ಲೆ ಲಿಂಗಪ್ಪನವರು ಅನಾರೋಗ್ಯದಿಂದ ತೀರಿಕೊಂಡರು. ಆಗ ಇನ್ನೂ ನಾಲ್ಕು ಜನ ಮಕ್ಕಳಲ್ಲಿ ಯಾರೊಬ್ಬರ ಮದುವೆಯು ಆಗಿರಲಿಲ್ಲ. ತಂದೆ ತೀರಿಕೊಂಡ ಮೇಲೆ ಅವರ ಕುಟುಂಬದ ಮೇಲೆ ಮತ್ತಷ್ಟು ಸಮಸ್ಯೆಗಳು ಎದುರಾದವು. ಯಾವುದೇ ಚರ ಸ್ಥಿರ ಆಸ್ತಿ ಇಲ್ಲದ್ದರಿಂದ ಅಂದಿನ ಕಾಯಕದಿಂದ ಬಂದ ಹಣವನ್ನು ಊಟ ಉಪಚಾರಕ್ಕಾಗಿ ಉಪಯೋಗಿಸಬೇಕಾಗುತ್ತಿತ್ತು. ಅನಿವಾರ್ಯತೆ ಯಾವ ದಿನ ಕೆಲಸವಿಲ್ಲವೋ ಆ ದಿನ ನೀರೆ ಅವರಿಗೆ ಆಹಾರವಾಗಿತ್ತು. ಅವರು ಕುಟುಂಬವನ್ನು ನಡೆಸುವುದೇ ಬಹಳ ಕಷ್ಟವಾದಾಗ ಇಬ್ಬರು ಅಣ್ಣಂದಿರು ಕಿರಾಣಿ ಅಂಗಡಿ ಕೆಲಸಕ್ಕೆ ಸೇರಿದರು. ತಾಯಿ ಮತ್ತು ಅಜ್ಜಿ ದಿನಗೂಲಿ ಕೆಲಸಕ್ಕೆ ಹೋಗಬೇಕಾಯಿತು. ಇದರಿಂದ ಬಂದ ಹಣದಲ್ಲಿ ಏನಾದರೂ ತಂದು ಬೇಯಿಸಿ ತಿನ್ನುತ್ತಿದ್ದರು. ಆ ಬಡತನದ ಪರಿಸ್ಥಿತಿಯ ಅರಿವು ಶಿವಲಿಂಗಪ್ಪನವರಿಗೆ ೧೦ ವರ್ಷದವರಾಗಿದ್ದಾಗಿನಿಂದಲೇ ಅರಿವಾಗಿತ್ತು. ಹಿರಿಯ ಅಣ್ಣಂದಿರಾದ ಚೆನ್ನಬಸವಣ್ಣ, ಗುರುಸ್ವಾಮಿ ಮತ್ತು ಅಕ್ಕಮಹಾದೇವಮ್ಮ ಇವರೆಲ್ಲರೂ ನಾವಾದರೂ ಓದಲು ಸಾಧ್ಯವಾಗಲಿಲ್ಲ ತಮ್ಮನಾದರೂ ವಿದ್ಯಾಭ್ಯಾಸ ಮಾಡಲಿ ಎಂಬ ಆಸೆಯಿಂದ ತಮ್ಮ ಶಿವಲಿಂಗಪ್ಪನನ್ನು ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ದಾಖಲು ಮಾಡಿದರು.

ಬಾಲಕ ಶಿವಲಿಂಗಪ್ಪನವರು ಅಭ್ಯಾಸದಲ್ಲಿ ತುಂಬಾ ಆಸಕ್ತಿ ಹೊಂದಿದವರಾಗಿದ್ದರು. ಶಿವಲಿಂಗಪ್ಪನರು ಶ್ರದ್ಧೆಯಿಂದ ದುಡಿಯುವುದರಿಂದ ಗುರುವಿನ ಮೆಚ್ಚಿನ ಶಿಷ್ಯರಾಗಿದ್ದರು. ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಸಹಿತ ಮೈಸೂರು ಸರ್ಕಾರಿ ಹೈಸ್ಕೂಲಿನಲ್ಲಿಯೇ ಮಾಡಿದರು. ಬಾಲ್ಯದಿಂದಲೇ ಶಿವಲಿಂಗಪ್ಪನವರು ಕಲಾಪ್ರತಿಭೆ ಪ್ರದರ್ಶಿಸಿ ಗೆಳೆಯರ, ಗುರುಗಳ ಗಮನ ಸೆಳೆದರು. ಪ್ರಾಥಮಿಕ ಶಾಲಾ ಶಿಕ್ಷಕರು ಮಕ್ಕಳಿಗೆ ಕಾಗದ, ಬಣ್ಣ, ಕುಂಚ, ಪೆನ್ಸಿಲ್ ಮೊದಲಾದ ಸಾಮಾಗ್ರಿ ಕೊಡುತ್ತಿದ್ದರು. ಅದರಲ್ಲಿ ಮಕ್ಕಳಿಗೆ ಯಾವ ಪೂರ್ವ ಕಲಾಶಿಕ್ಷಣವೂ ಇಲ್ಲದೇ ಸಾಮಾಗ್ರಿಗಳಿಂದ ಏನೇನೊ ಗೆರೆಗಳನ್ನು ಬರೆದು ಬಣ್ಣ ಸವರಿ ತುಂಬಾ ತೃಪ್ತಿಕರಾದ ಚಿತ್ರ ಸೃಷ್ಟಿ ಮಾಡುವುದನ್ನು ಕಾಣುತ್ತೇವೆ. ಕಲೆ ಸ್ವಭಾವಜನ್ಯವಾದ ಒಂದು ಗುಣವಾಗಿದ್ದು ಅದನ್ನು ಬೆಳೆಯಿಸುವ ವಾತಾವರಣವಿದ್ದರೆ ಅದು ಬೆಳೆಯುತ್ತದೆ ಎನ್ನುವಂತೆ. ಹೀಗೆ ಒಳ ಪರಿಸರ ದೊರೆತಿದ್ದರಿಂದ ಶಿವಲಿಂಗಪ್ಪ ನವರೊಬ್ಬ ಕಲಾವಿದರಾಗಿ ಬೆಳೆಯಲು ಸಾಧ್ಯವಾಯಿತು.

ಇಂಥದೊಂದು ವಿಶಿಷ್ಟವಾದದ್ದನ್ನೇನಾದರೂ ತಾವು ಸಾಧಿಸಿ ತೋರಿಸಬೇಕೆಂಬ ಬಯಕೆ ಕೂಡಾ

ಸ್ವಾಭಾವಿಕವಾಗಿ ಮೂಡುತ್ತದೆ. ಹೊಸ ಹೊಸ ಸೃಷ್ಟಿಗಳನ್ನು ಮಾಡುವುದು ಮಾನವನ ಸ್ವಭಾವ ಗುಣ ಸಾಮಾನ್ಯವಾಗಿ ಎಲ್ಲರಲ್ಲೂ ಈ ಬಗೆಯ ಸೃಜನಶೀಲತೆ ಇದ್ದೆ ಇರುತ್ತದೆ. ಅದನ್ನು ನಾವು ಬೆಳೆಸಿಕೊಳ್ಳುವುದಿಲ್ಲ ಎಂಬ ಅಭಿಪ್ರಾಯ ಆಧುನಿಕ ಮನಃಶಾಸ್ತ್ರಜ್ಞರದು. ಅವರು ಮಾನವರಲ್ಲಿಯ ಸೃಜನಶೀಲತೆಯನ್ನು ಎಂದರೆ ತಮ್ಮೊಳಗಿನ ಭಾವನೆಗಳನ್ನು ಕಲಾಕೃತಿಗಳ ಮೂಲಕ ಅನ್ಯರಿಗೆ ತೋರಿಸಿ ಕೊಡಬಲ್ಲ ಗುಣವನ್ನು ಗುರುತಿಸಿದ್ದಾರೆ. ಗುರುಕುಲದಲ್ಲಿ ನಡೆಯುವ ಚಿತ್ರಗಳನ್ನು ಶಿಲ್ಪಗಳ ಕೆತ್ತನೆ ಮತ್ತು ಅಲ್ಲಿರುವ ವಿವಿಧ ಕಲಾವಿದರು ರಚಿಸಿದ ಶಿಲ್ಪಗಳನ್ನು ಅಲ್ಲಿ ಅಡಗಿರುವ ಕಲಾತ್ಮಕತೆಯನ್ನು ನಿರೀಕ್ಷಿಸುವುದು ಶಿವಲಿಂಗಪ್ಪನರಿಗೆ ರೂಢಿಯಾಗಿತ್ತು. ಕಲಾಸೃಷ್ಟಿ ಮತ್ತು ಕಲಾನುಭವದಲ್ಲಿ ತನ್ನೊಳಗಿನ ಒತ್ತಡದ ಪ್ರವೃತ್ತಿಯಿಂದ ಸಕ್ರಿಯವಾಗಿ ತೊಡಗಿಸಿಕೊಳ್ಳುವುದರ ಫಲವಾಗಿ ಆನಂದವನ್ನು ಪಡೆಯುವುದೇ ಕಲಾವಿದನೊಬ್ಬನ ಮುಖ್ಯ ಉದ್ದೇಶ. ಬಹುಶಃ ಅವರಲ್ಲಿಯೂ ಕಲಾಪ್ರಜ್ಞೆ ಅವರಿಗೆ ತಿಳಿಯದಂತೆಯೇ ಮೂಡಿ ಬರುತ್ತಿದ್ದವು. ಇಂತಹ ಯಾವ ಪ್ರಸಂಗಗಳನ್ನು ಅವರು ಸಹ ತಪ್ಪಿಸಿಕೊಳ್ಳುತ್ತಿರಲಿಲ್ಲ. ಮನದಲ್ಲಿ ನೋಡಿ ನಲಿಯುವುದು ಮಾತ್ರವಲ್ಲ ಇಂತಹುದನ್ನು ಹೇಗೆ ಮಾಡಬಹುದು ಎಷ್ಟು ಚೆನ್ನಾಗಿ ರೂಪಿಸಲು ಸಾಧ್ಯವಾಗಿರಬಹುದು ಎಂಬುದನ್ನು ಕೂಡ ಅವರ ಮನಸ್ಸು ಕನವರಿಸುತ್ತಿತ್ತು. ಇಂತಹ ಅನೇಕ ಸನ್ನಿವೇಶಗಳು ಈ ಬಾಲಕ ಶಿವಲಿಂಗಪ್ಪನವರಿಗೆ ತುಂಬಾ ಪ್ರೇರಣೆ ನೀಡಿದವು.

ಎಲ್. ಶಿವಲಿಂಗಪ್ಪನವರು ಮೈಸೂರು ಅರಮನೆಗೆ ಬಂದಾಗಲೆಲ್ಲಾ ಸಂಯೋಜನೆ ಆಕೃತಿಗಳನ್ನು ಗಮನಿಸುತ್ತ ಒಂದೇ ಚಿತ್ರದ ಮುಂದೆ ತಾಸುಗಟ್ಟಲೇ ನಿಂತು ವೀಕ್ಷಿಸುತ್ತಿದ್ದನು. ಓರ್ವ ಕಲಾ ಉಪಾಸಕನ ದೃಷ್ಟಿಕೋನದಿಂದಲೇ ಶಿವಲಿಂಗಪ್ಪನವರು ಅವನ್ನು ವೀಕ್ಷಿಸುತ್ತಿದ್ದರು. ಅರಮನೆಯಲ್ಲಿರುವ ಚಿತ್ರಗಳ ವರ್ಣ ಸಂಯೋಜನೆ ಮತ್ತು ಆಕಾರ ವಿನ್ಯಾಸಗಳು ಅವರ ಮೇಲೆ ಅಗಾಧವಾದ ಪರಿಣಾವನ್ನು ಬೀರಿದ್ದವು. ಚಿತ್ರಗಳನ್ನು ಎಷ್ಟು ನೋಡುತ್ತಾ ನಿಂತರೂ ಅವರಿಗೆ ದಣಿವೆನಿಸುತ್ತಿರಲಿಲ್ಲ. ಕಣ್ಣುಗಳನ್ನು ಅಲ್ಲಿಂದ ಕೀಳುವುದೆಂದರೆ ಅವರಿಗೆ ಬೇಸರದ ವಿಷಯವೆನಿಸುತ್ತಿತ್ತು. ಅವರ ಹಿರಿಯರಿಗೂ ಕೂಡ ಬಾಲಕನ ಮುಗ್ಧತೆ ಬಹು ಮೋಜಿನದೆನಿಸುತ್ತಿತ್ತು. ಬೆಳೆಯುವ ಸಿರಿಯ ಮೊಳಕೆಯಲ್ಲಿ ನೋಡು ಎಂಬಂತೆ ಈ ಬಾಲಕನಲ್ಲಿ ಆಗಲೇ ಕಲೆಯ ಮೊಳಕೆ ಬಲವಾಗಿ ಮೂಡಿನಿಂತಿದ್ದು ಸ್ಪಷ್ಟವಾಗಿತ್ತು. ಹೀಗೆ ಅವರಲ್ಲಿ ಬೆಳೆದು ನಿಂತ ಅವರ ಮನೆಯ ಮುಂದೆ ಇರುವ ಗುರುಕುಲ ಶಿಲ್ಪಕಲಾ ಶಾಲೆಯಲ್ಲಿ ಅವರನ್ನು ಚಿತ್ರ, ಶಿಲ್ಪಕಲಾ ವಿದ್ಯಾರ್ಥಿಯನ್ನಾಗಿಸಿತ್ತು. ಇವರು ಗುರುಕುಲಕ್ಕೆ ಚಿತ್ರಕಲೆ ಕಲಿಯಲು ಸೇರಿದರು. ಬಹುಶಃ ಅವರಿಗೆ ಆಗ ಹನ್ನೊಂದು ವರ್ಷವಿರಬಹುದು. ವಿದ್ಯಾಭ್ಯಾಸದ ಜೊತೆ ಜೊತೆಗೆ ಮೈಸೂರಿನ ಗುರುಕುಲದ ಅರಮನೆಯ ಕಲಾವಿದರು ರಾಜಗುರುಗಳು ಆಗಿದ್ದ ಶಿಲ್ಪ ಸಿದ್ಧಾಂತಿ ಸಿದ್ದಲಿಂಗಸ್ವಾಮಿಗಳವರ ಮಗನಾದ ಶ್ರೀ ನಾಗೇಂದ್ರ ಸ್ಥಪತಿಗಳು ಮೇಲ್ವಿಚಾರಕರಾಗಿದ್ದರು. ಅವರೇ ಚಿತ್ರಕಲಾಭ್ಯಾಸ, ಶಿಲ್ಪಕಲಾ ಅಭ್ಯಾಸ ನೀಡುವವರಾಗಿದ್ದರು. ಈ ಗುರುಕುಲದಲ್ಲಿ ಚಿತ್ರ, ಶಿಲ್ಪ ಎರಡರ ಪರಿಸರವಿರುವುದರಿಂದ ಶಿವಲಿಂಗಪ್ಪನವರಿಗೆ ಚಿತ್ರಕಲೆಯ ಮೇಲೆ

[illegible]

[illegible]

[illegible]

ಆಸಕ್ತಿ ಬೆಳೆಯಿತು. ನಂತರ ಅವರು ಚಿತ್ರ ಹಾಗೂ ಶಿಲ್ಪ ಎರಡೂ ತರಬೇತಿಗಳನ್ನು ಮುಂದೆವರಿಸಿದರು. ತರಗತಿಗಳು ಬೆಳಿಗ್ಗೆ ೧೧ ಗಂಟೆಗೆ ಪ್ರಾರಂಭವಾಗಿ ಸಂಜೆ ನಾಲ್ಕು ಗಂಟೆಯವರೆಗೆ ಮುಗಿಯುತ್ತಿದ್ದುದರಿಂದ ಮುಂಜಾನೆ ಶಾಲೆಗೆ ಹೊಗುವುದರೊಳಗೆ ಅಂದರೆ ಬೆಳಿಗ್ಗೆ ಎಂಟು ಗಂಟೆಗೆ ಹೋಗಿ, ಹತ್ತು ಗಂಟೆಯವರೆಗೆ ಚಿತ್ರಕಲಾ ಅಭ್ಯಾಸ ಮಾಡುವುದು ಮತ್ತು ಸಂಜೆ ೫ ರಿಂದ ರಾತ್ರಿ ೮ ಗಂಟೆಯವರೆಗೆ ಶಿಲ್ಪ ಕೆಲಸ ಕಲಿಯಬೇಕಾಯಿತು. ಶಿವಲಿಂಗಪ್ಪನವರು ಆಟ ಆಡುವ ವಯಸ್ಸಿನಲ್ಲಿ ಅವರ ಕೈಗಳಿಗೆ ಬೆಳಿಗ್ಗೆ ಕುಂಚದ ಕಡ್ಡಿ ಮತ್ತು ಸಂಜೆಯ ಹೊತ್ತಿಗೆ ಉಳಿ ಸುತ್ತಿಗೆ ಹಿಡಿಯುವಂತಾಗಿತ್ತು. ಅವರಲ್ಲಿರುವ ಧೈರ್ಯ ಹಾಗೂ ಛಲ, ಸಾಧಿಸುವ ಹಂಬಲದೊಂದಿಗೆ ಅವರು ಬೆಳೆಯುತ್ತಿದ್ದರು. ಗುರುಗಳಾದ ನಾಗೇಂದ್ರ ಸ್ಥಪತಿಗಳು ಯಾವುದಾದರೂ ಒಂದು ಚಿತ್ರವನ್ನು ಬರೆದುಕೊಟ್ಟರೆಂದರೆ ಅದರಂತೆಯೇ ಹತ್ತಾರು ಚಿತ್ರಗಳನ್ನು ಬಿಡಿಸಬೇಕಾಗುತ್ತಿತ್ತು. ಅವುಗಳನ್ನು ಪದೇ ಪದೇ ಬಿಡಿಸಿ ತೋರಿಸಬೇಕಾಗುತ್ತಿತ್ತು. ಚಿತ್ರಗಳನ್ನು ತಿದ್ದಿಸಿಕೊಟ್ಟ ಹಾಗೆ ಚಿತ್ರದ ರೇಖೆ ಬರುವ ತನಕ ಒಂದನ್ನೇ ಬರೆಸಿದರು. ನಿಸರ್ಗದಲ್ಲಿ ದೊರೆಯುವ ಹೂವಿನ ಚಿತ್ರ, ಗಿಡದ ಬಳ್ಳಿಯ ಚಿತ್ರ ಇವುಗಳನ್ನು ಅವರು ಬರೆದುಕೊಟ್ಟ ಹಾಗೆ ಚಿತ್ರವನ್ನು ಬಿಡಿಸಿ ತೋರಿಸಬೇಕು. ಮತ್ತೊಂದು ಚಿತ್ರವನ್ನು ಬರೆಸಿಕೊಳ್ಳಬೇಕೆಂದರೆ ಒಂದೆರಡು ವಾರಗಳು ಕಳೆಯುವವು. ವಿದ್ಯಾರ್ಥಿಗಳು ಸ್ವಾತಂತ್ರವಾಗಿ ಯಾವುದೇ ಕೆಲಸವನ್ನು ಮಾಡುವ ಹಾಗಿಲ್ಲ. ಏಕೆಂದರೆ ಆರಂಭದಲ್ಲಿ ಮಕ್ಕಳಿಗೆ ಒಳ್ಳೆಯ ತರಬೇತಿ ದೊರೆಯಲೆಂದು ಗುರುಗಳ ಉದ್ದೇಶವಾಗಿತ್ತು. ಇತ್ತ ಗುರುಕುಲದಲ್ಲಿ ಶಿಲ್ಪ ಕಲೆಯ ಅಭ್ಯಾಸ ಮಾಡುವುದಕ್ಕೆ ಮುನ್ನ ಅಲ್ಲಿ ಕೆಲಸ ಮಾಡುತ್ತಿದ್ದ ಶಿಲ್ಪಿಗಳಿಗೆ ಸಹಾಯಕರಾಗಿ ಕೆಲಸ ಮಾಡಬೇಕಾಗಿತ್ತು ಅದರ ಜೊತೆಗೆ ಅವರ ವಿದ್ಯಾಭ್ಯಾಸವನ್ನು ಸಹ ಮಾಡುತ್ತಿದ್ದರು.

ಕಲ್ಲಿನಲ್ಲಿ ಕೆತ್ತುವ ಅಥವಾ ಕೆತ್ತುವವರನ್ನು ನೋಡುವ ಅವಕಾಶ ದಿನನಿತ್ಯವೂ ಒದಗುತ್ತಿದ್ದುದರಿಂದ ಅಭ್ಯಾಸಿಗಳ ಮನದಾಳದಲ್ಲಿ ಅಚ್ಚಳಿಯದೇ ನಿಲ್ಲುತ್ತಿದ್ದವು. ದೇವತೆಗಳ ಕೈಯಲ್ಲಿ ಹಿಡಿಯುವ ಆಯುಧಗಳ ರೀತಿ, ಪಾದಗಳು, ಮುಂಚಾಚು ಅಥವಾ ಹಿಂಚಾಚು, ಪ್ರಭಾವಿಗೆ ಅಗತ್ಯವಾದ ವ್ಯಾಘ್ರುವ್ಯಾಳಿ ಮತ್ತು ಹೂ ಬಳ್ಳಿಗಳ ವಿನ್ಯಾಸ ಬೆರಳುಗಳ ಬಾಗುವಿಕೆಯಲ್ಲಿನ ಕಲಾತ್ಮಕತೆ ರಚಿಸುತ್ತಿದ್ದರು. ದೇಹದ ಮೇಲೆ ಇರುವ ಆಭರಣಗಳನ್ನು ಬರೆಯುವ ಶೈಲಿ, ಶೈವ ಮತ್ತು ವೈಷ್ಣವ ಸಂಸ್ಕೃತಿಗಳಿಗನುಗುಣವಾದ ಉಡುಗೆ ತೊಡುಗೆ ಆಭರಣ ಇವುಗಳನ್ನು ಪ್ರತ್ಯೇಕವಾಗಿ ಸೀಸದ ಕಡ್ಡಿಯಿಂದ ಕಾಗದದ ಮೇಲೆ ಬರೆದು ಗುರುಗಳಿಗೆ ತೋರಿಸುತ್ತಿದ್ದರು. ಗುರುಗಳು ಹೇಳುತ್ತಿರುವಂತೆ ಹತ್ತಾರು ಬಾರಿ ಬರೆದು ಅನುಕರಣೆ ಮಾಡಿ ಕಂಠಪಾಠದಂತೆಯೇ ಕೈಪಾಠ ಮಾಡಬೇಕಾಗಿತ್ತು. ದೈನಂದಿನ ಜೀವನಕ್ಕೆ ಅಗತ್ಯವಾದ ಆಹಾರ ಸೇವನೆ ನಿದ್ರೆಯನ್ನು ಹೊರತುಪಡಿಸಿದಂತೆ ದಿನದ ವಿದ್ಯಾಭ್ಯಾಸದ ಜೊತೆಗೆ ಬಹು ಸಮಯವನ್ನು ರೇಖಾಚಿತ್ರ ರಚಿಸುವುದಕ್ಕೆ ಮುಂದಗುತ್ತಿದ್ದೆವು. ನಂತರದಲ್ಲಿ ಕಲ್ಲಿನಲ್ಲಿ ಕೆತ್ತುವ ಪ್ರಯತ್ನ ಮಾಡುವುದು ಇಲ್ಲವೇ ಹಿರಿಯ ಶಿಲ್ಪಗಳಿಗೆ ಸಹಾಯಕವಾಗಿ ಕೆಲಸದ ಮರ್ಮವನ್ನು ತಿಳಿಯುತ್ತಾ ಹೋಗುವುದು ಇದು ದೈನಂದಿನ ಕಾರ್ಯ ಚಟುವಟಿಕೆಯಾಗಿತ್ತು.

ಗುರುಗಳ ಶಿಷ್ಯರಲ್ಲಿ ಶಿವಲಿಂಗಪ್ಪನವರು ಒಬ್ಬರಾದುದರಿಂದ ಕಲಿಯಬೇಕೆಂಬ ಉತ್ಕಟಾಕಾಂಕ್ಷೆ ತೀವ್ರವಾಗಿದ್ದುದರಿಂದ ಗುರುಗಳು ಹೇಳಿದುದನ್ನು ಚಾಚು ತಪ್ಪದೇ ಕುರಿತು ಅವರಿಂದ ಸೈ ಎನಿಸಿಕೊಂಡ ಹಿರಿಮೆ ಪಡುತ್ತಿದ್ದರು ಮತ್ತು ಮೆಚ್ಚಿನ ಶಿಷ್ಯರಾಗಿದ್ದರು ಶಿವಲಿಂಗಪ್ಪನವರು.

ಹಿರಿಯ ಶಿಲ್ಪಿಗಳು ತಯಾರಿಸಿದ ವಿಗ್ರಹಗಳನ್ನು ನುಣುಪುಗೊಳಿಸುವುದು ಗುರುಕುಲದಲ್ಲಿ ಮೊದಲ ಕೆಲಸ. ನಂತರ ಕಲಿಯಲು ಬರುವ ವಿದ್ಯಾರ್ಥಿಗಳ ಮತ್ತು ಶಿಲ್ಪಿಗಳಿಗಾಗಿ ಬೇಕಾದ ವಸ್ತುಗಳನ್ನು ತಂದು ಕೊಡುವುದು, ಅವರು ಹೇಳಿದ ಕೆಲಸವನ್ನು ಸರಿಯಾದ ಕ್ರಮದಲ್ಲಿ ಮಾಡಬೇಕಾಗಿತ್ತು. ಒಂದು ವೇಳೆ ಯಾವುದೇ ಒಂದು ಸಣ್ಣಪುಟ್ಟ ತಪ್ಪುಗಳನ್ನು ಮಾಡಿದರೆ ಅದಕ್ಕೆ ಸರಿಯಾದ ಕ್ರಮ ಗುರುಗಳು ತೆಗೆದುಕೊಳ್ಳುತ್ತಿದ್ದರು. ಇವು ವಿದ್ಯಾಭ್ಯಾಸದ ಮೊದಲ ಹಂತದ ಕ್ರಮಗಳಾಗಿದ್ದವು. ವಿದ್ಯಾರ್ಥಿಗಳು ಒಂದು ವೇಳೆ ಅವರಿಗೆ ವಿದ್ಯಾಭ್ಯಾಸ ಸರಿ ಹೊಂದದಿದ್ದರೆ ಐದಾರು ತಿಂಗಳು ಅಥವಾ ಅತಿ ಹೆಚ್ಚೆಂದರರೆ ಒಂದೆರಡು ವರ್ಷದೊಳಗೆ ಬಿಟ್ಟು ಹೋಗುತ್ತಿದ್ದರು. ಆದರೆ ಶಿವಲಿಂಗಪ್ಪನವರಿಗೆ ಅದೇನೂ ಆಸಕ್ತಿ ಮೂಡಿಸಿತೊ ಗೊತ್ತಿಲ್ಲ. ಅವರು ಮಂಡುತನದಿಂದ ವಿದ್ಯಾಭ್ಯಾಸ ಮಾಡಲಿಲ್ಲ. ಯಾವುದೇ ಒಂದು ಕೆಲಸವನ್ನು ಇಷ್ಟಪಟ್ಟು ಮಾಡಬೇಕು. ಕಷ್ಟದಿಂದ ಅಲ್ಲ ಎಂದು ಅವರಿಗೆ ಅವರ ತಾಯಿ ಹೇಳಿಕೊಟ್ಟ ಮಾತು ಅವರ ಮನದಲ್ಲಿ ಹಚ್ಚೆಯಾಗಿ ಉಳಿದಿತ್ತು. ಶಿವಲಿಂಗಪ್ಪನವರಿಗೆ ಗುರುಗಳು ಸಾಕು ಹೋಗಪ್ಪ ಎಂದು ಹೇಳಿದರು ಮತ್ತೊಂದಷ್ಟು ಸಮಯ ಇದ್ದು ಹೋಗುತ್ತೇನೆ ಎಂದು ಹೇಳುತ್ತಿದ್ದರು. ಗುರುಗಳಿಗೆ ಚಿಕ್ಕ ಬಾಲಕನಿಗೆ ಇಷ್ಟೊಂದು ಆಸಕ್ತಿ ಇರುವುದನ್ನು ಕಂಡು ಎಲ್ಲಿಲ್ಲದ ಮಮಕಾರ, ಪ್ರೀತಿ ಶಿವಲಿಂಗಪ್ಪನವರ ಮೇಲೆ ಬೆಳೆಯಿತು.

ಶಿವಲಿಂಗಪ್ಪನವರು ಶ್ರೀ ನಾಗೇಂದ್ರ ಸ್ಥಪತಿಗಳ ಬಳಿಯಲ್ಲಿ ವಿದ್ಯಾಭ್ಯಾಸಕ್ಕೆ ಬರಲು ಆರಂಭಿಸಿ ಮೂರು ವರ್ಷಗಳು ಕಳೆದವು. ನಂತರ ಗುರುಗಳಿಗೆ ಶಿವಲಿಂಗಪ್ಪನವರ ಆಸಕ್ತಿ ನೋಡಿ ಚೆನ್ನಾಗಿ ಕಲಿಸಬೇಕು ಎಂಬ ಅಭಿಪ್ರಾಯ ಮೂಡಿತ್ತು. ಸ್ವಲ್ಪ ದಿನಗಳ ನಂತರ ಶಿಲ್ಪ ಕೆತ್ತನೆಗೆ ಮತ್ತು ಚಿತ್ರ ರಚನೆಗೆ ಹೇಳಿಕೊಡುವುದಕ್ಕೆ ಗುರುಗಳು ಮುಂದಾಳತ್ವ ವಹಿಸಿದರು. ಶಿಲ್ಪರಚನೆಗೆ ಬೇಕಾಗುವ ಅವಶ್ಯಕ ಕೆತ್ತನೆ, ಸಾಮಾಗ್ರಿಗಳನ್ನು ಮೊದಲು ತಿಳಿಸುವುದು ನಂತರ ಚಿತ್ರಗಳನ್ನು ಯಾವ ರೀತಿ ಸಿದ್ಧಪಡಿಸಿಕೊಳ್ಳಬೇಕು ಮತ್ತು ಅದರ ವಿಧಾನ. ಚಿತ್ರಗಳನ್ನು ಮೊದಲು ಇದ್ದಲು ಮಸಿಯಿಂದ ಅಥವಾ ಕೆಮ್ಮಣ್ಣಿನ ಬಣ್ಣದಿಂದ ಗುರುತು ಹಾಕಿಕೊಳ್ಳುವ ಕ್ರಮವನ್ನು ಹೇಳುತ್ತಿದ್ದರು. ನಂತರದಲ್ಲಿ ಶಿಲ್ಪ ರಚಿಸುವ ಮುನ್ನ ಮೂಲೆಮಟ್ಟವನ್ನು ಇಟ್ಟು ಚದರಕ್ಕೆ ಸರಿಯಾಗಿ ಹೊಂದವ ಹಾಗೆ ಮೊದಲು ಪರೀಕ್ಷೆ ಮಾಡಬೇಕು. ಅದರ ಬಗ್ಗೆ ವಿಧಾನಗಳು ತಿಳಿಸುತ್ತಿದ್ದರು. ಶಿಲ್ಪದಲ್ಲಿ ಕೆಲವು ಭಾಗಗಳು ಸರಿ ಇಲ್ಲದಿದ್ದರೆ ಬೇಡವಾದ ಭಾಗವನ್ನು ಕೆತ್ತಿ ತೆಗೆಯುವುದು. ನಂತರ ಒಂದು ದೊಡ್ಡ ಉಳಿಯನ್ನು ಬಳಸುತ್ತಿದ್ದರು. ನುಣಪಾದ ಸಣ್ಣ ಪ್ರಮಾಣದಲ್ಲಿರುವ ಪ್ರದೇಶಕ್ಕೆ ಸಣ್ಣ ಉಳಿಯನ್ನು ಬಳಸುತ್ತಿದ್ದರು. ಶಿಲ್ಪದ ಕೇಂದ್ರ ರೇಖೆಗೆ (ಸೆಂಟ್ರಲ್ ಲೈನ್) ಹೊಂದಿಸಿ ಅಕ್ಕಪಕ್ಕದ ಭಾಗವನ್ನು ಸರಿದೂಗಿಸುವ ಮನೋಧರ್ಮವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುತ್ತಿದ್ದರು. ಕಲಾವಿದರು ಶಿಲ್ಪ ರಚಿಸುವಾಗ

ಅದರಲ್ಲಿರುವ ಮರ್ಮಗಳನ್ನು ಬೇರೆ ಬೇರೆ ವಿಗ್ರಹಗಳನ್ನು ಮಾಡುವಾಗ ಜೊತೆಯಲ್ಲಿ ವಿದ್ಯಾರ್ಥಿಗಳನ್ನು ಕೂರಿಸಿಕೊಂಡು ತೋರಿಸಿಕೊಡುತ್ತಿದ್ದರು. ಶಿವಲಿಂಗಪ್ಪನವರಿಗೆ ಮತ್ತಷ್ಟು ಕಲೆಯ ಬಗ್ಗೆ ಆಸಕ್ತಿ ಮೂಡಲು ಇದು ಕಾರಣವಾಯಿತು.

ಶಿವಲಿಂಗಪ್ಪನವರ ಮನೆಯಲ್ಲಿನ ವಾತಾವರಣ ಕಲಾ ವ್ಯಾಸಂಗಕ್ಕೆ ಮಾತ್ರವಲ್ಲ. ಎಲ್ಲಾ ವಿಷಯದಲ್ಲಿ ಕಡು ಬಡತನವೆಂಬುದು ಇತ್ತು. ಇಂತಹ ಪರಿಸ್ಥಿತಿಯಲ್ಲಿ ಶಿವಲಿಂಗಪ್ಪನವರು ಹೈಸ್ಕೂಲಿನಿಂದ ಕಾಲೇಜು ಶಿಕ್ಷಣದವರೆಗೂ ವಿದ್ಯಾಭ್ಯಾಸ ಮಾಡುವುದಕ್ಕೆ ಬೆಳಗಿನ ಪತ್ರಿಕೆ ಹಂಚಿ ಅದರಿಂದ ಬರುವ ಅಲ್ಪ ಹಣದಿಂದಲೇ ಓದಲು ಮತ್ತು ಬರೆಯಲು ಬೇಕಾದ ಪರಿಕರಗಳನ್ನು ಕೊಳ್ಳುತ್ತಿದ್ದರು. ಶಿವಲಿಂಗಪ್ಪನವರ ವಿದ್ಯಾಭ್ಯಾಸ ಮುಗಿದು ಪಿ.ಯು.ಸಿ. ನಂತರ ಹೆಚ್ಚಿನ ಚಿತ್ರಕಲೆ ವಿದ್ಯಾಭ್ಯಾಸ ಕಲಿಯಬೇಕು ಎಂದುಕೊಂಡಿದ್ದರು. ಆದರೆ ಶಿವಲಿಂಗಪ್ಪನವರ ಅಣ್ಣ ನಿನಗೆ ಕಲೆ ಕಲಿಯಲೇಬೇಕೆಂಬ ಇಚ್ಛೆಯಿದ್ದರೆ ನಿನ್ನ ಕಾಲು ಮೇಲೆ ನೀನು ನಿಂತು ಸಂಪಾದಿಸಿ ಬೇಕಾದಂತೆ ಖರ್ಚುಮಾಡಿ ಕಲಿ. ಈಗ ಉದ್ಯೋಗ ಸಿಗುವಂತಹ ವಿದ್ಯಾಭ್ಯಾಸ ಮಾಡೆಂದು ಹೇಳಿದರು.[೩] ಹೀಗಾಗಿ ಐ.ಟಿ.ಐ.ಗೆ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಗೆ ಸೇರಲು ಕೆಲವು ಸ್ನೇಹಿತರಿಂದ ಒತ್ತಾಯವಾಗಿತ್ತು.

ಏಕೆಂದರೆ ಐ.ಟಿ.ಐ.ನಲ್ಲಿ ತರಬೇತಿ ಪಡೆದವರಿಗೆ ಕಾರ್ಖಾನೆಗಳಲ್ಲಿ ಬಹುಬೇಗ ಉದ್ಯೋಗ ದೊರಕುತ್ತಿತ್ತು. ಅದರಲ್ಲೂ ವೆಲ್ಡರ್, ಫಿಟ್ಟರ್, ಟ್ರೇಡ್ ಅಭ್ಯಾಸ ಮಾಡಿದವರಿಗೆ ಮತ್ತಷ್ಟು ಬೇಡಿಕೆ ಜಾಸ್ತಿ ಇತ್ತು. ಶಿವಲಿಂಗಪ್ಪನವರು ಐ.ಟಿ.ಐ. ಪ್ರವೇಶಕ್ಕೆ ಹೋದರು. ಸಂದರ್ಶನ ವೇಳೆಯಲ್ಲಿ ಶಿವಲಿಂಗಪ್ಪನವರು ಬರೆದಿರುವ ಚಿತ್ರಗಳನ್ನು ಮತ್ತು ಜೊತೆಗೆ ಆರ್ಹತ ಅಂಕಪಟ್ಟಿಯನ್ನು ನೋಡಿ ಶಿವಲಿಂಗಪ್ಪನವರ ರಚಿಸಿದ ಚಿತ್ರಗಳನ್ನು ನೋಡಿ ನಿಮಗೆ ಒಳ್ಳೆಯ ಕೈಯಿದೆ. ಜೊತೆಗೆ ಎಸ್.ಎಸ್.ಎಲ್.ಸಿ.ಗಿಂತ ಮುಂದೆ ಓದಿರುವುದರಿಂದ ಡ್ರಾಫ್ಟಮನ್ ಟ್ರೈನಿಂಗ್‌ಗೆ ಆಯ್ಕೆ ಮಾಡಿದ್ದೇವೆಂದು ತಿಳಿಸಿದರು. ಶಿವಲಿಂಗಪ್ಪನವರ ಮನೆಯಲ್ಲಿ ಯಾರು ಒಪ್ಪಲಿಲ್ಲ. ಕಾರಣ ಆ ತರಬೇತಿ ಪಡೆದವರು ಬಹಳ ಜನರಿಗೆಲ್ಲಾ ಉದ್ಯೋಗ ದೊರಕಲಿಲ್ಲವೆಂಬ ಮಾತು ಐಟಿಐ ವಲಯದಲ್ಲಿ ಕೇಳಿ ಬರುತ್ತಿತ್ತು. ನಂತರ ಫಿಟರ್ ತರಬೇತಿಗೆ ಶಿವಲಿಂಗಪ್ಪನವರು ಸೇರಿದರು. ಸ್ವಲ್ಪದಿನಗಳಲ್ಲಿ ಉತ್ತಮ ಮಟ್ಟದಲ್ಲೇ ಉತ್ತೀರ್ಣರಾಗಿ ತರಬೇತಿ ಮುಗಿಸಿಕೊಂಡು ಬಂದರು. ಕೆಲವೇ ತಿಂಗಳಲ್ಲಿ ಬೆಂಗಳೂರಿನ ಬಿ.ಇ.ಎಂ.ಎಲ್.ಕಾರ್ಖಾನೆಗೆ ಅಪ್ರೆಂಟಿಸ್ ಟ್ರೈನಿಂಗ್‌ಗೆ ಆಯ್ಕೆಯಾದರು.

ನಂತರ ಈ ಕಾರ್ಖಾನೆಯಲ್ಲಿ ಆರು ತಿಂಗಳ ಅಲ್ಪಾವಧಿಯ ತರಬೇತಿಯಾಗಿದ ನಂತರ ಉದ್ಯೋಗವನ್ನು ಕೋಡುತ್ತಿದ್ದರು. ಆರು ತಿಂಗಳ ನಂತರ ಶಿವವಲಿಂಗಪ್ಪನವರ ತರಬೇತಿ ಮುಗಿದ ನಂತರ ಕೆಲಸವಿಲ್ಲವೆಂದು ಶಿವಲಿಂಗಪ್ಪನವರನ್ನು ಮನೆಗೆ ಕಳುಹಿಸಿದರು. ಕೆಲಸಕ್ಕೆ ಕರಿಯುತ್ತೇವೆ ಎಂದು ಬಾಯಿಮಾತಿನಲ್ಲಿ ಹೇಳಿ

---

೩. ಡಾ. ಎಸ್.ಸಿ. ಪಾಟೀಲ, ಸಾಧನೆಯ ಸಮುಚ್ಚಯ ಎಲ್. ಶಿವಲಿಂಗಪ್ಪ, ಪು.

ಕಳುಹಿಸಿದರು. ಆರು ತಿಂಗಳು ಕಳೆದರೂ ಉದ್ಯೋಗಕ್ಕೆ ಬನ್ನಿ ಎಂಬ ಪತ್ರ ಬರಲೇ ಇಲ್ಲ. ಮನೆಯ ವಾತಾವರಣ ತೀರಾ ಹದಗೆಟ್ಟಿತು. ಮುಂದೊಂದು ದಿನ ಬಿ.ಇ.ಎಂ.ಎಲ್.ನಿಂದಲೇ ವಿದ್ಯಾರ್ಥಿಗಳ ತರಬೇತಿ ಆಯ್ಕೆಗೆ ಬರುತ್ತಾರೆಂಬ ಸುದ್ದಿ ತಿಳಿದುಬಂದಿತು. ಆ ದಿನಕ್ಕೆ ನಿರೀಕ್ಷಿಸಿ ಶಿವಲಿಂಗಪ್ಪನವರಿಗೆ ತರಬೇತಿ ನೀಡಿದ ಮುಖ್ಯಸ್ಥರನ್ನು ಕೆಲಸ ಕೊಡುವ ಆಡಳಿತಾಧಿಕಾರಿಗಳನ್ನು ಭೇಟಿ ಮಾಡಿ, ನಮ್ಮ ಗುರುಕುಲಕ್ಕೆ ಬನ್ನಿ ಅಮೂಲ್ಯ ಕಲಾಕೃತಿ ಇದೆ ಎಂದು ಹೇಳಿದರು. ಒಪ್ಪಿ ಗುರುಕುಲಕ್ಕೆ ಬಂದರು. ಆ ಸಂದರ್ಭದಲ್ಲಿ ಒಂದು ಪ್ರಸಂಗ ರೋಚಕವಾದದ್ದು. ಶಿವಲಿಂಗಪ್ಪನವರು ಟ್ರೈನಿಂಗ್ ಮುಗಿಸಿ ಬರುವಾಗ ಅವರ ಅಧಿಕಾರಿ ದಂಪತಿಗಳ ಛಾಯಾಚಿತ್ರವೊಂದನ್ನು ತಂದಿದ್ದರು. ಅದನ್ನು ಎರಡು ಅಡಿ ಎತ್ತರ ಮೂರು ಅಡಿ ಉದ್ದಳತೆಯಲ್ಲಿ ಅವರ ಭಾವಚಿತ್ರಗಳನ್ನು ತೈಲವರ್ಣದಲ್ಲಿ ಮೂಡಿಸಿ ಅವರ ಗುರುಗಳಿಂದ ಒಪ್ಪಿಗೆ ಪಡೆದು ಆ ಕಲಾಕೃತಿಯನ್ನು ಗುರುಕುಲದಲ್ಲಿ ಹಾಕಿದ್ದರು. ಹುಸಿ ನಗುವಿನಲ್ಲಿ ಅಧಿಕಾರಿ ಮತ್ತು ಮಡದಿ ಇರುವ ಕಲಾಕೃತಿಯು ಅತ್ಯಂತ ಆಕರ್ಷಣೆಯವಾಗಿತ್ತು. ಗುರುಕುಲದ ಶಿಲ್ಪ ಮತ್ತು ಇತರೆ ಚಿತ್ರಗಳನ್ನು ಅಧಿಕಾರಿಗಳು ನೋಡುನೋಡುತ್ತಾ ಈ ಚಿತ್ರದ ಮೇಲೆ ಗಮನ ಹರಿಸಿದರು. ನೋಡಿ ಬಹಳ ಸಂತೋಷಪಟ್ಟರು. ಆದರೆ ಅವರು ಹೇಳಿದ್ದು ಮಾತು ಶಿವಲಿಂಗಪ್ಪನವರಿಗೆ ಕಣ್ಣೀರು ತರಿಸಿತು. ನಿನ್ನ ಕೈಯಲ್ಲಿ ಉತ್ತಮವಾದ ಕೆಲಸವಿದೆ. ಇದನ್ನೇ ಮುಂದುವರೆಸಿಕೊಂಡು ಹೋಗು ಕಾರ್ಖಾನೆಯ ಉದ್ಯೋಗದ ಆಸೆ ಬಿಡು ಎಂಬ ಹಿತೋಪದೇಶದಿಂದ ಶಿವಲಿಂಗಪ್ಪನವರಿಗೆ ಹೇಳಿದರು. ಆಕಾಶವೇ ಕಳಚಿ ಬಿದ್ದಂತಾಗಿ ಶಿವಲಿಂಗಪ್ಪನವರಿಗೆ ಅರಿವಿಲ್ಲದಂತೆಯೇ ಕಣ್ಣೀರನ್ನು ತರಿಸಿತು. ಮಾತು ಹೊರಡದಂತಾಯಿತು. ಇದೆಲ್ಲವನ್ನು ಮತ್ತೋರ್ವ ಆಡಳಿತಾಧಿಕಾರಿ ಗಮನಿಸುತ್ತಿದ್ದರು. ಶಿವಲಿಂಗಪ್ಪನವರಿಗೆ ಏನನ್ನೋ ತಿಳಿಯದ ಭಾಷೆಯಲ್ಲಿ (ತಮೀಳು) ಮಾತಾಡಿಕೊಂಡರು. ನಂತರ ಶಿವಲಿಂಗಪ್ಪನವರಿಗೆ ಸಾಂತ್ವನ ಹೇಳಿ ಚಿತ್ರಗಳು ಮುದ್ದಾಗಿವೆ, ಕೈಕೆಲಸ ಚೆನ್ನಾಗಿದೆ ಎಂದೆಲ್ಲಾ ಹೇಳಿದರು. ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂಬ ಮಾತೆ ಅಧಿಕಾರಿಗಳಿಂದ ಬರಲಿಲ್ಲ ಹಾಗೇ ಹೊರಟು ಹೋದರು.[೪]

ಶಿವಲಿಂಗಪ್ಪನವರಿಗೆ ಕಣ್ಣೀರು ಬರಲು ಮುಖ್ಯಕಾರಣ ಸರ್ಕಾರಿ ನೌಕರಿ ಇಲ್ಲದ ಮತ್ತು ಕಲಾವಿದರ ಹಾಗೂ ಶಿಲ್ಪಕಲಾವಿದರ ಗೋಳನ್ನು ಶಿವಲಿಂಗಪ್ಪನವರು ಕಂಡಿದ್ದರು. ಅವರು ಅಭ್ಯಾಸ ಮಾಡಲು ಹೋಗುತ್ತಿದ್ದ ಗುರುಕುಲದಲ್ಲಿ ಅಲ್ಲಿನ ಶಿಲ್ಪಕಲಾವಿದರಿಗೆ ಸಿಗುತ್ತಿದ್ದ ದಿನಗೂಲಿ ಮಾತ್ರ. ಅದು ಯಾರಾದರೂ ಒಂದು ಇಂತಹ ವಿಗ್ರಹವಾಗಬೇಕೆಂದು ಮುಂಗಡ ಕೊಟ್ಟ ಹಣ ಮಾತ್ರ ಕಲಾವಿದರಿಗೆ ಸಿಗುತ್ತಿತು. ಅದು ಸ್ವಲ್ಪ ಮಾತ್ರ ಉಳಿದ ಹಣ ಕೆಲಸ ಎಲ್ಲಿಯವರೆಗೆ ಬಂದಿದೆಯೆಂದು ನೋಡಲು ಬಂದಾಗ ಅವರು ಒಂದುವೇಳೆ ಕೊಟ್ಟರೆ ಕೊಟ್ಟರು ಇಲ್ಲವಾದರೆ ಕಲಾವಿದರಿಗೆ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಇಲ್ಲವೇ ಗುರುಗಳ ಕಡೆಯಿಂದ ಸಾಲಪಡೆಯಬೇಕಾಗಿತ್ತು. ಇದು ಗುರುಕುಲದ ಒಂದು ನೋಟ ಮಾತ್ರ. ಇಲ್ಲಿ ಬಹುತೇಕ

---

೪. ಡಾ. ಎಸ್.ಸಿ. ಪಾಟೀಲ, ಸಾಧನೆಯ ಸಮುಚ್ಚಯ ಎಲ್. ಶಿವಲಿಂಗಪ್ಪ, ಪು.

ಶಿಲ್ಪಕಲಾವಿದರ ಒಂದು ಬದುಕಿನ ನೋಟ, ಜೀವನ ಎಷ್ಟು ಕಷ್ಟ ಎಂದು ಶಿವಲಿಂಗಪ್ಪನವರಿಗೆ ತಿಳಿದ್ದಿತು. ಅದರಿಂದಲೇ ಶಿವಲಿಂಗಪ್ಪನವರು ಸರ್ಕಾರಿ ನೌಕರಿಗೆ ಸೇರಬೇಕೆನ್ನುವ ಆಸೆಯಿಂದ ಇವರು ಐ.ಟಿ.ಐ. ತರಬೇತಿಗೆ ಸೇರಿದರು. ಸ್ವಲ್ಪ ದಿನಗಳ ನಂತರ ಐ.ಟಿ.ಐ. ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂದು ಆರ್ಡರ್ ಬಂದಿತು. ೧೯೬೦ರಲ್ಲಿ ಶಿವಲಿಂಗಪ್ಪನವರ ಜೀವನ ಬದಲಾಯಿತು. ಬದುಕಿಗೊಂದು ನೆಲೆ ಹಾಗೂ ಸಾಕಿದವರಿಗೊಂದು ಬೆಲೆ ಬಂತು. ಜೀವನದ ಸಾರ್ಥಕತೆ ಕಾಣಲು ಸಹಕಾರಿಯಾಯಿತೆಂದು ಶಿವಲಿಂಗಪ್ಪನವರು ಅಂದುಕೊಂಡರು.

ಶಿವಲಿಂಗಪ್ಪನವರಿಗೆ ಬುತ್ತಿತುಂಬಲು ಉದ್ಯೋಗ ದೊರಕಿದ ಕೂಡಲೇ ನೆತ್ತಿ ತುಂಬಿಕೊಳ್ಳಲು ಹುಡುಕಾಟ ಪ್ರಾರಂಭವಾಯಿತು. ಕಲೆಯ ಬಗ್ಗೆ ತಿಳಿದುಕೊಳ್ಳಬೇಕೆಂಬ ಹಂಬಲ ಕಲೆ ದಿನೇ ದಿನೇ ವೃದ್ಧಿಯಾಗುತ್ತಾ ಬಂತು. ಕಾರ್ಖಾನೆಯಲ್ಲಿ ಬಿಡುವು ಇದ್ದಾಗಲೆಲ್ಲಾ ಚಿತ್ರ ಬಿಡಿಸುವುದು ಸ್ನೇಹಿತರ ಮುಖ ಭಾಗಚಿತ್ರ ಬರೆದುಕೊಡುವುದು. ಮದುವೆ ಮುಂತಾದ ಶುಭ ಕಾರ್ಯಗಳಿಗೆ ಹೆಸರನ್ನು ರಚಿಸುವುದು ಹೀಗೆ ನೌಕರಿಯೊಂದಿಗೆ ಇವರ ಜೀವನ ಚಿತ್ರಕಲೆಯಲ್ಲಿ ಒಂದು ಉನ್ನತ ಸ್ಥಾನ ಪಡೆಯಲು ಹೆಜ್ಜೆ ಹಾಕಿತು. ಅವರ ಪ್ರಯತ್ನದ ಫಲವಾಗಿ ಒಬ್ಬ ಶಿಲ್ಪಿಯಾಗಿ, ಚಿತ್ರಕಾರನಾಗಿ ಬರಹಗಾರನಾಗಿ, ಛಾಯಾಚಿತ್ರಕಾರ ಹೀಗೆ ಹತ್ತು ಹಲವು ದಿಕ್ಕುಗಳಲ್ಲಿ ತೊಡಗಿಸಿಕೊಂಡು ಆ ಮಾಧ್ಯಮಕ್ಕೆ ವಿಷಯಕ್ಕೆ ನ್ಯಾಯವನ್ನು ಒದಗಿಸಿದ್ದಾರೆ.

ಅಧ್ಯಾಯ ೩

ಕಲಾವಿದ ಎಲ್. ಶಿವಲಿಂಗಪ್ಪನವರ ವೃತ್ತಿ ಜೀವನ ಹಾಗೂ ಕಲಾ ಬದುಕು

"**ಕ**ಲಾಕೃತಿ ತನ್ನಷ್ಟಕ್ಕೆ ತಾನೆ ಹುಟ್ಟಿರುತ್ತದೆ. ತನಗೋಸ್ಕರವೇ ಇರುತ್ತದೆ. ಅದರ ಉತ್ಪತ್ತಿಗೆ ಮತ್ತಾವ ನಿಮಿತ್ತವೂ ಇಲ್ಲ. ಮತ್ತಾವ ಉದ್ದೇಶವು ಸಫಲವಾಗುವುದಿಲ್ಲ. ಹೀಗೆಂಬುದು ಕಲೆಗಾಗಿ ಕಲೆಯೆಂಬ ಸೂತ್ರದ ಸಾರ. ಬಹು ಗಲಭೆಯನ್ನೆಬ್ಬಿಸಿರುವ ಈ ವಾದ ೧೯ನೆಯ ಶತಮಾನದಲ್ಲಿ ಮೊದಲು ಪ್ರಾನ್ಸಿನಲ್ಲಿ ತಲೆದೋರಿ ಕ್ರಮೇಣ ವೃದ್ಧಿ ಹೊಂದಿತು. ಈ ತತ್ವಕ್ಕೆ ಸರ್ವರ ಸಮ್ಮತಿ ಹಿಂದಿನಿಂದಲೂ ಇತ್ತು. ಆದರೆ ೧೮೨೦-೧೮೪೦ರ ದಶಕಗಳಲ್ಲಿ ಫ್ರಾನ್ಸಿನ ಚಿತ್ರಕಾರರ ಒಂದು ಕೂಟದವರು ತಮ್ಮ ಕಲೆಗೂ ಅಂತಹ ಸ್ವಾತಂತ್ರ ಸ್ಥಾನವನ್ನು ಗಳಿಸಿಕೊಡಲು ಹಾತೋರೆದರು. ದೃಶ್ಯವೊಂದರ ವರ್ಣಚಿತ್ರವನ್ನು ಸಂದರ್ಶಿಸುವಾಗ ಅದು ಹೇಗೆ ಸಾರವತ್ತಾಗಿ ರಚಿತವಾಗಿದೆ ಎಂಬುದನ್ನು ಲೆಕ್ಕಿಸಬೇಕು. ಈ ಬಗೆಯ ಗಟ್ಟಿಕೂಗಿನಿಂದ ಜನತೆಯಲ್ಲಿ ಆಂದೋಲನ ಉಂಟಾಯಿತು. ಸಾಹಿತ್ಯ ಲೋಕಕ್ಕೂ ಅದರ ಅಲೆಗಳು ಉರುಳಿ ಬಂದವು. ಥಿಯಪೈಲ್ ಗೌತಿಯ"[1] ೧೮೧೦-೭೨ ದಶಕದಲ್ಲಿ ಇದಕ್ಕೊಂದು ಮಹತ್ವತಂದು ಕೊಟ್ಟನು. ಹೊಸ ಚಳುವಳಿಯ ಪ್ರಭಾವ ಕರ್ನಾಟಕದಲ್ಲೂ ಪಸರಿಸಿದೆ.

ಕರ್ನಾಟಕದ ಕಲಾಕ್ಷೇತ್ರದಲ್ಲಿ ಹಲವಾರು ಕಲಾವಿದರು ಹೊಸ ಅಲೆಯಲ್ಲಿ ಗಮನಾರ್ಹವಾಗಿ ಗುರುತಿಸಿ

---

೧. ಡಾ. ಎಸ್.ಸಿ. ಪಾಟೀಲ, ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪು.

ಕೊಂಡಿದ್ದಾರೆ. ತಮ್ಮ ಪ್ರಾವಿಣ್ಯತೆಯನ್ನು ಮೆರೆದಿದ್ದಾರೆ. ಅಂಥವರಲ್ಲಿ ಕಲಾವಿದ ಎಲ್. ಶಿವಲಿಂಗಪ್ಪನವರು ಒಬ್ಬರೂ. ಮತ್ತು ದೃಶ್ಯಕಲಾ ಸಾಹಿತಿಯಾಗಿ ಚಿತ್ರಕಲಾ ಶಾಲೆಯ ಪ್ರಾಂಶುಪಾಲರಾಗಿ ತಮ್ಮ ಮಹತ್ವದ ಸೇವೆಯನ್ನು ಈ ನಾಡಿಗೆ ಸಲ್ಲಿಸಿದ್ದಾರೆ. ಒಬ್ಬ ಕಲಾವಿದ ಗಟ್ಟಿ ನೆಲೆಯಲ್ಲಿ ವ್ಯವಹರಿಸಬೇಕಾದರೆ ಅವನಿಗೆ ಕಲೆಯ ವ್ಯಾಕರಣ ತಿಳಿದಿರಬೇಕು. ಏಕೆಂದರೆ ಶಿಕ್ಷಣದಿಂದ ಆತ್ಮವಿಶ್ವಾಸ ಬೆಳೆಯುತ್ತದೆ.[೨] ಕಲಾವಿದ ಎಲ್. ಶಿವಲಿಂಗಪ್ಪನವರಿಗೆ ಕಲೆಯ ವ್ಯಾಕರಣದ, ಶಿಕ್ಷಣದ ಅವಶ್ಯಕತೆ ಇತ್ತು. ಅದನ್ನು ಅವರು ಪಡೆಯುತ್ತಾರೆ.

ಶಿವಲಿಂಗಪ್ಪನವರು ಪಿ.ಯು.ಸಿ.ಯವರೆಗೆ ವಿದ್ಯಾಭ್ಯಾಸ ಪಡೆದುಕೊಂಡು ಐ.ಟಿ.ಐ.ನಲ್ಲಿ ಡಿಪ್ಲೊಮಾ ಮಾಡಿಕೊಂಡಿದ್ದರು. ೧೯೬೭ರಲ್ಲಿ ಬಿ.ಇ.ಎಂ.ಎಲ್. ಕಾರ್ಖಾನೆಯ ಕೆಲಸಕ್ಕೆ ಸೇರಿಕೊಂಡರು. ನಂತರ ಅಲ್ಲಿಯೇ ಕೆಲಸ ಕಾರ್ಯಗಳು ೮ ಗಂಟೆಗಳ ಕೆಲಸ ಮಾಡಬೇಕಾಗಿತ್ತು. ಕಾರ್ಖಾನೆಯಲ್ಲಿ ಮಾಡುವ ಕೆಲಸ ಲೇಔಟ್ ಸೆಕ್ಷರನಲ್ಲಿದ್ದರು. ಅಲ್ಲಿ ಮೇಕಾನಿಕಲ್ ಕೆಲಸ ಮತ್ತು ಡೀಜೈನ್ ಮಾಡುವುದು ಇವರ ಕೆಲಸವಾಗಿತ್ತು. ಇವರು ಕಾರ್ಖಾನೆಯ ಕೆಲಸಕ್ಕೆ ಸೇರಿಕೊಂಡು ೧೨ ವರ್ಷಗಳ ನಂತರ ಶಿವಲಿಂಗಪ್ಪನವರಿಗೆ ಮದುವೆಯಾಯಿತು. ಇವರು ಮದುವೆಯಾಗಿದ್ದು ೧೯೭೯ರಲ್ಲಿ ಇವರ ಅಕ್ಕನ ಮಗಳು ಭ್ರಮರಾಂಭ ಎಂಬುವವಳನ್ನು ಮದುವೆಯಾದರು. ಸ್ವಲ್ಪ ದಿನಗಳ ನಂತರ ಇವರ ಧರ್ಮಪತ್ನಿಯು ಅನಾರೋಗ್ಯದಿಂದ ಅಕಾಲಿಕ ಮರಣವನ್ನಪ್ಪಿದರು. ನಂತರ ಉತ್ತರ ಕರ್ನಾಟಕದ ಕುಷ್ಠಗಿಯ ತಾಲೂಕಿನ ಪ್ರಭಾಕುಮಾರಿ ಎಂಬುವವರನ್ನು ಮರು ವಿವಾಹವಾದರು.

ಕಲಾವಿದ ಎಂ.ಟಿ.ವಿ. ಆಚಾರ್ಯರು ಅಂಚೆಯ ಮೂಲಕ ಕಲಾಶಿಕ್ಷಣ ಕೊಡುವ ವ್ಯವಸ್ಥೆ ಮಾಡಬೇಕೆಂದುಕೊಂಡು ವಿವಿಧ ಉದ್ಯೋಗದಲ್ಲಿರುವವರಿಗೆ ಹಾಗೂ ಮನೆಯಲ್ಲಿರುವ ಗೃಹಿಣಿಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೆಯಲ್ಲಿಯೇ ಕುಳಿತು ಕಲಾಭ್ಯಾಸ ಮಾಡಲು ಅಂಚೆ ಕಲಾಶಿಕ್ಷಣ ನೀಡಲು ಪ್ರಾರಂಭಿಸಬೇಕೆಂದುಕೊಂಡರು.

ಸ್ವಲ್ಪ ದಿನಗಳ ನಂತರ ಆಚಾರ್ಯರು ಪತ್ರಿಕೆಗಳಲ್ಲಿ ಜಾಹಿರಾತನ್ನು ಪ್ರಕಟಿಸಿದರು. ಆಸಕ್ತರು ಇರುವವರೆಗೆ ಮಾತ್ರ ಅಂಚೆ ಮೂಲಕವಾಗಿ ಚಿತ್ರಕಲೆಯನ್ನು ಕಲಿಸುತ್ತೇವೆ ಎಂದು ಜಾಹಿರಾತನ್ನು ನೀಡಿದ್ದರು. ೧೯೭೯ರಲ್ಲಿ ಆಗ ಜಾಹಿರಾತನ್ನು ನೋಡಿದ ಶಿವಲಿಂಗಪ್ಪನವರಿಗೆ ಹೇಳಲಾರದಷ್ಟು ಸಂತೋಷವಾಗಿತ್ತು. ಬರಡಾಗಿದ ಭೂಮಿಗೆ ತಂಪೆರೆದ ಮುಂಗಾರು ಮಳೆಬಂದಂತಾಯಿತು. ಆಗ ಈ ಜಾಹಿರಾತನ್ನು ನೋಡಿದವರು ನನ್ನಂತೆಯೇ ಕಲಾ ಹಸಿವಿನಿಂದ ತಹತಹಿಸುತ್ತಿದ್ದರೂ ಇವರಿಗೆಲ್ಲ ಈ ಜಾಹಿರಾತು ಒಂದು ಬಗೆಯ ಆನಂದವನ್ನುಂಟು ಮಾಡುತ್ತದೆಂದು ಕೊಂಡರು.

ಯಾವುದೇ ಸರ್ಕಾರದ ಸವಲತ್ತುಗಳಿಲ್ಲದೆ ಎಂ.ಟಿ.ವಿ. ಆಚಾರ್ಯರು ಅಂಚೆಯ ಮುಲಕ ಕಲಾಶಿಕ್ಷಣ

---

೨. ಡಾ. ಎಸ್.ಸಿ. ಪಾಟೀಲ, ಸಾಧನೆಯ ಸಮುಚ್ಛಯ ಎಲ್. ಶಿವಲಿಂಗಪ್ಪ, ಪು.

ಪ್ರಾರಂಭಿಸಬೇಕು ಎಂದರೆ ಅದಕ್ಕೆ ಹಣ ಬೇಕೆಂದುಕೊಂಡು ತಮ್ಮಲ್ಲಿದ್ದ ಒಂದು ಮನೆಯನ್ನು ಮಾರಾಟ ಮಾಡಿ ನೂರಾರು ಪಡಿಯಚ್ಚು ಮಾಡಿಸಿ ನಾಲ್ಕೈದು ವರ್ಷಗಳ ಸತತವಾಗಿ ಕುಳಿತು ಬೇಕಾದ ಪಠ್ಯ ವಿಷಯಗಳನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಸಿದ್ಧಪಡಿಸಿದರು. ಆಗ ಎಂ.ಟಿ.ವಿ. ಆಚಾರ್ಯರ ಮೇಲೆ ಸಮಕಾಲೀನ ಕಲಾವಿದರಿಗೆಲ್ಲಾ ಒಂದು ಬಗೆಯ ಅಸೂಯೆ ಹುಟ್ಟಿಕೊಂಡಿತು. ನೇರವಾಗಿ ಕಲಿತರೇ ಬಾರದ ಕಲೆ ಅಂಚೆ ಮೂಲಕ ಕಲಿಯಲು ಸಾಧ್ಯವೇ? ಇದೊಂದು ಹುಚ್ಚು ಸಹಾಸ ಎಂದು ಟೀಕೆ ಮಾಡಿದರು.

ಆಚಾರ್ಯರ ಬಗ್ಗೆ ಹಲವಾರು ದಿನನಿತ್ಯ ಬರುವ ಪತ್ರಿಕೆಗಳಿಗೆ ವಿವಿಧ ಹೆಸರಿನಿಂದ ಬೇರೆ ಬರೆದರು. ಅಂಚೆ ಕಲಾಶಿಕ್ಷಣದ ಬಗ್ಗೆ ಅದೊಂದು ಕ್ರಮ ಬದ್ಧತೆ ಇಲ್ಲದಿರುವ ತರಬೇತಿ ಎಂದು ಬರೆಯುತ್ತಿದ್ದರು. ಆದರೆ ಇಂತಹ ವಿಷಯಗಳನ್ನು ಲೇಕ್ಕಿಸದೆ ಎಂ.ಟಿ.ವಿ. ಆರ್ಚಾಯರು ಅವರ ಮನಸ್ಸಿನಲ್ಲಿ ನಿಶ್ಚಿತವಾದ ನಿಲುವಿನಿಂದ ಅಂಚೆ ಕಲಾಶಿಕ್ಷಣ ಆರಂಭಿಸಿದ್ದರು. ಆಚಾರ್ಯರು ವಿದ್ಯಾರ್ಥಿಗಳಿಗೆ ಒಂದು ಸೂಚನೆ ಕೊಟ್ಟರು ನಿಮ್ಮಗೆ ಸರ್ಕಾರಿ ಸರ್ಟಿಫಿಕೆಟ್ ಶಿಕ್ಷಣವೇ ಬೇಡವಾದರೆ ನಮ್ಮ ಕಲಾಶಾಲೆಗೆ ಬನ್ನಿರಿ. ನಿಜವಾದ ಕಲಾವಿದನಾಗಬೇಕು ಎಂದು ಬಯಸುವವರು ಮಾತ್ರ ನನ್ನಲ್ಲಿ ಬರಲಿ ಎಂದು ಎಂ.ಟಿ.ವಿ. ಆಚಾರ್ಯರು ಪ್ರಕಟಣೆ ನೀಡುತ್ತಾರೆ. ಪತ್ರಿಕೆಗಳಲ್ಲಿ ಸಾಕಷ್ಟು ಸಮರ ನಡೆದವು. ಇವುಗಳಿಗೆಲ್ಲಾ ಆಚಾರ್ಯರು ಧೃತಿಗೇಡದೆ ಅವರ ಅಂಚೆ ಕಲಾಶಿಕ್ಷಣವನ್ನು ನಡೆಸುತ್ತಾ ಬಂದರು. ಆಗ ವಿವಿಧ ಉದ್ಯೋಗದಲ್ಲಿದ್ದವರಿಗೆ ಕಲಾಭ್ಯಾಸದಿಂದ ವಂಚಿತರಾಗಿದ್ದ ಕೆಲವು ಜನರು ಅಂಚೆ ಕಲಾಶಿಕ್ಷಣ ಶಾಲೆಗೆ ಸೇರಿದರು.

ಪ್ರಥಮ ಗುಂಪಿನ ವಿದ್ಯಾರ್ಥಿಗಳಾಗಿ ಶಿವಲಿಂಗಪ್ಪನವರು ಅಲ್ಲಿ ಸೇರಿಕೊಂಡರು. ಆಗ ತಿಂಗಳಿಗೆ ಶುಲ್ಕವಾಗಿ ೧೦ ರೂಪಾಯಿಗಳಿತ್ತು. ಆದರೂ ೨.೦೦ ರೂಪಾಯಿ ರಿಯಾಯಿತಿ ನೀಡಿದರು. ಶಿವಲಿಂಗಪ್ಪನವರಿಗೆ ೮.೦೦ ರೂಪಾಯಿ ಮಾತ್ರ ಪಡೆದು ಕಲಾಶಾಲೆಗೆ ಸೇರಿಸಿಕೊಂಡಿದ್ದರು. ಕಾರಣ ಶಿವಲಿಂಗಪ್ಪನವರು ಬರೆದಿದ್ದ ಚಿತ್ರಗಳನ್ನು ನೋಡಿ ಮೆಚ್ಚಿ ರಿಯಾಯಿತಿ ಕೊಟ್ಟಿದ್ದರು. ಶಿಕ್ಷಣ ದಾರಿದೀಪವಾಗಬಹುದು. ಆದರೆ ದೀಪ ಬೆಳಗುವ ಬೆಳಕಿನಲ್ಲಿ ನಡೆದು ಗುರಿ ಮುಟ್ಟಬೇಕಾದದ್ದು ಮಾತ್ರ ಪ್ರಯಾಣಿಕನ ಕೆಲಸ. ದೀಪವೇ ನಡೆಯಲಾರದು ಎಂದಿದ್ದರೂ. ದೀಪ ಬೇಕು ಹೆದ್ದಾರಿಯಲ್ಲಿ ದಿಕ್ಕು ತೋರಿಸುವ ಕೈಗಂಬ ಇರುವಂತೆ ಎಂ.ಟಿ.ವಿ. ಆಚಾರ್ಯರ ಅಂಚೆ ಕಲಾಶಿಕ್ಷಣ ಶಿವಲಿಂಗಪ್ಪನವರಿಗೆ ಕಲಾಜೀವನದಲ್ಲಿ ಬೆಳಕು ಚೆಲ್ಲುವ ದೀಪವಾಯಿತು. ನೈಜ ಕಲೆಯ ರಸ ಋಷಿಯಾಗಲು ಅವರಿಗೆ ಮಾರ್ಗತೋರಿತು.

ಚಿತ್ರಕಲಾ ಶಿಕ್ಷಣದ ಹಿನ್ನೆಲೆ

ಮುಂಬಯಿ, ಕಲ್ಕತ್ತಾ, ಮದ್ರಾಸ ಮತ್ತು ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿ ಕರ್ನಾಟಕವು ಆಗ ಮುಂಬಯಿ ಪ್ರಾಂತದಲ್ಲಿತ್ತು ರಾಜಕೀಯವಾಗಿ ಮುಂಬೈ ಸರ್ಕಾರದಿಂದ ಒಪ್ಪಿಕೊಳ್ಳಲ್ಪಟ್ಟ ಪಠ್ಯಕ್ರಮ ಅಭ್ಯಾಸ ಪತ್ರಿಕೆ, ಪಠ್ಯಪುಸ್ತಕಗಳು ಮತ್ತು ಕಲಿಸುವ ವಿಧಿ ವಿಧಾನಗಳು ಪ್ರಚಲಿತವಿದ್ದವು. ಕಲಾಶಿಕ್ಷಣಕ್ಕಾಗಿ ಮುಂಬೈ

[illegible]

ಆಗ ಒಂದು ಮಹತ್ವದ ಕೇಂದ್ರವಾಗಿತ್ತು. ೧೮೫೭ರ ಮಾರ್ಚ್ ೨ರಂದು ಸರ್ ಜೆ.ಜೆ.ಸ್ಕೂಲ್ ಆಫ್ ಆರ್ಟ್ ಕಲಾ ಸಂಸ್ಥೆಯು ಮುಂಬೈಯಲ್ಲಿ ಪ್ರಥಮವಾದ ಪಾಶ್ಚಾತ್ಯಮಾದರಿ ಕಲಾಶಾಲೆ ಆರಂಭವಾಯಿತು. ಕಲಾ ಶಿಕ್ಷಣದಲ್ಲಿ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿತ್ತು. ಲಂಡನ್ನಿನ ಕ್ಯಾಪ್ಟನ್ ಗ್ಲ್ಯಾಡ್‌ಸನ್ ಸಾಲೋಮನ್ ಈ ಕಲಾಶಾಲೆಯ ನಿರ್ದೇಶಕರಾಗಿ ಬಂದ ಮೇಲೆ ಕಲಾಶಿಕ್ಷಣ ಸ್ವರೂಪವೇ ಬದಲಾಯಿಸಿತು.

ಕಲ್ಕತ್ತಾ ಕಲಾಶಾಲೆಯಲ್ಲಿ ಇಂಡಸ್ಟ್ರೀಯಲ್ ಆರ್ಟ್ ಸೊಸೈಟಿ ಎಂಬ ಔದ್ಯಮಿಕ ಆಸಕ್ತಿಯುಳ್ಳ ಸಂಸ್ಥೆಯು ಒಡಮೂಡಿಸಿದ ಶಾಲೆ ಅದು. ಈ ಶಾಲೆಯಲ್ಲಿ ಶಿಕ್ಷಣ ವಿಷಯಗಳೆಲ್ಲ ಮೊದಲು ಕೈಗಾರಿಕೆಗೆ ಸಂಬಂಧಪಟ್ಟವೇ ಆಗಿದ್ದವು. ಮುಖ್ಯವಾಗಿ ಮರದಲ್ಲಿ ಕೆತ್ತನೆ, ಲಿಥೋಗ್ರಾಫ್ ಇವುಗಳೊಂದಿಗೆ ಅಲಂಕರಣೆಯನ್ನು ಅಷ್ಟಿಷ್ಟು ಕೊಡಿಸಿದ್ದರು. ಶಾಲೆಗಳಲ್ಲಿ ಆರ್ಥಿಕ ದೃಷ್ಟಿಯಿಂದ ಕರಕುಶಲ ಕೈಗಾರಿಕೆಗಳನ್ನೇ ಕಲಿಸಬೇಕೆಂಬುದು ಅಂದು ನಾಡಿನ ಒಡೆಯನಾಗಿದ್ದ ಲಾರ್ಡ್ ಕರ್ಜನ್ ಆಗ್ರಹವಾಗಿತ್ತು. ಇದರಿಂದಾಗಿ ಆಗ ಕಲ್ಕತ್ತಾದಲ್ಲಿ ಕಲಿತಕ್ಕಂತಹ ವಿಷಯಗಳು ಇವಾಗಿದ್ದವು. ಅಲಂಕಾರಿ ರೇಖಾಚಿತ್ರ (Ornamental Drawing) ಪ್ಲಾಸ್ಟರ್‌ನಿಂದ ಮೂರ್ತಿಗಳ ರಚನೆ (Modelling and Casting), ಕುಂಭಕಲೆ (Manfacture at Pottery), ಮರದ ಕೆತ್ತನೆ ಕೆಲಸ (Wood Engreving), ಅಚ್ಚು ತೆಗೆಯುವುದು (Lithogaraphy) ಹಾಗೂ ಛಾಯಾಚಿತ್ರ (Photography) ಈ ಎಲ್ಲ ವಿಷಯಗಳನ್ನೊಳಗೊಂಡ ಮದ್ರಾಸ್ ಹಾಗೂ ಕಲ್ಕತ್ತಾ ಕಲಾಶಾಲೆಯ ಪ್ರಭಾವವನ್ನು ನಾವು ಮುಂಬಯಿ ಸರ್ ಜೆ.ಜೆ. ಕಲಾಶಾಲೆಯಲ್ಲಿಯ ವಿಷಯಗಳಲ್ಲಿ ಅತ್ಯಂತ ಸುಲಭವಾಗಿ ಗುರುತಿಸಬಹುದಾಗಿದೆ. ಆದದರಿಂದ ಎಲ್ಲಾ ಚಿತ್ರ ಹಾಗೂ ಕರಕುಶಲ ಕಲೆಗಳಿಗೂ ಮೂಲಭೂತವಾದ ಶಾಖೆ ಇದ್ದಾಗಿದ್ದರಿಂದ ರೇಖಾಚಿತ್ರ ಹಾಗೂ ವರ್ಣಚಿತ್ರಗಳ (Department of Drawing and Painting) ವಿಭಾಗವನ್ನು ಪ್ರಾರಂಭಿಸಿದರು. ಒಂದೇ ಚಿತ್ರಕಲಾ ವಿಭಾಗದಿಂದ ಪ್ರಾರಂಭವಾದ ಈ ಸಂಸ್ಥೆ ಮುಂದೆ ಬೇರೆ ಬೇರೆ ಉಪಶಾಖೆಗಳನ್ನು ಹೊಂದಿ ಬೆಳೆಯಿತು. ಅವುಗಳೆಂದರೆ ಮಾಡಲಿಂಗ್ ವಿಭಾಗ, ವಾಸ್ತುಶಿಲ್ಪ, ಶಿಲ್ಪ ವಿಭಾಗ, ಟೀಚರ್ ಟ್ರೇನಿಂಗ್ ವಿಭಾಗ, ಆರ್ಟ್ ಅಂಡ್ ಕ್ರಾಫ್ಟ್ ಆಫ್ ಇಂಡಿಯಾ ಮತ್ತು ಲಾರ್ಡ್‌ರೇ ವರ್ಕಶಾಪ್ ಅಲ್ಲದೇ ಅಪ್ಲೈಡ್ ಆರ್ಟ್ (ವಾಣಿಜ್ಯಕಲೆ) ವಿಭಾಗಗಳು ಮುಂದವರಿದವು.[೩]

ಇಂತಹ ದೊಡ್ಡ ದೊಡ್ಡ ಕಲಾಶಾಲೆಗೆ ಹೋಗಿ ಕಲಿಯುವುದಕ್ಕೆ ಕಡು ಬಡತನ ಅವರನ್ನು ಯಾವುದೇ ಕಲಾಶಾಲೆಗೆ ಹೋಗಿ ಕಲಿಯುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಶಿವಲಿಂಗಪ್ಪನವರು ನಾನು ಕಲಿಯಬೇಕು ಎಂದುಕೊಂಡು ಇವರು ಅಂಚೆಯ ಕಲಾಶಾಲೆಗೆ ಪ್ರವೇಶ ಮಾಡಿದರು. ಈ ಕಲಾಶಾಲೆಯಲ್ಲಿ ಎಲ್ಲಾ

---

೩. ಶ್ರೀಮತಿ ಲಕ್ಷ್ಮಿದೇವಿ ಗವಾಯಿ, ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಕಲಾಕೃತಿಗಳು ಒಂದು ಅಧ್ಯಯನ, ಪು. ೧೪೮

ವಿಷಯಗಳು ಪ್ರತಿಷ್ಠಿತ ಕಲಾಶಾಲೆಗಳಲ್ಲಿರುವ ವಿಷಯಗಳ ನಿಯಮಾವನ್ನು ಪಾಲಿಸುತ್ತಿದ್ದರು. ಅದೇ ರೀತಿಯಲ್ಲಿ ಇವರ ಕಲಾಶಿಕ್ಷಣವು ಮುಂದುವರಿತು.

ಎಂ.ಟಿ.ವಿ. ಆಚಾರ್ಯರು ವಿದ್ಯಾರ್ಥಿಗಳನ್ನು ನಿಸರ್ಗ ಚಿತ್ರಕ್ಕೆ ಬೇರೆ ಬೇರೆ ಕಡೆಗೆ ಕರೆದುಕೊಂಡು ಹೋಗುತ್ತಿದ್ದರು. ಆಚಾರ್ಯರು ಕಾವಾ ಕಲಾಶಾಲೆಯಲ್ಲಿ ಕಲಿತು ಹಲವಾರು ವರ್ಷಗಳಿಂದ ಅವರು ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಇವರಿಗೆ ನಿಸರ್ಗ ಚಿತ್ರ ಎಂದರೆ ಆಟವಾಡಿದಷ್ಟು ಸಂತೋಷವಾಗುತ್ತದೆ ಎಂದು ಹೇಳುತ್ತಿದ್ದರು. ಅವರು ನಮ್ಮ ಜೊತೆಗೆ ಕುಳಿತುಕೊಂಡು ಚಿತ್ರವನ್ನು ರಚಿಸುತ್ತಿದ್ದರು. ವಿದ್ಯಾರ್ಥಿಗಳು ಒಂದು ಚಿತ್ರವನ್ನು ರಚಿಸಬೇಕು ಎಂದರೆ ಸುಮಾರು ೩ ಗಂಟೆಗಳಷ್ಟು ಸಮಯವನ್ನು ತೆಗೆದುಕೊಳ್ಳುತ್ತಿದ್ದೇವು. ಆದರೆ ವಿದ್ಯಾರ್ಥಿಗಳು ೩ ಗಂಟೆಗಳ ಕಾಲ ಮಾಡುವ ಚಿತ್ರವನ್ನು ಆಚಾರ್ಯರು ಕೇವಲ ೨೦ ನಿಮಿಷಗಳಲ್ಲಿ ಚಿತ್ರವನ್ನು ರಚಿಸಿ ಜನರ ಮೆಚ್ಚುಗೆಯನ್ನು ಪಡೆಯುತ್ತಿದ್ದರು. ನಾವು ಒಂದು ನಿಸರ್ಗ ಚಿತ್ರವನ್ನು ಕೇವಲ ರೇಖಾಚಿತ್ರವಾಗಿ ರಚಿಸಬೇಕೆಂದರೆ ಬಹಳ ಕಷ್ಟದ ಕೆಲಸ ಅದರಲ್ಲಿ ಬಣ್ಣಗಳಿಂದ ರಚಿಸುವುದು ಎಂದರೆ ಇನ್ನೂ ಕಷ್ಟದ ಕೆಲಸವಾಗಿತ್ತು. ಆದರೆ ಆರ್ಚಾಯರು ಅವರು ರಚಿಸಿದ ಚಿತ್ರವನ್ನು ನಮ್ಮ ಮುಂದಿರಿಸಿ ಅದನ್ನು ಯಾವ ರೀತಿ ರಚಿಸಬೇಕು ಎಂಬುದರ ಬಗ್ಗೆ ವಿವರವಾಗಿ ಹೇಳುತ್ತಿದ್ದರು.

ಆಚಾರ್ಯರು ವಿದ್ಯಾರ್ಥಿಗಳು ರಚಿಸುವ ಮುಂಚೆಯೆ ಅವರು ತಮ್ಮ ಕಲಾಕೃತಿಯನ್ನು ಸಂಪೂರ್ಣ ಮಾಡುತ್ತಿದ್ದರು. ವಿದ್ಯಾರ್ಥಿಗಳು ಎಂ.ಟಿ.ವಿ. ಆಚಾರ್ಯರ ಜೊತೆ ಜೊತೆಗೆ ಅವರಷ್ಟೇ ವೇಗವಾಗಿ ಚಿತ್ರವನ್ನು ರಚಿಸಬೇಕು ಎಂದುಕೊಂಡರೆ ಅದು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಎಂ.ಟಿ.ವಿ. ಆಚಾರ್ಯರ ಜೊತೆಗೆ ಹೋಗಿ ಹಿಂದೆ ಹಿಂದೆ ಬಿದ್ದು ಅವರ ಜೊತೆಗೆ ವರ್ಷಗಟ್ಟಲೆ ಸುತ್ತುತ್ತಾ ಹೋದರೆ ಒಂದು ಫೈನಲ್ ಸ್ಕೆಚ್ ಮಾಡುವುದಕ್ಕೆ ಆಗುತ್ತಿರಲಿಲ್ಲ. ಆದರೆ ಅವರು ತಮ್ಮ ಪಾಡಿಗೆ ತಾವು ಚಿತ್ರವನ್ನು ರಚಿಸುತ್ತಾ ಹೋಗುತ್ತಿದ್ದರು. ಅದೊಂದು ದಿನ ನಮಗೆ ತುಂಬಾ ಬೇಸರವಾಗುತ್ತಿತ್ತು. ಇದೇನು ಗುರುಗಳು ಇವರ ಪಾಡಿಗೆ ಇವರು ಚಿತ್ರವನ್ನು ಮಾಡುತ್ತಾ ಹೋಗುತ್ತಿದ್ದರೆ ನಾವು ಹೇಗೆ ಕಲಿಯುವುದು ಎಂದುಕೊಂಡು ಒಂದು ದಿನ ನಾವು ಅವರ ಬಳಿ ಹೋಗಿ ಕೇಳಿದೆವು ಸರ್ ಇದೆನ್ನು ನಿಮ್ಮ ಪಾಡಿಗೆ ನೀವು ಚಿತ್ರವನ್ನು ರಚಿಸಿದರೆ ನಾವು ಹೇಗೆ ಕಲಿಯುವುದು ಎಂದು ಪ್ರಶ್ನೆ ಮುಂದಿಟ್ಟೆವು. ಆಗ 'ತಕ್ಷಣ ಗುರುಗಳು ಉತ್ತರ ನೀಡಿದರು. ಯಾವಾಗಲು ನಾನು ನಿಮಗೆ ಚಿತ್ರವನ್ನು ರಚಿಸಿಕೊಟ್ಟರೆ ನೀವು ಏನು ಕಲಿತಂತೆ ಆಗುತ್ತದೆ ಮಣ್ಣು ಎಂದರು. ತಕ್ಷಣ ಅವರು ನಮ್ಮನ್ನು ಹತ್ತಿರ ಕರೆದು ನೋಡಿ ಮಕ್ಕಳೆ ನಾನು ಮಾಡುವುದನ್ನು ನೋಡಿಕೊಂಡರೆ ಸಾಲದು ಅದನ್ನು ಸರಿಯಾದ ಕ್ರಮದಲ್ಲಿ ನೋಡಿ ತಿಳಿದುಕೊಳ್ಳಬೇಕು. ಯಾವ ರೀತಿಯಲ್ಲಿ ಬಣ್ಣಗಳ ವಿಂಗಡಣೆ ಮಾಡಿದರೆ ಮತ್ತು ಅದರ ಯಥಾದರ್ಶನ ಯಾವ ರೀತಿ ಇದೆ ಎಂಬುದನ್ನು ಗಮನಿಸಬೇಕು ಮತ್ತು ಚಿತ್ರವನ್ನು ಬಿಡಿಸುವಾಗ ಮೊದಲು ಯಾವ ಜಾಗವನ್ನು ಎಷ್ಟು ಅಳತೆಯಲ್ಲಿ ನಾವು ತೆಗೆದುಕೊಳ್ಳಬೇಕು ಮತ್ತು ಸರಿಯಾದ ಪ್ಲೇಸ್‌ನ್ನು ಅರಿಸಬೇಕು ಎಂದು ಗುರುಗಳು ಮನತಟ್ಟುವಂತೆ ಎಲ್ಲಾ ವಿದ್ಯಾರ್ಥಿಗಳಿಗೆ ಹೇಳಿದರು.

ಎಂ.ಟಿ.ವಿ. ಆಚಾರ್ಯರ ಒಂದು ಮಾತನ್ನು ಹೇಳಿದರು ನೋಡಿ ನಾನು ನಿಮಗೆ ಒಂದು ನಿಸರ್ಗದ ಚಿತ್ರವನ್ನು ರಚಿಸಿಕೊಂಡು ಬನ್ನಿ ಎಂದು ಹೇಳಿದರೆ ನೀವೆಲ್ಲಾ ಹೋಗಿ ಯಾವುದೋ ಒಂದು ಸ್ಥಳವನ್ನು ಆಯ್ಕೆಮಾಡಿಕೊಂಡು ತಕ್ಷಣಕ್ಕೆ ಚಿತ್ರವನ್ನು ರಚಿಸುವುದು ಸರಿಯಾದ ಕ್ರಮವಲ್ಲ. ನೀವು ಮೊದಲಿಗೆ ಸರಿಯಾದ ಸ್ಥಳವನ್ನು ಆಯ್ಕೆ ಮಾಡಬೇಕು ಮತ್ತು ಅಳತೆಯನ್ನು ನೋಡಿಕೊಳ್ಳಬೇಕು. ನೀವು ಮಾಡುವ ನಿಸರ್ಗ ಚಿತ್ರವು ದೇವಸ್ಥಾನದ ಚಿತ್ರವಾಗಿರಬಹುದು ಅಥವಾ ಒಂದು ಮನೆ ಚಿತ್ರವಾಗಿರಬಹುದು. ಮೊದಲು ಅದನ್ನು ಪೆನ್ಸಿಲ್‌ನಿಂದ ರೇಖಾಚಿತ್ರವನ್ನು ರಚಿಸಬೇಕು. ನಂತರ ಸೂರ್ಯನ ಕಿರಣಗಳು ನಾವು ರಚಿಸುವ ವಸ್ತುವಿನ ಮೇಲೆ ಅದರ ಕಿರಣಗಳು ಬಿದ್ದಿರಬೇಕು ಎಂಬುದನ್ನು ನಾವು ಅರಿತುಕೊಳ್ಳಬೇಕು. ಹೀಗೆ ನಮ್ಮಗೆ ಹೇಳಿಕೊಡುತ್ತಿದ್ದರು. ನೀವು ಕಲಿಯ ಬೇಕೆಂದರೆ ನಿಮ್ಮ ಮನಸ್ಸಿನಲ್ಲಿ ಒಂದು ದೊಡ್ಡ ನಿರ್ಧಾರ ಇರಬೇಕು. ಆಗಲೇ ತಾವು ಒಂದು ಸುಂದರವಾದ ಕಲಾಕೃತಿಯನ್ನು ರಚಿಸುವುದು ಸಾಧ್ಯವೆಂದು ಹೇಳಿ ಕಳುಹಿಸಿದರು.

ಅಂಚೆ ಕಲಾಶಿಕ್ಷಣದಲ್ಲಿ ಶಿವಲಿಂಗಪ್ಪನವರು ಎಂ.ಟಿ.ವಿ. ಆಚಾರ್ಯರ ಅತಿ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಎಲ್. ಶಿವಲಿಂಗಪ್ಪನವರು ಕಲಾಭಿಜ್ಞತೆಯ ಪರಿಚಯವಾಗಿ ತಮ್ಮ ಶಿಕ್ಷಣಕ್ಕೆ ಇಂತಹ ಹಿರಿಯ ಕಲಾವಿದರ ಅನುಭವದ ಪ್ರಾಯೋಜನವನ್ನು ಮಾಡಿಕೊಳ್ಳಲು ಅವಕಾಶ ದೊರೆತಿದ್ದು ನಮ್ಮ ಒಂದು ಭಾಗ್ಯವೆಂದೆ ಹೇಳಿದರು. ಶಿವಲಿಂಗಪ್ಪನವರ ವಿಶೇಷವೆಂದರೆ ಎಂ.ಟಿ.ವಿ. ಆಚಾರ್ಯರೆಂದರೆ ತುಂಬಾ ಅಭಿಮಾನವೆಂದೆ ಅವರು ಹೆಮ್ಮೆಯಿಂದ ಯಾವಾಗಲೂ ಹೇಳಿಕೊಳ್ಳುತ್ತಿದ್ದರೂ ಗುರುಗಳು ನಮಗೆ ಯಾವಾಗಲು ಅವರು ಪ್ರೌಢವಾದ ಕಲಿಸುವಿಕೆಯ ರೀತಿ ನೀತಿಯನ್ನು ಅವರು ಹೆಮ್ಮೆಯಿಂದ ನುಡಿಯುತ್ತ ಅವರಲ್ಲಿರುವ ಕಲಿಸುವಿಕೆ ಅವರ ಮಾತುಗಳಲ್ಲಿಯ ಸ್ಫೂರ್ತಿ ಹುರುಪು ಹುಮ್ಮಸುಗಳನ್ನು ತಾವೆಂದೂ ಮರೆಯಲಾರವೆಂದೂ ಶಿವಲಿಂಗಪ್ಪನವರು ಹೇಳಿಕೊಳ್ಳುತ್ತಾರೆ.

ಅಂಚೆ ಕಲಾಶಾಲೆಯ ನಿಯಮಕ್ಕೆ ಅನುಗುಣವಾಗಿ ಶಿವಲಿಂಗಪ್ಪನವರು ತಮ್ಮ ಏಕಾಗ್ರತೆಯಿಂದ ಕಲಾಕ್ರಿಯೆಯಲ್ಲಿ ತೊಡಗುತ್ತಿದ್ದರು. ಗುರುಗಳ ಜೊತೆಗೆ ಸದಾ ಒಡನಾಟದೊಂದಿಗೆ ತಮ್ಮ ಚಿತ್ರಗಳನ್ನು ತೋರಿಸುವುದು. ಇವುಗಳ ಜೊತೆಗೆ ಮಣ್ಣಿನಿಂದ ತಯಾರಿಸಿದ ಮೂರ್ತಿ ಶಿಲ್ಪಗಳನ್ನು ಎದುರಿಗಿಟ್ಟುಕೊಂಡು ಶಿವಲಿಂಗಪ್ಪನವರು ರಚಿಸುತ್ತಿದ್ದರು. ಒಂದು ನಿಸರ್ಗ ಚಿತ್ರವನ್ನು ಬೇರೆ ಬೇರೆ ಆಯಾಮಗಳಲ್ಲಿ ಹತ್ತು ಹದಿನೈದು ಸಲವಾದರೂ ಚಿತ್ರಿಸಬೇಕಾಗುತ್ತಿತ್ತು. ರೇಖೆಯಿಂದ ಮೂರ್ತಿಯ ಹೊರಮೈಯನ್ನು ಚಿತ್ರಿಸುವುದು ಐದಾರೂ ಬಾರಿ ರೇಖೆಗಳಿಂದ ಚಿತ್ರಿಸಿದ ಮೇಲೆ ಸರಿಯೆಂದು ಗುರುಗಳು ತೀರ್ಮಾನವಾದ ಬಳಿಕ ಅದರಲ್ಲಿ ಬೆಳಕು ನೆರಳುಗಳನ್ನು ಮೂಡಲು ತಿಳಿಸುತ್ತಿದ್ದರು. ಇಲ್ಲಿ ಯಾವುದೇ ಚಿತ್ರವಿರಲಿ, ಚಿತ್ರಿಸಬೇಕಾದರೆ ಮೊದಲು ಅದರ ಗುಣಾತ್ಮಕ ಅಂಶಗಳನ್ನು ಗಮನಿಸಬೇಕು ತಿಳಿದುಕೊಂಡ ನಂತರ ರಚನಾತ್ಮಕ ಕಲೆಗೆ ತೊಡಗಲು ಸಿದ್ಧರಾಗಬೇಕು ಎಂಬುದು ಗುರುಗಳ ಕಟ್ಟುನಿಟ್ಟಾದ ಆಜ್ಞೆಯಾಗಿತ್ತು. ಇದಲ್ಲದೆ ಕಲಾಶಾಲೆಯಲ್ಲಿ ರೇಖಾಚಿತ್ರ ನಂತರ ಸಂಯೋಜನಾ ವಿಷಯಕ್ಕೆ ಪ್ರಾಧಾನ್ಯತೆಯನ್ನು ನೀಡುತ್ತಿದ್ದರು. ಸಂಯೋಜನೆ ಇಲ್ಲಿ ಪ್ರಧಾನ

ವಿಷಯವಾಗಿತ್ತು. ಇದರಲ್ಲಿ ಆಂತರಿಕವಾಗಿ ಗಮನಿಸಲ್ಪಟ್ಟಾಗ ಹೆಚ್ಚಾಗಿ ಮನುಷ್ಯರ ಚಿತ್ರಗಳಿಂದ ಕೂಡಿದ ಚಿತ್ರಗಳನ್ನು ರಚನೆಗೆ ಕೊಡುತ್ತಿದ್ದರು. ಅಂದರೆ ಸಂಯೋಜನೆಯಲ್ಲಿ ಯಾವುದೇ ವಸ್ತುವನ್ನು ಅವುಗಳ ಅಧ್ಯತೆಯ ಅನುಗುಣವಾಗಿ ರಚನಾತ್ಮಕತೆಯಲ್ಲಿ ಹೇಳಿ ಕೊಡುತ್ತಿದ್ದರು.

ಸಂಯೋಜನಾ ಚಿತ್ರವನ್ನು ಮೊದಲು ಪೆನ್ಸಿಲ್‌ನಿಂದ ಡ್ರಾಯಿಂಗ್ ಮಾಡಿಕೊಳ್ಳಬೇಕು. ಅನಂತರ ಬೆಳಕು ನೆರಳಿನ ಭಾಗವನ್ನು ತೋರಿಸಿ ಒಂದು ಚಿತ್ರವನ್ನು ಬಳಸಿಕೊಂಡು ಚಿತ್ರಿಸಬೇಕೆಂಬುದನ್ನು ಎಂ.ಟಿ.ವಿ. ಆಚಾರ್ಯರು ತಿಳಿಸಿ ಕೊಡುತ್ತಿದ್ದರು. ಸ್ವತಃ ಗುರುಗಳೂ ಕೂಡಾ ವಿದ್ಯಾರ್ಥಿಗಳ ಜೊತೆಯಲ್ಲಿ ಕುಳಿತುಕೊಂಡು ಕಲಾಕೃತಿ ರಚನೆ ಮಾಡುತ್ತಿದ್ದರು. ಇಂತಹ ಒಂದು ಶಿಸ್ತಿನ ಬೋಧನಾ ಕ್ರಮ ಅಂಚೆ ಕಲಾಶಿಕ್ಷಣದ ಶಾಲೆಯಲ್ಲಿತ್ತು.

ಬೋಧನಾ ಕ್ರಮದಲ್ಲಿ ಅತ್ಯಂತ ಸರಳ ಹಾಗೂ ಪ್ರಭಾವಶಾಲಿ ಗುರುಗಳಾದ ಎಂ.ಟಿ.ವಿ. ಆಚಾರ್ಯರು ಹೆಚ್ಚಾಗಿ ಜಲವರ್ಣ ಮತ್ತು ತೈಲವರ್ಣದಿಂದ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಇವರು ಅಂದಿನ ಪ್ರಮುಖ ಕಲಾವಿದರಲ್ಲಿ ಒಬ್ಬರಾಗಿದ್ದರೂ. ಎಂ.ಟಿ.ವಿ. ಆಚಾರ್ಯರು ಭೋದನೆಯನ್ನು ಜಲವರ್ಣದ ಮೂಲಕ ಚಿತ್ರ ರಚನೆ ಮಾಡಿ ವರ್ಣಗಳ ವಿಧಾವನ್ನು ಬಹುಸಮರ್ಪಕವಾಗಿ ತಿಳಿಸಿಕೊಡುತ್ತಿದ್ದರು. ಅವರಿಂದಲೇ ಇಂತಹ ನಿಸರ್ಗ ಚಿತ್ರಗಳನ್ನು ಅವುಗಳ ಯಥಾದರ್ಶನದ ಕಲ್ಪನೆ ಮೂಡುವಂತೆ ಚಿತ್ರಗಳಲ್ಲಿ ಕಂಡುಬರುತ್ತಿದ್ದವು. ಎಂ.ಟಿ.ವಿ. ಆಚಾರ್ಯರು ದೃಶ್ಯದ ದೂರ ಸಮೀಪಗಳನ್ನು ಸೂಚಿಸುವಂತೆ ಪಾರದರ್ಶಕತೆ ಹಾಗೂ ಅಪಾರದರ್ಶಕತೆಯ ಮೂಲಕ ಬಳಸಿ ಚಿತ್ರ ರಚಿಸಬೇಕು. ನಿಸರ್ಗದಲ್ಲಿ ವಸ್ತುಗಳನ್ನು ಗಿಡ, ಮರ, ಹೂಬಳ್ಳಿ, ಆಕಾಶದ ಭಾಗಗಳು ತಾವೇ ಒಂದು ಚಿತ್ರದ ಮೂಲಕ ರಚನೆ ಮಾಡಿ ತೋರಿಸುತ್ತಿದ್ದರು.

ಶಿವಲಿಂಗಪ್ಪ ಮೊದಲಿನಿಂದ ನಿಸರ್ಗಚಿತ್ರ ಹಾಗೂ ಸಂಯೋಜನಾ ಚಿತ್ರಗಳಲ್ಲಿ ಒಲವು ಹೊಂದಿದವ ರಾಗಿದ್ದರಿಂದ ಗುರುಗಳು ನಿಸರ್ಗ ಚಿತ್ರದ ಬಗ್ಗೆ ಅದರ ಪ್ರತಿಯೊಂದು ಗುಣಾತ್ಮಕ ಅಂಶಗಳನ್ನು ಹಾಗೂ ಬಣ್ಣಗಳ ಬಳಸುವ ವಿಧಾನವನ್ನು ತೈಲವರ್ಣಗಳಲ್ಲಿ ಬರುವ ಅಂಶಗಳನ್ನು ಶಿವಲಿಂಗಪ್ಪನವರಿಗೆ ಹೇಳಿ ಕೊಟ್ಟರು. ನಿಸರ್ಗಚಿತ್ರ ರಚನೆಯಲ್ಲಿ ತುಂಬಾ ಆಸಕ್ತಿ ಹೆಚ್ಚಾಗಿರುವುದರಿಂದ ಅದಕ್ಕೆ ಪ್ರೋತ್ಸಾಹಿಸುತ್ತಿದ್ದರು. ಶಿವಲಿಂಗಪ್ಪನವರು ತಮ್ಮ ಮನಸ್ಸಿನಲ್ಲಿ ಏನಾದರು ಒಂದು ಸಾಧಿಸಿ ತೋರಿಸಬೇಕು ಎಂದು ಕೊಂಡು ಪಣತೊಟ್ಟಿದ್ದರು. ಶಿವಲಿಂಗಪ್ಪನವರ ಜೊತೆ ಇರುವ ಸ್ನೇಹಿತರು ಏನಾದರೂ ಆಗಲಿ ನಾವು ಕಲಿತೆ ಕಲಿಯಬೇಕು ಎನ್ನುವ ಹಂಬಲ ನಮ್ಮನ್ನು ಕಾಡುತ್ತಿತ್ತು.

ಸ್ನೇಹಿತರಾದ ಗೋಪಾಲ, ಕೃಷ್ಣಪ್ಪ ಎಲ್.ಪಿ. ಮತ್ತು ಕೋಟ್ರಪ್ಪ ಇವರ ಜೊತೆ ನಾನು ಚಿತ್ರ ಅಭ್ಯಾಸ ಮಾಡುತ್ತಿದ್ದರು. ಮತ್ತು ಅವರು ಕೂಡ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಬೆಳಿಗ್ಗೆ ನಿಸರ್ಗಚಿತ್ರವನ್ನು ರಚಿಸಬೇಕೆಂದು ಕೊಂಡರೆ ನಮ್ಮಗೆ ಒಂದು ಸಮಸ್ಯೆ ಅಡ್ಡಿಯಾಗುತ್ತಿತ್ತು. ನಾವು ನಾಲ್ಕು ಜನ ಕಾರ್ಖಾನೆಯಲ್ಲಿ ಉದ್ಯೋಗ ಮಾಡುವವರಾಗಿದ್ದರಿಂದ ಬೆಳಿಗ್ಗೆ ೧೧ ಗಂಟೆಗೆ ಎಲ್ಲರೂ ಕಾರ್ಖಾನೆಗೆ ಹೋಗಬೇಕಾಗಿತ್ತು.

ಅದಕ್ಕೆ ಒಂದು ಸರಿಯಾದ ನಿರ್ಧಾರವನ್ನು ಮಾಡಿಕೊಂಡು ಹೊರಟೆವು. ಮುಂಜಾನೆ ೪ ಗಂಟೆಗೆ ಎದ್ದು ನಮ್ಮ ಬೆಳಗಿನ ಎಲ್ಲಾ ಕೆಲಸಗಳನ್ನು ಮುಗಿಸಿಕೊಂಡು ನಮಗೆ ಬೇಕಾಗುವ ಕಲಾ ಸಾಮಾಗ್ರಿಗಳಾದ ಬ್ರಶ್, ಪ್ಯಾಲೇಟ್, ಒಂದು ನೀರಿನ ಬಾಟಲ್ ಮತ್ತು ಪೇಪರ್‌ಗಳನ್ನು ತೆಗೆದುಕೊಂಡು ನಿಸರ್ಗಚಿತ್ರ ರಚನೆಗಾಗಿ ಹೋಗುತ್ತಿದ್ದೇವು. ಅಂತಹ ಒಂದು ಸಂದರ್ಭದಲ್ಲಿ ನಮ್ಮ ತಾಯಿಯ ಪಾತ್ರ ದೊಡ್ಡದು ಮಕ್ಕಳು ಬೆಳಗಿನ ಜಾವ ಉಪವಾಸದಿಂದ ಹೋಗಬೇಕಾಗುತ್ತದೆ ಎಂದುಕೊಂಡು ಅವರು ಕೂಡ ಮುಂಜಾನೆ ೩ ಗಂಟೆಗೆ ಎದ್ದು, ನಮಗೆ ಬೇಕಾದ ತಿಂಡಿಯನ್ನು ತಯಾರಿಸಿ ಒಂದು ಡಬ್ಬದಲ್ಲಿ ತುಂಬಿಕೊಡುತ್ತಿದ್ದರು. ಆಗ ನನಗೆ ಇನ್ನೂ ಮದುವೆ ಆಗಿರುವುದಿಲ್ಲ. ನಂತರ ನಾವು ಚಿತ್ರ ರಚಿಸುವುದುಕ್ಕೆ ಹೋಗುವಾಗ ನಮ್ಮ ಹತ್ತಿರ ಸೈಕಲ್‌ಗಳು ಇದ್ದವು. ಅದರ ಸಹಾಯದಿಂದ ನಾವು ವಿದ್ಯಾನಗರದಿಂದ ಹಿಡಿದು ಕಳಾಸಿಪಾಳ್ಯದವರೆಗೆ ಸೈಕಲ್ ತುಳಿದುಕೊಂಡು ಹೋಗುತ್ತಿದ್ದೆವು. ವಿದ್ಯಾನಗರದಿಂದ ಹೋಗುವುದಕ್ಕೆ ಸುಮಾರು ೧೪ ರಿಂದ ೧೫ ಕಿ.ಮಿ.ದೂರದಲ್ಲಿ ಕಲಾಸಿಪಾಳ್ಯ ಇರಬಹುದು. ನಾವು ಹೋಗುವ ದಾರಿಯಲ್ಲಿ ಒಂದು ದೀಪದ ಕಂಬವು ಇರಲಿಲ್ಲ. ನಾವು ಕಲಾಸಿಪಾಳ್ಯಕ್ಕೆ ಹೋಗಿ ಅಲ್ಲಿ ಬಸ್‌ಸ್ಟಾಂಡ್‌ನಲ್ಲಿ ಬಂದು ಸೈಕಲ್ ಸ್ಟಾಂಡ್‌ಗಳಲ್ಲಿ ನಮ್ಮ ಸೈಕಲ್‌ಗಳನ್ನು ಬಿಟ್ಟು ಅಲ್ಲಿಂದ ಸಿ.ಟಿ.ಬಸ್‌ನ್ನು ಹಿಡಿದುಕೊಂಡು ಹಳ್ಳಿಗಳಿಗೆ ಹೋಗುತ್ತಿದ್ದೆವು.

ನಾಲ್ಕು ಜನ ಸೇರಿ ಒಂದೇ ಸ್ಥಳದ ನಿಸರ್ಗ ಚಿತ್ರವನ್ನು ರಚಿಸುತ್ತಿರಲಿಲ್ಲ. ಒಬ್ಬೊಬ್ಬರು ಒಂದು ಕಡೆ ಹೋಗಿ ಚಿತ್ರವನ್ನು ರಚಿಸುತ್ತಿದ್ದೇವು. ಸೂರ್ಯ ಉದಯ ಆಗುವ ಮುಂಚೆ ನಮ್ಮ ನಮ್ಮ ಸ್ಥಳವನ್ನು ಅರಿಸಿಕೊಂಡು ಮನೆ ಅಥವಾ ದೇವಸ್ಥಾನದ ಚಿತ್ರವೇ ಇರಲಿ ಅದನ್ನು ಮೊದಲು ಸ್ಕೇಚ್ ಮಾಡಿಕೊಂಡು ಸೂರ್ಯನ ಬೆಳಕಿನ ಕಿರಣಗಳು ನಾವು ಮಾಡುವ ದೃಶ್ಯದ ಮೇಲೆ ಬಿದ್ದಾಗ ರಚಿಸಿದ ಸ್ಕೇಚ್‌ನ ಮೇಲೆ ಅದಕ್ಕೆ ಬಣ್ಣವನ್ನು ಲೇಪನ ಮಾಡುವುದಕ್ಕೆ ಪ್ರಾರಂಭಿಸುತ್ತಿದ್ದೇವು. ನಾವು ಒಂದಾದರೂ ನಿಸರ್ಗ ಚಿತ್ರವನ್ನು ರಚಿಸಲೆ ಬೇಕೆಂದುಕೊಂಡು ಮನೆಯಿಂದ ದೂರ ಹೋಗುತ್ತಿದ್ದೇವು. ಮುಂಜಾನೆ ಮನೆಯಿಂದ ನಾವು ೪ ಗಂಟೆಗೆ ಮನೆ ಬಿಟ್ಟರೆ ಚಿತ್ರವನ್ನು ರಚಿಸುವ ಸ್ಥಳಕ್ಕೆ ಹೋಗಬೇಕು ಎಂದರೆ ಸುಮಾರು ೧ ಗಂಟೆ ಅಥವಾ ೧.೩೦ ಸಮಯವಾಗುತ್ತಿತ್ತು. ನಾವು ಬೆಳಿಗ್ಗೆ ೬ ಗಂಟೆಯಿಂದ ಹಿಡಿದು ಸುಮಾರು ಬೆಳಿಗ್ಗೆ ೧೦ ಗಂಟೆಯವರೆಗೆ ಚಿತ್ರವನ್ನು ರಚಿಸುವುದು ಚಿತ್ರವನ್ನು ಬಿಡಿಸಿಕೊಂಡ ನಂತರ ಪುನಃ ಮರಳಿ ಹಳ್ಳಿಯಿಂದ ಕಲಾಸಿಪಾಳ್ಯಕ್ಕೆ ಬಂದು ಅಲ್ಲಿ ನಮ್ಮ ಸೈಕಲ್‌ಗಳನ್ನು ತೆಗೆದುಕೊಂಡು ಮತ್ತೆ ಮನೆಗೆ ಹಿಂತಿರುಗಿ ಮನೆಗೆ ಹೋಗಿ ತಾಯಿಯವರು ಅಡಿಗೆ ಮಾಡಿದನ್ನು ಹೊಟ್ಟೆಗೆ ತುಂಬಿಸಿಕೊಂಡು ಪುನಃ ಮತ್ತೆ ಕಾರ್ಖಾನೆಗೆ ಹೋಗುತ್ತಿದ್ದೇವು.

ಕಾರ್ಖಾನೆಯಿಂದ ಮರಳಿ ಮನೆಗೆ ಬರುವ ವೇಳೆ ಸುಮಾರು ರಾತ್ರಿ ೧೦-೧೧ ಗಂಟೆಯಾಗುತ್ತಿತ್ತು. ಮನೆಗೆ ಬಂದ ಕ್ಷಣ ನಾವು ಬೆಳಿಗ್ಗೆ ಮಾಡಿಕೊಂಡು ಬಂದ ಚಿತ್ರವನ್ನು ತೆಗೆದು ನೋಡಿ ಅದರಲ್ಲಿ ಯಾವುದಾದರೂ ಅಂಶಗಳು ಕಡಿಮೆಯಾಗಿದೆ. ಅಂದರೆ ನಿಸರ್ಗ ಚಿತ್ರದಲ್ಲಿ ಅದರ ಯಥಾರ್ದರ್ಶನದ ಒಂದು ಅಂಶ ಅಥವಾ ಬಣ್ಣಗಳ ಬಳಕೆಯ ತಪ್ಪುಗಳನ್ನು ಸರಿಪಡಿಸಿಕೊಂಡು ನಾವು ಮಾಡಿದ ತಪ್ಪುಗಳು ಯಾವುವು

[illegible]

ಎಂಬುದು ಗಮನದಲ್ಲಿರಿಸಿಕೊಂಡು ಮತ್ತೆ ಪುನಃ ಮಾರನೆ ದಿನದಂದು ಬೆಳಿಗ್ಗೆ ಅದೇ ಸ್ಥಳಕ್ಕೆ ಹೋಗಿ ನಾವು ಮಾಡಿದ ತಪ್ಪುಗಳನ್ನು ಸರಿಪಡಿಸಿಕೊಂಡು ಬರುತ್ತಿದ್ದೆವು. ಹೀಗೆ ನಾವು ಸುಮಾರು ನಾಲ್ಕೈದು ವರ್ಷಗಳ ಕಾಲ ಪರಿಶ್ರಮಪಟ್ಟ ಮೇಲೆ ಸಾವಿರಾರೂ ಸ್ಕೆಚ್‌ಗಳು ಮಾಡಿಕೊಂಡು ಅದೇ ಸ್ಕೇಚ್ ಇರಿಸಿಕೊಂಡು ಮನೆಯಲ್ಲಿ ಅಭ್ಯಾಸ ಮಾಡುತ್ತಿದ್ದೇವು. ಸಂಪೂರ್ಣ ಚಿತ್ರವನ್ನು ಮಾಡಿ ಗುರುಗಳ ಬಳಿಗೆ ತೋರಿಸಿ ನಾವು ಮಾಡಿದ ತಪ್ಪುಗಳನ್ನು ಅವರು ತಿಳಿ ಹೇಳುತ್ತಿದ್ದರು. ಹೀಗೆ ಸುಮಾರು ವರ್ಷಗಳವರೆಗೆ ಮೇಲೆ ೬ ಗಂಟೆಯಲ್ಲಿ ಮಾಡುತ್ತಿದ್ದ ಚಿತ್ರವನ್ನು ಈಗ ಕೇವಲ ಒಂದರಿಂದ ಎರಡು ಗಂಟೆಗಳಲ್ಲಿ ಮಾಡಬಹುದಾಗಿದೆ. ಹೀಗೆ ಅವರು ಸತತವಾಗಿ ಕಲೆಯನ್ನು ರೂಢಿಸಿಕೊಂಡು ನಂತರ ಅವರು ೩ ವರ್ಷದ ಕಮರ್ಷಿಯಲ್ ಆರ್ಟ್ ಪೂರೈಸಿ ಹೆಚ್ಚಿನ ವರ್ಣಚಿತ್ರರಚನೆ ಕಲಿತು ಡಿಪ್ಲೊಮಾ ಪಡೆದರು.

ನಂತರ ನಾವು ಇನ್ನು ಎರಡು ವರ್ಷಗಳವರೆಗೆ ಅಭ್ಯಾಸ ಮಾಡಿ ೫ ವರ್ಷದ ಡಿಪ್ಲೋಮಾ ಸರ್ಟಿಫಿಕೇಟ್ ಬಗ್ಗೆ ನಮಗೆ ಅದರಲ್ಲಿ ತೃಪ್ತಿ ಇರಲಿಲ್ಲ. ಇದೇ ರೀತಿ ಆಚಾರ್ಯರು ಕೂಡಾ ಅದನ್ನೇ ಹೇಳುತ್ತಿದ್ದರು. ನೀವು ನಮ್ಮಲ್ಲಿ ಅಭ್ಯಾಸ ಮಾಡಿದಿರಿ ಎನ್ನುವ ಸಲುವಾಗಿ ನಿಮ್ಗೆ ಈ ಸರ್ಟಿಫಿಕೇಟ್ ಕೊಡುತ್ತಿದ್ದೇನೆ. ನೀವು ನಿಜವಾಗಿ ಕಲೆಯನ್ನು ಕಲಿತವರಲ್ಲ ಎಂದು ಹೇಳುತ್ತಿದ್ದಿರಿ ಏಕೆ ಈ ಮಾತನ್ನು ಹೇಳಿದರು ಎಂದರೆ ಅವರ ದೃಷ್ಟಿಕೋನ ಎತ್ತರದ ಆಲೋಚನೆ ಹಾಗೂ ಅವರದು ಸರಿಯದ ಕ್ರಮವನ್ನು ಅನುಸರಿಸಬೇಕು. ಅನಾಟಮಿಯನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಬೇಕು. ನೈಜವಾದ ಕಲಾಕೃತಿಯನ್ನು ರಚಿಸಬೇಕು. ಅದರ ಬಗ್ಗೆ ಅಸಕ್ತಿ ಇರಬೇಕು ಎಂಬುವುದು ಅವರ ಯೋಚನೆಯಾಗಿತ್ತು. ಅವರ ಒಂದು ಆಲೋಚನೆ ಕೇವಲ ಸರ್ಟಿಫಿಕೇಟ್‌ಗಳನ್ನು ಗೊಡುವುದು ಅಲ್ಲ, ನೀವು ಅಭ್ಯಾಸ ಮಾಡಿದಿರಿ ಎನ್ನುವ ಸಲುವಾಗಿ ನಿಮಗೆ ಕೊಡುತ್ತಿದ್ದೇನೆ ಎಂದು ಅವರು ನಮ್ಮ ಸರ್ಟಿಫಿಕೇಟ್ ಕೊಡುವಾಗ ಹೇಳಿದ ಮಾತುಗಳು.

೧೯೭೩ರಲ್ಲಿ ಇವರ ಡಿಪ್ಲೊಮಾ ಅಂತಿಮವಾಯ್ತು. ನಂತರ ದಾವಣಗೆರೆಯಲ್ಲಿರುವ ಕಾಟನ್ ಸಿಲ್ಕ್ ಸೀರೆಯ ಚಿತ್ರಗಳನ್ನು ಬರೆಯಲು ಹೋದಾಗ ಎಂ.ಟಿ.ವಿ. ಆಚಾರ್ಯ ಅವರು ಹೇಳುವಂತಹ ಚಿತ್ರಗಳಿಗೆ ಬಣ್ಣವನ್ನು ತುಂಬುವುದು ಎಲ್ಲಾ ಚಿತ್ರಗಳಿಗೆ ಸಂಪೂರ್ಣವಾಗಿ ಬಣ್ಣವನ್ನು ಹಚ್ಚುವುದು. ಮೊದಲು ನಮ್ಮ ಕೆಲಸ ನಂತರ ಅವರದು ಅಂತಿಮ ಟಾಚ್ ನೀಡುವುದು. ಹೀಗೆ ಅವರ ಜೊತೆಗೆ ಮಾಡುತ್ತಾ ಮಾಡುತ್ತಾ ಹೋದಾಗಲೆಲ್ಲಾ ಒಂದು ದಟ್ಟವದಂತಹ ಅನುಭವ ಆಗುತ್ತಿತು. ಆ ಒಂದು ಸಂದರ್ಭವು ನಮಗೆ ಒಂದು ಪೇರಣೆ ಎಂದು ಹೇಳಬಹುದು.

ಶಿವಲಿಂಗಪ್ಪನವರು ಡಿಪ್ಲೊಮಾ ಸರ್ಟಿಫಿಕೇಟ್ ದೊರಕಿತೆಂದು ಅವರು ದೂರ ಹೋಗಲಿಲ್ಲ. ದಿನಕ್ಕೆ ಮೂರ್‍ನಾಲ್ಕು ಗಂಟೆ ಭವನದಲ್ಲಿ ಚಿತ್ರಬಿಡಿಸುತ್ತಾ ಕಾಲ ಕಳೆಯುತ್ತಿದ್ದರು. ಕಲೆಯಲ್ಲು ಬರುತ್ತಿದ್ದ ಕಿರಿಯರಿಗೆ ಮಾರ್ಗದರ್ಶನ ಮಾಡುತ್ತಾ ಅಥವಾ ಅಂಚೆಯಿಂದ ಕಳುಹಿಸಿದ ಪಾಠಗಳನ್ನು ತಿದ್ದಿ ಬರೆಯುವ ಮಾರ್ಗವನ್ನು ತಿಳಿಸಿಕೊಡುತ್ತಾ ಚಿತ್ರಕಲೆಯಲ್ಲಿ ಗಮನಹರಿಸುತ್ತಿದ್ದರು. ಇದರಿಂದಾಗಿ ಇವರಿಗಿಂತ ಕಿರಿಯರಿಗೆ ಕಲಿಸುವುದರ

[illegible]

ಜೊತೆಗೆ ತಾವು ಕಲಿಯಲು ಹಿಡಿತ ಸಾಧಿಸಿಕೊಳ್ಳಲು ಸಹಕಾರಿಯಾಗುತ್ತಿತ್ತು. ಬಹಳಷ್ಟು ವಿದ್ಯಾರ್ಥಿಗಳು ಅವರವರ ಶಿಕ್ಷಣದ ನಂತರ ಕಲಿತ ಶಾಲೆಯ ಕೊಂಡಿ ಕಳಚಿಕೊಳ್ಳುವುದು ಸರ್ವೆ ಸಾಮಾನ್ಯ. ಆದರೆ ಶಿವಲಿಂಗಪ್ಪನವರು ಕಳಚಿಕೊಂಡ ಕೊಂಡಿಗಳಲ್ಲೆವನ್ನು ಸೇರಿಸುತ್ತಾ ಭವನದ ಏಳ್ಗೆಗಾಗಿ ದುಡಿದರು.

ಎಂ.ಟಿ.ವಿ. ಆಚಾರ್ಯರ ಅಂಚೆ ಕಲಾಶಿಕ್ಷಣದಲ್ಲಿ ಯುವ ಗುಂಪಿನ ವಿದ್ಯಾರ್ಥಿಗಳು ಅಂತಿಮ ಪ್ರವೇಶಕ್ಕೆ ಬಂದಾಗ ವಿದ್ಯಾರ್ಥಿಗಳ ಪ್ರತಿಯೊಬ್ಬರ ಕಲಾಕೃತಿಯನ್ನು ತೆಗೆದುಕೊಂಡು ಸಾಮೂಹಿಕ (ಗ್ರೂಪ್ ಶೋ) ಕಲಾಪ್ರದರ್ಶನ ಮಾಡುವುದುಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ನಿಸರ್ಗ ಕಲಾಕೃತಿ ಅಥವಾ ಸಂಯೋಜನಾ ಕಲಾಕೃತಿಗಳು ಮತ್ತು ಭಾವಚಿತ್ರಗಳೆ ಇರಲಿ ಯಾವುದೇ ಕಲಾಕೃತಿಗಳಾಗಿರಬಹುದು. ಸ್ವತಃ ಆಚಾರ್ಯರು ಈ ಕಲಾಪ್ರದರ್ಶನವನ್ನು ವಹಿಸಿಕೊಳ್ಳುತ್ತಿದ್ದರು. ಆಗ ಪ್ರಥಮ ಬಾರಿಗೆ ಶಿವಲಿಂಗಪ್ಪನವರ ಕಲಾಕೃತಿಗಳು ಪ್ರದರ್ಶನ ನಡೆದವು.

ಎಂ.ಟಿ.ವಿ. ಆಚಾರ್ಯರು

ಆಚಾರ್ಯರು ಯಾರ ಹತ್ತಿರವು ಹೆಚ್ಚಿಗೆ ಮಾತನಾಡುವುದು ಇರಲಿಲ್ಲ. ಸಾಮಾನ್ಯವಾಗಿ ನಾವುಗಳು ಗಂಟೆಗಟ್ಟಲೆ ಮಾತನಾಡುತ್ತೆವೆ. ನಮಗೆ ನಮ್ಮ ಸಮಯದ ಬಗ್ಗೆ ಅರಿವು ಇಲ್ಲದಿರುವುದು ಸೂಚಿಸುತ್ತದೆ. ಆದರೆ ಅವರು ಸಮಯ ಪ್ರಜ್ಞೆಯನ್ನು ಅರಿತವರು ಹಾಗೂ ಸಿಗುವ ಸಮಯವನ್ನು ಕೇವಲ ಕಲೆಗಾಗಿ ಮತ್ತು ಕಲಾಲೋಕದ ಪ್ರಪಂಚದಲ್ಲಿ ಮಾತ್ರ ವಿನಿಯೋಗಿಸುತ್ತಿದ್ದರು. ಯಾರೇ ಬಂದರು ಹೆಚ್ಚಿಗೆ ಮಾತನಾಡದೆ ಏಕೆ ಬಂದಿದ್ದಿರಿ ಎಂಬುದಾಗಲಿ ಅಥವಾ ಅವರು ಹೊರಡುತ್ತೇವೆ ಎಂದರೆ ಏಕೆ ಹೋಗುತ್ತಿರಿ ಎಂಬುದಾಗಲಿ ಅನಾವಶ್ಯಕ ಪ್ರಶ್ನೆಗಳು ಕೇಳುತ್ತಿರಲಿಲ್ಲ. ಅವರ ಸಮಯವನ್ನು ವ್ಯರ್ಥ ಮಾಡಿಕೊಂಡವರಲ್ಲ. ಕೇವಲ ಕೆಲಸದ ಬಗ್ಗೆ ಅಸಕ್ತಿಯಿಂದ ಸದಾ ಕೂಡಿರುವರು. ಅವರ ಬಂದ ವಿಚಾರ ಅವರಿಗೆ ತಿಳಿಹೇಳುವ ಮಾಹಿತಿಯನ್ನು ನೀಡುತ್ತಿದ್ದರು ವಿದ್ಯಾರ್ಥಿಗಳು ಬಂದಾಗ ಅವರಿಗೆ ವಿಚಾರ ತಿಳಿಹೇಳುವ ಒಂದು ಮನೋಭಾವವನ್ನು ಆಚಾರ್ಯರು ತಮ್ಮದಾಗಿಸಿಕೊಂಡಿದ್ದರು. ಅವರು ಬರವಣಿಗೆಗೆ ಕುಳಿತು ಮೂರ್‍ನಾಲ್ಕು ವರ್ಷಗಳು ಕಳೆದರು ಅವರನ್ನು ನೋಡಲು ಅವರ ಮನೆಗೆ ಬರುವಂತಹ ಕಲಾವಿದರಾಗಲಿ ಅಥವಾ ಗಣ್ಯ ವ್ಯಕ್ತಿಗಳೇ ಆಗಲಿ ಹೆಚ್ಚಿನ ಸಮಯವನ್ನು ಕೊಡದೆ ಅವರು ಬಂದಿರುವ ವಿಷಯ, ಅವರಿಗೆ ಬೇಕಾಗಿರುವ ಮಾಹಿತಿಯನ್ನು ನೀಡಿ ಮತ್ತೇ ತಮ್ಮ ಕೆಲಸದಲ್ಲಿ ತಾವು ನಿರತರಾಗುತ್ತಿದ್ದರು. ಬಂದು ಹೋಗುವ ವ್ಯಕ್ತಿಗಳು, ಅತಿಥಿಗಳನ್ನು, ವಿದ್ಯಾರ್ಥಿಗಳನ್ನು ಸತ್ಕಾರಿಸುವುದು ಅವರ ಧರ್ಮಪತ್ನಿ ಶ್ರೀಮತಿ ವಿಜಯಲಕ್ಷ್ಮಿಯವರು ನೋಡಿಕೊಳ್ಳುತ್ತಿದ್ದರು.

ಆಚಾರ್ಯರನ್ನು ನೋಡಲು ವಿದ್ಯಾರ್ಥಿಗಳು ಬಂದರೆ ಅವರ ಕಷ್ಟ ಸುಖವಾಗಲಿ ಅಥವಾ ಯಾವುದಾದರೂ ಒಂದು ಕಲಾಕೃತಿಯನ್ನು ಮಾಡದೇ ಇರುವುದು ಅಥವಾ ಅದರ ಬಗ್ಗೆ ವಿವರವನ್ನು ತಿಳಿದುಕೊಳ್ಳುವ ಎಲ್ಲಾ ಕೆಲಸವನ್ನು ವಿಜಯಲಕ್ಷ್ಮಿಯವರು ನೋಡಿಕೊಳ್ಳುತ್ತಿದ್ದರು. ಎಂ.ಟಿ.ವಿ. ಆಚಾರ್ಯರು ಮುಖ್ಯವಾದ ಕೆಲಸವೆಂದರೆ ವಿದ್ಯಾರ್ಥಿಗಳ ಕಲಾಕೃತಿಗಳನ್ನು ಪರಿಶೀಲಿಸುವುದು ಮತ್ತು ಅದರಲ್ಲಿರುವ ಲೋಪ

ದೋಷಗಳನ್ನು ತಿಳಿ ಹೇಳುವುದು. ಎಂ.ಟಿ.ವಿ. ಆಚಾರ್ಯರ ಧರ್ಮಪತ್ನಿ ಅವರು ಕಲಾವಿದರಾಗಿರಲಿಲ್ಲ. ಅವರು ಗೃಹಿಣಿಯಾಗಿದ್ದರು. ಸಂಪೂರ್ಣವಾಗಿ ಅವರು ನೂರಕ್ಕೆ ನೂರರಷ್ಟು ಅವರಿಗೆ ಸಹಾಯ ಮಾಡುತ್ತಿದ್ದರು. ಅವರು ಕೂಡ ಪದವಿಧರರಾಗಿದ್ದರು. ಒಟ್ಟಾರೆ ಇವರಿಬ್ಬರೂ ಉತ್ತಮ ವಿದ್ಯಾವಂತರಾಗಿದ್ದರು. ಆಚಾರ್ಯರು ಇಂಗ್ಲೀಷನಲ್ಲಿ ಬಹಳಷ್ಟು ಪ್ರಾವಿಣ್ಯತೆಯನ್ನು ಹೊಂದಿದ್ದರು. ಆಚಾರ್ಯರು ಹಿಂದಿನ ಕಾಲಕ್ಕೆ ಬಿ.ಎ. ಮಾಡಿದ್ದರು. ಯಾರು ಹಿಂದಿನ ಕಾಲದಲ್ಲಿ ಎಸ್.ಎಸ್.ಎಲ್.ಸಿ. ಮಾಡಿದವರು ಎಲ್ಲರೂ ಇಂಗ್ಲೀಷ್‌ನನ್ನು ಮಾತನಾಡುತ್ತಿದ್ದರು ಮತ್ತು ಬರೆಯುತ್ತಿದ್ದರು. ಆಗಿನ ಶಿಕ್ಷಣದಲ್ಲಿ ಅಷ್ಟೊಂದು ವಿದ್ವತ್‌ವಾಗಿ ಹೊಂದಿತ್ತು. ಸಂಯೋಜನಾ ಚಿತ್ರ ಎಂದು ನಾವು ಕರೆಯುತ್ತೇವೆ. ಅದನ್ನು ಸರಿಯಾಗಿ ಕರಗತ ಮಾಡಿಕೊಂಡಿರುವರು ಮೊಟ್ಟಮೊದಲ ವ್ಯಕ್ತಿ ಎಂದರೆ ಉತ್ತರ ಕರ್ನಾಟಕದಲ್ಲಿ ಎಸ್.ಎಂ. ಪಂಡಿತ್ ಅವರು ನಂತರ ದಕ್ಷಿಣ ಕರ್ನಾಟಕದಲ್ಲಿ ಎಂ.ಟಿ.ವಿ. ಆಚಾರ್ಯರು ಅರ್ಥ ಪೂರ್ಣವಾಗಿರುವಂತಹ ಚಿತ್ರಗಳು ರಚಿಸಿದ್ದಾರೆ. ಈ ನಾಡಿಗೆ ಅವರ ಕೊಡುಗೆ ಅಪಾರವೆಂದೇ ಹೇಳಬಹುದು. ಮೈಸೂರು ಅರಮನೆಯಲ್ಲಿ ಇರುವಂತಹ ನಿಸರ್ಗಚಿತ್ರಗಳು ಮತ್ತು ಪೂರ್ಣಭಾವಚಿತ್ರಗಳನ್ನು ಅದರಲ್ಲಿರುವ ಪ್ರಾಣಿಪಕ್ಷಿ, ಮನುಷ್ಯನ ದೇಹದ ರಚನೆಗಳನ್ನು ಮತ್ತು ಅವರು ತೋಟ್ಟಿರುವಂತಹ ಉಡುಪು ಅವರ ಪರಿಸರ ಮತ್ತು ಅದರಲ್ಲಿರುವ ಯಥಾದರ್ಶನ ಇತ್ಯಾದಿಗಳನ್ನು ಬಹಳ ಸುಂದರವಾಗಿ ರಚಿಸಿದ್ದಾರೆ. ಎಂ.ಟಿ.ವಿ. ಆಚಾರ್ಯರು ಛಾಯಾಚಿತ್ರಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಾಡಿ ತೋರಿಸಿದ್ದಾರೆ. ಇದು ಅವರಲ್ಲಿರುವಂತಹ ವಿಶೇಷ ಎಂದು ಹೇಳಬಹುದು. ಪುನಃ ನಾವು ಎಸ್.ಎಂ. ಪಂಡಿತ್ ಅವರ ಕಲಾಕೃತಿಗಳನ್ನು ನೋಡಿದಾಕ್ಷಣ ನಾವು ಅದೇ ರೀತಿಯ ಚಿತ್ರಗಳನ್ನು ನೋಡಿದಂತಹ ಅನುಭವವಾಗುತ್ತದೆ. ಇವರು ಇಬ್ಬರೂ ಕೂಡಾ ನಾವುಗಳು ಎಂದೆಂದೂ ನೆನಪಿನಲ್ಲಿ ಇರಿಸುವಂತಹ ವ್ಯಕ್ತಿಗಳು ಎಂದು ಹೇಳಬಹುದು.

ಹವ್ಯಾಸಗಳು ಚಿತ್ರವನ್ನು ರಚನೆ ಮಾಡುವುದು ಮತ್ತು ಹೊಸ ಹೊಸ ನವ್ಯಕಲೆಯ ಶಿಲ್ಪಗಳನ್ನು ಮಾಡುವುದು, ಕಥೆ ಕಾದಂಬರಿಗಳನ್ನು ಓದುವುದು, ಸಂಗೀತ ಕಾರ್ಯಕ್ರಮಗಳಿಗೆ ಹೋಗುವುದು, ಸಾಹಿತ್ಯದಲ್ಲಿ ಪುಸ್ತಕಗಳನ್ನು ಬರೆಯುವುದು ಹವ್ಯಾಸಗಳಲ್ಲಿ ಒಂದಾಗಿತ್ತು.

ಶಿವಲಿಂಗಪ್ಪನವರ ಮನೆಯ ದೇವರು ಯಾವುದು ಎಂದು ಕೇಳಿದಾಗ ಅವರಿಂದ ಬರುವಂತಹ ಉತ್ತರ ಮನೆಯ ದೇವರು ಅಥವಾ ಮಸಣದ ದೇವರು ಇವರು ಎಂದು ಅಂದುಕೊಂಡಿಲ್ಲ ಇವರು ಎಂದಿಗೂ ಆ ದೇವರು ಈ ದೇವರು ಎಂಬುದಾಗಿ ಅವುಗಳಿಗೆ ಪೂಜೆಯನ್ನು ಮಾಡುವುದಕ್ಕೆ ಹೋದವರು ಅಲ್ಲ. ಮತ್ತೇ ಅವರಿಗೆ ಜ್ಯೋತಿಷ್ಯದಲ್ಲಿ ನಂಬಿಕೆ ಇಲ್ಲ. ಅವರು ಯಾವುದೇ ಕೆಲಸ ಮಾಡುವುದಕ್ಕೆ ಒಳ್ಳೆಯ ದಿನಗಳನ್ನು ನೋಡುವುದಿಲ್ಲ. ಮುಖ್ಯವಾಗಿ ಇವರು ನಂಬುವುದು ದೇವರು ಎಂದರೆ ಅಂಗದ ಮೇಲೆ ಲಿಂಗದರೆಗಳು ಇವರು ಅಷ್ಟ ಲಿಂಗಕ್ಕೆ ಹೆಚ್ಚಿನ ಆಧ್ಯತೆ ಕೊಟ್ಟವರು. ಕಟ್ಟಿರುವಂತಹ ಲಿಂಗಕ್ಕೆ ಹೆಚ್ಚು ಪ್ರಾವಿಣ್ಯತೆ ಕೊಟ್ಟವರು ವಿನಹಃ ಊರಲಿರುವ ನೂರಾರು ದೇವರಿಗಳಿಗಲ್ಲ. ಇವರು ಯಾವುದೇ ದೇವಸ್ಥಾನಕ್ಕೆ ಹೋದರೆ ಅಲ್ಲಿ ಪೂಜೆ

ಪುನಸ್ಕಾರ ಮಾಡುವರಲ್ಲ. ಅದಕ್ಕೆ ಕಾರಣ ಎಂದರೆ ನಮ್ಮ ಹಿಂದು ಧರ್ಮದಲ್ಲಿ ೧೦೦ ಕೋಟಿ ದೇವರುಗಳನ್ನು ಸೃಷ್ಟಿ ಮಾಡಿದ್ದಾರೆ. ಆ ದೇವರುಗಳು ಯಾವ ದೇವರು ಎಂದು ವಿಶ್ಲೇಷಣೆ ಮಾಡಿ ಬರೀ ಪುರಾಣಗಳಿಂದ ಮಾತ್ರ ಗೊತ್ತು ಆದರೆ ಅದರ ವಿವೇಚನೆ ಇಲ್ಲ. ಹಿಂದೂಗಳು ಒಟ್ಟಾಗಿ ಇಲ್ಲದಿರುವುದು ಕಾರಣವಾಗಿ ನಮ್ಮ ದೇಶದಲ್ಲಿ ನೂರೆಂಟು ದೇವರುಗಳು ಇರುವುದು ಸಾಕ್ಷಿಯಾಗಿದೆ.

ಶಿವಲಿಂಗಪ್ಪನವರು ಸುಮಾರು ೧೯೬೭ ರಿಂದ ೨೦೦೨ರವರೆಗೆ ಬೆಂಗಳೂರು ಜೀವನವನ್ನು ಪ್ರಾರಂಭಿಸಿದ ಸಹಾಸ, ಧೈರ್ಯ, ದೀರ್ಘಶ್ರಮ ಎದ್ದುಕಾಣುತ್ತದೆ. ನಿರಂತರ ಕಲಾ ಸೇವೆ ಅವರ ಬೆಳವಣಿಗೆಯ ಜೀವಂತಿಕೆಯ ಲಕ್ಷಣಗಳಾದವು. ಮನುಷ್ಯ ಯಾವುದೇ ಕ್ಷೇತ್ರದಲ್ಲಿ ಸಾಧಿಸಬೇಕೆಂಬ ಇಚ್ಛೆ ಬಲವಾದಾಗ ಎಲ್ಲವನ್ನು ಮರೆತು ನಿಷ್ಠೆಯಿಂದ ದುಡಿಯುತ್ತಾನೆ. ಅದೇ ಲಲಿತಕಲೆಯಲ್ಲಿ ತೊಡಗಿದಲ್ಲಿ ಕಾಯಕ ನಿಷ್ಠೇ, ಪ್ರಗತಿಯ ಮಾರ್ಗ. ಈ ಪ್ರಗತಿಯಿಂದ ಅವನಿಗೆ ಎಲ್ಲಿಲ್ಲದ ಆನಂದವಾದಂತೆ. ಕಲಾವಿದನ ಜೀವನ ಸುಖದ ಸಂತೃಪ್ತಿಯಲ್ಲ ಮುಳ್ಳಿನ ಹಾಸಿಗೆ ಎಂಬುದನ್ನು ಅರಿತಿದ್ದರೂ ಶಿವಲಿಂಗಪ್ಪನವರು. ಅದರಲ್ಲಿ ಹಿಂದೆಟು ಹಾಕಲಿಲ್ಲವೆಂಬುದು ಅತ್ಯಂತ ಪ್ರಮುಖವಾದ ಸಂಗತಿಯೇ ಎನ್ನಬಹುದಾಗಿದೆ.

ಚಿತ್ರಕಲೆ ಜೀವನ ಕೈಗನ್ನಡಿಯಷ್ಟೇ ಅಲ್ಲ ಅದು ನಮ್ಮ ಬದುಕಿನ ಮುನ್ನಡೆಗೂ ಕಾರಣವಾಗಬಹುದು ಎಂಬುದು ಒಂದು ರೀತಿಯಲ್ಲಿ ಜೀವನ ಪ್ರತಿಬಿಂಬವು ಹೌದು. ಅಷ್ಟೇ ಅಲ್ಲ ಅದು ಗತಿಬಿಂಬವೂ ಸಹ ಹೌದು. ಜನ ಸಾಮಾನ್ಯರಿಗೆ ಸುಲಭವಾಗಿ ಅನುಭವವಾಗಿಸಬಲ್ಲ ಕಲಾ ಮಾಧ್ಯಮದಲ್ಲಿ ಚಿತ್ರಕಲೆ ಪ್ರಮುಕವಾದದ್ದು. ಇದಕವಕ ಕಾಲ, ದೇಶ, ಭಾಷೆ, ಪ್ರದೇಶಗಳನ್ನು ಮೀರಿದ ವ್ಯಾಪ್ತಿ ಇದೆ. ಹೀಗಾಗಿ ಚಿತ್ರಕಲೆಯನ್ನು ಅಂತರಾಷ್ಟ್ರೀಯ ಭಾಷೆಯೆಂದು ಕರೆಯಲಾಗುತ್ತಿದೆ. "ಚಿತ್ರಕಲೆ ಇಲ್ಲದೆ ಶಿಕ್ಷಣವು ಕಿಟಕಿಗಳಿಲ್ಲದ ಮನೆಯ ಹಾಗೆ" ಎಂಬ ಮಾತು ಚಿತ್ರಕಲೆ ಹಾಗೂ ಶಿಕ್ಷಣದ ಸಾಮರಸ್ಯದ ಕುರಿತಾದ ಮಾತಾಗಿದೆ. ಬರ್ನಾಡ ಶಾ ಅವರು ಹೇಳುವಂತೆ "ನೋಯಿಸದೆ ವಿದ್ಯೆಯನ್ನು ನೀಡಬಲ್ಲ ಶಿಕ್ಷಕನೆಂದರೆ ಕಲೆಯು ಮಾತ್ರ" ಎಂಬುದರಲ್ಲಿ ಔಚಿತ್ಯವಿದೆ. ಕಲೆಯು ಮಾನವರನ್ನು ಅತಿಮಾನವನನ್ನಾಗಿ ಮಾಡುವ ಸಾಧನವಾಗಿದೆ. ಹೀಗಾಗಿ ಅದೊಂದು ದೃಶ್ಯಕಾವ್ಯ ಎನ್ನಬಹುದು.

ಆರ್ಟ್ ಗ್ಯಾಲಾರಿ

"ಶಿವಲಿಂಗಪ್ಪನವರು ಇನ್ನು ಒಂದು ಹೆಜ್ಜೆ ಮುಂದೆ ಸಾಗಿ ತಮ್ಮದೇ ಆದ ಒಂದು ಆರ್ಟ್ ಗ್ಯಾಲಾರಿ ಮಾಡಿದ್ದಾರೆ. ಅದುವೇ ಮೈಸೂರು ಆರ್ಟ್ ಗ್ಯಾಲರಿ ಅರಮನೆಗೆ ಹತ್ತಿರವಾದ ಅಗ್ರಹಾರಗಳು ನಗರದ ಕೇಂದ್ರ ಭಾಗ ಇಂತಹ ಸ್ಥಳದಲ್ಲಿ ಗ್ಯಾಲರಿ ಮಾಡುವ ಮೂಲಕ ನಗರದ ಕೇಂದ್ರ ಭಾಗದಲ್ಲಿ ಒಂದು ಗ್ಯಾಲರಿ ಇಲ್ಲ ಎಂಬ ಕೊರಗನ್ನು ನಿವಾರಣೆ ಮಾಡಿದ್ದಾರೆ ಎನ್ನಬಹುದು. ಪ್ರದರ್ಶನ ಮಾಡಲಿಚ್ಛಿಸುವ ಕಲಾವಿದರಿಗೆ ಮುಕ್ತವಾದ ಆಹ್ವಾನವಿದೆ ಎನ್ನುತ್ತಾರೆ. ಕಲೆಗಳ ತವರುರು ಎಂಬ ಹೆಗ್ಗಳಿಕೆ ಮೈಸೂರಿಗೆ ಇದೆಯಾದರು, ಮೈಸೂರಿನಲ್ಲಿ ನಾಲ್ಕು ಕಲಾಶಾಲೆಗಳಿದ್ದರೂ ಚಿತ್ರಕಲೆಗೆ ಸಂಬಂಧಿಸಿದಂತೆ ಚಟುವಟಿಕೆಗಳು

ನಿಂತ ನೀರಿನಂತಾಗಿರುವುದನ್ನು ಮನಗೊಂಡು ತಮ್ಮ ಗ್ಯಾಲರಿ ಮೂಲಕ ನಿರಂತರ ಚಿತ್ರಕಲಾ ಆಗಿರಬಹುದು ಅಥವಾ ಶಿಲ್ಪ ಕಲಾಕೃತಿಗಳ ಚಟುವಟಿಕೆ ಮಾಡಲು ನಿರ್ಧರಿಸಿದ್ದಾರೆ. ಚಿಕ್ಕದಾದರೂ ಚೊಕ್ಕವಾಗಿರುವ ಈ ಗ್ಯಾಲರಿಗೆ ನಿರಂತರ ವಿದ್ಯುತ್ ಇರುವಂತೆ ಮಾಡಿದ್ದಾರೆ. ಈ ಗ್ಯಾಲರಿ ಇರುವುದು ೧೨ನೇ ಕ್ರಾಸ್ ರಾಮಾನುಜ ರಸ್ತೆ, ಮೈಸೂರು".[೪] ನಗರದಲ್ಲಿ ಇಲ್ಲಿ ಉಚಿತವಾಗಿ ಎಲ್ಲರೂ ಕಲಾ ಪ್ರದರ್ಶನ ಮಾಡಬಹುದಾಗಿದೆ. ಇದೊಂದು ಕಲಾಸೇವೆ ಎನ್ನುತ್ತಾರೆ ಶಿವಲಿಂಗಪ್ಪನವರು.

ಶಿವಲಿಂಗಪ್ಪನವರು ಕಲಾಶಿಕ್ಷಣದ ಬಗ್ಗೆ ಮತ್ತು ದೃಶ್ಯಕಲಾ ಸಾಹಿತ್ಯದ ಪುಸ್ತಕಗಳನ್ನು ಪ್ರಕಟಿಸಲು ಇವರ ಕಾರ್ಖಾನೆ ವೃತ್ತಿಯೇ ಅವರಿಗೆ ಪ್ರೋತ್ಸಾಹಿಸಿತು. ಎಲ್. ಶಿವಲಿಂಗಪ್ಪನವರು ಚಿತ್ರಕಲಾ ಭವನದಲ್ಲಿ ಎಂ.ಟಿ.ವಿ. ಆಚಾರ್ಯರು ನಂತರ ಶಿವಲಿಂಗಪ್ಪನವರು ಪ್ರಾಚಾರ್ಯರಾಗಿದ್ದರು. ಆದರ್ಶವಾದಿ ಹಾಗೂ ಸುದೀರ್ಘವಾಗಿ ಇವರಿಂದ ಚಿತ್ರಕಲಾ ಭವನದಲ್ಲಿ ನೂರಾರು ವಿದ್ಯಾರ್ಥಿಗಳು ಅಭ್ಯಾಸ ಮಾಡಿ ಶ್ರೇಷ್ಠ ಚಿತ್ರಕಲಾವಿಧರಾಗಿದ್ದಾರೆ. ಹಾಗೂ ಚಿತ್ರಕಲೆಯನ್ನು ತಮ್ಮ ಜೀವನಧಾರದ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಹಾಗೆಯೇ ಇವರ ಶಿಷ್ಯರು ಇಂದು ಚಿತ್ರಕಲೆಗೆ ತಮ್ಮ ಅಪಾರ ಕೊಡುಗೆಯನ್ನು ಕೊಡುತ್ತಾ ಚಿತ್ರಕಲೆಯನ್ನು ಪ್ರಚಾರ ಮಾಡುತ್ತಾ ಬೆಳಸಿಕೊಂಡು ಬಂದಿದ್ದಾರೆ.

ಕಲಾ ಚಟುವಟಿಕೆಗಳು

ಶಿವಲಿಂಗಪ್ಪನವರು ಸದಾಕಾಲ ಕಲಾ ಚಿಂತನ ಮಂಥನಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ಕಾರ್ಖಾನೆಯ ವೃತ್ತಿಯಿಂದ ನಿವೃತ್ತರಾದರೂ ಸಹ ಪ್ರವೃತ್ತಿಯಿಂದ ಕಲೆಯಿಂದ ದೂರ ಸರಿಯಲಿಲ್ಲ. ಸಂಪೂರ್ಣ ಕಲಾ ವಿಷಯಗಳ ಪ್ರಸಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸರಳ ಜೀವಿ, ಕಲಾಭಿರುಚಿ ಹೊಂದಿದ ಅವರ ಒಲವು ವಸ್ತುನಿಷ್ಠೇಯಿಂದ ಕೂಡಿದ ಕಲೆಯ ಕಡೆಗೆ ಮತ್ತು ನವ್ಯ ಕಲೆಯ ಬಗ್ಗೆ ಇವರ ಒಡನಾಟವಾಗಿತ್ತು. ಶಿವಲಿಂಗಪ್ಪನವರು ಬರೀ ಚಿತ್ರಕಾರರು ಮಾತ್ರವಲ್ಲ, ಬರಹಗಾರರು ಕೂಡ ಮತ್ತು ಛಾಯಾಚಿತ್ರಗಾರರು ಕೂಡಾ ಆಗಿದ್ದರು. ಸುಮಾರು ೫೦೦ ಲೇಖನಗಳನ್ನು ರಚಿಸಿದ್ದಾರೆ. ಮತ್ತು ೨೨ ಪುಸ್ತಕಗಳನ್ನು ಬರೆದು ೧೬ ಪುಸ್ತಕಗಳನ್ನು ಮುದ್ರಣವಾಗಿ ಬರೆದ ಹೆಗ್ಗಳಿಕೆ ಇವರದು.

ಮೃದು ಮಾತಿನ ಕಪಟತನ ಅರಿಯದ ದೊಡ್ಡ ಜೀವ ಎಂದರೆ ಶಿವಲಿಂಗಪ್ಪನವರು ಲಲಿತಕಲಾ ಅಕಾಡೆಮಿಯ ಸದಸ್ಯರಾಗಿದ್ದರು. ಸಾಹಿತ್ಯ ಕ್ಷೇತ್ರದಲ್ಲಿ ಸರ್ಕಾರದಿಂದ ಹಾಗೂ ಖಾಸಗಿ ಸಂಸ್ಥೆಗಳಿಂದ ಸ್ಥಾಪಿತವಾದ ಪ್ರಶಸ್ತಿಗಳು ಅನೇಕವಾಗಿವೆ. ಅದೊಂದು ರೀತಿಯಲ್ಲಿ ಪ್ರೋತ್ಸಾಹದಾಯಕವೇ ಸರಿ. ಬರೆಯಬಲ್ಲವರೆಲ್ಲರಿಗೂ. ಆದರೆ ಚಿತ್ರ ಅಥವಾ ಶಿಲ್ಪಕಲೆಯ ದೃಷ್ಟಿಯಿಂದ ಯಾವ ಪ್ರಶಸ್ತಿಗಳನ್ನು ನೀಡುತ್ತಿರಲಿಲ್ಲವಾದ್ದರಿಂದ ದಿವಂಗತ ಆಚಾರ್ಯರ ಹೆಸರಿನಲ್ಲಿ ಹಿರಿಯ ಪ್ರತಿಭಾನ್ವಿತ ಕಲಾವಿದರೋರ್ವರಿಗೆ

---

೪. ಡಾ. ಎಸ್.ಸಿ. ಪಾಟೀಲ, ಸಾಧನೆಯ ಸಮುಚ್ಚಯ ಎಲ್. ಶಿವಲಿಂಗಪ್ಪ, ಪು.

[illegible]

ಏಕೆ ಪ್ರಶಸ್ತಿ ನೀಡಬಾರದೆಂದು ಯೋಚಿಸಿ ಕಾರ್ಯನ್ನು ಖರಾದರು. ಕರ್ನಾಟಕದಲ್ಲಿ ಓರ್ವ ಕಲಾವಿದನ ಹೆಸರಿನಲ್ಲಿ ಪ್ರಶಸ್ತಿ ನೀಡುವ ಯೋಜನೆ ತಂದ ಮೊದಲಿಗರು. ನಂತರದಲ್ಲಿ ಘನ ಸರ್ಕಾರ ವರ್ಣಶಿಲ್ಪ ವೆಂಕಟಪ್ಪನವರ ಹೆಸರಿನಲ್ಲಿ ಪ್ರಶಸ್ತಿ ಕೊಡಲು ಆರಂಭಿಸಿತು. ನಂತರದ ಇತ್ತೀಚಿನ ವರ್ಷಗಳಲ್ಲಿ ಖಾಸಗಿಯಾಗಿ ಶಂಕರ ಪಾಟೀಲ, ಕೆ.ಕೆ. ಹೆಬ್ಬಾರ, ಡಿ.ವಿ. ಹಾಲಭಾವಿ, ಆರ್.ಎಂ. ಹಡಪದ ಮುಂತಾದ ಕಲಾವಿದರ ಹೆಸರಿನಲ್ಲಿ ಪ್ರಶಸ್ತಿ ಕೊಡುವತ್ತಾ ಸಾಗಿದೆ. ಕಲಾವಿದರಿಗೆ ಇದೊಂದು ಚಿತೋಹಾರಿಯಾದ ಅಂಶ ಎನ್ನಬಹುದು.

ಶಿವಲಿಂಗಪ್ಪನವರ ನೇತೃತ್ವದಲ್ಲಿ ಆಚಾರ್ಯ ಚಿತ್ರಕಲಾ ಭವನದ ಎಂ.ಟಿ.ವಿ. ಆಚಾರ್ಯ ಪ್ರಶಸ್ತಿಯನ್ನು ಸರ್ವಶ್ರೀ ಎಂ.ಜೆ. ಶುದ್ಧೋಧನ ಮೈಸೂರು, ಎಂ.ಎ. ಚೆಟ್ಟಿ ಗದಗ, ಪಿ.ಆರ್. ತಿಪ್ಪೇಸ್ವಾಮಿ ಧರ್ಮಸ್ಥಳ, ಸುಭಾಷಿಣಿ ದೇವಿ ನಂಜನಗೂಡು, ಆರ್. ಸಿತಾರಾಂ ಬಿಜಾಪುರ, ಜಿ.ಎಂ. ಹೆಗಡೆ ಶಿರಸಿ, ಯು.ಎಸ್.ಎ. ವೆಂಕಟರಾಮನ್ ಬೆಂಗಳೂರು, ಮೌಲ್ಡ್ ರಾಜಣ್ಣ ಬೆಂಗಳೂರು, ರಾಮಕೃಷ್ಣ ಬೆಂಗಳೂರು ಇವರುಗಳು ಪಡೆದವರಾಗಿದ್ದಾರೆಂಬ ವಿಷಯಗಳನ್ನು ಪತ್ರಿಕೆಗಳು ಪ್ರಕಟಿಸಿವೆ. ಇದಲ್ಲದೇ ಅಂಚೆ ಚಿತ್ರಕಲಾ ಸ್ಪರ್ಧೆ, ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ, ಬೇಸಿಗೆ ಶಿಬಿರ ಇವೆಲ್ಲಾ ಅವರ ಕಲಾ ಕಾರ್ಯ ಚಟುವಟಿಕೆಯ ಭಾಗಗಳು. ನಿತ್ಯ ಚಟುವಟಿಕೆಯೆ ನೋಟಗಳು ಶಿವಲಿಂಗಪ್ಪನವರ ಒಂದು ಸಹಾಸದ ಬದುಕು ಎಂದು ವರ್ಣಿಸಬಹುದು. ಇವರೂ ಕಲೆಯೊಂದಿಗೆ ಸಾಗಿದವರು ಕಲಾವೃತ್ತಿಯ ಮೂಲವು ಬದುಕಿನಲ್ಲಿ ಬರೆಯಬಹುದೆಂದು ಸಾಬೀತು ಪಡಿಸಿದ ಕಲಾವಿದ ಇವರು. ಕಲೆಯ ತನ್ನ ಜೀವ ಅದುವೇ ನನ್ನ ಜೀವನದ ಅವಿಭಾಜ್ಯ ಅಂಗವೆಂದು ನಂಬಿದ್ದರು. ಅಂದಿನ ಸನ್ನಿವೇಶದಲ್ಲಿ ನೈಜ ಕಲೆಗೆ ಹೆಚ್ಚು ಜನರು ಇಷ್ಟಪಡುತ್ತಿದ್ದರು. ವಚನದ ಆಧಾರಿತ ಚಿತ್ರಗಳು ರಚಿಸಲು ಮತ್ತು ಜನ ಸಾಮಾನ್ಯರಿಗೆ ಅಭಿರುಚಿಗೆ ಹೆಚ್ಚು ಒಲವು ತೋರಿಸಿ ಬದುಕಿಗೆ ಅವಶ್ಯಕತೆ ಇರುವಂತಹ ಕಲಾಕೃತಿಗಳಾದ ವಚನ ಆಧಾರಿತ ಕಲಾಕೃತಿಗಳನ್ನು ನಿಸರ್ಗ ವರ್ಣ ಚಿತ್ರಗಳನ್ನು ಹೆಚ್ಚು ಒತ್ತು ಕೊಟ್ಟು ಕಲಾಕೃತಿಗಳನ್ನು ರಚಿಸಿದ್ದಾರೆ.

ಒಳ್ಳೆಯ ಅವಕಾಶಗಳನ್ನು ಶಿವಲಿಂಗಪ್ಪನವರಿಗೆ ಅಂದಿನ ಮತ್ತು ಇಂದಿನ ಸಂದರ್ಭದಲ್ಲಿ ನಿರೀಕ್ಷಿಸದೆ ದೊರೆಯುವ ಅವಲಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳುವುದರ ಮೂಲಕ ತಮ್ಮ ವಚನ ಸಾಹಿತ್ಯದ ಚಿತ್ರಕಲೆಯನ್ನು ವಿಸ್ತರಿಸಿಕೊಳ್ಳಲು ಹಂಬಲಿಸುತ್ತಿದ್ದರು. ಇವರು ಅನೇಕ ಕಲಾ ಪ್ರದರ್ಶನಗಳನ್ನು ನಡೆಸಿದ್ದಾರೆ. ಮತ್ತು ಏಕವ್ಯಕ್ತಿಯ ಚಿತ್ರಕಲಾ ಪ್ರದರ್ಶನಗಳನ್ನು ಇಂದಿಗೂ ನಡೆಸುತ್ತಿದ್ದಾರೆ.

ಚಿತ್ರಕಲಾ ಪ್ರದರ್ಶನಗಳು

೧೯೭೦ರಿಂದಲೇ ಬೆಂಗಳೂರಿನಲ್ಲಿ ಚಟುವಟಿಕೆ ಆರಂಭಿಸಿದ ಶಿವಲಿಂಗಪ್ಪನವರು ಇಂದಿಗೂ ಉತ್ಸಾಹ ಪೂರ್ಣರಾಗಿದ್ದುಕೊಂಡು ಒಂದಲ್ಲಾ ಒಂದು ಸಂಸ್ಥೆಯೊಡನೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಟುವಟಿಕೆಗಳನ್ನು ಕುರಿತು ಅವರನ್ನು ಸಂದರ್ಶಿಸಿದಾಗ ಅವರು ಹೇಳುವ ಮಾತು ಇಂತಿದೆ. ಒಂಟಿಯಾಗಿ ಸಲಗನಂತೆ ನುಗ್ಗಿ ಮಾಡುವ ಗುಣವೂ ಇರಬೇಕು. ಹಾಗೆಯೇ ಗಾಣದ ಎತ್ತಿನಂತೆ ಸಂಘಕ್ಕಾಗಿ ದುಡಿಯುವ ಗುಣ ಅವಶ್ಯವಾಗಿ

ಬೇಕು ಎನ್ನುವ ಶಿವಲಿಂಗಪ್ಪನವರು ಕೊಡುವ ವಿಶ್ಲೇಷಣೆ: ಯಾವುದೇ ಸಂಘ ಸಂಸ್ಥೆ ಕಟ್ಟಬೇಕಾದರೆ ಮುಂದಾಲೋಚನೆ ಬೇಕು. ಜೊತೆಗೆ ಸಂದರ್ಭಾನುಸಾರ ನಿರ್ಣಯ ತೆಗೆದುಕೊಳ್ಳುವ ಆತ್ಮಸ್ಥೈರ್ಯ ಬೇಕು. ಆತ್ಮಸ್ಥೈರ್ಯ ಬರಬೇಕಾದರೆ ಅನುಭವ ಇರಬೇಕು. ಅನುಭವ ಬರಬೇಕಾದರೆ ಗಾಣದ ಎತ್ತಿನಂತೆ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡಿ ಸಾಧಕ ಬಾಧಕಗಳನ್ನು ತಿಳಿದುಕೊಂಡಿರಬೇಕು. ಅಂತಹ ಅನುಭವ ನಿರ್ಣಯ ತೆಗೆದುಕೊಳ್ಳಲು ಧೈರ್ಯ ಕೊಡುತ್ತದೆ.

ಅನುಭವವೇ ಇಲ್ಲದಿದ್ದರೆ ಹತ್ತಾರು ಜನ ರೀತಿ ವ್ಯಕ್ತಪಡಿಸಿದುದನ್ನು ಕೇಳಿ ಯಾವುದು ಸರಿ ಯಾವುದು ತಪ್ಪು ಎಂದು ನಿರ್ಣಯಿಸಲಾಗದೇ ಅತಂತ್ರ ಸ್ಥಿತಿ ನಿರ್ಮಾಣವಾಗುತ್ತದೆ. ಸಂಸ್ಥೆಯ ಚಟುವಟಿಕೆಯಾಗಲೀ, ಸ್ವಂತದ ಚಟುವಟಿಕೆಯಾಗಲೀ ಚಲನಶೀಲವಾಗದೆ ಜಡತ್ವ ಹೊಂದುತ್ತದೆ. ಮತ್ತೆ ಜಡದಿಂದ ಚೇತನ ಹೊಂದಬೇಕಾದರೆ ಮತ್ತೊಬ್ಬ ಅನುಭವಿ ಬರಲೇಬೇಕು ಎಂದು ವ್ಯಾಖ್ಯಾನಿಸುತ್ತಾ ಹೋಗುತ್ತಾರೆ. ಇವರ ಮಾತುಗಳು ಅದೆಷ್ಟು ಅರ್ಥಪೂರ್ಣ! ಧ್ವನಿಪೂರ್ಣವಾಗಿರುತ್ತಿದ್ದವು!

ಇವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಪ್ರಾರಂಭದಲ್ಲಿ ನಡೆದಿದ್ದು ಬೆಂಗಳೂರು (೧೯೮೦) ನಂತರ ಮಂಗಳೂರು (೧೯೮೬) ಕಾಸರಗೋಡು (೧೯೮೭). ಇಲ್ಲಿ ಪ್ರದರ್ಶಿತವಾದ ಚಿತ್ರಗಳಲ್ಲಿ ನಿಸರ್ಗ ದೃಶ್ಯಗಳದ್ದೇ ಸಿಂಹಪಾಲು ಉಳಿದಂತೆ ಸಂಯೋಜನಾ ಚಿತ್ರಗಳು ಮತ್ತು ರೇಖಾಚಿತ್ರಗಳು, ಸಂಪೂರ್ಣ ಜಲವರ್ಣದಿಂದಲೇ ರಚಿತವಾದ ನಿಸರ್ಗ ದೃಶ್ಯಗಳಲ್ಲಿ ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳು ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಹಾಗೂ ಬೆಟ್ಟದ ಮೇಲಿನ ಅವಿಸ್ಮರಣೀಯ ದೃಶ್ಯಗಳೇ ಅಧಿಕವಾಗಿದ್ದವು. ಉಳಿದಂತೆ ಕಲಾಭ್ಯಾಸದ ಹಿನ್ನೆಲೆಯಲ್ಲಿ ಬರುವ ಸಂಯೋಜನಾ ಚಿತ್ರಗಳು, ಕೆಲವು ರೂಪ ಚಿತ್ರಗಳು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದವು.

ಆ ನಂತರದಲ್ಲಿ ಕಲಾಶಿಕ್ಷಣದಿಂದ ಹೊರತಾದ ರೀತಿಯಲ್ಲಿ ಏನಾದರೊಂದು ಹೊಸತನ ಮಾಡಬೇಕೆಂಬ ತುಡಿತ ಬಲಗೊಳ್ಳುತ್ತಾ ಹೋದಂತೆ ನವ್ಯ ಚಿತ್ರ ರಚನೆಯಲ್ಲಿಯೂ ಏನಾದರೊಂದು ವಿನೂತನದ ಚಿತ್ರರಚನೆ ಮಾಡಬೇಕೆಂದು ಉದ್ದೇಶಿಸಿ ಸಿಂಪರಣೆ ಚಿತ್ರದ ಕಡೆಗೆ ಗಮನಹಿಸಿದರು. ಸಿಂಪರಣೆ ತಂತ್ರವನ್ನು ವಾಣಿಜ್ಯ ಕಲೆ ಮಾಡುವ ಸಂದರ್ಭದಲ್ಲಿ ಹಿನ್ನೆಲೆಗೆ ಬಳಸುತ್ತಿದ್ದುದನ್ನು ಕಂಡಿದ್ದು ಅವರೇ ಸಾಕಷ್ಟು ವಾಣಿಜ್ಯ ಕಲೆಯನ್ನು ಮಾಡಿದ್ದರು. ಆದರೆ ಅದನ್ನೇ ಪರಿಪೂರ್ಣವಾಗಿ ಸರಳವಾದ ಊದು ಕೊಳವೆಯ ಮೂಲಕ ಊದಿ ಚಿತ್ರದ ಸ್ವರೂಪ ಸಾಧನೆಯನ್ನು ಅಚ್ಚುಕಟ್ಟಾಗಿ ಇದುವರೆಗೆ ಯಾರೂ ಮಾಡಿರಲಿಲ್ಲ. ಈ ಶೋಧನೆಯ ಮೂಲಕ ಸುಮಾರು ಮೂವತ್ತು ಚಿತ್ರಗಳವರೆಗೆ ಸಿಂಪರಣೆ ಚಿತ್ರವನ್ನು ಮಾಡಿ ಪ್ರದರ್ಶಿಸಿದುದರಿಂದ ಪತ್ರಿಕೆ ಮತ್ತಿರ ಮಾಧ್ಯಮಗಳಿಂದ ಬಂದ ಪ್ರತಿಕ್ರಿಯೆ, ಪ್ರೋತ್ಸಾಹದಾಯಕವಾಗಿ ಇನ್ನಷ್ಟು ಮಾಡಲು ಸ್ಫೂರ್ತಿ ಬಂತು ಎನ್ನುತ್ತಾರೆ ಶಿವಲಿಂಗಪ್ಪನವರು. ಕಾಗದದ ಮೇಲೆ ಮಾಡಿ ಅವುಗಳಿಗೆ ಸೂಕ್ತವಾದ ಚೌಕಟ್ಟು ಹಾಕಿ ೧೯೯೦ರಲ್ಲಿ ಬೆಂಗಳೂರಿನಲ್ಲಿ ಪ್ರಥಮವಾಗಿ ಪ್ರದರ್ಶಿಸಿದ್ದಾರೆ.

ಈ ಮೂವತ್ತು ಚಿತ್ರಗಳನ್ನು ಮಾಡಲಿಕ್ಕೆ ಸುಮಾರು ೨ ವರ್ಷ ಶ್ರಮಿಸಿದ್ದಾರೆ. ಒಂದೊಂದು ಚಿತ್ರದಲ್ಲೂ ಸಮಾಜದಲ್ಲಾಗುವ ಪರಿಸರದಲ್ಲಾಗುವ ಹಾಗೂ ಮಾನವತಾನಾಗಿಯೇ ಅಂಟಿಸಿಕೊಳ್ಳುವ ದುಷ್ಚಟಗಳು, ಅವುಗಳಿಂದುಂಟಾದ ಪರಿಣಾಮ ಇವುಗಳನ್ನು ಚಿತ್ರದ ಮೂಲಕ ತೋರಿಸುವ ಯತ್ನ ಇವರದಾಗಿದೆ. ಬೆಂಗಳೂರಿನ ವೆಂಕಟಪ್ಪ ಗ್ಯಾಲರಿಯಲ್ಲಿ ನಡೆದ ಈ ಪ್ರದರ್ಶನವನ್ನು ಎಲ್ಲಾ ಮಾಧ್ಯಮದವರೂ ಹೊಗಳಿ ಬರೆದರು, ಮೇಲಿಂದ ಮೇಲೆ ಅವರ ಚಿತ್ರಗಳನ್ನು ರಾಜ್ಯ ಇತರೆಡೆಗಳಲ್ಲಿ ಪ್ರದರ್ಶನಗೊಳಿಸಿ ತಮ್ಮ ವಿನೂತನ ಮಾರ್ಗವನ್ನು ಕಲಾರಸಿಕರಿಗೆ ಪರಿಚಯಿಸಿದ್ದಾರೆ.

೧೯೭೭ರಲ್ಲಿ ದೆಹಲಿಯಲ್ಲಿ ಒಂದು ಚಿತ್ರಕಲಾ ಪ್ರದರ್ಶನ ನಡೆಯಿತು. ಕನ್ನಡ ಸಾಹಿತ್ಯ ವಜ್ರ ಮಹೋತ್ಸವದ ಆ ಸಂದರ್ಭದಲ್ಲಿ ನಮ್ಮ ನಾಡಿನ ಸಾಹಿತಿಗಳ ಭಾವಚಿತ್ರಗಳನ್ನು ರಚಿಸಿದರೆ ಆ ಭಾವ ಚಿತ್ರಗಳನ್ನು ಪ್ರದರ್ಶನವಾಯಿತು. ಅಂತಹ ಸಂದರ್ಭದಲ್ಲಿ ಇವರನ್ನು ಕರೆದು ಒಂದು ನೆನಪಿನ ಕಾಣಿಕೆ ಕೊಟ್ಟರು.

ಸ್ವದೇಶಿ ನೆಲದಲ್ಲಿ ಪ್ರದರ್ಶಿಸುವುದಕ್ಕಿಂತ ವಿದೇಶಿ ನೆಲದಲ್ಲಿ ಪ್ರದರ್ಶಿಸಿದರೆ ಆಗುವ ಆನಂದವೇ ಬೇರೆ. ಏಕೆಂದರೆ ತಾನು ನೋಡದಂತಹ ನಾಡಿನಲ್ಲಿ ತನ್ನ ಕಲಾಕೃತಿಗಳು ಪ್ರದರ್ಶನಗೊಂಡಾಗ ಅದರಲ್ಲೂ ಅದು ಸಮ್ಮೇಳನದಂತಹ ಜನಸಮೂಹ ಸೇರುವಲ್ಲಿ ನಡೆಯುವುದು ಕಲಾವಿದರನ್ನು ಒಂದು ರೀತಿಯಲ್ಲಿ ಆ ನಾಡಿಗೆ ಪರಿಚಯಿಸಿದಂತೆ. ಪ್ರದರ್ಶಿಸಲು ಅವಕಾಶ ಮಾಡಿದ ಮತ್ತು ಪ್ರದರ್ಶಿಸಿದ ಉಭಯತ್ರರಿಗೆ ಮಾತ್ರವಲ್ಲದೆ ಕಲಾವಿದ ಯಾವ ನೆಲದಿಂದ ಹೋಗಿರುತ್ತಾನೋ ಅಲ್ಲಿನ ನೆಲ, ಭಾಷೆ, ಸಂಸ್ಕೃತಿಗೆ ಗೌರವ ತರುವಂತಹದ್ದು, ಹೆಮ್ಮೆಪಡುವಂಥದು. ಈ ದಿಸೆಯಲ್ಲಿ ಶಿವಲಿಂಗಪ್ಪನವರು ೩ನೇ ಅಂತರಾಷ್ಟ್ರೀಯ ಶರಣ ಸಂಸ್ಕೃತಿ ಸಮ್ಮೇಳನ ೨೦೦೮ ರಂದು ಇದು ನಡೆದಿದ್ದೂ, ಅಕ್ಲೆಂಡ್ ನ್ಯೂಜಿಲೆಂಡ್‌ನಲ್ಲಿ ನಡೆದ ಶರಣ ಸಂಸ್ಕೃತಿಯ ಬಹುಮುಖ್ಯ ಭಾಗವಾದ ವಚನಗಳಿಗೆ ಚಿತ್ರರಚಿಸಿರುವುದನ್ನು ಹಾಗೂ ಶರಣ ಸಂಸ್ಕೃತಿ ನೇತಾರರಾದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮತ್ತು ೧೨ನೇ ಶತಮಾನದ ಶರಣ ನೆಲೆಗಳ ಚಿತ್ರಗಳು ಸೇರಿದಂತೆ ಪ್ರದರ್ಶನ ಮಾಡಿದುದು ವಿಶೇಷ ಎನಿಸುತ್ತದೆ. ಈ ಸಮ್ಮೇಳನಕ್ಕೆ ಆಶೀರ್ವದಿಸಲು ಕನ್ನಡ ನಾಡಿನ ವಿದ್ಯಾಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸುತ್ತಿರುವ ಗದುಗಿನ ತೋಂಟದಾರ್ಯ ಜಗದ್ಗುರುಗಳು ಹಾಗೂ ಮೈಸೂರಿನ ಜಗದ್ಗುರು ಶ್ರೀ ಶಿವರಾತ್ರೇಶ್ವರ ದೇಶಿ ಕೇಂದ್ರ ಸ್ವಾಮಿಗಳವರು ಅಶೀರ್ವಚನ ನೀಡಲು ಆಗಮಿಸಿದ್ದರು. ಅಲ್ಲಿನ ಜನಕ್ಕೆ ಮಹಾನಂದವಾಯಿತು. ಇಡೀ ದಿನ ನಡೆದ ಸಮ್ಮೇಳನಕ್ಕೆ ಉತ್ಸಾಹದಿಂದ ನೂರಾರು ಮೈಲಿ ದೂರದಿಂದ ಬಂದಿದ್ದ ಜನ ಸಮೂಹ ಕಲಾಪ್ರದರ್ಶನ ಉದ್ಘಾಟಿಸಿದ ಅಲ್ಲಿನ ವಿದ್ಯಾ ಸಚಿವರಾದ ಚೆರ್ರಿಸ್ ಕಾರ್ಟರ್ ಅವರು ಒಂದು ರೀತಿಯಂತೂ ಬಹಳ ಅಚ್ಚರಿ ತರುತ್ತಿತ್ತಂತೆ. ಓರ್ವ ಸಹಾಯಕನನ್ನು ಮಾತ್ರ ಕರೆದುಕೊಂಡು ತಾವೇ ವಾಹನವನ್ನು ಚಾಲನೆ ಮಾಡಿಕೊಂಡು ಬಂದದ್ದು, ನಿಗದಿತ ವೇಳೆಗೆ ಬಂದು ಉದ್ಘಾಟಿಸಿ ಮೆಚ್ಚುಗೆಯ ಮಾತಾನಾಡಿ ಆ ಚಿತ್ರಗಳೊಡನೆ ನಿಂತು ಛಾಯಾಚಿತ್ರ ತೆಗೆಯಿಸಿಕೊಂಡು ಮಿತವಾಗಿ ಮಾತಾಡಿ ಹೋದರು.

ಶಿವಲಿಂಗಪ್ಪನವರಿಗೆ ಅತೀ ಹೆಚ್ಚು ಆಸಕ್ತಿ ಹೊಂದಿರುವ ಚಿತ್ರ ಕಲಾಕೃತಿಗಳು ಅದರಲ್ಲಿ ನಿಸರ್ಗ ಚಿತ್ರಣ ಮತ್ತು ಇನ್‌ಷ್ಟ್ಯುಲೇಷನ್ ಮತ್ತು ಸಂಯೋಜನೆ ಚಿತ್ರಗಳು ಮಾಡುವುದಕ್ಕೆ ಮುಂದದರು. ನಂತರ ನವ್ಯಶಿಲ್ಪ ಕಲೆಯಲ್ಲಿ ಇವರ ಅಸಕ್ತಿ ಬೆಳೆಯಿತು. ಇವರು ಮಾಡಿದ ಪ್ರತಿಯೊಂದು ಚಿತ್ರಕ್ಕೂ ಒಂದೊಂದು ಅರ್ಥ ಇರುವುದು. ಇವರು ಯಾವುದೇ ನವ್ಯ ಕಲೆಯಲ್ಲಿ ಅರ್ಥ ಇಲ್ಲದಿರುವ ಕಲಾಕೃತಿಯನ್ನು ರಚನೆ ಮಾಡಿದವರಲ್ಲ. ಶಿಲ್ಪದಲ್ಲಾಗಿರಬಹುದು, ಚಿತ್ರಕಲೆ ಇರಬಹುದು ಯಾವುದೇ ಒಂದು ಮಾಡರ್ನ್ ಚಿತ್ರವನ್ನು ರಚಿಸಿದರೆ ಅದರಲ್ಲಿ ಒಂದು ಅರ್ಥ ಒಂದು ಸಂದೇಶ ಇರುತ್ತದೆ.

ಶಿವಲಿಂಗಪ್ಪನವರು ಗುರಿ ತಲುಪಲು ಪಟ್ಟ ಶ್ರಮಗಳು, ನೋವು ಅಸಾಧಾರಣ. ಕತ್ತಲಲ್ಲಿ ನಡೆದು ಬಂದಿದ್ದಾರೆ. ದಾರಿ ಕಾಣಿಸದೆ ಇದ್ದರೂ ಬಂದಿದ್ದಾರೆ. ಕ್ರಮೇಣ ಬೆಳಕು ಇವರ ಪ್ರಯತ್ನವಾದಿ ಹೋರಾಟಗಾರರು, ಶ್ರದ್ಧಾವಂತರು, ಪ್ರತಿಭಾವಂತರು, ಇವರ ಸಮಗ್ರ ವ್ಯಕ್ತಿತ್ವವನ್ನು ಅರಿತಾಗ ಇವರ ಬದುಕು ಸುಂದರ ಅದು ಸುಗಂಧದ ಬದುಕು ಪರಿಮಳ ಬೀರುವ ಗುಲಾಬಿಯ ಬದುಕು, ಅಯಾಸ್ಕಾಂತದಂತೆ ಆಕರ್ಷಣೆಯ ಬದುಕು ಇವರದಾಗಿದ್ದೆ.

ಶಿವಲಿಂಗಪ್ಪನವರು ಒಳ್ಳೆಯ ವ್ಯಕ್ತಿತ್ವವುಳ್ಳವರಾಗಿದ್ದರು ಮತ್ತು ಸ್ನೆಹಮಯಿ ಜೀವಿಗಳೂ ಆಗಿದ್ದರೂ. ಸ್ನೇಹದಿಂದ ವ್ಯಕ್ತಿತ್ವ ರೂಪಗೊಳ್ಳುತ್ತದೆ. ಸ್ನೆಹದಿಂದ ಬದುಕಿನಲ್ಲಿ ಯಶಸ್ಸು, ಒಳ್ಳೆಯ ಸ್ನೇಹ, ಅನೇಕ ಗುಣಗಳನ್ನು ಬೇಡುತದೆ. ನಿಷ್ಕಪಟತನವಿರದ ನೇರವಿರುವ ಸ್ವಾರ್ಥ ಕರಹಿತವಾದ ಸ್ನೇಹ ಅಂತಃಕರಣವನ್ನು ಯಾಚಿಸುತ್ತದೆ. ತ್ಯಾಗವನ್ನು ಕೇಳುತ್ತದೆ. ಹೊಂದಾಣಿಕೆಯನ್ನು ಬಯಸುತ್ತದೆ. ಲಾಭವನ್ನು ನೋಡುವ ಸ್ನೇಹ ಶಾಸ್ವತವಲ್ಲ. ಹಾನಿಯಲ್ಲೂ ಒಂದಾಗುವ ಸ್ನೇಹವು ಸ್ನೇಹದ ನೈಜತೆ, ಸತ್ಯಾತೆಯನ್ನು ಅಭಿವ್ಯಕ್ತಗೊಳಿಸುತ್ತದೆ. ಈ ಸ್ನೇಹ ಸಂಬಂಧಕ್ಕಿಂತಲೂ ದೊಡ್ಡದು ಸರಳತೆಗೆ ಸೌಜನ್ಯಕ್ಕೆ ಮುಗ್ಧತೆಗೆ ಮತ್ತೊಂದು ಹೆಸರು ಕಲಾವಿದ ಎಲ್. ಶಿವಶಂಕರಪ್ಪನವರು. ಸರಳತೆ ಸೌಜನ್ಯತೆಯಲ್ಲಿರುವ ಬದುಕು ಪರಿಶುದ್ಧ ಬದುಕು. ಮನುಷ್ಯನ ಶ್ರೇಷ್ಠತೆ ಎಲ್ಲವೂ ಅವನ ಸರಳತೆಯಲ್ಲಿಯೆ ವ್ಯಕ್ತವಾಗುತ್ತದೆ. ಉನ್ನತವಾದ ಬುದ್ಧಿ ಉನ್ನತವಾದ ಆಲೋಚನೆ ಉನ್ನತವಾದ ಬದುಕು ಇರುವಲ್ಲಿ ಸರಳತೆ ಜೊತೆಯಾಗಿರುವುದು ಸ್ವಾಭಾವಿಕ, ಮೃದು ಮಧುರ ಮಾತುಗಳು ಶಿವಲಿಂಗಪ್ಪನವರದು ಎಂದು ಹೇಳಬಹುದು.

ಹೋರಾಟಗಳು

ಕನ್ನಡಪರ ಹೋರಾಟಗಳು

ಗೋಕಾಕ್ ಚಳುವಳಿ ಕನ್ನಡವನ್ನು ಅನುಷ್ಠಾನ ಗೋಳಿಸಬೇಕು ಮತ್ತು ಕನ್ನಡಿಗರಿಗೆ ಉದ್ಯೋಗ ಕೊಡಬೇಕು ಎಂದು ಚಳುವಳಿ ಪ್ರಾರಂಭವಾಯಿತು. ಚಳುವಳಿಯಲ್ಲಿ ಭಾಗವಹಿಸಿದವರು ಅನೇಕ ವ್ಯಕ್ತಿಗಳು ಅದರಲ್ಲಿ ಜೆ.ಎಚ್. ಪಾಟೀಲ ಅವರು ಮತ್ತು ಗೋಕಾಕ್ ಮಾಳಿಗಿ ಅವರು ಮತ್ತು ಶಿವಲಿಂಗಪ್ಪನವರು ಭಾಗವಹಿಸಿದರು. ಆ ಚಳುವಳಿಯ ಸಂದರ್ಭದಲ್ಲಿ ಇವರನ್ನು ಬಂಧಿಸಿ ಸೆರೆಮನೆಗೆ ಹಾಕಲಾಯಿತು. ಒಂದು ದಿನದ ನಂತರ ಇವರನ್ನು ಅಲ್ಲಿಂದ ಬಿಡುಗಡೆಗೊಳಿಸಿದರು.

ಮೂರ್ತಿ ಸ್ಥಾಪನೆ ನಾಗರೀಕ ಸೌಲಭ್ಯವಾದ ನೀರು, ಬೆಳಕು, ಸಾರಿಗೆ, ವ್ಯವಸ್ಥೆ, ಅಂಚೆ, ಇವುಗಳಿಗೆಲ್ಲಾ ಅವಿರತವಾಗಿ ಹೋರಾಟ ಮಾಡಿ ಒಂದು ನಗರವನ್ನು ನಿರ್ಮಾಣ ಮಾಡಿದ ಇವರಿಗೆ ಬಸವನಗರ ಎಂಬ ಹೆಸರಿಗೆ ಅನ್ವರ್ಥವಾಗುವಂತೆ ಬಸವಣ್ಣನ ಮೂರ್ತಿಯನ್ನು ಸಾರ್ವಜನಿಕ ಸ್ಥಳದಲ್ಲಿ ಸ್ಥಾಪಿಸಬೇಕೆಂಬ ಹಂಬಲ ಪ್ರಬಲವಾಗಿತ್ತು ಇದಕ್ಕೆ ಸ್ಪಂದಿಸಿದ ಮುನಿಸಿಪಾಲಿಟಿ ಸದಸ್ಯರುಗಳು, ಜನಪ್ರತಿನಿಧಿಗಳು ಬಸವನಗರ ಹೆಸರಿಗೆ ಅನುಗುಣವಾಗಿ ಬಸವಣ್ಣನ ಮೂರ್ತಿಯನ್ನು ಇಡಲು ಅಧಿಕೃತವಾಗಿ ಅನುಮತಿ ದೊರಕಿಸಿ ಕೊಡಲು ಸಹಕಾರಿ ಯಾದುದನ್ನು ಸ್ಮರಿಸುತ್ತಾ ಅತ್ಯಂತ ಸುಂದರವಾದ ಎದೆಮಟ್ಟದ ಶಿಲ್ಪವನ್ನು ಮಾಡಿಸಿ ಸ್ಥಾಪಿಸಿದುದು ಅತ್ಯಂತ ಅಪೂರ್ವ ದಾಖಲೆ ಕೆಲಸವೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇದಕ್ಕೆ ಸುತ್ತಮುತ್ತಲಿನ ಸಂಘ ಸಂಸ್ಥೆಗಳು, ಸ್ನೇಹಿತರು, ಭಾವಾಭಿಮಾನಿಗಳು ಮಾನಸಿಕವಾಗಿ, ದೈಹಿಕವಾಗಿ ಹಾಗೂ ಆರ್ಥಿಕವಾಗಿ ಸಮಯೋಚಿತವಾಗಿ ಸಹಾಯ ಮಾಡಿದ್ದಾರೆನ್ನುತ್ತಾರೆ.

ಮೂರ್ತಿಯನ್ನು ಸ್ಥಾಪಿಸುವುದು ಒಂದು ಬಗೆಯ ಕೆಲಸವಾದರೆ ಅದು ನಿರಂತರ ಸ್ವಚ್ಛವಾಗಿರುವಂತೆಯೂ, ಸುತ್ತಲಿನ ಪರಿಸರ ನೈರ್ಮಲ್ಯದಿಂದ ಇರುವಂತೆಯೂ ಹಾಗೂ ನಿತ್ಯವೂ ಪೂಜೆಗೊಳ್ಳುವಂತಾಗಲೂ ಅಭಿಮಾನಿಗಳಿಂದ ಒಂದಿಷ್ಟು ಹಣ ಸಂಗ್ರಹಿಸಿ ನಿಗದಿತ ಠೇವಣಿಯಲ್ಲಿಟ್ಟು ಬರುವ ಬಡ್ಡಿ ಹಣದಿಂದ ನಿತ್ಯದ ಖರ್ಚಿಗೆ ವ್ಯವಸ್ಥೆ ಮಾಡಿರುವುದು. ಅವರ ಮುಂದಾಲೋಚನೆಯ ಕ್ರಮವಾಗಿದೆ. ಬೆಂಗಳೂರನ್ನು ಬಿಟ್ಟು ಬರುವ ಸಂದರ್ಭದಲ್ಲಿ ಈ ಮೂರ್ತಿಯ ಸಂರಕ್ಷಣೆ ಮತ್ತು ವಾರ್ಷಿಕ ಕಾರ್ಯಕ್ರಮ. ಸಂಘಟನೆಗಾಗಿ ಬಸವ ಸಮಿತಿ ಬಸವನಗರ ಎಂಬುದನ್ನು ಹೊಸದಾಗಿ ಮಾಡಿ ನೂತನ ಆಯ್ಕೆಯಾದ ಸಮಿತಿಗೆ ತಮ್ಮ ಎಲ್ಲಾ ಜವಾಬ್ದಾರಿ ವಹಿಸಿ ಬಂದಿದ್ದಾರೆ.

ಹೀಗೆ ಯಾವುದೇ ಕೆಲಸ ಆರಂಭಿಸಲಿ ಅದನ್ನು ವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ ದೀರ್ಘಕಾಲದ ತಾಳಿಕೆ ಬಾಳಿಕೆಯಾಗುವಂತೆ ಮಾಡುವುದು ಅವರ ಹುಟ್ಟುಗುಣವೆನ್ನಬಹುದು. ದೈಹಿಕ, ಮಾನಸಿಕ, ಆರ್ಥಿಕ ಇವುಗಳಲ್ಲಿ ಬರುವ ತೊಂದರೆ ಒಂದರಿಂದಾಗಲೀ ಅಥವಾ ಎಲ್ಲವೂ ಒಟ್ಟಿಗೆ ಸೇರಿಕೊಂಡು ತೊಂದರೆ ಒದಗಿದಾಗಲೂ ಸಮಚಿತ್ತದಿಂದ ನಿಭಾಯಿಸಿ ಸಮಿತಿಗಳ ವಿವಿಧ ಹುದ್ದೆಗಳಾದ ಅಧ್ಯಕ್ಷ, ಕಾರ್ಯದರ್ಶಿ ಅಥವಾ ಖಜಾಂಚಿಯಾಗಿ ಸೇವೆ ಸಲ್ಲಿಸಿದ ಅಪಾರ ಅನುಭವ ಅವರದು. ಕಾರ್ಖಾನೆ ಕೆಲಸದೊಂದಿಗೆ, ಕಲಾವಿದನಾಗಿ, ಸಂಘಟಕನಾಗಿ ಸಾರ್ವಜನಿಕ ಕೆಲಸ ಮಾಡಿರುವ ಹಿರಿಮೆ ಅವರದು ಎನ್ನಬಹುದು.

ಪದಾಧಿಕಾರಿಯಾಗಿ ಆಚಾರ್ಯ ಚಿತ್ರಕಲಾಭವನದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕೆಂದು ಅವರುಗಳ ಕಲಾಪ್ರದರ್ಶನ ನಾಡಿನೆಲ್ಲೆಡೆ ಆಗಬೇಕೆಂಬುದ್ದೇಶದಿಂದ ಎ.ಸಿ.ಬಿ. ಕಲಾಸಂಘ ಪ್ರಾರಂಭಿಸಿ, ಅದರ ಸ್ಥಾಪಕ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಹಿರಿಯ ಚಿತ್ರಕಲಾವಿದರನ್ನು ಸಂಘಟಿಸುವ ದೃಷ್ಟಿಯಿಂದ ಎಚ್.ಎಸ್. ಇನಾಮತಿಯವರು ಪ್ರಾರಂಭಿಸಿದ ಕರ್ನಾಟಕ ಚಿತ್ರ ಕಲಾವಿದರ ಮಹಾಪರಿಷತ್ ಎಂಬ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲವು ವರ್ಷಸೇವೆ ಸಲ್ಲಿಸಿದ್ದಾರೆ.

ರಾಜ್ಯದ ಏಕೈಕ ಅಂಚೆಕಲಾ ಶಿಕ್ಷಣ ಸಂಸ್ಥೆಯಾದ ಆಚಾರ್ಯ ಚಿತ್ರಕಲಾ ಭವನ ಸಾರ್ವಜನಿಕ ಸಂಸ್ಥೆಯಾಗಿ ರೂಪಿತವಾದಾಗ ಖ್ಯಾತ ಪತ್ರಕರ್ತ ಖಾದ್ರಿ ಶಾಮಣ್ಣನವರು ಅಧ್ಯಕ್ಷರಾಗಿ ಎಂ.ಟಿ.ವಿ. ಆಚಾರ್ಯರು ಸ್ಥಾಪಕ ಕಾರ್ಯದರ್ಶಿಯಾಗಿ ಆಯ್ಕೆಯಾದ ಸಂದರ್ಭದಲ್ಲಿ ವಿದ್ಯಾರ್ಥಿ ಮುಖಂಡರಾಗಿ ಎಲ್. ಶಿವಲಿಂಗಪ್ಪ ಆಯ್ಕೆಯಾದದ್ದು, ಭವನದ ಹಿನ್ನೆಲೆ ತಿಳಿಯಲು ಹೊರಡಿಸುವ ಸಂಚಿಕೆಗಳು ಸಹಕಾರಿಯಾಗುತ್ತಿವೆ. ಅಂದಿನಿಂದಲೂ ತಾವು ಕಲಿತ ಭವನದ ಸರ್ವಾಂಗೀಣ ಉನ್ನತಿಗೆ ಶ್ರಮಿಸುತ್ತಾ ಬಂದಿದ್ದಾರೆ.

ಕಲಾಭವನದ ೧೦ ಮತ್ತು ೨೦ನೇ ವರ್ಷದ ನೆನಪಿಗಾಗಿ ಸ್ಮರಣ ಸಂಚಿಕೆ ಮತ್ತು ಇವರ ಗುರು ಎಂ.ಟಿ.ವಿ. ಆಚಾರ್ಯರಿಗೆ ೬೦ ತುಂಬಿದ ನೆನಪಿಗಾಗಿ ಒಂದು ಸ್ಮರಣ ಸಂಚಿಕೆ ತರಲು ಶ್ರಮಿಸಿದ್ದಾರೆಂಬ ವಿಷಯ ಆ ಸಂಚಿಕೆಗಳಿಂದ ತಿಳಿದುಬರುತ್ತದೆ. ಶಿವಲಿಂಗಪ್ಪನವರ ಮನೆಗೂ ನಗರದ ಹೃದಯಭಾಗವಾದ ಗಾಂಧೀನಗರದಲ್ಲಿದ್ದ ಆಚಾರ್ಯ ಚಿತ್ರಕಲಾಭವನಕ್ಕೂ ಸುಮಾರು ಹದಿನಾರು ಕಿ.ಮೀ. ಅಂತರ. ಪ್ರತಿನಿತ್ಯವೂ ಸೈಕಲ್ ತುಳಿದುಕೊಂಡು ಸಾಗಿ, ಕಲಾಭವನದ ಉನ್ನತಿಗೆ ದುಡಿದವರು ಇವರು. ಹಾಗೆಯೆ ಸೈಕಲ್‌ನಲ್ಲೇ ಬೆಂಗಳೂರು ನಗರದ ತುಂಬೆಲ್ಲಾ ಓಡಾಡಿ ಅನೇಕ ಪ್ರಕೃತಿ ದೃಶ್ಯ ರಚಿಸಿದ ರೋಚಕ ಅನುಭವವನ್ನು ಹೇಳುತ್ತಾ ಹೊರಟರೆ ತಾಸುಗಟ್ಟಲೆ ಮಾತಾಡುತ್ತಾರೆ. ಕಲಾವಿದನಾಗಿ ರೂಪುಗೊಳ್ಳಬೇಕಾದರೆ ಏನೆಲ್ಲಾ ಶ್ರಮಪಡಬೇಕೆಂಬ ಸವಿವರಣೆ ಅವರಿಂದ ದೊರಕುತ್ತದೆ.

ಏನೇ ಮಾಡಿದರೂ ವಿನೂತನವಾಗಿ ಮಾಡಬೇಕೆಂಬ ಹಂಬಲದಿಂದ ರಾಜ್ಯದಲ್ಲೇ ಪ್ರಥಮ ಎನ್ನಬಹುದಾದ ರೀತಿಯಲ್ಲಿ ವಸತಿ ಸಹಿತವಾದ ಕಲಾ ಶಾಲೆಯನ್ನು ೧೯೭೪-೭೫ರಲ್ಲಿ ಇವರು ಆರಂಭಿಸಿದರು. ಶಾಶ್ವತ ಅನುದಾನ ರಹಿತವಾದ ಅನುಮತಿಯನ್ನು ಶಿಕ್ಷಣ ಇಲಾಖೆ ನೀಡಿತ್ತು. ಆಗ ಕರ್ನಾಟಕದ ಕಲಾಶಾಲೆಗಳಲ್ಲಿ ಅನುದಾನ ಸಿಗುತ್ತಿರಲಿಲ್ಲ. ವಿದ್ಯಾರ್ಥಿಗಳಿಂದ ಪಡೆದೇ ನಡೆಸಬೇಕಾಗುತ್ತಿತ್ತು. ಎಸ್.ಎಸ್.ಎಲ್.ಸಿ. ನಂತರದಲ್ಲಿ ಮೂರು ವರ್ಷ ಡಿಪ್ಲೋಮಾ ಮಾಡಿದರೆ ಯಾವ ಸರ್ಕಾರಿ ನೌಕರಿಯೂ ಸಿಗುತ್ತಿರಲಿಲ್ಲ. ಸರ್ಕಾರ ಟಿ.ಸಿ.ಎಚ್. ಮಾಡಿದವರಿಗೆ ಕೆಲಸ ಕೊಟ್ಟ ರೀತಿಯಲ್ಲಿ ಕಲಾ ಡಿಪ್ಲೋಮಾ ಮಾಡಿದವರಿಗೆ ಕೊಡುತ್ತಿಲ್ಲವೆಂದು ಪ್ರತಿಭಟನೆ ಮಾಡುತ್ತಿದ್ದ ಕಾಲವದು. ಹತ್ತು ಹನ್ನೆರಡು ವರ್ಷಗಳಿಂದ ಕಲಾ ಶಿಕ್ಷಕರ ಹುದ್ದೆ ಸಿಗದೆ ತರಬೇತಾದವರು ಪರಿತಪಿಸುತ್ತಿದ್ದರು. ನಿತ್ಯವೂ ಒಂದಲ್ಲಾ ಒಂದು ರೀತಿ ಪ್ರತಿಭಟನೆಯಾಗುವುದು ಪತ್ರಿಕೆಯಲ್ಲಿ ಬರುತ್ತಿದ್ದುದರಿಂದ ಕಲಾಶಾಲೆಗೆ ಸೇರುವವರ ಸಂಖ್ಯೆ ಎಲ್ಲಾ ಕಡೆ ಇಳಿಮುಖವಾಗಿತ್ತು. ಆದರೂ ಸಹ ಶಿವಲಿಂಗಪ್ಪನವರು ೨೦೦೦ರವರೆಗೆ ಬಹಳ ಪ್ರಯಾಸದಿಂದ ಕಲಾಶಾಲೆ ನಡೆಸುತ್ತಾ ಲಕ್ಷಾಂತರ ರೂ. ತೊಡಗಿಸಿ ಸೌಲಭ್ಯವೊದಗಿಸಿದರು. ಆದರೂ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಯಿತು. ಶಾಲಾ ಕಟ್ಟಡದ ಬಾಡಿಗೆ ಏರತೊಡಗಿತು. ಸರ್ಕಾರ ಯಾರ ಪ್ರತಿಭಟನೆಗೂ ಹೆದರಲಿಲ್ಲ. ಕಲಾ ಶಿಕ್ಷಕರ ಹುದ್ದೆಗೆ ಹೊಸದಾಗಿ ಯಾರನ್ನೂ ಆಹ್ವಾನಿಸಲಿಲ್ಲ. ಬೆಸತ್ತ ಪೋಷಕರು ತಮ್ಮ ಮಕ್ಕಳನ್ನು ಕಲಾಶಾಲೆಗೆ ಸೇರಿಸುವುದರ ಕಡೆಗೆ ಗಮನಹರಿಸದಂತಾದುದರಿಂದ

ಅನಿವಾರ್ಯವಾಗಿ ನಿಲುಗಡೆ ಮಾಡುವಂತಾಯ್ತು. ತನಗೆ ಈ ಶಾಲೆ ಆರಂಭಿಸಿ ನಡೆಸಿದ್ದರಿಂದ ಲಕ್ಷಾಂತರ ರೂಪಾಯಿ ನಷ್ಟವಾಯಿತು ಎನ್ನುತ್ತಾರೆ ನಿಸ್ಪೃಹತಾ ಮೂರ್ತಿ ಶಿವಲಿಂಗಪ್ಪನವರು.

ಮಾಡಿದ ಕಲೆಯ ನೋಡಲು ಹಿತವಾಗಿರುತ್ತದೆ. ಆದರೆ ಆ ಕಲೆಯ ಹಿನ್ನೆಲೆ, ಅದಕ್ಕೆ ತಗಲುವ ಖರ್ಚುವೆಚ್ಚ, ಪರಿಶ್ರಮ ಲೆಕ್ಕಹಾಕಿದಾಗ ಯಾರಿಗೆ ಬೇಕು ಈ ಕಲೆ ಅನ್ನಿಸುತ್ತದೆ. ಅಂತಹ ಪರಿಸ್ಥಿತಿ ಒದಗಿ ಶಿವಲಿಂಗಪ್ಪನವರೇ ಸರ್ಕಾರಕ್ಕೆ ಪತ್ರ ರೆದು ತಾನೇ ಸ್ಥಾಪಿಸಿದ ಕಲಾವಿದ್ಯಾಲಯವನ್ನು ಕೊನೆಗೆ ಉಪಾಯಗಾಣದೆ ನಿಲುಗಡೆಗೊಳಿಸಿದರೆಂಬುದು, ಕಲಾ ಶಿಕ್ಷಣ ಪಡೆದವರ ಹಾಗೂ ನಡೆಸುವವರ ಶೋಚನೀಯ ಹಾಗೂ ಗಂಭೀರ ಸ್ಥಿತಿಯ ಅವಲೋಕನಕ್ಕೆ ಒಂದು ಉದಾಹರಣೆ.

ಛಾಯಾಗ್ರಹಣ ಚಿತ್ರಕಲೆ, ಶಿಲ್ಪ ಕೆತ್ತನೆ, ಛಾಯಾಚಿತ್ರ ತೆಗೆಯುವುದು ಇವೆಲ್ಲ ತನ್ನವೇ ಆದ ವಿಶಾಲ ವ್ಯಾಪ್ತಿಯನ್ನು ಹೊಂದಿವೆ. ಒಂದೊಂದು ಕ್ಷೇತ್ರದಲ್ಲೂ ಕಲೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಅಭ್ಯಾಸ ಮಾಡಿ, ತಾವು ಬರೆಯುವ ಎಲ್ಲಾ ಲೇಖನಗಳಿಗೂ ಛಾಯಾಚಿತ್ರ ತೆಗೆದು ಒದಗಿಸುತ್ತಾರೆ. ಸಿದ್ಧಲಿಂಗಸ್ವಾಮಿಗಳನ್ನು ಕುರಿತು ಬರೆಯುವಾಗ ಅದಕ್ಕೆ ಬೇಕಾದ ಕಲಾಕೃತಿಗಳ ಛಾಯಾಚಿತ್ರಗಳನ್ನು ತೆಗೆಯುವಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದಾರೆ. ಅರಮನೆಯಲ್ಲಿರುವ ಕಲಾಕೃತಿಗಳ ಪ್ರತಿಕೃತಿ ಮಾಡಲು ಅವಕಾಶವಿಲ್ಲದಿರುವಾಗ, ಸರ್ಕಾರದ ಪರವಾನಿಗೆ ಪಡೆದು ಛಾಯಾಚಿತ್ರ ತೆಗೆಯಲು ಯತ್ನಿಸಿದಾಗ ಎದುರಾದ ತೊಂದರೆಗಳು ಹಲವು. ಏಳೆಂಟು ಅಡಿ ಎತ್ತರದ ಆ ಕಲಾಕೃತಿಗಳಿಗೆ ಗಾಜನ್ನು ಅಳವಡಿಸಿರುವುದರಿಂದ ಫೋಟೋ ತೆಗೆಯುವುದೇ ಕಷ್ಟವಾಗಿದ್ದು, ಅದನ್ನು ತಮ್ಮ ವಿಶೇಷ ಬುದ್ಧಿವಂತಿಕೆಯಿಂದ ಛಾಯಾಚಿತ್ರಣಗೊಳಿಸಿದ್ದಾರೆ. ಅರಮನೆಯ ದಬಾರಂ ಹಾಲ್‌ನಲ್ಲಿ ಇರುವ ಶಕ್ತಿ ದೇವತೆಗಳಾದ ರಾಜ-ರಾಜೇಶ್ವರಿ, ಭುವನೇಶ್ವರಿ, ನವದುರ್ಗಾದೇವಿ, ಚಾಮುಂಡೇಶ್ವರಿ, ಕಾಳಿಕಾದೇವಿ, ಗಾಯತ್ರಿ, ಲಕ್ಷ್ಮೀ, ಸರಸ್ವತಿಯ ಕಲಾಕೃತಿಗಳ ಎಲ್ಲ ಛಾಯಾಚಿತ್ರಗಳನ್ನು ಇದುವರೆಗೆ ಯಾರೂ ತೆಗೆದೇ ಇರಲಿಲ್ಲ. ಹಾಗಾಗಿ ಅರಮನೆಯಿಂದ ಹೊರಗಿನ ಜಗತ್ತಿಗೆ ಸ್ವಾಮಿಗಳ ಕಲಾಕೃತಿಗಳ ಅರಿವೇ ಇಲ್ಲದಂತಾಗಿತ್ತು. ಇವರ ಪರಿಶ್ರಮದಿಂದ ಸಿದ್ಧಲಿಂಗಸ್ವಾಮಿಗಳ ಕಲಾಕೃತಿಗಳು ಹೊರಜಗತ್ತಿಗೆ ಪರಿಚಯಿಸಲ್ಪಟ್ಟವು.

ಕರ್ನಾಟಕದ ಕಲಾವಿದರಿಗೆ ಮನ್ನಣೆ ದೊರೆಯುತ್ತಿಲ್ಲವಲ್ಲವೆಂಬ ಕೊರಗು ಶಿವಲಿಂಗಪ್ಪನವರಲ್ಲಿ ಇದ್ದುದರಿಂದ ಇಂತಹ ಕಷ್ಟದ ಕೆಲಸಕ್ಕೆ ಕೈ ಹಾಕಿ ಯಶಸ್ವಿಯಾದರು. ಉತ್ತಮ ಮುದ್ರಣ ಹೊಂದಿ ಅವು ಪ್ರಚಾರಗೊಂಡವು. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಇವರು ಬರೆದ ಲೇಖನವನ್ನು ಪುಸ್ತಕ ರೂಪದಲ್ಲಿ ತಂದು ಮುದ್ರಿಸಿರುವುದಲ್ಲದೆ, ಸ್ವಾಮಿಗಳ ಚಿತ್ರ ಶಿಲ್ಪಗಳನ್ನೇ ಗುರಿಯಾಗಿಟ್ಟುಕೊಂಡಿದ್ದು ಪ್ರತ್ಯೇಕವಾದ ಚಿತ್ರ ಸಂಪುಟ ಮುದ್ರಿಸಿದೆ. ಇದು ಕಲಾಭ್ಯಾಸಗಳಿಗೆ ಶಿಲ್ಪಿಗಳಿಗೆ ಅತ್ಯಂತ ಉಪಯುಕ್ತವಾದ ಸಂಗ್ರಹವಾಗಿದೆ.

ವರ್ಣಮುದ್ರಣ ಜನಪ್ರಿಯತೆಗೊಳ್ಳುವ ಮುನನ ತಮ್ಮದೇ ಆದ ಸ್ಟುಡಿಯೋ ಮೂಲಕ ಕಪ್ಪು ಬಿಳುಪು ಛಾಯಾಚಿತ್ರಗಳನ್ನು ಇವರು ಮುದ್ರಿಸತ್ತಿದ್ದರು. ಮುಖಚಿತ್ರ ಮಾಡುವಲ್ಲಿ ಅವರ ಅಪಾರ

ಪರಿಶ್ರಮವಿದೆ. ಛಾಯಾಚಿತ್ರಗಳ ಸಂಗ್ರಹ ನೋಡುತ್ತಾ ಹೋದಂತೆ ಕಲಾಜಗತ್ತಿನ ದರ್ಶನವಾಗುತ್ತದೆ. ಅದೆಷ್ಟು ಹಣ ಅದಕ್ಕಾಗಿ ವ್ಯಯಿಸಿದ್ದಾರೆ ಅದರ ಹಿಂದಿನ ಪರಿಶ್ರಮವೇನು ಎಂಬುದು ಊಹೆಗೂ ನಿಲುಕದ ಪರಿಶ್ರಮದ ವಿಷಯ. ಸಾಮಾನ್ಯವಾಗಿ ಯಾವುದೇ ಬರಹಗಾರರು, ಲೇಖಕರು, ಛಾಯಾಗ್ರಾಹಕರಾಗಿರುವುದು ಕಡಿಮೆ. ಅನ್ಯರಿಂದ ಛಾಯಾಚಿತ್ರ ತೆಗೆಸಿದರಾದರೂ ಹವ್ಯಾಸಿ ನೆಲೆಗಟ್ಟಿನಲ್ಲಿಯೇ ಇರುತ್ತದೆ. ಇವೆಲ್ಲವನ್ನು ಗಮನಿಸಿದ ಅವರು ತಾವೇ ಛಾಯಾಗ್ರಹಣ ಮಾಡುವುದು ಒಂದು ಕಲೆಯೆಂದೆ ತಿಳಿದು ಸಾವಿರಾರು ಕಲಾತ್ಮಕವಾದ ಛಾಯಾಚಿತ್ರ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ಅನೇಕ ಛಾಯಾಚಿತ್ರಗಳು ಛಾಯಾಕಲಾಕೃತಿಗಳಾಗಿ ಪ್ರದರ್ಶನ ಗೊಂಡಿವೆ.

ಪ್ರಶಸ್ತಿ ಪುರಸ್ಕಾರಗಳು

ರಾಜ್ಯ ಶಿಲ್ಪಕಲಾ ಅಕಾಡೆಮಿಯ ಸುವರ್ಣ ಕರ್ನಾಟಕ ವರ್ಷದ ಗೌರವ ಸನ್ಮಾನ (೨೦೦೬-೦೭) ರಾಜ್ಯ ಲಲಿತಕಲಾ ಅಕಾಡೆಮಿ ಹಿರಿಯ ಕಲಾವಿದರ ಗೌರವ ಪ್ರಶಸ್ತಿ (೨೦೦೮) ಸೇರಿದಂತೆ ಇನ್ನಿತರ ಸಂಘ ಸಂಸ್ಥೆಗಳಿಂದ ಬಸವ ಶ್ರೀ (೨೦೦೧), ಕುವೆಂಪು ಶ್ರೀ (೨೦೦೪) ಗಹಣರಾಜ್ಯೋತ್ಸವ ಪ್ರಶಸ್ತಿ (೨೦೦೪), ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಸುವರ್ಣ ಕನ್ನಡಿಗ ಪ್ರಶಸ್ತಿ - ೨೦೦೬ (ಕಾಸರಗೋಡು) ಪ್ರಜ್ಞಾ ಪೀಠ ಪ್ರಶಸ್ತಿ (೨೦೦೭), ಶ್ರೀ ಬಸವೇಶ್ವರ ಕರ್ಮವೀರ ಕಲಾ ಸಾಹಿತ್ಯ ಸಂಸ್ಕೃತಿ ವೇದಿಕೆ (ರಿ) ಆಹೇರಿ ಇವರಿಂದ ೨೦೦೯-೧೦ನೇ ಸಾಲಿನ ಬಸವ ಜ್ಯೋತಿ ರಾಜ್ಯ ಪ್ರಶಸ್ತಿ (೨೦೦೯), ಸುಮಾರು ೬೦ ಸಂಸ್ಥೆ ಒಳಗೊಂಡ ಅಖಿಲ ಭಾರತ ವೀರಶೈವ ಮಹಾಸಭಾ, ಬಸವ ಬಳಗಗಳ ಹಾಗೂ ವೀರಶೈವ ಸಂಘ ಸಂಸ್ಥೆಗಳ ಒಕ್ಕೂಟ (ಮೈಸೂರು) ಇವರಿಂದ ಸಾಂಸ್ಕೃತಿಕ ನಗರಿ ಎನಿಸಿದ ಮೈಸೂರಿನಲ್ಲಿ ಬಸವೇಶ್ವರ ಪುತ್ಥಳಿ ಅನಾವರಣ ಮಾಡಿದ ಸಂದರ್ಭದಲ್ಲಿ ಸಂದ ಅದ್ದೂರಿ ಸನ್ಮಾನ (೨೦೧೦) ಸೇರಿದಂತೆ ಇನ್ನೂ ಹಲವು ಸಂದರ್ಭಗಳಲ್ಲಿ ಗೌರವ ಸನ್ಮಾನಗಳಿಗೆ ಪಾತ್ರರಾಗಿದ್ದಾರೆ.

ಜನಪ್ರಿಯ ದೃಶ್ಯಮಾಧ್ಯಮಗಳಾದ ಉದಯ ಟಿವಿಯ ವಿವಿಧ ಸಂದರ್ಭಗಳಲ್ಲಿ ೨ ಬಾರಿ ಪರಿಚಯವನ್ನು, ದೂರದರ್ಶನ ಚಂದನ ವಿಭಾಗವು ಮುಂಜಾನೆಯ ಬೆಳಗು ಕಾರ್ಯಕ್ರಮದಲ್ಲೂ ಸಂದರ್ಶಿಸಿದೆ. ಆಕಾಶವಾಣಿಯ ಬೆಂಗಳೂರು, ಮೈಸೂರು ವಿಭಾಗದಲ್ಲಿ ಸಹ ಸಂದರ್ಶನಗಳಾಗಿವೆ. ಹಾಗೆಯೆ ಕಲೆ ಕಲಾವಿದರನ್ನು ಕುರಿತು ಭಾಷಣ, ಸಂವಾದಗಳನ್ನು ನಡೆಸಿಕೊಟ್ಟಿದ್ದಾರೆ.

ಪ್ರಶಸ್ತಿಗಳು









ಅಧ್ಯಾಯ ೪

ಕಲಾವಿದ ಎಲ್. ಶಿವಲಿಂಗಪ್ಪನವರ ವರ್ಣಚಿತ್ರಗಳು

ಲಲಿತಕಲೆಗಳಲ್ಲೊಂದಾದ ಚಿತ್ರಕಲೆ ತತ್‌ಕ್ಷಣಕ್ಕೆ ಕಣ್ಣಿಗೆ ಮುದವನ್ನು ನೀಡುತ್ತ ನಮ್ಮ ಭಾವ ಪ್ರಪಂಚವನ್ನು ಸೇರಿಕೊಳ್ಳುತ್ತದೆ. ಅಂತರಂಗದಲ್ಲಿ ಅದರ ಬಾಹ್ಯ ಸೌಂದರ್ಯ ಮತ್ತು ಆಂತರಿಕ ಅರ್ಥಗಳು ಬಹುಕಾಲದವರಿಗೆ ಉಳಿದುಬಿಡುತ್ತದೆ. ಈ ದೃಶ್ಯ ಪ್ರಪಂಚವೆಲ್ಲಾ ಸೃಷ್ಟಿಕರ್ತನ ಒಂದು ಕಲಾಶಾಲೆಯೇ ಆಗಿದೆ. ನಾವು ಕಣ್ಣು ತೆರೆದರೆ ಸಾಕು ಚಿತ್ರವೊಂದು ಕಣ್ಮುಂದೆ ಬಂದು ನಿಲುತ್ತದೆ. ಚಿತ್ರಕಲಾವಿದನು ರೇಖೆ ಹಾಗೂ ಬಣ್ಣಗಳಿಂದ ಒಂದು ವಿಶಿಷ್ಟವಾದ ವಸ್ತುವನ್ನು, ಅನುಭವವನ್ನು ನಮ್ಮ ಮುಂದಿಟ್ಟು ಅಚ್ಚರಿಗೊಳಿಸುವನು. ಹಾಗೆಯೇ ಆನಂದವನ್ನುಂಟು ಮಾಡುವನು. ಕೆಲವು ಚಿತ್ರಗಳು ನಮ್ಮನ್ನು ತನ್ಮಯಗೊಳಿಸಿ ಸಮಾಧಿಸಕ್ತರನ್ನಾಗಿ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಆಗಿನ ಅನುಭವ ಅವರ್ಣನೀಯವೂ ಆಗಿರುತ್ತದೆ. “ಚಿತ್ರಕಲೆಯಲ್ಲಿ ರೇಖೆಯಷ್ಟು ಮಹತ್ವವುಳ್ಳದು ಬಣ್ಣ. ಯಾವುದೇ ವಸ್ತುವಿನ ಆಂತರಿಕ ಹಾಗೂ ಬಾಹ್ಯ ನಿರೀಕ್ಷಣೆಯಿಂದ ಮನಸ್ಸಿನ ಮೇಲಾಗುವ ಪರಿಣಾಮವೇ ಭಾವ. ಈ ಭಾವ ಪ್ರಚೋದನೆಗೆ ವರ್ಣ ಕಲೆಗಳು ಮುಖ್ಯ. ಬಿಂದು, ರೇಖೆ, ವರ್ಣ, ಗಾತ್ರ, ರೂಪ, ಪ್ರಮಾಣ, ಭಾವ, ಸಾದೃಶ್ಯ ಮುಂತಾದವುಗಳು ಕಲಾವಿದನಿಗೆ ಮೂಲಭೂತವಾಗಿ ಗೊತ್ತಿರಬೇಕಾದ ಅಂಶಗಳು. ಇವೆಲ್ಲ ಹಿನ್ನೆಲೆಯಾಗಿ ಬಣ್ಣವಹಿಸುವ ಪಾತ್ರ ಅಸದೃಶ್ಯವಾದುದು. ಕೆಲವು ಸಲ ಬಣ್ಣಗಳನ್ನು ಭಾರ, ಹಗುರ ವರ್ಣಗಳೆಂದು,



ಇನ್ನೂ ಕೆಲವೊಮ್ಮೆ ಹಿಂಜರಿತ ಮತ್ತು ಮುಂಜರಿತ ವರ್ಣಗಳೆಂದು ಹೇಳಲಾಗುತ್ತದೆ. ನೀಲಿ ಬಣ್ಣಕ್ಕೆ ಹಿಂಜರಿತವೆಂದು ಕರೆಯಲಾಗುತ್ತದೆ. ಅಂದರೆ ನಿಲಾಕಾಶಕ್ಕೆ ಕೈಗೆಟುಕದೆ ದೂರ ಸರಿದಂತೆ ತೋರುತ್ತದೆ".[೧]

"ಕೆಂಪು ಮತ್ತು ಕಂದು ಬಣ್ಣಗಳನ್ನು ಮುಂಜರಿತ ವರ್ಣಗಳೆಂದು ಕರೆಯುತ್ತಾರೆ. ಏಕೆಂದರೆ ಇವು ಇತರ ಬಣ್ಣಗಳ ಮಧ್ಯಮದಲ್ಲಿಯೂ ಕೂಡ ಮುನ್ನುಗ್ಗಿ ನಮಗೆ ಎದ್ದು ಕಾಣಿಸುತ್ತದೆ. ಕಂದು ಬಣ್ಣ ಭಾರವಾದ ಬಣ್ಣವೆಂದು ತಿಳಿನೀಲಿ ಹಾಗೂ ಕೆನೆಬಣ್ಣವನ್ನು ಹಗುರ ಬಣ್ಣವೆಂದು ಕರೆದರೆ ಇನ್ನೂ ಕೆಲವು ಮಂಕು ಬಣ್ಣಗಳಿವೆ. ಹಾಗೆಯೇ ಉತ್ಸಾಹ ಚೈತನ್ಯಮಯ ಬಣ್ಣಗಳೂ ಇವೆ. ಇನ್ನೂ ಕೆಲವು ಗ್ರಾಮೀಣ ಬಣ್ಣಗಳೆಂದು ವಿಂಗಡಿಸಬಹುದು. ಹೀಗೆ ಪ್ರತಿಯೊಂದು ಬಣ್ಣಗಳೂ ತನ್ನದೇ ಆದ ಅರ್ಥವನ್ನು ಹೊಂದಿವೆ. ಹೀಗಾಗಿ ಸಂಯೋಜನಾ ಕಲಾಕೃತಿಗಳಲ್ಲಿ ಹಾವಭಾವಗಳನ್ನು ಪ್ರದಾನವಾಗಿಸಲು ವರ್ಣಗಳು ತುಂಬಾ ಪ್ರಮುಖ ಪಾತ್ರವನ್ನು ವಹಿಸುತ್ತವೆ".[೨]

"ವರ್ಣಚಿತ್ರಗಳ ರಚನೆಯಲ್ಲಿ ಎರಡು ರೀತಿಯ ವರ್ಣಚಿತ್ರಗಳನ್ನು ನಾವು ಗಮನಿಸಬಹುದು. ಒಂದು ನೂತನ ಕಲಾಶೈಲಿಯ ನವ್ಯಕಲೆ ವರ್ಣಚಿತ್ರಗಳು. ಇನ್ನೊಂದು ವಾಸ್ತವ ಕಲಾಶೈಲಿಯ ವರ್ಣಚಿತ್ರಗಳು. ಹೀಗೆ ಎರಡು ರೀತಿಯ ಕಲಾವಿಧಾನಗಳನ್ನು ನಾವು ಕಾಣಬಹುದು. ಶಿವಲಿಂಗಪ್ಪನವರು ಈ ಎರಡರಲ್ಲೂ ಕಲಾಕೃತಿಗಳನ್ನು ರಚಿಸುವ ರಚನಾ ಸಾಮರ್ಥ್ಯವನ್ನು ಹೊಂದಿದ್ದಾರೆ. ಶಿವಲಿಂಗಪ್ಪನವರು ಕರ್ನಾಟಕದ ಸಮಕಾಲೀನ ಕಲೆಯ ಮೊದಲ ಘಟ್ಟದ ಕಲಾವಿದರು. ಇವರು ಎಂ.ಟಿ.ವಿ. ಆಚಾರ್ಯರಲ್ಲಿ ಕಲಾಶಿಕ್ಷಣ ಪಡೆದರೂ ನಂತರ ಸೃಜನಶೀಲದೆಡೆಗೆ ವಚನ ಸಾಹಿತ್ಯದ ಆಧಾರದ ಮೇಲೆ ಚಿತ್ರಗಳನ್ನು ತೊಡಗಿಸಿಕೊಂಡು ಹೆಸರು ಮಾಡಿದರು. ಇವರು ವಚನಗಳ ಮೇಲೆ ತಮ್ಮ ಶೈಲಿಯಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ಶೈಲಿಬದ್ಧತೆಗೆ ಕಟ್ಟುಬಿದ್ದವರು. ಭಾವಚಿತ್ರ, ನಿಸರ್ಗ ಚಿತ್ರಗಳ ರಚನೆಯಲ್ಲಿ ಅವರ ಕುಂಚದ ಬೀಸುಗಳು ವಿಸ್ಮಯವನ್ನು ಹುಟ್ಟಿಸುತ್ತದೆ. ಎಂ.ಟಿ.ವಿ. ಆಚಾರ್ಯರ ನಂತರ ಈ ಬಾಗದಲ್ಲಿ ಕಂಡುಬರುವ ಮತ್ತೊಬ್ಬ ಕುಂಚದ ಮಾಂತ್ರಿಕನೆಂದರೆ ಎಲ್. ಶಿವಲಿಂಗಪ್ಪನವರು ಇವರ ವರ್ಣಚಿತ್ರಗಳನ್ನು ನಾವು ಅವಲೋಕಿಸಿದಾಗ ಜಲವರ್ಣ, ತೈಲವರ್ಣ ಮತ್ತು ಪೋಸ್ಟಲ್ ವರ್ಣಗಳಲ್ಲಿ ಹಲವಾರು ಕಲಾಕೃತಿಗಳನ್ನು ರಚಿಸಿದ್ದು ತಿಳಿದುಬರುತ್ತದೆ. ಇವರು ಜಲವರ್ಣ ಮತ್ತು ತೈಲವರ್ಣಗಳೆರಡರಲ್ಲೂ ತಮ್ಮದೇ ಆದ ಒಂದು ಛಾಪನ್ನು ಮೂಡಿಸಿದ್ದಾರೆ. ಇದಕ್ಕೆ ಕಾರಣ ಅವರು ಬಳಸುವ ವರ್ಣಗಾರಿಕೆಯ ಪ್ರಭಾವದಿಂದ ಇವರು ಹೆಚ್ಚಾಗಿ ನಿಸರ್ಗ ಚಿತ್ರಗಳನ್ನು ಮತ್ತು ಭಾವಚಿತ್ರಗಳನ್ನು ಚಿತ್ರಿಸಿದ್ದು ಕಂಡುಬರುತ್ತದೆ".[೩] ಇಂದು ಶಿವಲಿಂಗಪ್ಪನವರು

---

೧. ಡಾ. ಎಸ್.ಸಿ. ಪಾಟೀಲ, ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು ಪು. ೯೫

೨. ಪಿ.ಆರ್. ತಿಪ್ಪೇಸ್ವಾಮಿ ಪ್ರ.ಸಂ. ಚಿತ್ರಕಲಾ ಪ್ರಪಂಚ, ಪು. ೩೪೭

೩. ಶ್ರೀಮತಿ ಲಕ್ಷ್ಮಿದೇವಿ ಗವಾಯಿ, ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಕಲಾಕೃತಿಗಳು ಒಂದು ಅಧ್ಯಯನ, ಪು. ೧೦೩

ವಚನ ಸಾಹಿತ್ಯದ ಮೇಲೆ ಚಿತ್ರಗಳನ್ನು ರಚಿಸಿದ ಕಲಾವಿದರೆಂದೆ ಗುರುತಿಸಿಕೊಳ್ಳುವ ಪ್ರಭಾವಶಾಲಿಯಾಗಿದ್ದಾರೆ. ಇಂದು ಇವರಿಗೆ ದೇಶ ವಿದೇಶಗಳಲ್ಲಿ ಎಲ್ಲೆಡೆ ಕರೆದರೆ ಸಮಾರಂಭಗಳಿಗಾಗಲಿ ಅಥವಾ ಇನ್ನಿತರ ಕಲಾ ಚಟುವಟಿಕೆಗಳಲ್ಲಾಗಲಿ ಕರೆದರೆ ಅದರ ಹಿಂದೆ ಒಂದು ಉದ್ದೇಶವಿದ್ದೆ ಇರುತ್ತದೆ. ಅದೇನೆಂದರೆ ಇವರಿಂದ ವಚನ ಸಾಹಿತ್ಯದ ಬಗ್ಗೆ ವಿವರವಾಗಿ ಹೇಳಿಸುವುದು ಮತ್ತು ಆಗ ವಚನ ಕಲಾಕೃತಿಗಳು ಸಿದ್ಧವಾಗುತ್ತದೆ ಈ ಉದ್ದೇಶವಿಟ್ಟುಕೊಂಡೆಯೇ ಇವರನ್ನು ಕಲಾಚಟುವಟಿಕೆಗಳಲ್ಲಿ ಕರೆಯವುದು ಒಂದು ವಾಡಿಕೆಯಾಗಿಬಿಟ್ಟಿದೆ. ಶಿವಲಿಂಗಪ್ಪನವರ ಸಾರ್ಥಕತೆಯ ಬದುಕಿನ ವ್ಯಕ್ತಿತ್ವಕ್ಕೆ ಇಷ್ಟು ಸಾಕಲ್ವೆ?

ಜಲವರ್ಣ ಚಿತ್ರಗಳನ್ನು ಸಾಮಾನ್ಯವಾಗಿ ಕಾಗದದ ಮೇಲೆ ಅಥವಾ ಕೆಲವು ವೇಳೆ ರೇಷ್ಮೆ ಬಟ್ಟೆ ಮೇಲೆ ಚಿತ್ರಿಸುತ್ತಾರೆ. ಬಣ್ಣಗಳನ್ನು ನೀರಿನಲ್ಲಿ ಮಿಶ್ರಣಮಾಡಿ ಚಿತ್ರಗಳನ್ನು ರಚಿಸುವುದು ಜಲವರ್ಣ ವಿಧಾನ ಬಹುದಿನಗಳಿಂದಲೂ ರೇಖಾಚಿತ್ರ(Drawing)ಗಳಿಗೆ ಜಲವರ್ಣಗಳಿಂದ ಮುಕ್ತಾಯ ಸ್ಪರ್ಶ (Finishing touches) ನೀಡಲಾಗುತ್ತೆಂಬುದನ್ನು ಲಿಯೋನಾರ್ಡೊ ಡಾ. ವಿಂಚಿ ಮತ್ತು ಡೂರರ ಅವರ ಅಸಂಖ್ಯಾತ ರೇಖಾಚಿತ್ರಗಳಿಂದ ತಿಳಿಯಬಹುದಾಗಿದೆ. ಇದಕ್ಕೆ ಬಳಸುವ ಕಾಗದವನ್ನು ಚಿಂದಿಯಾದ ಬಟ್ಟೆಗಳನ್ನು ರುಬ್ಬಿದ ತಿರುಳನ್ನೆ ತನ್ನ ಬಂಡವಾಳವನ್ನಾಗಿಸಿಕೊಂಡಿರುವ ಒಂದು ಬಗೆಯ ಕಾಗದ. ಜಲವರ್ಣ ಮಾಧ್ಯಮಕ್ಕೆಂದೇ ವಿಶೇಷವಾಗಿ ತಯಾರಿಸಲ್ಪಡುವ ಈ ಕಾಗದವು ಸಾಕಷ್ಟು ತೂಕವನ್ನು, ದೃಢತೆಯನ್ನು ಹೊಂದಿರುವುದಷ್ಟೇ ಅಲ್ಲದೇ ಬಹಳ ನೀರಾದ ಜಲವರ್ಣವನ್ನು ಬಹಳಷ್ಟು ಸಾರಿ ಬಳಸಿದ್ದಾಗ್ಯೂ ತಾನು ಶಿಥಿಲಗೊಳ್ಳುವುದಿಲ್ಲ. ಕೈಕಾಗದ (Hand made paper) ಎಂದು ಕರೆಯಿಸಿಕೊಳ್ಳುವ ಈ ಬಗೆಯ ಕಾಗದದಲ್ಲಿ ಜಲ ವರ್ಣಗಳೂ ಅಳಪದರಗಳಿಗೆ ಇಳಿದು ಸ್ಥಿರವಾಗಿ ನಿಲ್ಲುವಂತಾಗುತ್ತದೆ. ಶಿವಲಿಂಗಪ್ಪನವರ ಜಲವರ್ಣ ಕಲಾಕೃತಿಗಳಲ್ಲಿ ನಿಸರ್ಗ ಚಿತ್ರಗಳು, ಭೂದೃಶ್ಯ ಚಿತ್ರಗಳು, ಸ್ಥಿರಚಿತ್ರಗಳು ಮುಂತಾದವುಗಳನ್ನು ಹೆಸರಿಸಬಹುದು. ಎಲ್ಲದಕ್ಕೂ ಮುಖ್ಯವಾಗಿ ಈ ಮಾಧ್ಯಮದಲ್ಲಿ ಅವರು ಭೂದೃಶ್ಯಗಳನ್ನು ಮತ್ತು ನಿಸರ್ಗ ಚಿತ್ರಗಳನ್ನೇ ಹೆಚ್ಚಾಗಿ ರಚಿಸಿದ್ದು ಕಂಡುಬರುತ್ತದೆ. ಶಿವಲಿಂಗಪ್ಪನವರು ಅಧ್ಯಯನ ಕಾಲದಲ್ಲಿ ದಿನಾಲು ನಿಸರ್ಗ ಚಿತ್ರಗಳನ್ನು ರೂಢಿಯಾಗಿಸಿಕೊಂಡಿದ್ದರು. ಇವರಿಗೆ ನಿಸರ್ಗ ಚಿತ್ರವೆಂದರೆ ತುಂಬಾ ಪ್ರೀತಿ, ಒಲವು. ನಿಸರ್ಗವು ಎಂಥವರನ್ನು ಮಂತ್ರಮುಗ್ಧರನ್ನಾಗಿಸಿ ಬಿಡುತ್ತದೆ. ಇವರು ನಿಸರ್ಗ ಚಿತ್ರ ರಚನೆಗೆ ಬಳಸಿಕೊಂಡು ಮಾಡಿದ್ದು ಜಲವರ್ಣ ಮಾಧ್ಯಮ ಮತ್ತು ತೈಲವರ್ಣ ಮಾಧ್ಯಮ. ಇವರೇ ಹೇಳುವ ಪ್ರಕಾರ ಜಲವರ್ಣವೆಂಬುದು ಸರಳವಲ್ಲ. ಪಾರದರ್ಶಕ ವರ್ಣವಾದರೂ ಬಳಸುವಾಗ ಮಾತ್ರ ಎಚ್ಚರಿಕೆ ವಹಿಸಬೇಕು. ಏಕೆಂದರೆ ಒಂದು ಸಾರಿ ನಾವು ವರ್ಣವನ್ನು ಬಳಸುವಲ್ಲಿ ಹೆಚ್ಚು ಕಡಿಮೆ ಮಾಡಿದರೆ ಚಿತ್ರವು ಸಂಪೂರ್ಣವಾಗಿ ಕೆಟ್ಟು ಹೋಗುತ್ತದೆ. ಈ ಜಲವರ್ಣದಲ್ಲಿ ಒಮ್ಮೆ ಅದು ವ್ಯತ್ಯಾಸವಾದರೆ ಹೋದರೆ ಮತ್ತೆ ಅದನ್ನು ಸರಿಪಡಿಸಲಾಗುವುದಿಲ್ಲ. ಆದರೆ ತೈಲವರ್ಣದಲ್ಲಿ ನಾವು ಬಳಸುವಾಗ ವ್ಯತ್ಯಾಸವಾದರೂ ಸಹ ಸರಿಪಡಿಸಬಹುದು. ಹೀಗಾಗಿ ಜಲವರ್ಣವು ನಾವೇನೇ ಮಾಡಿದರೂ ಅದು ಅತಿ ಸೂಕ್ಷ್ಮವಾಗಿ ನಿಸರ್ಗ ಚಿತ್ರವನ್ನು ಮಾಡುವಾಗ ಜಲವರ್ಣದಿಂದಲೇ

ರಚಿಸುವುದು ಚೆನ್ನಾಗಿರುತ್ತದೆ. ಇದರಲ್ಲಿ ಒಡಮೂಡುವ ಕಲೆ ತೈಲವರ್ಣದಲ್ಲಿ ಬಾರದು. ಇದು ಪಾರದರ್ಶಕವಾಗಿ ಕಂಡರೂ ಚಿತ್ರದಲ್ಲಿ ವಿಶೇಷತೆಯನ್ನು ಮೂಡಿಸಬಲ್ಲ ಮಾಧ್ಯಮವಾಗಿದೆ.

ನಿಸರ್ಗ ಚಿತ್ರಗಳು

ನಿಸರ್ಗವು ಎಂಥವರನ್ನು ಮಂತ್ರಮುಗ್ಧರನ್ನಾಗಿಸುವುದು. ನಿಸರ್ಗದಲ್ಲಿ ಮನುಷ್ಯನಿಗೆ ಅಂತಃ ಕರುಣೆಯನ್ನು ತುಂಬುವ ಶಕ್ತಿ ನಿಸರ್ಗದಲ್ಲಿದೆ. ಕಲಾವಿದನಾದವನು ಹೆಚ್ಚಾಗಿ ನಿಸರ್ಗದಿಂದಲೇ ಪ್ರಭಾವಿತನಾಗುತ್ತಾನೆ. ನಿಸರ್ಗವನ್ನು ಇಷ್ಟಪಡುವ ಕಲಾವಿದನಿಲ್ಲ, ರಸ ಋಷಿಗಳು ತಮ್ಮ ತಪೋವಿಕಾಸಕ್ಕಾಗಿ ನಿಸರ್ಗವನ್ನೇ ಹೆಚ್ಚಾಗಿ ಅವಲಂಬಿಸಿಕೊಂಡಿರುವುದನ್ನು ನಾವು ಕಾಣಬಹುದು. ಒಂದೇ ಎರಡೇ ಇಂತಹ ಹತ್ತು ಹಲವು ಉದಾಹರಣೆಗಳನ್ನು ನೀಡಬಹುದು.

ಪ್ರಪಂಚದಲ್ಲಿ ನಾವು ಕಾಣದ ಬಣ್ಣವಿಲ್ಲ, ಕಾಣದ ಆಕೃತಿಗಳಿಲ್ಲ. ಇಷ್ಟೇಲ್ಲಾಯಿದ್ದರೂ ಒಬ್ಬೊಬ್ಬರಿಗೆ ಒಂದೊದು ಆಸಕ್ತಿಯ ಅಂಶಗಳಿರುವುದುಂಟು. ಕೆಲವರಿಗೆ ದೃಶ್ಯಗಳನ್ನು ಕಾಣುವುದರಲ್ಲಿ ವಿಶೇಷ ಆಸಕ್ತಿ. ಇನ್ನೂ ಕೆಲವರಿಗೆ ಕಂಡಿದ್ದನ್ನು ಅಕ್ಷರಗಳ ರೂಪಗಳಿಗೆ ಇಳಿಸುವ ಆಸಕ್ತಿ. ಒಬ್ಬ ಕನವ ರಚಿಸಿದರೆ ಮತ್ತೊಬ್ಬ ಚಿತ್ರ ರಚನೆ ಇಲವೇ, ಮೂರ್ತಿ ಸೃಷ್ಟಿಯಲ್ಲಿ ನಿರತನಾಗಿರುತ್ತಾನೆ. ಇಂತಹ ಸೃಜನಶೀಲತೆಯಲ್ಲಿ ಸೃಜನಶೀಲ ಅಗಾಧ ಅನುಭವ, ಶ್ರಮ, ಬುದ್ಧಿವಂತಿಕೆ, ಸಲಕರಣೆಗ ಕಲಾವಿದನ ಅಂತಃಕರಣದ ಅನುಭವವನ್ನು ದೊರೆತ ಸಾಧನೆಗಲಿಂದ ರೂಪಿಸುವ ಮಾರ್ಗವೇ ಕಲಾಕೃತಿ.

ಇಂತಹ ಕಲಾಕೃತಿ ನಿರ್ಮಾಣಕ್ಕೆ ನೈಸರ್ಗಿಕ ಸಂಪತ್ತು ಅವಶ್ಯಕತೆಯಿರುತ್ತದೆ. ಮಣ್ಣು, ಕಲ್ಲು, ಬಂಡೆ, ಮರ, ಲೋಹ, ಕಾಗದ, ಗೋಡೆ ಇವೆಲ್ಲ ಸುಂದರ ಕಲಾಕೃತಿಗೆ ಬೇಕಾಗುವ ಸಾಮಾಗ್ರಿಗಳು. ಹೀಗಾಗಿ ನಿಸರ್ಗವು ನಮಗೆನೆಲ್ಲಾ ಕೊಟ್ಟಿದೆ. ಇದರಿಂದ ನಾವು ನಿಸರ್ಗದ ಮೇಲೆ ಎಷ್ಟೋ ಅವಲಂಬಿತರಾಗಿರುವುದು ಗೋತ್ತಾಗುತ್ತದೆ.

ನಿಸರ್ಗವು ಕಲಾವಿದನಿಗೆ ಪ್ರಭಾವ ಬೀರುವ ಮೊದಲ ಸಾಧನವಾಗಿದೆ. ಈ ನಿಸರ್ಗದಿಂದ ಪ್ರಭಾವಿತರಾದ ಎಲ್. ಶಿವಲಿಂಗಪ್ಪನವರು ತಮ್ಮ ಪ್ರಾರಂಭಿಕ ಹಂತದ ಶಿಕ್ಷಣದಲ್ಲಿ ಹೆಚ್ಚಾಗಿ ನಿಸರ್ಗ ಚಿತ್ರಗಳನ್ನು ರಚಿಸಿದ್ದುಂಟು. ಕೆಲವುಬಾರಿ ಅವರು ದಿನಾಲು ಒಂದಾದರೂ ನಿಸರ್ಗ ಚಿತ್ರವನ್ನು ಚಿತ್ರಿಸುವುದು ತಮ್ಮ ದೈನಂದಿನ ಕೆಲಸವಾಗಿಸಿಕೊಂಡಿದ್ದರು. ಇವರ ನಿಸರ್ಗ ಚಿತ್ರಗಳಲ್ಲಿ ಹೆಚ್ಚಿನವು ಜಲವರ್ಣದಿಂದ ಕೂಡಿದ್ದಾಗಿದೆ. ಇಲ್ಲಿ ಎಲ್. ಶಿವಲಿಂಗಪ್ಪನವರು ಪ್ರಾರಂಭದ ಶಿಕ್ಷಣದ ಹಂತದಲ್ಲಿ ಬೆಂಗಳೂರು ನಗರದ ಸುತ್ತಮುತ್ತಲಿನ ವಾತಾವರಣವನ್ನು ಚಿತ್ರಿಸಿದ್ದಾರೆ. ಇವುಗಳಲ್ಲಿ ಬೆಂಗಳೂರು ಹಳ್ಳಿಗಳಲ್ಲಿ ರಚಿಸಿದಂತಹ ದೇವಾಲಯಗಳ ನಿಸರ್ಗ ಚಿತ್ರಗಳು, ಕೆಲವಾದರೆ ದೈನಂದಿನ ಬದುಕಿಗೆ ಸಂಬಂಧಪಟ್ಟ ವಿಷಯಗಳನ್ನಿಟ್ಟು ಕೊಂಡು ರಚಿಸಿದ ಭೂದೃಶ್ಯಗಳನ್ನು ಹೆಸರಿಸಬಹುದು. ಭೂದೃಶ್ಯ ಮತ್ತು ನಿಸರ್ಗ ಚಿತ್ರ ಎರಡು ಒಂದೇ ಆದರೂ ಕೆಲವು ಸಲ ಮಾತ್ರ ಬೇರೆ ಬೇರೆಯಾದ ಅರ್ಥವನ್ನು ನೀಡುತ್ತವೆ.

[illegible]

ನಿಸರ್ಗದ ದೃಶ್ಯವನ್ನು ನಾವು ಚಿತ್ರಿಸುವಾಗ ಅಲ್ಲಿರುವ ದೃಶ್ಯವೇ ಬೇರೆ. ಭೂದೃಶ್ಯವೆಂದು ಚಿತ್ರಿಸುವಾಗ ನಿಸರ್ಗವಲ್ಲದೆ ಕಟ್ಟಡಗಳು ನಗರಗಳು ಬರುತ್ತವೆ. ಇವುಗಳನ್ನು ಚಿತ್ರಿಸುವುದಕ್ಕೆ ಒಂದೊಂದು ಸಾರಿ ಸಿಟಿಸ್ಕೇಪ ಎಂತಲೂ ಕರೆಯುತ್ತಾರೆ. ಹಳ್ಳಿಯ ವಾತಾವರಣವನ್ನು ಚಿತ್ರಿಸುವುದಕ್ಕೆ ಒಂದೊಂದು ಸಾರಿ ಭೂದೃಶ್ಯವೆಂದೂ ಕರೆಯುತ್ತಾರೆ. ಅದೇನೇ ಇರಲಿ ಎಲ್ಲದಕ್ಕೂ ಒಂದೇ ಅರ್ಥವಿದೆ. ಗ್ರಾಮೀಣ ನೆಲಕ್ಕೆ ಅಥವಾ ಪ್ರಕೃತಿಗೆ ಹತ್ತಿರವಾದ ನೇರವಾದ ಅಭಿವ್ಯಕ್ತಿಗೆ ಲ್ಯಾಂಡಸ್ಕೇಪ್ ಎಂದು ೧೫ನೇ ಶತಮಾನದಿಂದಲೂ ಕರೆಯಲಾಗುತ್ತಿದೆ. ಗ್ರಾಮೀಣ ದೃಶ್ಯ ಎಂಬರ್ಥದ ಡಚ್‌ಪದದಿಂದ ಪದ ಹುಟ್ಟಿಕೊಂಡಿದೆ. ದೃಶ್ಯಗಳ ಅಲಂಕೃತ ಚಿತ್ರಗಳಂತೆ ಇಂದು ನಾವು ಲ್ಯಾಂಡ್‌ಸ್ಕೇಪ್ ಎಂದು ಕರೆಯುವ ಭೂದೃಶ್ಯಗಳು ರೋಮನ್ನರ ಕಾಲದಿಂದಲೂ ಕಾಣಿಸಿಕೊಂಡಿವೆ. ಆದರೆ ಭೂದೃಶ್ಯದ ಚಿತ್ರವು ತನ್ನದೇ ಆದ ಪೂರ್ಣ, ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಂಡಿದ್ದು ಪುನರುಜ್ಜೀವನ ೧೫೧೬ನೇ ಶತಮಾನ ಕಾಲದಲ್ಲಿ ಭಾವಚಿತ್ರಗಳ ಹಿನ್ನೆಲೆಗೆ ಸುಂದರ ಭೂದೃಶ್ಯಗಳು ಸಂಯೋಜಿಸಲ ಪಟ್ಟಿರುತ್ತಿದ್ದವು.

ಎಲ್. ಶಿವಲಿಂಗಪ್ಪನವರು ಚಿತ್ರಿಸಿದ ಅನೇಕ ನಿಸರ್ಗ ಚಿತ್ರಗಳನ್ನು ನಾವು ನೋಡಿದರೆ ನಮಗೆ ತಿಳಿದುಬರುವುದು ಎರಡು ಮಾಧ್ಯಮಗಳಲ್ಲಿ ಒಂದು ಜಲವರ್ಣದಿಂದ ಚಿತ್ರಿಸಿದ ನಿಸರ್ಗ ಚಿತ್ರಗಳು. ಮತ್ತೊಂದು ತೈಲವರ್ಣದಿಂದ ಚಿತ್ರಿಸಿದ ನಿಸರ್ಗ ಚಿತ್ರಗಳು. ಆದರೆ ಹೆಚ್ಚಾಗಿ ಜಲವರ್ಣದಿಂದಲೇ ನಿಸರ್ಗಚಿತ್ರಗಳನ್ನು ಚಿತ್ರಿಸಿದ್ದಾರೆ. ತೈಲವರ್ಣದಿಂದ ಚಿತ್ರಿತವಾದ ನಿಸರ್ಗ ಚಿತ್ರಗಳು ಕಡಿಮೆ ಬೆರಳಣಿಕೆಯಷ್ಟು ಎಂದರೂ ತಪ್ಪಲ್ಲ. ಜಲವರ್ಣದಿಂದ ತಯಾರಿಸಿದ ನಿಸರ್ಗ ಚಿತ್ರಗಳು ಮತ್ತು ತೈಲವರ್ಣದಿಂದ ಚಿತ್ರಿಸಿದ ನಿಸರ್ಗ ಚಿತ್ರಗಳನ್ನು ನಾವು ನೋಡಿದಾಗ ವರ್ಣಗಳ ಬಳಕೆಯಲ್ಲಿ ತುಂಬಾ ವ್ಯತ್ಯಾಸವನ್ನು ಕಾಣಬಹುದು. ಜಲವರ್ಣದಲ್ಲಿ ತುಂಬಾ ತೆಳುವಾಗಿ ಬಣ್ಣವನ್ನು ಲೇಪನ ಮಾಡಿದ್ದು ಕಂಡುಬಂದರೆ, ತೈಲವರ್ಣದಲ್ಲಿ ಬಣ್ಣವನ್ನು ದಪ್ಪ ದಪ್ಪವಾಗಿ ಇಂಪ್ಯಾಸ್ಟೊ ರೀತಿಯಲ್ಲಿ ರೆಪ್ಪೆ ರೆಪ್ಪೆಯಾಗಿ ಒಂದು ಮಗ್ಗಲೊಂದು ಇಟ್ಟಂತೆ ಭಾಸವಾಗುತ್ತದೆ. ಆದರೆ ದೂರದಿಂದ ಅಥವಾ ಕಣ್ಣನ್ನು ಸ್ವಲ್ಪ ಚಿಕ್ಕದಾಗಿ ಮಾಡಿ ನೋಡಿದರೆ ಬಣ್ಣಗಳು ಒಂದು ಇನ್ನೊಂದರಲ್ಲಿ ಕೂಡಿಕೊಂಡಂತೆ ಇರುವುದು. ತೈಲ ಮಾಧ್ಯಮದಲ್ಲಿ ಚಿತ್ರಿಸಿದ ನಿಸರ್ಗ ಚಿತ್ರಗಳಲ್ಲಿ ಕಾಣುತ್ತೇವೆ. ಎಲ್. ಶಿವಲಿಂಗಪ್ಪನವರ ನಿಸರ್ಗ ಚಿತ್ರಗಳಲ್ಲಿ ನೆರಳು ಬೆಳಕಿನ ಪ್ರಭಾವ ತುಂಬಾ ಆಕರ್ಷಣೆಯವಾಗಿ ಮೂಡಿ ಬರುತ್ತದೆ.ಹೀಗೆ ಪ್ರತಿಯೊಂದು ಮಾಧ್ಯಮದಲ್ಲೂ ಕಲಾಕೃತಿಗಳನ್ನು ರಚಿಸುವ ಕೈಚಳಕವನ್ನು ಹೊಂದಿದವರಾಗಿದ್ದಾರೆ.

೧. ನಿಸರ್ಗ ಚಿತ್ರಗಳು ಇಲ್ಲಿ ಎರಡು ಬಗೆಯಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಒಂದು ಪ್ರಕೃತಿಯ ನಿಸರ್ಗಚಿತ್ರ ಮತ್ತೊಂದು ಭೂದೃಶ್ಯ ಚಿತ್ರಣ ಎಂಬುದಾಗಿ. ಒಂದೇ ಪದವಾದರೆ ಅದರಲ್ಲಿ ವಿಂಗಡಣೆ ಬೇರೆಯಾಗಿರುತ್ತದೆ. ಈ ಚಿತ್ರವು ಭೂದೃಶ್ಯ ಚಿತ್ರವಾಗಿದ್ದು ರಾಮಮಂದಿರ ದೇವಸ್ಥಾನ ಎಂದು ಪ್ರಸಿದ್ಧಿಯಾಗಿದೆ. ಈ ಚಿತ್ರದಲ್ಲಿ ಬಳಸಿದ ವರ್ಣಗಳು ಮತ್ತು ಅದರ ಯಥಾದರ್ಶನವನ್ನು ಸರಳವಾಗಿ

ರಚಿಸಿದ್ದಾರೆ. ಕಂದು, ಕೇಸರಿ ಬಣ್ಣಗಳನ್ನು ಮಿಶ್ರಣ ಮಾಡಿಕೊಂಡು ದೇವಸ್ಥಾನದ ಗೋಪುರಕ್ಕೆ ಬಳಸಲಾಗಿದೆ. ದೇವಸ್ಥಾನವನ್ನು ಅವರಿಸಿರುವ ಕೌಂಪೌಂಡನ್ನು ಬಿಳಿ ಬಣ್ಣದಲ್ಲಿರುವ ಹಾಗೆ ಮತ್ತು ಉಳಿದ ಭಾಗವನ್ನು ಕೆಂಪು ಮಿಶ್ರಣ ನೀಲಿ ಬಣ್ಣವನ್ನು ಹಚ್ಚಲಾಗಿದೆ. ದೇವಸ್ಥಾನದ ಮುಂದಿರುವ ಒಂದು ಕಲ್ಲಿನ ಮಂಟಪವನ್ನು ಸುಂದರವಾಗಿ ರಚಿಸಿದ ಮತ್ತು ದೇವಸ್ಥಾನ ಸುತ್ತಲಿರುವ ನಿರ್ಸಗವನ್ನು ಬಳಸಿಕೊಂಡಿದ್ದಾರೆ. ನೀಳವಾದ ಆಕಾಶ ಮತ್ತು ದೇವಸ್ತಾನದ ಮೇಲೆ ಇರುವಂತಹ ನೇರಳು ಬೆಳಕನ್ನು ಅತಿಸುಂದರವಾಗಿ ನಿಸರ್ಗಚಿತ್ರವನ್ನು ರಚಿಸಿದ್ದಾರೆ.

೨. ಈ ಭೂದೃಶ್ಯ ಶೃಂಗೇರಿಯ ಅನ್ನಪೂರ್ಣಶ್ವೇರಿ ದೇವಸ್ಥಾನದು ಚಿತ್ರವಾಗಿದ್ದು, ಈ ಚಿತ್ರದಲ್ಲಿ ಯಥಾದರ್ಶನವನ್ನು ಬಳಸುವ ಒಂದು ಕಲೆಯಾಗಿರಬೇಕು. ಕಲಾವಿದ ಶೃಂಗೇರಿಯ ದೇವಸ್ಥಾನದ ಚಿತ್ರವನ್ನು ಬಳಸಿದ ಒಂದು ಸ್ಥಳವು ಮುಖ್ಯವಾಗಿರುತ್ತದೆ. ದೇವಸ್ಥಾನದ ಹೊರಭಾಗವನ್ನು ಎರಡು ಬಣ್ಣಗಳಿಂದ ಇದನ್ನು ರಚಿಸಿದರೆ ಅದರಲ್ಲಿರುವ ವರ್ಣಗಳು ಕಂದು ಮಿಶ್ರಿತ ಕೇಸರಿ ಬಣ್ಣವನ್ನು ಬಳಸಲಾಗಿದೆ. ಹೊರಾಂಗಣವನ್ನು ಹಳದಿ ಮತ್ತು ಹಸಿರು ಕಂದು ಬಣ್ಣವನ್ನು ಬಳಸಿದೆ. ನೀಳವಾದ ಆಕಾಶವನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ.

೩. ಹಳ್ಳಿಯ ನಿಸರ್ಗಚಿತ್ರಗಳು ಮನೆಗಳು ಸಾಲು ಸಾಲಾಗಿರುವಂತಹ ಮನೆಗಳನ್ನು ಚಿತ್ರಿಸಲಾಗಿದೆ. ಮನೆಗಳ ಯಥಾದರ್ಶನವು ವಿಭಿನ್ನವಾಗಿವೆ. ಮನೆಯ ಮೇಲೊಂದು ಮನೆ ಮತ್ತು ಮನೆಯ ಅಕ್ಕಪಕ್ಕದಲ್ಲಿ ಒಂದೊಂದು ಮನೆಗಳಿರುವಂತೆ ಚಿತ್ರಿಸಿದ್ದಾರೆ. ಮತ್ತು ಬಣ್ಣಗಳು ಯಥಾದರ್ಶನವಾಗಿ ಆ ಚಿತ್ರದ ದೂರ ಮತ್ತು ಸಮೀಪದ ವ್ಯತ್ಯಾಸಗಳನ್ನು ತೋರಿಸುವಂತೆ ಚಿತ್ರಗಳಲ್ಲಿ ಬಳಸಲಾಗಿದೆ. ಮನೆಯ ಹಂಚುಗಳಿಗೆ ಕೆಂಪು ಬಣ್ಣವನ್ನು ಬಳಸಿದರೆ ಮನೆಯ ಗೋಡೆಗಳಿಗೆ ಬಣ್ಣವನ್ನು ಬಳಸದೆ ಅದನ್ನು ಹಾಗೆಯೇ ಬಿಟ್ಟಿದ್ದಾರೆ. ಅದರ ಮೇಲೆ ಸ್ವಲ್ಪ ನೀಲಿ ಬಣ್ಣವನ್ನು ಲೇಪಿಸಿದೆ. ಹೊರಾಂಗಣ ದಲ್ಲಿರುವ ನಿಸರ್ಗವನ್ನು ಹಳದಿ, ಹಸಿರು ಮತ್ತು ಕಂದುಬಣ್ಣವನ್ನು ಬಳಸಲಾಗಿದೆ. ಆಕಾಶವನ್ನು ಕೆಂಪು ಮತ್ತು ನೀಲಿ ಮಿಶ್ರಿತ ಬಣ್ಣದಿಂದ ಕಾಣಬಹುದು.

೪. ಹಳ್ಳಿಯ ಭೂದೃಶ್ಯ ಹಳ್ಳಿ ಎಂದರೆ ಮನೆ, ದೇವಸ್ಥಾನ ಮತ್ತು ಗುಡ್ಡಬೆಟ್ಟಗಳನ್ನು ಕಾಣಬಹುದು. ಈ ಚಿತ್ರದಲ್ಲಿ ಆಲದ ಮರವನ್ನು ಪ್ರಮುಖವಾಗಿಟ್ಟುಕೊಂಡಿದ್ದಾರೆ. ಆದರೆ ಯಾವುದೇ ಮರಕ್ಕೆ ಒಂದು ಸರಿಯಾದ ಯಥಾದರ್ಶನ ಇರುವುದಿಲ್ಲ. ಆದರೆ ಕಲಾವಿದ ಆ ಮರಕ್ಕೆ ಕಂದು ಬಣ್ಣವು ಮತ್ತು ಹಳದಿ ಬಣ್ಣವನ್ನು ಮಿಶ್ರಣ ಮಾಡಿ ಅತಿ ಸರಳವಾಗಿ ಮೂಡುವಂತೆ ಚಿತ್ರಿಸಿದ್ದಾರೆ. ಮರದ ಪಕ್ಕದಲ್ಲಿರುವ ಒಂದು ದೇವಸ್ಥಾನ ಅದರ ಯಥಾದರ್ಶನವು ಸರಿಯಾದ ಕ್ರಮದಲ್ಲಿಬಳಸಿಕೊಂಡಿದ್ದರೆ ಮತ್ತು ನೆರಳು ಬೆಳಕು ತೋರಿಸುತ್ತಾ ಬಣ್ಣಗಳ ವಿಂಗಡಣೆ ಮಾಡಿದ್ದಾರೆ. ಮನೆಗಳು ಅತಿ ಸುಂದರವಾಗಿ ಚಿತ್ರಿಸಿದ್ದಾರೆ. ನಾವು ಆಲದ ಮರದ ಹತ್ತಿರ ನಿಂತು ನೋಡಿದಾಗ ದೂರದಲ್ಲಿ ಒಂದು ದೊಡ್ಡದಾದ

ಬೆಟ್ಟವು ಕಂಡುಬರುತ್ತದೆ. ಒಟ್ಟಾರೆ ಈ ಚಿತ್ರವನ್ನು ಗಮನಿಸಿದಾಗ ಅದರಲ್ಲಿ ಬಳಸಿದ ಬಣ್ಣಗಳಾದ ಕೆಂಪು, ಹಸಿರು, ಹಳದಿ, ನೀಲಿ ಬಣ್ಣಗಳನ್ನು ಹೊಂದಿದ ಹಳ್ಳಿಯ ಭೂದೃಶ್ಯ ಎಂದೇ ಹೇಳಬಹುದು.

೫. ಈ ಪ್ರದೇಶವು ಹಂಪಿಯಲ್ಲಿರುವ ವಿಠ್ಠಲ ದೇವಸ್ಥಾನದ ಹತ್ತಿರ ಇರುವ ಒಂದು ಹಾಳು ಮಂಟಪ ಆ ಮಂಟಪದ ಪಕ್ಕದಲ್ಲಿರುವ ಇನ್ನೊಂದು ಹಾಳು ಮಂಟಪ ಈ ಎರಡು ಮಂಟಪದ ಹಿಂದೆ ಒಂದು ವಿಶಾಲವಾದ ದೊಡ್ಡ ಬಂಡೆ ಇದೆ. ಇವುಗಳ ಮುಂದೆ ಒಂದು ವಿಶಾಲವಾದ ನಿಸರ್ಗವನ್ನು ಹೊಂದಿರುವ ಭೂದೃಶ್ಯ ಇವುಗಳ ಮಧ್ಯದಲ್ಲಿ ಒಂದು ಸುಂದರವಾದ ಆಕಾಶವಿದೆ. ಮಂಟಪಕ್ಕೆ ಬಳಸಿರುವ ಬಣ್ಣವು ಕಂದು, ಕೆಸರಿ ಮತ್ತು ನೆರಳೆ ಬಣ್ಣವನ್ನು ಹೊಂದಿರುವ ಮಂಟಪವಾಗಿ ಇನ್ನೊಂದು ಚಿಕ್ಕ ಮಂಟಪಕ್ಕೆ ಬಳಸಲಾಗಿದೆ. ಕಂದು ಮತ್ತು ಕೇಸರಿ ಬಣ್ಣವನ್ನು ಹೊಂದಿದೆ. ಮಂಟಪ ಮೇಲೆ ಹಸಿರು ಬಣ್ಣದಲ್ಲಿ ಕಂಡುಬರುವ ಈ ಎರಡು ಮಂಟಪದ ಹಿಂದೆ ಇರುವ ಬಂಡೆಯ ಬಣ್ಣ ಕಂದು ಮತ್ತು ಕೆಸರಿ ಕಪ್ಪು ಬಣ್ಣಗಳಿಂದ ರಚಿಸಿದೆ. ಒಟ್ಟಾರೆ ಈ ಚಿತ್ರವು ಬಣ್ಣಗಳ ಒಂದು ಸರಮಾಲೆಯಾಗಿ ರೂಪಿಸಲಾಗಿದೆ. ಈ ಚಿತ್ರವನ್ನು ನೋಡಿದಾಕ್ಷಣ ನಮ್ಮ ಕಣ್ಮುಂದೆ ಬರುವ ಹಾಗೆ ಕಂಡುಬರುತ್ತದೆ.

೬. ಈ ಭೂದೃಶ್ಯ ಚಿತ್ರವು ಒಂದು ಛಾಯಾಚಿತ್ರದಿಂದ ರಚಿಸಿದ ಚಿತ್ರದಲ್ಲಿ ಕಂಡುಬರುವ ಮಂಟಪ ಮತ್ತು ಅದರ ಕೆಳಗೆ ಜನರ ದಂಡು ಕಂಡುಬರುತ್ತದೆ. ಜನರ ಪಕ್ಕದಲ್ಲಿ ಒಂದು ನೀರಿನ ಕೊಳ ಅದರ ಪಕ್ಕದಲ್ಲಿ ಒಂದು ಚಿಕ್ಕಮಂಟಪ ಇವುಗಳ ಹಿಂದೆ ವಿಶಾಲವಾದ ಮರ ಕಂಡುಬರುತ್ತದೆ. ಈ ಚಿತ್ರದಲ್ಲಿ ಕಂಡುಬರುವ ಮಂಟಪವು ರಚಿಸಿದ ವಿಧಾನವು ಚಾಲುಕ್ಯರ ವಂಶದವರು ಕಟ್ಟಿಸಿದ ಹಾಗೆ ಕಂಡುಬರುತ್ತದೆ. ಇದರ ಬಣ್ಣದ ವಿನ್ಯಾಸವು ಕೆಸರಿ ಬಣ್ಣವನ್ನು ತೆಳುವಾಗಿ ಬಳಸಿದರೆ ಮಂಟಪದ ಕೆಳಗೆ ಇರುವ ಜನರನ್ನು ಯಥಾದರ್ಶನದ ನಿಯಮದ ಅನುಸಾರವಾಗಿ ಬಣ್ಣಗಳ ವಿಂಗಡಣೆ ಮಾಡಿಕೊಂಡು ಚಿತ್ರಿಸಲಾಗಿದೆ. ಜನರ ಪಕ್ಕದಲ್ಲಿರುವ ನೀರಿನ ಕೊಳದಲ್ಲಿ ಆಕಾಶದ ಬಣ್ಣ ಮತ್ತು ಜನರ ನೆರಳು ಮಂಟಪದ ನೆರಳು ದೂರದಲ್ಲಿರುವ ಮರದ ನೆರಳನ್ನು ನೀರಿನ ಮೇಲೆ ಕಂಡುಬರುತ್ತವೆ. ಈ ಚಿತ್ರದಲ್ಲಿ ಯಥಾದರ್ಶನವನ್ನು ಪ್ರಮುಖವಾಗಿಟ್ಟುಕೊಂಡು ಈ ಚಿತ್ರವನ್ನು ಚಿತ್ರಿಸಲಾಗಿದೆ. ಮರಕ್ಕೆ ಹಸಿರು ಬಣ್ಣದ ಸೊಬಗನ್ನು ನೀಡುತ್ತದೆ. ಒಟ್ಟಾರೆ ಚಿತ್ರವು ಪ್ರೇಕ್ಷಕನ ಕಣ್ಣಿಗೆ ಮೊಹಕವಾದ ಮುದವನ್ನು ನೀಡುವುದೆಂದು ಹೇಳಬಹುದು.

೭. ಜನರ ಜೀವನವನ್ನು ಪ್ರತಿಬಿಂಬಿಸುವ ದೃಶ್ಯವೆಂದೇ ಹೇಳಬಹುದು. ಹಾಗೂ ನಿಸರ್ಗದಲ್ಲಿರುವ ವಾತಾವರಣವು ಮಳೆ ಬಂದು ಹೊದಹಾಗೆ ಮತ್ತು ನೆಲದಲ್ಲಿ ಜನರ ನೆರಳು ಸ್ಪಷ್ಟವಾಗಿ ಕಂಡುಬರುವಂತೆ ನಿಸರ್ಗ ಚಿತ್ರಕ್ಕೆ ಬಳಸಿದ ಬಣ್ಣಗಳಾದ ಕೆಂಪು ಮತ್ತು ಕೆಸರಿ ಕಂದು ಹಳದಿ ಬಣ್ಣಗಳನ್ನು ಲೇಪನ ಮಾಡಿದರೆ ಮತ್ತು ಒಂದು ಮರವನ್ನು ರಚಿಸಲಾಗಿದೆ. ಆದರೆ ಎಲೆಗಳು ಇಲ್ಲದಿದ್ದರು ಸುಂದರವಾಗಿ

ಕಂಡುಬರುತ್ತದೆ. ಆಕಾಶದಲ್ಲಿ ಮಳೆ ಬಂದು ಹೋದ ನಂತರ ತಿಳಿ ನಿಲಾಕಾಶದಲ್ಲಿ ತೇಲುವುದ ಕಪ್ಪು ಮತ್ತು ನೀಲಿ ಕೆಂಪು ಬಣ್ಣಗಳು ಕಂಡುಬರುತ್ತವೆ. ನಿಸರ್ಗಚಿತ್ರವು ಒಂದು ನೈಸರ್ಗಿಕ ವಾತಾವರಣ ಕಂಡುಬರುತ್ತದೆ.

೮. ನಿಸರ್ಗಚಿತ್ರವೆಂದರೆ ಮನೆ, ಹೂ ಬಳ್ಳಿ, ದೇವಸ್ಥಾನ, ಮರ ಇವೆಲ್ಲವು ನಿಸರ್ಗವೆ ಆಗಿರುತ್ತದೆ. ಅದರ ಒಂದು ವಿಶೇಷವಾದ ದೃಶ್ಯ ಸುಂದರವು ಬಂಡೆಕಲ್ಲು ಕೂಡಾ ಕಲಾವಿದನ ಮನಸ್ಸಿನಲ್ಲಿ ಹಲವಾರು ಗೊಂದಲಗಳು ಇಟ್ಟುಕೊಳ್ಳದೆ ಚಿತ್ರ ರಚನೆಗೆ ಮುಂದಾಗುತ್ತಾನೆ. ನಿಸರ್ಗದಲ್ಲಿರುವ ಬಣ್ಣಗಳನ್ನು ಕದ್ದು ಚಿತ್ರ ರಚನೆ ಮಾಡುತ್ತಾನೆ. ಈ ಚಿತ್ರದಲ್ಲಿ ಒಂದು ದೊಡ್ಡ ಕಲ್ಲುಬಂಡೆ ಸಾಲುಗಳು ಹೊಂದಿದ ಹಾಗೆ ಕಂಡುಬರುತ್ತದೆ. ಒಂದು ಬಂಡೆಯ ಮೇಲೆ ಮತ್ತೊಂದು ಬಂಡೆ ಬಾಗಿರುವ ಹಾಗೆ ಕಂಡುಬರುತ್ತದೆ. ಬಂಡೆಗಳಿಗೆ ತನ್ನದೇ ಆದ ಆಕಾರ ಇರುವುದಿಲ್ಲ. ನೆರಳು ಬೆಳಕಿನ ನಡುವೆ ಅದರ ಆಕಾರ ಕಂಡುಬರುತ್ತದೆ. ಬಂಡೆಯ ಚಿತ್ರಕ್ಕೆ ಬಳಸಿದ ಬಣ್ಣಗಳು ಕಂದು, ಹಸಿರು, ಕಪ್ಪು, ಕೇಸರಿ ಬಣ್ಣಗಳು ಹೊಂದಿವೆ.

೯. ದೇವಸ್ಥಾನದ ಹೊರ ಭಾಗವನ್ನು ರಚಿಸಿದ ಹಾಗೆ ಕಂಡುಬರುತ್ತದೆ. ಒಂದು ಸುಂದರವಾದ ಮರ ಆ ಮರದ ಸುತ್ತಲು ಕಲ್ಲುಗಳ ಸಾಲುಗಳು ಮತ್ತು ಅದರ ಅಕ್ಕಪಕ್ಕ ನಿಸರ್ಗದ ಪರಿಸರವನ್ನು ಹೊಂದಿದೆ. ಈ ಚಿತ್ರದಲ್ಲಿ ಸ್ವಲ್ಪದೂರದಲ್ಲಿ ಒಂದು ದೇವಸ್ಥಾನದ ಗೋಪುರ ಕಂಡುಬರುತ್ತದೆ. ಈ ಚಿತ್ರಕ್ಕೆ ಬಳಸಿದ ಬಣ್ಣಗಳು ಕಂದು, ಹಳದಿ, ನೀಲಿ ಮಿಶ್ರಿತ ಕೆಂಪು, ಹಸಿರು, ಕಪ್ಪುಗಳಿಂದ ಚಿತ್ರಿಸಲಾಗಿದೆ.

೧೦. ಕಲ್ಲು ಬಂಡೆಗಳ ನಿಸರ್ಗಚಿತ್ರವು ಆಗಿದ್ದು ವಿಶಾಲವಾದ ಕಲ್ಲುಬಂಡೆಗಳನ್ನು ಹೊಂದಿದ್ದು ವಿಶಾಲವಾದ ಸ್ಥಳ ಕಲ್ಲುಗಳ ಮೇಲೆ ಚಿಕ್ಕ ಚಿಕ್ಕ ಗಿಡಗಳು ಇರುವುದು ಕಂಡುಬರುತ್ತವೆ. ಚಿತ್ರದಲ್ಲಿ ಬಂಡೆಗಳ ದೂರ ಮತ್ತು ಸಮೀಪದ ವ್ಯತ್ಯಾಸಗಳನ್ನು ಚಿತ್ರಿಸಲಾಗಿದೆ. ಅಲ್ಲಿರುವ ಗಿಡಗಳು, ಸಣ್ಣಪುಟ್ಟ ಕಲ್ಲುಗಳು ಕಾಣುತ್ತೇವೆ. ಈ ಚಿತ್ರವನ್ನು ನೋಡಿದಾಕ್ಷಣ ಚಿತ್ರವೋ ಅಥವಾ ಛಾಯಾಚಿತ್ರವೋ ಇರಬಹುದು ಎಂದೇ ಹೇಳಬಹುದು. ನಿಸರ್ಗಚಿತ್ರದಲ್ಲಿ ಬಳಸಿದ ಬಣ್ಣಗಳು, ವಿಶಾಲವಾದ ಆಕಾಶದಲ್ಲಿರುವ ಬಣ್ಣಗಳ ಲೇಪನ. ಕೆಸರಿ, ನೀಲಿ, ಕೆಂಪು ವರ್ಣಗಳನ್ನು ಹೊಂದಿರುವ ಆಕಾಶವಾಗಿ ಈ ನಿಸರ್ಗ ಚಿತ್ರವು ಎಂಥವರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

೧೧. ಈ ಭೂದೃಶ್ಯ ಚಿತ್ರವು ಛಾಯಾಚಿತ್ರದಿಂದ ಆಧಾರಿತವಾಗಿದೆ. ಕಲಾವಿದ ತನಗೆ ಬೇಕಾದ ಸ್ಥಳವನ್ನು ಅಷ್ಟೇ ತೆಗೆದುಕೊಂಡು ಒಂದು ಭಾಗ ಮಾತ್ರ ದೇವಸ್ಥಾನದ ಒಳನೋಟವನ್ನು ಈ ಚಿತ್ರದಲ್ಲಿ ಅತಿ ಹೆಚ್ಚು ವಸ್ತುಗಳನ್ನು ತೆಗೆದುಕೊಂಡಿರುವುದಿಲ್ಲ. ಸ್ಪಷ್ಟವಾಗಿ ಕಂಡುಬರುತ್ತದೆ. ಗೋಪುರ ಮತ್ತು ಅದರ ಹಿಂಬಾಗ ಮತ್ತು ಮುಂಭಾಗಗಳು, ಕಂದು, ಕೆಂಪು, ನೀಲಿ, ಹಳದಿ, ಹಸಿರು ಬಣ್ಣಗಳಿಂದ ಕೂಡಿದೆ.

ತೈಲವರ್ಣದ ಚಿತ್ರಗಳು

೧೨. ಒಂದು ವಿಶಾಲವಾದ ಆಲದ ಮರ ಅದರ ರಂಬೆ, ಕೊಂಬೆಗಳು ಮೇಲೆ ಕೆಳಗೆ ಇಳಿದು ಭೂಮಿಯಲ್ಲಿ ಸೇರಿಕೊಂಡಿವೆ. ಮರದಲ್ಲಿ ಮರಿಗಲು ಈ ವಿಶಾಲವಾದ ಆಲದ ಮರ ಕೆಳಗೆ ಜನರ ಒಂದು ಸನ್ನಿವೇಶ ಕಂಡುಬರುತ್ತದೆ. ನಂತರ ಮರದ ಹಿಂದೆ ಒಂದು ವಿಶಾಲವಾದ ತೆಳುವಾದ ನೀಲಿ ಮಿಶ್ರಿತ ಕೆಂಪು ಬಣ್ಣವನ್ನು ಕಂಡುಬರುತ್ತದೆ. ದೂರದಲ್ಲಿರುವ ಒಂದು ಸುಂದರವಾದ ಬೆಟ್ಟ, ಮರಕ್ಕೆ ಬಳಸಿದ ಬಣ್ಣಗಳು ಕಂದು, ಕೇಸರಿ, ಹಸಿರು, ಹಳದಿ, ಕಪ್ಪುಬಣ್ಣಗಳನ್ನು ಬಳಸಲಾಗಿದೆ.

೧೩. ನಿಸರ್ಗ ಮತ್ತು ಭೂದೃಶ್ಯವನ್ನು ಒಳಗೊಂಡಿರುವ ಚಿತ್ರವೆಂದೆ ಹೇಳಬಹುದು. ಈ ಚಿತ್ರದಲ್ಲಿ ಹೆಚ್ಚಾಗಿ ನಿಸರ್ಗವನ್ನು ಅಳವಡಿಸಿಕೊಂಡು ರಚಿಸಿದಂತಹ ನಿಸರ್ಗ ಚಿತ್ರವು ನೋಡುವವರ ಮನವನ್ನು ಸೂರೆಗೊಳಿಸುತ್ತದೆ. ಈ ಚಿತ್ರದಲ್ಲಿ ಬಳಸಿದ ವರ್ಣಗಳು ಕಂದು, ಕೆಂಪು, ನೀಲಿ, ಹಸಿರು, ಹಳದಿ, ಕೆಂಪು ಮಿಶ್ರಿತ ನೀಲಿ ಬಣ್ಣಗಳನ್ನು ಬಳಸಿ ಸುಂದರವಾಗಿ ಚಿತ್ರಿಸಲಾಗಿದೆ.

೧೪. ಕೂಡಲಸಂಗಮದ ಒಂದು ನಿಸರ್ಗ ಚಿತ್ರದಲ್ಲಿರುವ ಒಂದು ಪುಟ್ಟ ಲಿಂಗ ಮತ್ತು ಚಿಕ್ಕ ಮಂಟಪವನ್ನು ನಾವು ಚಿತ್ರದಲ್ಲಿ ಕಾಣಬಹುದು. ಜೊತೆಗೆ ಸುತ್ತುಮುತ್ತಲಿನಲ್ಲಿರುವ ಪರಿಸರ ಮತ್ತು ಹರಿಯುತ್ತಿರುವ ನೀರಿನ ಒಂದು ವೈಭೋಗವನ್ನು ನಾವು ಚಿತ್ರದಲ್ಲಿ ಕಾಣಬಹುದು. ಮಂಟಪದ ಪಕ್ಕದಲ್ಲಿ ಚಿಕ್ಕಪುಟ್ಟ ಕಲ್ಲು ಅದಕ್ಕೆ ಬಳಸಿದ ಬಣ್ಣ ಎಂಥವರನ್ನು ಮುಗ್ಧರನ್ನಾಗಿಸುತ್ತದೆ. ಈ ಚಿತ್ರದಲ್ಲಿ ಬಳಸಿದ ಬಣ್ಣಗಳು ನೀಲಿ, ಕಂದು, ನೀಲಿ ಮಿಶ್ರಿತ ಕೆಂಪು, ಹಸಿರು, ಹಳದಿ, ಕೇಸರಿ, ಕಪ್ಪು ವರ್ಣಗಳನ್ನು ವಿಂಗಡಿಸಿಕೊಂಡು ನಿಸರ್ಗವನ್ನು ರಮಣೀಯವಾಗಿ ಚಿತ್ರಿಸಲಾಗಿದೆ.

೧೫. ನಿಸರ್ಗ ಚಿತ್ರದಲ್ಲಿ ಸಾಮಾನ್ಯವಾಗಿ ಮರಗಳಿಗೆ ಹಸಿರು ಮತ್ತು ಹಳದಿ ಮಿಶ್ರಿತ ಹಸಿರು ಬಣ್ಣಗಳನ್ನು ಬಳಸುವುದು ಕಂಡುಬರುತ್ತದೆ. ಆದರೆ ಈ ಚಿತ್ರದಲ್ಲಿ ಮರಕ್ಕೆ ಕೆಂಪು ವರ್ಣವನ್ನು ಬಳಸಲಾಗಿದೆ. ಮತ್ತು ಒಂದು ಚಿಕ್ಕ ಮಂಟಪ ಅದರ ಸುತ್ತಮುತ್ತಲು ಮರ ಗಿಡಗಳು ಹಾಗೂ ದೂರದಲ್ಲಿ ಕಣ್ಣಿಗೆ ತಂಪನ್ನು ನೀಡುವ ಬೆಟ್ಟಗಳ ಸಾಲುಗಳು ಕಂಡುಬರುವುದು. ನಿಸರ್ಗಚಿತ್ರದಲ್ಲಿ ಬಳಸಿದ ಬಣ್ಣಗಳು ಕೆಂಪು, ಕಂದು ನೀಲಿ, ಹಸಿರು, ಹಳದಿ, ಬಿಳಿ ಬಣ್ಣಗಳನ್ನು ಬಳಸಲಾಗಿದೆ.

೧೬. ಎಂ.ಟಿ.ವಿ. ಆಚಾರ್ಯರ ಕಲಾಕೃತಿಗಳಿಗೆ ಹೊಲಿಸಬಹುದಾದ ಈ ಚಿತ್ರದಲ್ಲಿ ಪ್ರಮುಖವಾಗಿ ಒಂದು ಮರ ಮತ್ತು ದೂರದಲ್ಲಿರುವ ಬೆಟ್ಟಗಳ ಸಾಲುಗಳು ಕಂಡುಬರುತ್ತದೆ. ನಿಸರ್ಗ ಚಿತ್ರಕ್ಕೆ ಬಳಸಿದ ವರ್ಣಗಳು ಹಸಿರು, ಕಂದು, ಹಳದಿ, ಕೆಂಪು, ನೀಲಿ, ಕೇಸರಿ ಮುಂತಾದ ವರ್ಣಗಳನ್ನು ಬಳಸಿಕೊಂಡು ರಚಿಸಿದ ಚಿತ್ರವಾಗಿದೆ.

[illegible]

ನಿಸರ್ಗ ಚಿತ್ರಗಳು



ಚಿತ್ರ-೧



ಚಿತ್ರ-೨




ಚಿತ್ರ-೩



ಚಿತ್ರ-೪



ಚಿತ್ರ-೫



ಚಿತ್ರ-೬




ಚಿತ್ರ-೭

ನಿಸರ್ಗ ಚಿತ್ರಗಳು



ಚಿತ್ರ-೮



ಚಿತ್ರ-೯



ಚಿತ್ರ-೧೦



ಚಿತ್ರ-೧೧

ನಿಸರ್ಗ ಚಿತ್ರಗಳು



ಚಿತ್ರ-೧೨



ಚಿತ್ರ-೧೩



ಚಿತ್ರ-೧೪



ಚಿತ್ರ-೧೫

ನಿಸರ್ಗ ಚಿತ್ರಗಳು



ಚಿತ್ರ-೧೬



ಚಿತ್ರ-೧೭



ಚಿತ್ರ-೧೮



ಚಿತ್ರ-೧೯

ನಿಸರ್ಗ ಚಿತ್ರಗಳು



ಚಿತ್ರ-೨೦



ಚಿತ್ರ-೨೧



ಚಿತ್ರ-೨೨



ಚಿತ್ರ-೧೩



ಚಿತ್ರ-೧೪



ಚಿತ್ರ-೧೫



ಚಿತ್ರ-೧೬



ಚಿತ್ರ-೧೭



ಚಿತ್ರ-೧೮



ಚಿತ್ರ-೧೯

೧೭. ಪ್ರಮುಖವಾಗಿ ಈ ಚಿತ್ರದಲ್ಲಿ ಮರಗಳ ಸಾಲುಗಳನ್ನು ನೋಡಬಹುದು. ಮತ್ತು ಜನರು ಕುಳಿತಿರುವ ದೃಶ್ಯ ಕಲಾವಿದನ ಬುದ್ಧಿವಂತಿಕೆಯು ಚಿತ್ರ ಸಂಯೋಜನೆಯಿಂದಲೇ ಪ್ರಕಟಗೊಳ್ಳುತ್ತದೆ. ಕಲಾವಿದನ ರಚನಾತ್ಮಕ ಕ್ರಿಯಾತ್ಮಕ ಅಭಿವ್ಯಕ್ತಿ ಕೌಶಲ್ಯಗಳು ಹೊಂದಿದೆ. ಬಳಸಿದ ಬಣ್ಣಗಳು ಹೆಚ್ಚಾಗಿ ಹಳದಿ ಮಿಶ್ರಿತ ಹಸಿರು ಬಣ್ಣ ಕಂಡುಬರುತ್ತದೆ. ನೀಲಿ, ಕಂದು, ಕೆಂಪು, ತಿಳಿ ಹಳದಿ, ನೀಲಿ ಮತ್ತು ಕಂದು, ಕೆಂಪು ಬಣ್ಣಗಳ ಮಿಶ್ರಣ ಮಾಡಿಕೊಂಡಿರುವುದು ಚಿತ್ರದಲ್ಲಿ ಕಂಡುಬರುತ್ತದೆ.

೧೮. ಹಳ್ಳಿಯ ಭೂದೃಶ್ಯ ಚಿತ್ರಣವಾಗಿದ್ದು, ಹಳ್ಳಿಯ ವಾತಾವರಣ ಮತ್ತು ಜನರನ್ನು ಚಿತ್ರಿಸಲಾಗಿದೆ. ಪ್ರಮುಖವಾಗಿ ದೇವಸ್ಥಾನವನ್ನು ಬಳಸಿಕೊಂಡಿರುವುದು ವಿಶೇಷ. ನಿಸರ್ಗದಲ್ಲಿ ನೆರಳು ಬೆಳಕನ್ನು ಕ್ರಮಬದ್ಧವಾಗಿ ಬಳಸಿಕೊಳ್ಳಲಾಗಿದೆ. ಬಳಸಿದ ವರ್ಣಗಳು ಹಸಿರು, ಕಂದು, ಕೆಂಪು, ನೀಲಿ, ಹಳದಿ, ಕಪ್ಪು ಬಣ್ಣಗಳನ್ನು ಬಳಕೆಯಾಗಿ ಚಿತ್ರಿಸಲಾಗಿದೆ.

೧೯. ದಟ್ಟವಾದ ಬೆಟ್ಟಗುಡ್ಡಗಳ ಪ್ರದೇಶ ಮತ್ತು ಅಲ್ಲಿರುವ ಮರ ಗಿಡಗಳ್ನು ಅತಿಸುಂದರವಾಗಿ ರಚಿಸಿದ ಮತ್ತು ದನಕಾಯುವ ಗೊಲ್ಲನನ್ನು ಸಹ ಈ ಚಿತ್ರದಲ್ಲಿ ಚಿತ್ರಿಸಲಾಗಿದೆ. ಕಂದು, ನೀಲಿ, ಹಸಿರು, ಹಳದಿ, ಕೆಂಪು, ಕಪ್ಪು ಬಣ್ಣಗಳಿಂದ ಕೂಡಿದ ಚಿತ್ರವಾಗಿದೆ.

ಸಂಯೋಜನಾ ಚಿತ್ರಗಳು

ಚಿತ್ರಕಲಾಕೃತಿಗಳಲ್ಲಿ ಸಂಯೋಜನೆಯು ಪ್ರಮುಖವಾದ ಅಂಶವಾಗಿದೆ. ಯಾವುದೇ ಕಲಾಕೃತಿಯಾಗಲಿ ಅದು ಸಂಯೋಜನೆಯಿಂದ ಕೂಡಿದ್ದಿರಬೇಕು. ಸಂಯೋಜನೆಯಲ್ಲದಿದ್ದರೆ ಕಲಾಕೃತಿಯು ತನ್ನ ಗುಣಮಟ್ಟವನ್ನು ಕಳೆದುಕೊಳ್ಳುತ್ತದೆ. ಸಂಯೋಜನೆ ಚಿತ್ರವು ಶಿವಲಿಂಗಪ್ಪನವರಿಗೆ ಅತ್ಯಂತ ನೆಚ್ಚಿನ ವಿಷಯವಾಗಿದೆ. ಕಲಾವಿದನು ಚಿತ್ರಸಲಿರುವ ವಸ್ತುವಿಗೆ ಸಂಬಂಧಿಸಿದಂತೆ ಮಾನವಾಕೃತಿಗಳು, ಹಣ್ಣುಗಳು ಅಥವಾ ಕೇವಲ ಬೇರೆ ಬೇರೆ ಆಕೃತಿಗಳನ್ನು ಹೊಂದಿಸಿ ವರ್ಣಚಿತ್ರಗಳನ್ನು ರಚಿಸುವ ಕಲಾತ್ಮಕ ಸಂಯೋಜನೆ ಅಥವಾ ಕಾಂಪೋಜಿಷನ್ ಎಂದು ಕರೆಯುತ್ತಾರೆ. ಚಿತ್ರ ಸಂಯೋಜನೆಯು ಚಿತ್ರಕಲೆಯ ಎಲ್ಲ ವಿಷಯಗಳಲ್ಲಿ ಅತಿ ಪ್ರಮುಖ ಹಾಗೂ ಮಹತ್ವದ ವಿಷಯಗಳಾಗಿರುತ್ತದೆ. ಕಲಾವಿದನ ಬುದ್ಧಿಮತ್ತೆಯು ಚಿತ್ರಕಲೆಯ ಎಲ್ಲ ವಿಷಯಗಳಲ್ಲಿ ಅತಿ ಪ್ರಮುಖ ಹಾಗೂ ಮಹತ್ವದ ವಿಷಯಗಳಾಗಿರುತ್ತವೆ. ಕಲಾವಿದನ ಬುದ್ಧಿವಂತಿಕೆಯು ಚಿತ್ರಸಂಯೋಜನೆ ಯಿಂದಲ್ಲೇ ಪ್ರಕಟಗೊಳ್ಳುತ್ತದೆ. ಕಲಾವಿದನ ರಚನಾತ್ಮಕ ಕ್ರಿಯಾತ್ಮಕ ಅಭಿವ್ಯಕ್ತಿ ಕೌಶಲ್ಯಗಳು ಚಿತ್ರ ಸಂಯೋಜನೆಯ ಮುಖಾಂತರವೇ ಬೆಳಕಿಗೆ ಬರುತ್ತದೆ. ಚಿತ್ರ ಸಂಯೋಜನೆಯ ಮೂಲತತ್ವಗಳಾದ ವರ್ಣ, ರೇಖಾ ಆಕೃತಿ, ವರ್ಣವಿನ್ಯಾಸ, ಮೈವಳಿಕೆ ಮತ್ತು ಸ್ಥಳಾವಕಾಶ, ಮುಂತಾದವುಗಳ ಅರ್ಥವ್ಯಾಪ್ತಿಯನ್ನು ಐಕ್ಯತೆ, ಸಾಮರಸ್ಯತೆ ಮತ್ತು ಪ್ರಮಾಣ ಮುಂತಾದ ಚಿತ್ರ ಸಂಯೋಜನೆಯ ನಿಯಮಗಳನ್ನು ತಿಳಿದಲ್ಲದೆ ಚಿತ್ರ ಸಂಯೋಜನೆಯ ಪರಿಪೂರ್ಣ ಕೃತಿಯೆನಿಸಲು ಸಾಧ್ಯವಿಲ್ಲ. ಪ್ರತಿಯೊಂದು ರೇಖೆ, ವರ್ಣಗಳಿಗೆ ಪ್ರತ್ಯೇಕವಾದ ಗುಣ ಸ್ವಭಾವಗಳಿರುವುದರಿಂದ ಕಲಾವಿದರು ಚಿತ್ರದಲ್ಲಿರುವ ವಿಷಯಕ್ಕೆ ಸಂಬಂಧಪಟ್ಟಂತೆ

ಗುಣವಿಶೇಷಗಳ ವರ್ಣಗಳನ್ನು ರೇಖೆಗಳನ್ನು ಚಿತ್ರಿಸಿದಾಗಲೇ ಚಿತ್ರವು ಅರ್ಥಪೂರ್ಣವಾಗುತ್ತದೆ. ಚಿತ್ರ ಸಂಯೋಜನೆಯು ಸಾಂಪ್ರದಾಯಿಕವಾಗಿರಲಿ, ಆಧುನಿಕವಾಗಿರಲಿ, ಸಮಕಾಲೀನ ಕೃತಿಯಾಗಿರಲಿ ಅದರಲ್ಲಿ ಚಿತ್ರ ಸಂಯೋಜನೆಯ ಮೂಲತತ್ವಗಳಾಗಿರಲಿ ನಿಯಮ ನಿಬಂಧನೆಗಳಾಗಲಿ ಇಲ್ಲದೇ ಹೋದಲಿ ಅದೊಂದು ಪರಿಪೂರ್ಣ ಕಲಾಕೃತಿಯಾಗಲಾರದು.

ಶಿವಲಿಂಗಪ್ಪನವರು ಸಂಯೋಜನಾ ಕಲಾಕೃತಿಗಳಲ್ಲಿಯೇ ಹಲವು ರೀತಿಯ ವೈವಿಧ್ಯಮಯವಾದ ಕಲಾಕೃತಿಗಳನ್ನು ರಚಿಸಿದ್ದಾರೆ. ಸಂಯೋಜನೆಯಲ್ಲಿ ಹಲವಾರು ನಿಯಮ ನಿಬಂಧನೆಗಳಿರುವುದು ನಾವು ಕಾಣಬಹುದಾಗಿದೆ. ಒಂದು ಕಲಾಕೃತಿಯು ಪರಿಪೂರ್ಣವೆನಿಸಿಕೊಳ್ಳಬೇಕಾದರೆ ಅದು ಕೆಲವು ಅಂಶಗಳನ್ನು ಹೊಂದಿರಬೇಕು. ಹೀಗೆ ಸಂಯೋಜನೆಯು ಪ್ರತಿಯೊಂದರಲ್ಲೂ ಅಳವಡಿಸಿಕೊಂಡಿರುತ್ತದೆ. ಸಂಗೀತ ಕ್ಷೇತ್ರವಾಗಲಿ, ಮುದ್ರಣವಾಗಲಿ, ಚಿತ್ರಕಲೆಯಾಗಲಿ ಇಂತಹ ಯಾವುದೇ ವಿಷಯಗಳಲ್ಲಾಗಲಿ ಸಂಯೋಜನೆಯು ಪ್ರಮುಖವಾಗಿ ಬೇಕೆಬೇಕು. ಒಂದು ರೀತಿಯಲ್ಲಿ ಸಂಯೋಜನೆಯೆಂದರೆ ನಾವು ಬಹಳ ಆಳವಾಗಿ ಇಳಿಯಬೇಕಾಗಿಲ್ಲ ಅದು ಸರಳವಾಗಿರುವಂಥದ್ದು. ಇದಕ್ಕೆ ಕೂಡಿಸು, ಜೋಡಿಸು, ಹೊಂದಿಸು ಎಂಬೆಲ್ಲಾ ನಾನಾ ರೀತಿಯ ಅರ್ಥಗಳಿಂದ ಗುರುತಿಸಬಹುದು. ಒಟ್ಟಾರೆಯಾಗಿ ಸರಿಯಾಗಿ ಹೊಂದಿಸು ಅಂದರೆ ಯಾವ ಯಾವ ಸ್ಥಳದಲ್ಲಿ ಏನೆಂದು ಕೂಡಿಸಬೇಕೋ ಅಲ್ಲಿ ಅದನ್ನು ಹೊಂದಿಸುವುದು. ಲಯಬದ್ಧವಾಗಿ ಜೋಡಿಸುವುದು ಎಂದು ಸರಳವಾಗಿ ಕರೆಯಬಹುದು. ಚಿತ್ರಗಳ ಜೋಡಣೆ ವಿಧಾನದಲ್ಲಿ ಬರುವ ಇನ್ನೊಂದು ಮುಖ್ಯ ಅಂಶ ಈ ಲಯ ಲಯವು ಸಂಗೀತದಲ್ಲಿ ಬರುವ ತಾಳವನ್ನು ಹೋಲುತ್ತದೆ. ಪ್ರಾಯಶಃ ಗೆರೆಯೋ, ಆಕಾರವೋ ಅಥವಾ ಬಣ್ಣವೋ ಮತ್ತೆ ಮತ್ತೆ ಚಿತ್ರದ ಒಳಹೊರಗೆ ಓಡಾಡುವಂತೆ ಚಿತ್ರಿಸಿದಾಗ ಕಣ್ಣಿಗೆ ಒಂದು ಬಗೆಯ ಅಲಂಕಾರಿಕ ವಿನ್ಯಾಸ ಗೋಚರಿಸುತ್ತದೆ. ಹೀಗೆ ಸಂಯೋಜನೆಯನ್ನು ಕುರಿತು ನಾನಾ ರೀತಿಯಾಗಿ ಅದರ ಉಪಯೋಗವನ್ನು ವಿವರಿಸಬಹುದು. ಶಿವಲಿಂಗಪ್ಪನರು ಹೆಚ್ಚಾಗಿ ತೈಲವರ್ಣ ಮತ್ತು ಜಲವರ್ಣದಲ್ಲಿ ಸಂಯೋಜನಾ ಕಲಾಕೃತಿಗಳನ್ನು ರಚಿಸಿದವರಾಗಿದ್ದಾರೆ.

ಆಧುನಿಕ ಸಂಯೋಜನಾ ಚಿತ್ರಗಳು

೧. ಬುದ್ಧನ ಅಹಿಂಸಾ ವಾದವನ್ನು ಇರಿಸಿಕೊಂಡು ಮಾಡಿರುವ ಆಧುನಿಕ ಸಂಯೋಜನಾ ಚಿತ್ರವಾಗಿ ಕಂಡುಬರುವುದು. ವಿಶೇಷವೆಂದರೆ ಹಲವಾರು ರೀತಿಯಿಂದ ಮನುಷ್ಯ ಜೀವನದಲ್ಲಿ ಸುಖ-ದುಃಖಗಳಲ್ಲಿ ಮುಳುಗಿದ್ದಾನೆ. ಮನುಷ್ಯ ತನ್ನ ಎಷ್ಟರಮಟ್ಟಿಗೆ ಕೀಳು ಸಂವೇದನೆಗಳಿಗೆ ಇಳಿಯುತ್ತಾನೆ ಎಂದರೆ ತನ್ನ ಶಿರವನ್ನು ಕತ್ತರಿಸಿಕೊಂಡು ಪ್ರದರ್ಶನ ಮಾಡುತ್ತಾನೆ. ಶಿರಸ್ಸು ಮೇಲೆ ಒಂದು ಅಶೋಭಾವದ ಪಕ್ಷಿಯನ್ನು ಕಲಾವಿದನ್ನು ಈ ಚಿತ್ರದಲ್ಲಿ ಚಿತ್ರಿಸಿದ್ದಾನೆ. ಮತ್ತು ಪಕ್ಕದಲ್ಲಿ ಬುದ್ಧನ ಕಣ್ಣಿನಲ್ಲಿ ನೀರು ಬರುವ ದೃಶ್ಯವನ್ನು ತೋರಿಸಿದ್ದಾನೆ. ಚಿತ್ರವು ತೈಲವರ್ಣವಾಗಿರುವುದರಿಂದ ಇಲ್ಲಿ ಬಳಸಲಾದ ಬಣ್ಣಗಳು ಕೆಂಪು, ಕಪ್ಪು, ಬಿಳಿ, ಹಸಿರು, ನೀಲಿ, ಕಂದು ಬಣ್ಣಗಳನ್ನು ಬಳಸಿ ಇದರ ಅಳದೆ ಎರಡೂವರೆ ಅಡಿ ಅಗಲ, ನಾಲ್ಕು ಅಡಿ ಎತ್ತರವನ್ನು ಹೊಂದಿದೆ.

ಆಧುನಿಕ ಚಿತ್ರಗಳು



ಚಿತ್ರ-೧



ಚಿತ್ರ-೨




ಚಿತ್ರ-೩



ಚಿತ್ರ-೪


ಸಂಯೋಜನ ಚಿತ್ರಗಳು





ರೇಖಾ ಚಿತ್ರಗಳು





೨. ಗಣೇಶ ಈ ಚಿತ್ರವು ಆಧುನಿಕ ಸಂಯೋಜನಾ ಚಿತ್ರವಾಗಿದ್ದು, ಇಂದಿನ ದಿನಮಾನಗಳಲ್ಲಿ ಮನುಷ್ಯ ತನ್ನ ಜೀವನದಲ್ಲಿ ಧರ್ಮವನ್ನು ಹಾಳು ಮಾಡುತ್ತಿರುವುದು, ಧರ್ಮ ಒಂದು ಪವಿತ್ರವಾದ ಸ್ಥಳವನ್ನು ಪಡೆಯದೆ ಕಾಮ, ಕ್ರೋದ, ಮಾದ, ಸಮಸ್ತರಗಳನ್ನು ಅಳವಡಿಸಿಕೊಂಡಿರುವ ಮನುಷ್ಯ ತಾನು ಸತ್ತಮೇಲೆ ಅವನ ಆತ್ಮಕ್ಕೆ ಸಾವು ಇರುವುದಿಲ್ಲ, ಕೇವಲ ಅವನ ದೇಹಕ್ಕೆ ಮಾತ್ರ ಸಾವು. ಮನುಷ್ಯ ಸತ್ತನಂತರ ಅವನ ಆತ್ಮ ಪರಮಾತ್ಮನಲ್ಲಿ ಐಕ್ಯವಾಗುತ್ತದೆ. ಈ ದೃಶ್ಯವನ್ನು ನೋಡಿದಾಕ್ಷಣ ಇಂತಹ ಒಂದು ಅಭಿಪ್ರಾಯವನ್ನು ಮೂಡಿಸುತ್ತದೆ. ಇದರಲ್ಲಿ ಬಳಸಿದ ವರ್ಣಗಳು ಬಿಳಿ, ನೀಲಿ, ಕೆಂಪು, ಹಳದಿ ಬಣ್ಣಗಳನ್ನು ಬಳಸಿಕೊಳ್ಳಲಾಗಿದೆ. ಚಿತ್ರದ ಅಳತೆ ಎರಡೂವರೆ ಅಡಿ ಎತ್ತರ ಅಗಲ ಮೂರುವರೆ ಅಡಿಗಳಿಷ್ಟಿದೆ.

೩. ಈ ಸಂಯೋಜನಾ ಚಿತ್ರವು ಪಕ್ಷಿಗಳನ್ನು ಆಧಾರವಾಗಿಟ್ಟುಕೊಂಡು ಚಿತ್ರಿಸಲಾಗಿದೆ. ಚಿತ್ರ ರಚಿಸಿದ ಮಾಧ್ಯಮ ಬಣ್ಣಗಳನ್ನು ಚಪ್ಪಟೆಯಾಕಾರದಲ್ಲಿ ಬಳಸಿದೆ. ಹಾಗೂ ಗಂಡು ಹೆಣ್ಣು ನಡುವೆ ಇರುವ ಒಂದು ಸಾಂಸಾರಿಕ ಸಂಬಂಧವನ್ನು ಕಲಾವಿದ ಪಕ್ಷಿಗಳ ಮುಖೇನ ಈ ಚಿತ್ರದಲ್ಲಿ ವ್ಯಕ್ತಪಡಿಸಿದ್ದಾನೆ. ಇದರ ಅಳತೆ ಎರಡೂವರೆ ಅಡಿ ಅಗಲ ಮೂರು ಅಡಿ ಎತ್ತರವನ್ನು ಹೊಂದಿದೆ. ತೈಲವರ್ಣ ಮಾಧ್ಯಮದಲ್ಲಿರುವುದು ಕಂಡುಬರುತ್ತದೆ. ಕಂದು, ಕೆಂಪು, ನೀಲಿ, ಹಳದಿ, ಹಸಿರು ಬಣ್ಣಗಳ ಬಳಕೆ ಇಲ್ಲಿ ಮಾಡಲಾಗಿದೆ.

೪. ಹೆಣ್ಣಿನ ಸ್ವಾತಂತ್ರದ ಬಗ್ಗೆ ರಚಿಸಿದ ಸಂಯೋಜನಾ ಚಿತ್ರವಾಗಿದ್ದು, ಒಂದು ಪಂಜರದಲ್ಲಿ ಪಕ್ಷಿಯನ್ನು ಬಂಧಿಸಿದರೆ ಒಂದು ಹೆಣ್ಣನ್ನು ಬದುಕಿನಲ್ಲಿ ಚಿಕ್ಕವಳಿದ್ದಾಗ ತಂದೆಯ ಆಶ್ರಯದಲ್ಲಿ ಬೆಳೆಯುತ್ತಾಳೆ. ನಂತರ ಯೌವನದಲ್ಲಿ ಗಂಡನ ಆಶ್ರಯವಾಗಿದ್ದು, ಮುಪ್ಪಿನಲ್ಲಿ ಮಕ್ಕಳ ಆಶ್ರಯ ಹೀಗೆ ಅವಳ ಜೀವನ ಹೆಣ್ಣಿಗೆ ಸ್ವತಂತ್ರ ಇರುವುದೆಂದು ಕಲಾವಿದ ತನ್ನ ಕಲಾಕೃತಿಯಲ್ಲಿ ವ್ಯಕ್ತಪಡಿಸಿದದಾನೆ. ಈ ಚಿತ್ರವು ಜಲವರ್ಣ ಮಾಧ್ಯಮದಲ್ಲಿ ಚಿತ್ರಿಸಲಾಗಿದೆ. ಇದರ ಅಳತೆ ಎರಡು ಅಡಿ ಅಗಲ ಮತ್ತು ಮೂರು ಅಡಿ ಎತ್ತರವಾಗಿದ್ದು ವರ್ಣ ವಿನ್ಯಾಸವು ಸರಳವಾಗಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ತೋರುತ್ತದೆ. ಕೆಂಪು, ಕಪ್ಪು, ಬಿಳಿ, ಕಂದು ಬಣ್ಣಗಳನ್ನು ಬಳಸಿಕೊಳ್ಳಲಾಗಿದೆ.

ವಚನಧಾರಿತ ಚಿತ್ರಗಳು

ಸಂಸ್ಕೃತ ಭೂಯಿಷ್ಟವಾದ ಧಾರ್ಮಿಕ ವಿಚಾರಗಳಿಂದ ಹೊರಬಂದ ಜನಸಾಮಾನ್ಯನಿಗೆ ಹತ್ತಿರವಾದ ಆಡು ಭಾಷೆಯಾದ ಕನ್ನಡದಲ್ಲಿ ವಚನಗಳನ್ನು ರಚಿಸಿದುದಲ್ಲದೇ ಅಸ್ಪೃಶ್ಯರೆಂದು ಗುರುತಿಸಲ್ಪಟ್ಟ ಸಮಾಜದಿಂದ ತಿರಸ್ಕೃತಗೊಂಡಿದ್ದವರನ್ನು ಮೇಲೆತ್ತುವ ಯತ್ನಮಾಡಿದ ಸಮಾಜ ಸುಧಾರಕ ಬಸವಣ್ಣನವರು ಮತ್ತು ಸಮಕಾಲೀನರ ಬಗ್ಗೆ ಸಾಹಿತ್ಯ ಸೃಷ್ಟಿಯಾದಷ್ಟು ಕಲಾ ಸೃಷ್ಟಿಯಾಗಲಿಲ್ಲ. ಈ ದಿಶೆಯಲ್ಲಿ ನಮ್ಮ ಕಲಾವಿದರು ಹೆಚ್ಚಾಗಿ ಚಿಂತಿಸಲಿಲ್ಲವೆಂಬ ಕೊರಗು ಅವರ ಸಂದರ್ಶನದ ಸಂದರ್ಭದಲ್ಲಿ ಶಿವಲಿಂಗಪ್ಪನವರು ವ್ಯಕ್ತಪಡಿಸಿದರು.

[illegible]

[illegible]

[illegible]

ಈ ದಿಸೆಯಲ್ಲಿ ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆಯೇ ಮನೆ ಮನೆಗೂ ವಚನ ಸಾಹಿತ್ಯವನ್ನೊಳಗೊಂಡ ಶುಭಾಷಯ ಪತ್ರ ಬಸವ ಜಯಂತಿ ಸಂದರ್ಭದಲ್ಲಿ ತಲುಪಬೇಕೆಂಬ ಆಶಯವನ್ನಿಟ್ಟುಕೊಂಡು ರಚಿಸಿ, ಮುದ್ರಣ ವಿಧಾನವಾದ ಲೈನ್‌ಬ್ಲಾಕ್, ಹಾಫ್ ಟೋನ್ ಬ್ಲಾಕ್‌ನಿಂದ ಮಾಡಿದವುಗಳಾಗಿವೆ. ಕನ್ನಡದ ವಚನ ಮತ್ತು ಅದಕ್ಕೆ ಸೂಕ್ತವಾದ ಇಂಗ್ಲಿಷ್ ಅನುವಾದವನ್ನೊಳಗೊಂಡು ಕಳಿಸುವವರ ವಿಳಾಸ ಬರೆಯಲು ಸ್ಥಳ, ಮತ್ತೆ ಕಳಿಸಲಿಕ್ಕೆ ಬಸವ ಜಯಂತಿ ಶುಭಾಶಯ ಎಂಬ ಲಕೋಟೆಯ ಮುದ್ರಣವನ್ನೊಳಗೊಂಡಿರುವ ಹಲವು ನಮೂನೆಗಳಿದ್ದು. ಅಂದಿನ ಸಂದರ್ಭಕ್ಕೆ ಇದು ದಾಖಲೆಯ ಕೆಲಸವೆನ್ನಬಹುದು.

ಮಂದಸ್ಮಿತ ಮೊಗದ ಬಸವಣ್ಣನವರ ಚಿತ್ರವನ್ನು ರೇಖೆಗಳಲ್ಲಿ ಚಿತ್ರಿಸಿ ಅದನ್ನು ಲೈನ್ ಬ್ಲಾಕ್ ಮೂಲಕ ವಿವಿಧ ವರ್ಣಗಳಲ್ಲಿ ಮುದ್ರಿಸಿದ್ದಾರೆ. ಕೂಡಲಸಂಗಮ ದೇವಾಲಯ, ಐಕ್ಯ ಮಂಟಪ, ಅಕ್ಕಮಹಾದೇವಿ, ಅಲ್ಲಮ, ಸಿದ್ಧರಾಮ ಇವರುಗಳನ್ನು ಕುರಿತಂತೆ ಚಿತ್ರಗಲಿದ್ದು ಶುಭಾಶಯವೆಂಬ ಶೀರ್ಷಿಕೆಯನ್ನು ಒಳಗೊಂಡಿದೆ. ಆದರೆ ಉತ್ತಮ ಪ್ರೋತ್ಸಾಹ ಸಮಾಜದಿಂದ ದೊರಕಲಿಲ್ಲವೆಂಬ ಕೊರಗು ಅವರ ಮಾತಿನಲ್ಲಿ ವ್ಯಕ್ತವಾಗುವುದಾದರೂ, ಅವರೇ ಕೊಡುವ ಮತ್ತೊಂದು ವಿಶ್ಲೇಷಣೆ, ಸಮಾಜ ಹೊಸತನ್ನು ಸವಈಕರಿಸುವುದಕ್ಕೆ ಕಾಲಾವಕಾಶಬೇಕು. ಇನ್ನಿತರ ಸಮಾಜದಂತೆ ಬೆಳೆಯಬೇಕಾದರೆ ಕ್ರಿಶ್ಚಿಯನ್ ಮತ್ತಿತರ ಸಮಾಜ ಹೇಗೆ ಮುದ್ರಿಸಿ ಪ್ರಚಾರ ಪಡಿಸುತ್ತಾರೆ. ನಮ್ಮಲ್ಲಿ ಏಕೆ ಆಗುತ್ತಿಲ್ಲವೆಂಬ ವಿಚಾರ ಮಾಡುವ ಬೌದ್ಧಿಕ ಶಕ್ತಿ ಸಮಾಜದಲ್ಲಿ ಬೆಳೆಯಬೇಕು. ಆ ನಿಟ್ಟಿನಲ್ಲಿ ನಮ್ಮ ಸಮಾಜ ಚಿಂತಿಸಿಲ್ಲವಾದ್ದರಿಂದ ಪ್ರೋತ್ಸಾಹ ನಿರೀಕ್ಷಿತ ಮಟ್ಟದಲ್ಲಿ ದೊರಕಲಿಲ್ಲವೆನ್ನುತ್ತಾರೆ.

ಆದರೆ ಅವರ ಕಲೋಪಾಸನೆಯ ಆಸೆಯೆಂಬ ಮರ ಮತ್ತೆ ಮತ್ತೆ ಚಿಗುರೊಡೆಯುತ್ತದೆ ಎಂಬುದಕ್ಕೆ ಸಾಕ್ಷಿಯಾಗಿ ಇತ್ತೀಚೆಗೆ ವಚನಾಧಾರಿತ ಚಿತ್ರಗಳನ್ನು ಅವರು ರಚಿಸಿ ಪುಸ್ತಕ ರೂಪದಲ್ಲಿ ಮುದ್ರಣ ಮಾಡಿ ಪ್ರಕಟಿಸಿದ್ದಾರೆ. ಸಾಮಾಜಿಕ ಚಿಂತನೆಯುಳ್ಳ ವಚನಗಳನ್ನೇ ಆರಿಸಿ ಜನಸಾಮಾನ್ಯನಿಗೆ ಅದರಲ್ಲೂ ಮಕ್ಕಳಿಗೆ ಅರ್ಥವಾಗುವಂತೆ ಚಿತ್ರ ರಚಿಸಿರುವುದಲ್ಲದೇ ಅದರರ್ಥವನ್ನೂ ತಾವು ಬರೆದ ಚಿತ್ರದ ಸ್ವರೂಪವನ್ನೂ ವಿಶ್ಲೇಷಿಸಿದ್ದಾರೆ.

೧. ಈ ಸಂಯೋಜನಾ ಕಲಾಕೃತಿಯೂ ವಚನ ಸಾಹಿತ್ಯಧಾರಿತ ಮೇಲೆ ರಚಿಸಿದ ಚಿತ್ರವಾಗಿದೆ. ಬಳಸಿದ ಮಾಧ್ಯಮ ತೈಲವರ್ಣವಾಗಿದೆ. ಅಕ್ಕಮಹಾದೇವಿ ಬರುವ ಹಾದಿಯಲ್ಲಿ ಕ್ರೂರ ಮೃಗಗಳು ಮತ್ತು ಸಾಧು ಪ್ರಾಣಿಗಳು ಹೋಗುವ ಹಾದಿಯಲ್ಲಿ ಅಕ್ಕಮಹಾದೇವಿಯನ್ನು ಸ್ವಾಗತ ಬಯಸುವ ಒಂದು ಸನ್ನಿವೇಶ ಕಲಾವಿದನ ದೃಷ್ಟಿಯಲ್ಲಿ ಕಾಲ್ಪನಿಕವಾಗಿ ರಚಿತವಾದ ಚಿತ್ರವಾಗಿದೆ. ಬಳಸಿದ ಕ್ಯಾನವಾಸ್‌ನ ಅಳತೆ ೩೪ ಅಡಿಯ ಸಂಯೋಜನಾ ಚಿತ್ರದಲ್ಲಿ ತೈಲವರ್ಣಗಳಾಗಿ ಕಪ್ಪು, ಬಿಳಿ, ಹಸಿರು, ನೀಲಿ, ಕಂದು, ಕೆಂಪು, ಕೆಸರಿ ಬಣ್ಣಗಳನ್ನು ಬಳಸಲಾಗಿದೆ.

೨. “ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ ಎನಗಾಯಿತಯ್ಯಾ
ಅಕಟಕಟಾ ಸಂಸಾರ ವೃಥಾ ಹೋಯಿತಲ್ಲಾ...
ಕರ್ತುವೆ ಕೂಡಲಸಂಗಮದೇವಾ
ಇವ ತಪ್ಪಿಸಿ ಎನ್ನ ರಕ್ಷಿಸಯ್ಯಾ”.[೪]

ಈ ಎಲ್ಲಾ ಪ್ರಜಾ ಸಂಸಾರದ ದಂದುಗದಲ್ಲಿ ನಾನು ಕಪ್ಪೆಯ ಹಾವಿನ ಹೆಡೆಯ ನೆರಳಿನಲ್ಲಿ ಸುಖವಾಗಿದ್ದಂತೆ ಇದ್ದೇನೆ. ನನ್ನ ಸುತ್ತಮುತ್ತಲಿನ ರಾಜ್ಯದ ಒಡನಾಟದ ಜನ. ಹಾವು ಯಾವಾಗ ಬೇಕಾದರೂ ನುಂಗುವಂತೆ ನನ್ನನ್ನು ನುಂಗಬಹುದು. ನನ್ನ ಈ ಸಂಕಷ್ಟದಿಂದ ಪಾರುಮಾಡು ಎಂದು ತಮ್ಮ ಆರಾಧ್ಯ ದೈವ ಕೂಡಲ ಸಂಗಮದೇವಾನಲ್ಲಿ ಮೊರೆ ಹೋಗುತ್ತಾರೆ.

೩. ನೀರ ಕಂಡಲ್ಲಿ ಮುಳುಗುವರಯ್ಯಾ
ಮರವ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲದ ಒಣಗುವ ಮರವ
ಮೆಚ್ಚಿದವರು ನಿಮ್ಮನೆತ್ತ ಬಲ್ಲರು
ಕೂಡಲ ಸಂಗಮದೇವಾ.

ಈ ವಚನದ ಅರ್ಥ ಜನರು ನೀರು ಕಂಡಲ್ಲಿ ಮುಳುಗುತ್ತಾರೆ. ಮರಗಳು ಕಂಡಲ್ಲಿ ಪೂಜಿಸುತ್ತಾರೆ. ಮತ್ತು ಸುತ್ತುತ್ತಾರೆ. ಆದರೆ ಇದರಿಂದ ಮಾಡಿದ ಪಾಪ ಹೋದಿತೆ ಮತ್ತು ದೇವರನ್ನು ಕಾಣಲು ಸಮಾಜಕ್ಕೆ ಹಿತವಾಗಿ ನಡೆದುಕೊಳ್ಳುವ ಸದ್ಗುಣ ಸದಾಚಾರವನ್ನು ಮನುಷ್ಯ ಅಳವಡಿಸಿಕೊಳ್ಳಬೇಕು ಎನ್ನುವ ಅರ್ಥ.

ಮಾಧ್ಯಮ ಜಲವರ್ಣದಿಂದ ಪೋಸ್ಟರ್ ಕಲರ್‌ಗಳಿಂದ ಚಿತ್ರಿಸಲಾಗಿದೆ. ಅಳತೆ ಎರಡೂವರೆ ಅಗಲ, ಮೂರು ಅಡಿ ಎತ್ತರವನ್ನು ಹೊಂದಿದೆ.

೪. “ಎನಿಸು ಕಾಲ ಕಲ್ಲು ನೀರೊಳಗಿದ್ದರೇನು
ನೆನೆದು ಮೃದುವಾಗಬಲ್ಲದೇ?
ಎನಿಸು ಕಾಲ ನಿಮ್ಮ ಪೂಜಿಸಿ ಏನೆನಯ್ಯಾ
ಮನದಲ್ಲಿ ದೃಢವಿಲ್ಲದನ್ನಕ್ಕೆ?
ನಿಧಾನವ ಕಾಯ್ದಿರ್ದಬೆಂತರನಂತೆ
ಆದರ ವಿಧಿ ಏನಗಾಯಿತ್ತು ಕೂಡಲಸಂಗಮ ದೇವಾ”.[೫]

---

೪. ಎಲ್. ಶಿವಲಿಂಗಪ್ಪ, ವಚನಗಳಿಗೆ ದೃಶ್ಯರೂಪ, ಸಚಿತ್ರ ಲೇಖನ ಪು. ೮
೫. ಅದೇ. ಪು. ೯

ಇದರಾರ್ಥ ನಾವು ಮಾಡುವ ಪೂಜೆ ಹೇಗಿದೆ ಅಂದರೆ ಕಲ್ಲು ನೂರಾರು ವರ್ಷ ನೀರಿನಲ್ಲಿದ್ದರೂ ಅದು ತನ್ನ ಗಡಸುತನವನ್ನು ಬಿಡುವುದಿಲ್ಲ. ಅದು ಮೃದುವಾಗುವುದಿಲ್ಲ. ಹಾಗೆಯೇ ಮನುಷ್ಯ ಕೂಡಾ ತನ್ನ ಪೂಜೆಯೂ ಆಗಿದೆ ಎಂಬುದು ವಚನದ ಸಾರಾಂಶ.

ಮಾಧ್ಯಮ ತೈಲವರ್ಣದಿಂದ ರಚಿಸಿದ ಚಿತ್ರವಾಗಿದ್ದು, ಇದರ ಅಳತೆ ಎರಡೂವರೆ ಅಗಲ, ಮೂರುವರೆ ಅಡಿ ಎತ್ತರವನ್ನು ಹೊಂದಿದೆ.

೫. "ಕೊಟ್ಟ ಕುದರೆಯನ್ನೇರಲರಿಯದೇ
ಮತ್ತೊಂದು ಕುದುರೆಯನ್ನೇರ ಬಯಸುವವರು
ವೀರರೂ ಅಲ್ಲ, ಧೀರರೂ ಅಲ್ಲ, ಇದು ಕಾರಣ
ನೆರೆ ಮೂರು ಲೋಕವೆಲ್ಲವೂ ಹಲ್ಲಣವ ಹೊತ್ತುಕೊಂಡು ತೊಳಲುತ್ತಾ ಇದ್ದಾರೆ
ಗುಹೇಶ್ವರನೆಂಬ ಲಿಂಗನವರೆತ್ತ ಬಲ್ಲರು?[೧]

ಈ ವಚನದ ಸಾರಾಂಶ ಅವನವನ ಕಾರ್ಯಶಕ್ತಿಗನುಗುಣವಾಗಿ ತನ್ನ ಪಾಲಿಗೆ ಬಂದ ಕೆಲಸವನ್ನು ನಿರ್ವಹಿಸದೇ ನನಗೆ ಆ ದೊಡ್ಡ ಸ್ಥಾನವಿದಿದ್ದರೆ ಕೆಲಸ ಮಾಡುತ್ತಿದ್ದೆ ಎಂದು ಹೇಳುವುದು ಕೈಲಾಗದವನ ಮಾತು. ಹಣವನ್ನು ಹೊತ್ತು ತಿರುಗುತ್ತಿದ್ದಾರೆ ಎಂಬ ಅಲ್ಲಮಪ್ರಭು ಹೇಳಿರುವುದನ್ನು ಆಸೆ ಎಂಬ ಅರ್ಥದಲ್ಲಿ ಬಳಸಿ ಚಿತ್ರಿಸಲಾಗಿದೆ. ಜಲವರ್ಣದಿಂದ ರಚಿಸಲಾಗಿದ್ದು ಇದರ ಅಳತೆ ಎರಡು ಅಡಿ ಅಗಲ, ಮೂರು ಅಡಿ ಎತ್ತರವಾಗಿದೆ.

೬. ಇವನಾರವ ಇವನಾರವ ಎಂದೆನಿಸದಿರಯ್ಯಾ
ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ
ಕೂಡಲಸಂಗಮದೇವಾ

ಈ ವಚನದ ಅರ್ಥ ಮಾನವ ಮಾನವರಲ್ಲಿ ಏಕೆ ಈ ಭೇದ ಅದು ಅವರವರ ಕೆಲಸವನ್ನು ಅವಲಂಬಿಸಿರುತ್ತದೆ. ಈ ಚಿತ್ರದ ಮಾಧ್ಯಮ ಜಲವರ್ಣದಿಂದ ಚಿತ್ರಿಸಲಾಗಿದೆ.

೭. "ಕಾಗೆ ಬಂಧುಗಳ ಕಂಡಡೆ ಕರೆಯದೆ ತನ್ನ ಬಳಗವನ್ನು
ಕೋಳಿ ಬಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಗಿಂತ ಕರಕಷ್ಟ ಕೂಡಲಸಂಗಮ ದೇವಾ".[೨]

ಮನುಷ್ಯನಾಗಿ ಹುಟ್ಟುವುದೇ ಎಲ್ಲಾ ಪ್ರಾಣಿಗಳಿಗಿಂತ ಶ್ರೇಷ್ಠ. ಅದರಲ್ಲೂ ಶಿವಭಕ್ತನಾಗಿರುವುದು ಇನ್ನು ಶ್ರೇಷ್ಠ. ಅದರೆ ಸರಳವಾಗಿ ತಾನು ನಡೆದುಕೊಂಡು ಅದೇ ಸರಳತೆಯನ್ನು ಇತರರಿಗೂ ತೋರಿಸಿ

---

೧. ಎಲ್. ಶಿವಲಿಂಗಪ್ಪ, ವಚನಗಳಿಗೆ ದೃಶ್ಯರೂಪ, ಸಚಿತ್ರ ಲೇಖನ ಪು. ೯

೨. ಅದೇ. ಪು. ೧೦

ಸಮಾಜ ಮುಖಿಯಾಗಿ ಕೆಲಸ ಮಾಡುವುದು. ಹಾಗೇ ಮಾಡದಿದ್ದರೆ ಮಾತು ಬಾರದ ಆ ಕಾಗೆ, ಕೋಳಿಗಳಿಗಿಂತ ಕೀಳು ಎಂಬ ಸುಂದರ ಉಪಮೆ ಸಹಿತ ವಚನದಲ್ಲಿ ಹೇಳಿದ್ದಾರೆ. ಈ ಚಿತ್ರದ ಮಾಧ್ಯಮ ಜಲವರ್ಣದಿಂದ ರಚಿಸಲಾಗಿದೆ.

೮. "ನೆರೆ ಕೆನ್ನೆಗೆ, ತೆರೆಗಲ್ಲಕೆ, ಶರೀರ ಗೂಡುವೋಗದ ಮುನ್ನ
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ
ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ
ಮುಪ್ಪಿಂದೊಪ್ಪವಳಿಯದ ಮುನ್ನ ಮೃತ್ಯು ಮುಟ್ಟದ ಮುನ್ನ
ಪೂಜಿಸು ಕೂಡಲ ಸಂಗಮದೇವನ".[೮]

ಈ ವಚನದ ಸಾರಾಂಶವು ಹೀಗಿದೆ ವಯಸ್ಸಿಗೆ ಅನುಗುಣವಾಗಿ ದೇಹದ ನಿತ್ರಾಣ, ಖಾಯಿಲೆಯಿಂದ ದೇಹ ಚಲನಶೀಲತೆಯನ್ನು ಕಳೆದುಕೊಳ್ಳುವಿಕೆ. ಬೆನ್ನು ಬಾಗುವುದು, ಕಣ್ಣು ಕಾಣಿಸದಿರುವುದು, ಕಿವಿ ಕೇಳದಿರುವುದು ಹೀಗೆ ಒಂದೇ ಎರಡೆ ಸಮಸ್ಯೆಗಳು ಸಾಗರದ ಅಲೆಯಂತೆ ಅಪ್ಪಳಿಸುತ್ತಿರುತ್ತವೆ ಭಾವಭಿವ್ಯಕ್ತವಾಗಿ ಪ್ರಕಟಿಸಿದೆ. ಈ ಚಿತ್ರದ ಮಾಧ್ಯಮ ಜಲವರ್ಣದಿಂದ ಚಿತ್ರಿತವಾಗಿದೆ.

ಇತ್ಯಾದಿ ದೃಷ್ಟಾಂತವಿರುವ ಅನೇಕ ವಚನಗಳನ್ನು ಆಯ್ದು ಚಿತ್ರ ರೂಪವನ್ನು ನೀಡಿದ್ದಾರೆ. ಅದಕ್ಕೊಂದು ಸುಂದರ ವಿಶ್ಲೇಷಣೆ ನೀಡಿ ಕ್ಲಿಷ್ಟ ಭಾಗವು ಸರಳವಾಗಿ ಅರ್ಥವಾಗುವಂತೆ ಮಾಡಿದ್ದಾರೆ.

ಒಟ್ಟಾರೆ ವಚನ ಚಿತ್ರಗಳನ್ನು ಗಮನಿಸಿದಾಗ ಈ ಹಿಂದೆ ಮೈಸೂರಿನ ಎಂ. ವೀರಪ್ಪನವರು ಬರೆದ ಚಿತ್ರಗಳ ನೆನಪು ಬರುತ್ತದೆ. ಪ್ರಾಯಶಃ ವಚನಗಳಿಗೆ ದೃಶ್ಯ ರೂಪ ಕೊಟ್ಟ ಮೊದಲಿಗರು ಎಂ. ವೀರಪ್ಪನವರು ಎಂದರೆ ತಪ್ಪಾಗಲಿಕ್ಕಿಲ್ಲ. ಆದರೆ ಅವರ ಚಿತ್ರಗಳು ಮುದ್ರಣ ಕಾಣದೇ ಜನಸಾಮಾನ್ಯನಿಗೆ ತಲುಪದಂತಾಗಿ ಅವರ ಕುಟುಂಬದವರ ಖಾಸಗಿ ಆಸ್ತಿಯಾಗಿಯೇ ಉಳಿದಂತೆ ತೋರುತ್ತದೆ. ಪ್ರಸಿದ್ಧ ಕಲಾವಿದರ ಎಂ.ಎ. ಚೆಟ್ಟಿ (ಗದಗ) ಎಂ.ವಿ. ಮಿಣಜಗಿ (ಹುಬ್ಬಳ್ಳಿ) ಡಿ.ವಿ. ಹಾಲಬಾವಿ (ಧಾರವಾಡ) ಇವರೆಲ್ಲರೂ ಶರಣರಿಗೆ ಸಂಬಂಧಿಸಿದಂತೆ ಅಲ್ಲಿನ ಪೂಜ್ಯರ ಚರಿತ್ರೆಯನನಲು ಆಧರಿಸಿ ಚಿತ್ರಿಸಿರುವುದು ಗೋಚರವಾಗುತ್ತದೆ. ವಚನಗಳ ಕುರಿತು ಇತ್ತೀಚೆಗೆ ಅನೇಕ ಜನ ಯುವ ಕಲಾವಿದರು ಚಿತ್ರರಚಿಸುತ್ತಿದ್ದಾರೆ. ಇಲಕಲ್ಲಿನ ಶ್ರೀ ಬಸವರಾಜ ಗವಿಮಠ ಮುಂತಾದವರು.

ಈ ದಿಸೆಯಲ್ಲಿ ಶಿವಲಿಂಗಪ್ಪನವರ ವಚನಚಿತ್ರಗಳು ಬಾಲಕರಿಗೂ, ಪಾಲಕರಿಗೂ, ಆಶಿಕ್ಷಿತರಿಗೂ ಅರ್ಥವಾಗುವಂತೆ ಚಿತ್ರಿಸಿರುವುದಲ್ಲದೇ ಸೂಕ್ತ ವಿವರಣೆಯನ್ನು ನೀಡಿ ಕಿರುಪುಸ್ತಕ ರೂಪದಲ್ಲಿ ಪ್ರಕಟಿಸಿರುವುದು ಗಮನಾರ್ಹ ಅಂಶವಾಗಿದೆ.

---

೮. ಎಲ್. ಶಿವಲಿಂಗಪ್ಪ, ವಚನಗಳಿಗೆ ದೃಶ್ಯರೂಪ, ಸಚಿತ್ರ ಲೇಖನ ಪು. ೧೧

ವಚನಆಧಾರಿತ ಚಿತ್ರಗಳು



ಚಿತ್ರ-೧



ಚಿತ್ರ-೨



ಚಿತ್ರ-೩



ಚಿತ್ರ-೪

ವಚನಆಧಾರಿತ ಚಿತ್ರಗಳು



ಚಿತ್ರ-೫



ಚಿತ್ರ-೬



ಚಿತ್ರ-೭



ಚಿತ್ರ-೮


ವಚನಆಧಾರಿತ ಚಿತ್ರಗಳು




ಚಿತ್ರ-೯



ಚಿತ್ರ-೧೦



ಚಿತ್ರ-೧೧



ಚಿತ್ರ-೧೨

ವಚನ ಆಧಾರಿತ ಚಿತ್ರಗಳು



ಚಿತ್ರ-೧೩



ಚಿತ್ರ-೧೪



ಚಿತ್ರ-೧೫

ಸಾಂದರ್ಭಿಕ ಕಥಾ ಚಿತ್ರರಚನೆ

ಕಥೆಗಳಿಗೆ ಚಿತ್ರರಚನೆ ಮಾಡುವುದೆಂದರೆ ನೈಪುಣ್ಯವನ್ನು ಬಯಸುವ ಕ್ಲಿಷ್ಟ ವಿಧಾನ. ವಾಣಿಜ್ಯ ಕಲೆಯಲ್ಲಿ ಬರುವ ಈ ವಿಧಾನದಲ್ಲಿ ಕಥಾ ಸಂದರ್ಭ ಚಿತ್ರ ರಚನಾಕಾರನಾಗ ಬಯಸುವವರು ಚೆನ್ನಾಗಿ ದೇಹದ ಆಂಗಿಕ ರಚನೆಯನ್ನು ಅರಿತಿರಬೇಕು. ಮುಖದಲ್ಲಿ ನವರಸಗಳನ್ನು ವ್ಯಕ್ತಪಡಿಸುವ ಚಿತ್ರರಚನೆ ತಿಳಿದಿರಬೇಕು. ಹತ್ತಾರು ಪುಟದ ವಿಷಯವನ್ನು ಒಂದೆರಡು ಚಿತ್ರದಲ್ಲಿ ತೋರಿಸಬೇಕು. ಒಂದು ವೇಳೆ ಧಾರಾವಾಹಿ ಕಥೆಯಾಗುವುದಾದರೆ ಒಂದೇ ತೆರನಾದ ಪಾತ್ರಗಳು ಅಥವಾ ಓರ್ವ ನಾಯಕ, ನಾಯಕಿ ಕಥೆ ತುಂಬೆಲ್ಲಾ ಬರುವುದರಿಂದ ಕಲಾವಿದ ಮೊದಲು ಬರೆದ ಆ ಮುಖವನ್ನೇ ವಿವಿಧ ಕೋನಗಳಲ್ಲಿ ಮತ್ತೆ ಮತ್ತೆ ವ್ಯತ್ಯಾಸ ಕಂಡುಬರದಂತೆ ಬರೆಯಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಯಾವ ಪತ್ರಿಕೆಗೆ ಬರೆಯುವಿರೋ ಆ ಪತ್ರಿಕೆಯ ಪುಟದ ಉದ್ದಗಲಕ್ಕೆ ಅನುಗುಣವಾಗಿ, ಸಂಪಾದಕರ ಸಲಹೆ ಮೇರೆಗೆ ಸ್ಥಳಾವಕಾಶ ನೀಡಿರುವಷ್ಟಕ್ಕೆ ಮಾತ್ರ ಚಿತ್ರವನ್ನು ಸೀಮಿತಗೊಳಿಸಿ ಉತ್ತಮ ತಲೆಬರಹದೊಂದಿಗೆ ನಿಗದಿಯಾದ ಸಮಯದೊಳಘೆ ಮಾಡಿಕೊಡಬೇಕು. ಇಡೀ ಕತೆಯ ಸಾರಾಂಶ ಅದರಲ್ಲಿ ಅಡಗಿರಬೇಕು. ಆಕರ್ಷಣೀಯವಾಗಿರಬೇಕು. ಮುದ್ರಣಕ್ಕೆ ಅನುಕೂಲವಾಗುವಂತೆ ರೇಖಾಚಿತ್ರವಾಗಲೀ, ಬಣ್ಣದ ಚಿತ್ರವಾಗಲೀ ಬರೆಯಬೇಕು. ಮುದ್ರಿಸುವಾಗ ವ್ಯತ್ಯಯ ಆಗದಂತೆ ಕಲಾವಿದ ಅಲ್ಲಲ್ಲಿ ಸಲಹೆ ನೀಡಿ ಒಟ್ಟಾರೆ ಕತೆಗೆ ಪೂರಕವಾಗಿ ಹೊರಹೊಮ್ಮಬೇಕು. ಈ ಎಲ್ಲಾ ನಿಯಮಗಳಿಗೆ ಬದ್ಧರಾಗಿದ್ದುಕೊಂಡು, ಶಿವಲಿಂಗಪ್ಪನವರು ಲೋಕವಾಣಿ ದಿನಪತ್ರಿಕೆ, ಪ್ರಜಾಮತ, ವಾರದ ಆರಂಭ, ಮಂಗಳ ವಾರಪತ್ರಿಕೆಗಳಲ್ಲಿ ಅಲ್ಲದೆ ಮಲ್ಲಿಗೆ ಎಂಬ ಮಾಸ ಪತ್ರಿಕೆಗೂ ಸಾಕಷ್ಟು ಕೆಲಸ ಮಾಡಿದ್ದಾರೆ.

೧. ಸಾಂದರ್ಭಿಕ ಕಥಾ ಚಿತ್ರದಲ್ಲಿ ಬರುವ ಸನ್ನಿವೇಶವೆಂದರೆ ಹೆಣ್ಣಿನ ಜೀವನದಲ್ಲಿ ನಡೆಯುತ್ತಿರುವ ಘಟನೆಗಳನ್ನು ಕಲಾವಿದ ಸಾಹಿತ್ಯದಲ್ಲಿ ಬರುವಂತಹ ವಿಷಯವನ್ನು ಕಾಲ್ಪನಿಕವಾಗಿ ರಚಿಸುವುದು ಕಂಡುಬರುತ್ತದೆ. ಹೆಣ್ಣು ತನ್ನ ಬದುಕಿನಲ್ಲಿ ಹಲವಾರು ಸಮಸ್ಯೆಗಳಿಗೆ ಸಿಲುಕಿ ಎಲ್ಲಾ ಕಷ್ಟಗಳು ಅನುಭವಿಸಿ ಜೀವನದ ಬಂಡಿಯನ್ನು ಎಳೆಯುತ್ತಾಳೆ. ಕಲಾವಿದ ತನ್ನ ರೇಖೆಯ ಮೂಲಕ ಚಿತ್ರದಲ್ಲಿ ಬರುವ ಸನ್ನಿವೇಶಗಳನ್ನು ಚಿತ್ರಿಸಿದ್ದಾರೆ. ಚಿತ್ರದ ಮಾಧ್ಯಮ ರೇಖೆಗಳು ಮತ್ತು ಕಪ್ಪು ಬಣ್ಣಗಳಿಂದ ಚಿತ್ರಿತವಾಗಿದೆ.

೨. ಸಂಸಾರವೆಂಬ ಬಂಧನದಲ್ಲಿ ಸಿಲುಕಿಕೊಂಡು ಗಂಡನ ಪ್ರೀತಿಯು ಸಿಗದೆ ಯಾವ ಸಂಪತ್ತನ್ನು ಕಾಣದೆ ತನ್ನ ಜೀನವನ್ನು ಕಣ್ಣೀರಿನಲ್ಲಿ ತೋಳೆಯುತ್ತಾಳೆ. ತಾನು ನಡೆಯುವ ಹಾದಿಯಲ್ಲಿ ಕಲ್ಲು, ಮುಳ್ಳುಗಳನ್ನು ಲೇಖಿಸದೆ ತನ್ನ ಬದುಕನ್ನು ಸಾಗಿಸುತ್ತಾಳೆ. ಈ ಚಿತ್ರವನ್ನು ನೋಡಿದರೆ ಹೆಣ್ಣಿಗೆ ಇರುವ ತಾಳ್ಮೆಯ ಬಗ್ಗೆ ತಿಳಿಯುತ್ತದೆ. ಚಿತ್ರದ ಮಾಧ್ಯಮ ರೇಖೆಯ ಮುಖಾಂತರ ಬಣ್ಣವನ್ನು ಬಳಸಲಾಗಿದೆ.

೩. ಕಾಡು ಬೆಳೆಸಿ ನಾಡು ಉಳಿಸಿ ಎನ್ನುವ ಪದವು ಬೇರೆಯಾಗಿ ಕಾಡು ಉರುಳಿಸಿ ನಾಡು ಬೆಳೆಸಿ ಎನ್ನುವ ಪದ ಈಗ ಚಾಲ್ತಿಯಲ್ಲಿದೆ. ಕಾಡು ನಮ್ಮ ಜೀವನದ ಒಂದು ಭಾಗ ಎಂಬಂಥೆ ಕಲಾವಿದನು ತನ್ನ ಕುಂಚದ ಪ್ರಭಾವದಿಂದ ಕಾಡು ಬೆಳೆಸಿ ಎನ್ನುವ ಸಾಂದರ್ಭಿಕ ಕಥಾ ಚಿತ್ರವನ್ನು ಜನ ಸಾಮಾನ್ಯರಿಗೆ ಅರ್ಥವಾಗುವಂತೆ ಚಿತ್ರಿಸಿದ್ದಾನೆ. ಚಿತ್ರದ ಮಾಧ್ಯಮ ರೇಖೆಗಳಿಂದಳೊಗೊಂಡ ಕಪ್ಪು ಬಣ್ಣವನ್ನು ಬಳಸಲಾಗಿದೆ.

೪. ಕಡು ಬಡತನದಲ್ಲಿ ತನ್ನ ಬದುಕನ್ನು ಸಾಗಿಸುತ್ತಿರುವ ಮಹಿಳೆಯರ ಒಂದು ಗೋಳಿನ ಕಥೆ. ಹೊಟ್ಟೆಗೆ ಹಿಟ್ಟು ಇಲ್ಲದೆ ಬದುಕುತ್ತಿರುವ ಹಾಗೂ ಮೈಮೇಲೆ ತುಂಡು ಬಟ್ಟೆ ಇಲ್ಲದೆ ಜೀವಿಸುತ್ತಿರುವ ಬದುಕು ಒಂದು ಬದುಕೇ ಎನ್ನುವ ಪ್ರಶ್ನೆ ಈ ಸನ್ನಿವೇಶದಲ್ಲಿ ಕಲಾವಿದ ತನ್ನ ಕಲ್ಪನಾ ಶಕ್ತಿಯಿಂದ ಸಾಂದರ್ಭಿಕ ಚಿತ್ರವನ್ನು ಚಿತ್ರಿಸಿದ್ದಾನೆ. ಈ ಚಿತ್ರದ ಮಾಧ್ಯಮ ರೇಖೆಗಳನ್ನೊಳಗೊಂಡ ಮತ್ತು ಕಪ್ಪು ಬಣ್ಣಗಳಿಂದ ಅವುಗಳ ಹಾವಬಾವಗಳನ್ನು ಕಾಣಬಹುದು.


೫. ಸಾಂದರ್ಭಿಕ ಕಥಾ ಚಿತ್ರವಾಗಿ ಚಿತ್ರಿಸುವಲ್ಲಿ ಒಬ್ಬ ಭಿಕ್ಷುಕನ ಸನ್ನಿವೇಶವನ್ನು ತೋರುತ್ತದೆ. ಭಿಕ್ಷುಕನ ಜೀವನ ಮತ್ತು ಬದುಕಿನ ನಡುವೆ ಇರುವ ಸಂಬಂಧವನ್ನು ಚಿತ್ರದ ಮುಖಾಂತರ ಕಂಡುಬರುತ್ತದೆ. ಮಾಧ್ಯಮ ಕಪ್ಪು ಮತ್ತು ರೇಖೆಗಳಿಂದ ಕೂಡಿದ ಚಿತ್ರವಾಗಿದೆ.

೬. ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ ಎನ್ನುವ ಗಾದೆ ಇದೆ. ಹೆಣ್ಣು ಜೀವನದಲ್ಲಿ ಏನಾದರೂ ಸಾಧಿಸಬೇಕು ಎಂದು ಕೊಂಡರೆ ಅವಳು ಏನಾದರೂ ಅಗಲಿ ಸಾಧಿಸಿ ತೋರಿಸುತ್ತಾಳೆ. ಹೆಣ್ಣಿಗೆ ಅಷ್ಟೇ ಭಯವನ್ನು ಇದೆ. ಅಷ್ಟೇ ಧೈರ್ಯವು ಇದೆ ಹೆಣ್ಣಿನ ಗಂಭಿರವಾದ ದೃಶ್ಯವನ್ನು ಕಲಾವಿದ ಈ ಚಿತ್ರದಲ್ಲಿ ರಚಿಸಿದ್ದಾನೆ. ಮಾಧ್ಯಮ ರೇಖೆಗಳನ್ನೊಳಗೊಂಡ ಮತ್ತು ಕಪ್ಪು ಬಣ್ಣಗಳಿಂದ ಅವುಗಳ ಹಾವಬಾವಗಳನ್ನು ಕಾಣಬಹುದು.


೭. ಈ ಚಿತ್ರದಲ್ಲಿ ಕಂಡುಬರುವ ಭಾವಚಿತ್ರವು ಒಬ್ಬ ಬ್ರಾಹ್ಮಣನು ತನ್ನ ಜೀವನದಲ್ಲಿ ಆಗುಹೋಗುವ ಸನ್ನಿವೇಶಗಳನ್ನು ಸಾಂದರ್ಭಿಕ ಕಥಾ ಚಿತ್ರಗಳಲ್ಲಿ ಕಲಾವಿದ ಬಳಸಿಕೊಂಡಿದ್ದಾನೆ. ಈ ಚಿತ್ರದ ಮಾಧ್ಯಮ ಕಪ್ಪು, ಬಿಳಿ, ಕೆಂಪು ವರ್ಣಗಳನ್ನು ಬಳಸಿಕೊಳ್ಳಲಾಗಿದೆ.

೮. ಒಂದು ಹೆಣ್ಣಿನ ಶೋಷಣೆಯ ಬಗ್ಗೆ ಬರೆದ ಸಾಂದರ್ಭಿಕ ಕಥಾ ಚಿತ್ರವಾಗಿ ಕಲಾವಿದನು ಚಿತ್ರಿಸಿದ್ದಾನೆ. ಹೆಣ್ಣಿನ ಬದುಕಿನಲ್ಲಿ ನಡೆಯುವ ಕಷ್ಟು, ಸುಖ, ದುಃಖದ ಸನ್ನಿವೇಶಗಳನ್ನು ಕುಂಚದ ಕಲೆಯಿಂದ ಸುಂದರವಾಗಿ ರಚಿಸಲಾಗಿದೆ. ಈ ಚಿತ್ರದ ಮಾಧ್ಯಮವು ಬಿಳಿ, ಕಪ್ಪು ಬಣ್ಣಗಳು, ರೇಖೆಗಳನ್ನು ಅಳವಡಿಸಿಕೊಂಡು ಚಿತ್ರಿಸಲಾಗಿದೆ.

ಸಾಂದರ್ಭಿಕ ಕಥಾ ಚಿತ್ರಗಳು



ಚಿತ್ರ-೧



ಚಿತ್ರ-೨



ಚಿತ್ರ-೩



ಚಿತ್ರ-೪


ಸಾಂದರ್ಭಿಕ ಕಥಾ ಚಿತ್ರಗಳು



ಚಿತ್ರ-೫



ಚಿತ್ರ-೬



ಚಿತ್ರ-೭



ಚಿತ್ರ-೮


ಸಾಂದರ್ಭಿಕ ಕಥಾ ಚಿತ್ರಗಳು



ಚಿತ್ರ-೯




ಚಿತ್ರ-೧೦



ಚಿತ್ರ-೧೧

ಸಾಂದರ್ಭಿಕ ಕಥಾ ಚಿತ್ರಗಳು



ಚಿತ್ರ-೧೨



ಚಿತ್ರ-೧೩



ಚಿತ್ರ-೧೪

ಭಾವಚಿತ್ರಗಳು

೧. ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರ ಒಂದು ಭಾವಚಿತ್ರದಲ್ಲಿ ಮಾಸ್ತಿಯವರ ನೈಜತೆಯನ್ನು ಕಲಾವಿದ ತನ್ನ ಭಾವಪೂರಕವಾಗಿ ರಚಿಸುವುದಕ್ಕೆ ಪ್ರಯತ್ನ ಮಾಡಿದ್ದಾನೆ. ಈ ಕಲಾಕೃತಿಯ ಮಾಧ್ಯಮ ಕಪ್ಪು, ಬಿಳುಪು ವರ್ಣದಿಂದ ಚಿತ್ರಿಸಲಾಗಿದೆ.

೨. ದ.ರಾ. ಬೇಂದ್ರೆಯವರ ಭಾವಚಿತ್ರ ಇದಾಗಿದ್ದು ಈ ಚಿತ್ರದಲ್ಲಿ ಬೇಂದ್ರೆಯವರ ನಗುಮುಖದಲ್ಲಿರುವ ಭಾವನೆಗಳನ್ನು ಕಲಾವಿದ ತನ್ನ ಕೈಚಳಕದಿಂದ ಚಿತ್ರಿಸುವಲ್ಲಿ ಸಫಲನಾಗಿದ್ದಾನೆ. ಬೇಂದ್ರೆಯವರು ಧರಿಸಿದ ವಸ್ತ್ರವನ್ನು ಮತ್ತು ಮುಖದ ರೂಪರೇಶೆಗಳನ್ನು ಪೆನ್ಸಿಲ್ ಮತ್ತು ಕಪ್ಪು ಬಣ್ಣದಿಂದ ಚಿತ್ರಿಸಲಾಗಿದೆ.

೩. ವ್ಯಕ್ತಿಯೊರ್ವನ ಭಾವಚಿತ್ರವಾಗಿದ್ದು, ನಗುಮುಖವಾಗಿ ಕಂಡುಬರುವ ಚಿತ್ರ ಇದಾಗಿದೆ. ಬಳಸಿದ ವರ್ಣಗಳು ವಿಂಗಡಣೆಯನ್ನು ಮಾಡಿಕೊಂಡು ಕಲಾವಿದ ತನ್ನ ಮನೋಭಾವದಿಂದ ರಚಿಸಿದ ಈ ಚಿತ್ರದಲ್ಲಿ ಬಳಸಿದ ಬಣ್ಣಗಳು ಹಾಗೂ ಮಾಧ್ಯಮ ಕಂದು, ಕೆಂಪು, ಕಪ್ಪು, ಬಿಳಿ, ಕೇಸರಿ, ನೀಲಿ ವರ್ಣಗಳನ್ನು ಬಳಸಿದರೆ ಈ ಚಿತ್ರದಲ್ಲಿ ಕಂಡುಬರುವ ಕಣ್ಣು ಮೂಗು ತುಟಿಗಳು ಅತಿ ನೈಜವಾಗಿ ರಚಿಸಿ ಪ್ರಮುಖವಾಗಿ ಕಂಡುಬರುವ ವಿಷಯವಾಗಿ ರೂಪಿತವಾಗಿದೆ.

೪. ಸ್ವಾಮಿ ವಿವೇಕಾನಂದ ಅವರ ಒಂದು ಭಾವಚಿತ್ರವಾಗಿದ್ದು, ಮುಖದ ಲಕ್ಷಣ, ಶಾಂತ ಸ್ವರೂಪದಲ್ಲಿ ಕಾಣುವಂತೆ ಮತ್ತು ಇವರು ಧರಿಸಿದ ವಸ್ತ್ರ ತಲೆಯ ಮೇಲೆ ಇರುವ ಪೇಟಾ ಕಣ್ಣುಗಳು, ದುಂಡಾಗಿರುವ ಮುಖದಲ್ಲಿ ತೇಜಸ್ಸು ನೋಡುವವರನ್ನು ಮನ ಸೂರೆಗೊಳ್ಳುತ್ತದೆ. ಬಳಸಿದ ಮಾಧ್ಯಮ ಪೆನ್ಸಿಲ್ ಪೌಡರ್ ಮತ್ತು ಪೋಸ್ಟರ್ ಕಲರ್, ಇಂಡಿಯನ್ ಇಂಕ್‌ಗಳನ್ನು ಬಳಸಿ ಕಲಾವಿದ ಈ ಭಾವಚಿತ್ರವನ್ನು ಒಲಿಸಿಕೊಂಡಂತೆ ಚಿತ್ರಿಸಿದ್ದಾನೆ.

೫. ವ್ಯಕ್ತಿಯೋರ್ವರ ಭಾವಚಿತ್ರವಾಗಿದ್ದು, ಪ್ರಮುಖವಾದ ಲಕ್ಷಣಗಳಲ್ಲಿ ಮುಖದ ಲಕ್ಷಣ, ತೊಟ್ಟಿರುವ ವಸ್ತ್ರ ಹಾಗೂ ತಲೆಯ ಮೇಲೆ ಇರುವ ಟೊಪಿಗೆಯನ್ನು ಕಲಾವಿದ ತನ್ನ ಕುಂಚದ ಪ್ರಭಾವದಿಂದ ರಚಿಸಿದ್ದಾರೆ. ಬಳಸಿದ ಮಾಧ್ಯಮ ಕೆಂಪು, ಕೆಸರಿ, ಕಂದು ಮತ್ತು ಕಪ್ಪು ವರ್ಣಗಳು.

೬. ಶ್ರೀ ಬಸವಣ್ಣನವರ ಭಾವಚಿತ್ರವಾಗಿದ್ದು, ಮುಖದ ಭಾವನೆಯಲ್ಲಿ ಸರಳತೆ ಹಾಗೂ ಮುಗ್ಧತೆಯನ್ನು ನಿರೂಪಿಸುವಲ್ಲಿ ಕಲಾವಿದ ಬಸವಣ್ಣನವರು ಧರಿಸಿದ ವಸ್ತು ಮತ್ತು ಕೊರಳಲ್ಲಿ ಧರಿಸಿಕೊಂಡ ರುದ್ರಾಕ್ಷಿ, ಲಿಂಗಮಾಲೆ, ತಲೆಯ ಮೇಲೆ ಧರಿಸಿದ ಕೀರಿಟವನ್ನು ತನ್ನ ಕೈಚಳಕದಿಂದ ಪ್ರಯತ್ನಿಸಿದ್ದಾನೆ. ಮಾಧ್ಯಮ ತೈಲವರ್ಣದಿಂದ ರಚಿಸಿದ ಚಿತ್ರವಾಗಿದೆ. ಬಳಸಿದ ಬಣ್ಣಗಳು ಕೆಸರಿ, ಕೆಂಪು, ಕಪ್ಪು, ಬಿಳಿ, ನೀಲಿ ಬಣ್ಣಗಳು.

೭. ವ್ಯಕ್ತಿಯೊರ್ವನ ಭಾವಚಿತ್ರವಾಗಿದ್ದು, ಈ ಚಿತ್ರದಲ್ಲಿ ಮುಖ್ಯವಾಗಿ ಕಂಡುಬರುವ ಮುಖದ ಲಕ್ಷಣ ಮತ್ತು ಕುಳಿತಿರುವ ಗಾಂಭಿರ್ಯವನ್ನು ಕಲಾವಿದ ಚಿತ್ರದ ಮೂಲಕ ವ್ಯಕ್ತಪಡಿಸಿದ್ದಾನೆ. ಮುಖದಲ್ಲಿ ಮೂಡಿರುವ ಕಣ್ಣು ಮತ್ತು ಮೂಗು ಮುಖದ ಭಾವನೆಗಳನ್ನು ಅತಿ ಸುಂದರವಾಗಿ ಚಿತ್ರಿಸಿದ್ದಾನೆ. ಚಿತ್ರದ ಮಾಧ್ಯಮ ಜಲವರ್ಣದಿಂದ ರಚಿಸಿದೆ. ಬಳಸಿದ ವರ್ಣಗಳು ಕೆಸರಿ, ಕೆಂಪು, ಕಪ್ಪು, ಕಂದು, ನೀಲಿ, ಹಳದಿ ಬಣ್ಣಗಳಾಗಿವೆ.

೮. ದೇಶದ ಮೊಟ್ಟಮೊದಲ ಪ್ರಧಾನಿ ಮಂತ್ರಿಯವರಾದ ಜವಾಹರಲಾಲ ನೆಹರು ಅವರ ಭಾವಚಿತ್ರವಾಗಿದ್ದು, ಈ ಚಿತ್ರವು ಛಾಯಾಚಿತ್ರದಿಂದ ರಚಿಸಲಾಗಿದೆ. ಈ ಚಿತ್ರದ ಮುಖದ ಭಾವನೆ ನಗುಮುಖದಲ್ಲಿರುವ ಮಂದಸ್ಮಿತವನ್ನು ತೋರುತ್ತದೆ. ತಲೆಯ ಮೇಲೆ ಚಾಚಾ ಟೋಪಿ ಮತ್ತು ಅವರು ಧರಿಸಿದ ವಸ್ತ್ರವನ್ನು ಕೊಟಿನ ಮೇಲೆ ಇರಿಸಿದ ಗುಲಾಬಿ ಹೂವು ಕಲಾವಿದ ಅತ್ಯುತ್ತಮವಾಗಿ ರಚಿಸಿದ್ದಾನೆ. ಈ ಚಿತ್ರಕ್ಕೆ ಬಳಸಿದ ಮಾಧ್ಯಮ ಕಪ್ಪು ಮತ್ತು ಬಿಳುಪು ಎರಡು ಬಣ್ಣಗಳಿಂದ ಚಿತ್ರಿಸಲಾಗಿದೆ.


೯. ಸ್ವಾಮಿ ವಿವೇಕಾನಂದರ ಭಾವಚಿತ್ರವಾಗಿದ್ದು, ಮುಖದ ಲಕ್ಷಣವು ಸರಳತೆ, ಮುಗ್ಧತೆಯನ್ನು ತೋರಿಸುವಲ್ಲಿ ಕಲಾವಿದ ಉತ್ತಮ ರೀತಿಯಲ್ಲಿ ಕಾರ್ಯವನ್ನು ಪೂರ್ಣಗೊಳಿಸಿದ್ದಾನೆ. ಮುಖ್ಯವಾಗಿ ಕಂಡುಬರುವ ಮುಖದ ಕಾಂತಿ, ಕಣ್ಣಿನಲ್ಲಿರುವ ತೇಜಸ್ಸು ಅತಿ ಮೋಹಕವಾಗಿ ಬಿಂಬಿಸುವಂತೆ ಪ್ರಯತ್ನಿಸಿ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ಬಳಸಿದ ಮಾಧ್ಯಮ ತೈಲವರ್ಣದಿಂದ ರಚಿಸಿದ ಚಿತ್ರವಾಗಿದ್ದು, ಕೆಂಪು, ಕಪ್ಪು, ನೀಲಿ, ಕೆಸರಿ, ಬಿಳಿ, ಕಂದು ವರ್ಣಗಳನ್ನು ಬಳಸಲಾಗಿದೆ.

೧೦. ವ್ಯಕ್ತಿಯೊರ್ವರ ಭಾವಚಿತ್ರವಾಗಿದ್ದು ಈ ಚಿತ್ರದಲ್ಲಿ ಕಂಡುಬರುವ ಅಂಶವು ಮುಸ್ಲಿಂ ಸಮಾಜದ ವ್ಯಕ್ತಿಯ ಚಿತ್ರವಾಗಿದ್ದು, ಮುಖ ಲಕ್ಷಣವು ಗಾಂಭಿರ್ಯ ಹಾಗೂ ಧರಿಸಿರುವ ವಸ್ತ್ರ ತಲೆಯ ಮೇಲೆ ಟೊಪ್ಪಿಗೆ ವಸ್ತ್ರದ ಫಿಟ್‌ನೆಸ್‌ಗಳನ್ನು ಕಲಾವಿದನ ಕುಂಚದಿಂದ ಚಿತ್ರವು ಪೂರ್ಣವಾಗಿದೆ. ಬಳಸಿದ ಮಾಧ್ಯಮ ಜಲವರ್ಣ ಹಾಗೂ ಪೋಸ್ಟರ್ ವರ್ಣಗಳನ್ನು ಬಳಸಲಾಗಿದೆ. ಮುಖ್ಯವಾಗಿ ಕೆಂಪು, ನೀಲಿ, ಕಂದು, ಬಿಳಿ, ಕೆಸರಿ, ಹಳದಿ ಬಣ್ಣಗಳನ್ನು ಬಳಸಲಾಗಿದೆ.

ಪೂರ್ಣಭಾವ ಚಿತ್ರ

೧. ಈ ಚಿತ್ರವು ಪೂರ್ಣಭಾವ ಚಿತ್ರವಾಗಿದ್ದು, ಇದರಲ್ಲಿ ಒರ್ವ ಮಹಿಳೆಯು ಕುಳಿತುಕೊಂಡಿರುವ ದೃಶ್ಯವಾಗಿದೆ. ಇವಳ ಪಕ್ಕದಲ್ಲಿ ಒಂದು ಬುಟ್ಟಿ ಇದೆ. ಬಳಸಿದ ಮಾಧ್ಯಮ ತೈಲವರ್ಣದಿಂದ ರಚಿಸಲಾಗಿದೆ. ವರ್ಣಗಳನ್ನು ಚಪ್ಪಟೆಯ ಆಕಾರದಲ್ಲಿ ಇಟ್ಟುಕೊಂಡು ಚಿತ್ರಿತವಾಗಿದೆ. ಬಳಸಿದ ಬಣ್ಣಗಳು ಕೆಸರಿ, ಕೆಂಪು, ಕಂದು, ನೀಲಿ, ಹಳದಿ, ಹಸಿರು ಬಣ್ಣಗಳು.

ಭಾವ ಚಿತ್ರಗಳು



ಮಾಸ್ತಿ ವೆಂಕಟೇಶ್ ಅಯ್ಯಂಗಾರ ಚಿತ್ರ-೧



ದ,ರಾ,ಬೇಂದ್ರೆ, ಚಿತ್ರ-೨




ವ್ಯಕ್ತಿಯೋರ್ವರ ಚಿತ್ರ-೩



ಸ್ವಾಮಿ ವಿವೇಕಾನಂದ ಚಿತ್ರ-೪

ಭಾವ ಚಿತ್ರಗಳು



ವ್ಯಕ್ತಿಯೋರ್ವರ ಚಿತ್ರ-೫



ಶ್ರೀ ಬಸವೇಶ್ವರ ಚಿತ್ರ-೬



ವ್ಯಕ್ತಿಯೋರ್ವರ ಚಿತ್ರ-೭




ಜವಾಹರಲಾಲ ನೆಹರು ಚಿತ್ರ-೮


ತೈಲವರ್ಣ ಚಿತ್ರಗಳು



ಸ್ವಾಮಿ ವಿವೇಕಾನಂದ ಚಿತ್ರ–೯



ವ್ಯಕ್ತಿಯೋರ್ವರ ಚಿತ್ರ–೧೦



ಯೋರ್ವರ ಮಹಿಳೆ ಚಿತ್ರ–೧೧



ಶ್ರೀ ಬಸವೇಶ್ವರ ಚಿತ್ರ–೧೨

೨. ಶ್ರೀ ಬಸವಣ್ಣನವರ ಪೂರ್ಣಭಾವ ಚಿತ್ರವಾಗಿದ್ದು, ಬಸವಣ್ಣನವರು ಮಹಾರಾಜರ ಸಿಂಹಾಸನದಲ್ಲಿ ಕುಳಿತುಕೊಂಡಿರುವ ದೃಶ್ಯವಾಗಿದೆ. ಚಿತ್ರದ ಹಿಂಭಾಗ ಒಂದು ದೀವ್ಯ ಸಾನಿಧ್ಯ ಮಂಟಪವನ್ನು ಚಿತ್ರಿಸಲಾಗಿದೆ. ಬಸವಣ್ಣನ ಪಕ್ಕದಲ್ಲಿ ಗ್ರಂಥದ ಭಂಡಾರವನ್ನು ನಾವು ಕಾಣಬಹುದು. ಈ ಚಿತ್ರದಲ್ಲಿ ಬಸವಣ್ಣನವರ ಮುಖ ಲಕ್ಷಣದಲ್ಲಿ ಸರಳತೆ ಹಾಗೂ ಮುಗ್ಧತೆಯನ್ನು ಕಂಡುಬರುತ್ತದೆ. ಬಳಸಿದ ಮಾಧ್ಯಮ ತೈಲವರ್ಣದಿಂದ ರಚಿಸಿದೆ. ಚಿತ್ರದಲ್ಲಿ ವರ್ಣಗಳ ವಿಂಗಡಣೆಗಳಾಗಿ ಕೆಪು, ಕೆಸರಿ, ಕಂದು, ಕಪ್ಪು, ಹಳದಿ, ಹಸಿರು, ಬಿಳಿ ಬಣ್ಣಗಳಾಗಿವೆ.

ಸಿಂಪರಣೆ ಚಿತ್ರಗಳು

ನವನವೋನ್ಮೇಷಶಾಲಿನಿ ಪ್ರತಿಭಾ ಎಂಬ ಉಕ್ತಿಯಂತೆ ಸದಾ ಹೊಸತನ್ನರಸುವ ಗುಣ ಎಲ್. ಶಿವಲಿಂಗಪ್ಪನವರದಾಗಿರುವುದರಿಂದ ಯಾವುದೇ ಚಿತ್ರ ಪ್ರದರ್ಶನ ಮಾಡಿದರೂ ನೂತನವಾದುದನ್ನೇ ಮಾಡಲು ಅವರು ಶ್ರಮಿಸುತ್ತಾರೆ. ಇವರ ಪ್ರಥಮ ಸಿಂಪರಣೆ ಚಿತ್ರಕಲಾ ಪ್ರದರ್ಶನ ಹೆಚ್ಚು ಜನರನ್ನಾಕರ್ಷಿಸಿತು. ಸಿಂಪರಣೆಯನ್ನು ಕಮರ್ಶಿಯಲ್ ಚಿತ್ರ ಕಲಾಕಾರರು, ತಮ್ಮ ಚಿತ್ರರಚನೆ ಹಿನ್ನೆಲೆಯಲ್ಲಿ ಎಲ್ಲೆಲ್ಲಿ ಅವಶ್ಯವಿದೆಯೋ ಅಲ್ಲಲ್ಲಿ ಬಾಯಿಂದ ಊದುವ ನಳಿಕೆಯ ಮೂಲಕ ಇಂಡಿಯನ್ ಇಂಕನ್ನು ಸಿಂಪಡಿಸುತ್ತಿದ್ದರು. ಈ ಕ್ರಮ ಸ್ಕ್ರೀನ್ ಪೇಪರ್ ಅಂಟಿಸುವುದಕ್ಕೆ ಪರ್ಯಾಯವಾಗಿತ್ತು. ಮುಖಚಿತ್ರಕ್ಕೆ ಪೋಷಕವಾದ ಹಿನ್ನೆಲೆ ಒದಗಿಸುವಂತಹದ್ದು ಆಗಿತ್ತು.

ಶಿವಲಿಂಗಪ್ಪನವರು ರಚಿಸಿರುವ ಚಿತ್ರಗಳಲ್ಲಿ ಸಿಂಪರಣೆಯೇ ಪ್ರಧಾನ. ಇಡೀ ಚಿತ್ರ ಸಮೂಹವೇ ಸಿಂಪರಣೆಯಾಗಿರುತ್ತದೆ. 'ಬರಗಾಲ, ಸ್ತ್ರೀ ಶೋಷಣೆ, ಕುಡಿತ, ದುಡಿತ, ಯೌವ್ವನ, ಯುವತಿಯ ಬಯಕೆ, ಆಲಿಂಗನ-ಅಂತ್ಯಕ್ಕೆ ಕೊಟ್ಟ ಆಹ್ವಾನ, (ಏಡ್ಸ್ ಕುರಿತಂತೆ) ಚಿಂತೆ, ಸಮಾಜಕ್ಕೆ ಬೇಡಾದ ವೃದ್ಧರು, ಇತ್ಯಾದಿ ಸಾಮಾಜಿಕ ಹಿನ್ನೆಲೆಯಲ್ಲಿ ರಚಿಸಿರುವ ಒಂದೊಂದು ಶಿರೋನಾಮೆಯಲ್ಲಿಯೂ ಹತ್ತಾರು ಚಿತ್ರಗಳಿವೆ. ಈ ಚಿತ್ರಗಳಲ್ಲಿ ಎಲ್ಲಿಯೂ ಬ್ರಶ್ ಬಳಕೆಯಾಗಿಲ್ಲ. ನಿಬ್‌ನಿಂದ ಗೆರೆ ಹಾಕಿಲ್ಲ. ಎಲ್ಲವನ್ನೂ ಕಲ್ಪನೆಯ ಭಾವನೆಗೆ ತಕ್ಕಂತೆ ಬೇಡಾದ ಭಾಗವನ್ನು ಮುಚ್ಚಿ, ಬೇಕಾದ ಭಾಗ ಮಾತ್ರ ಸಿಂಪರಣೆ ಮಾಡುತ್ತಾ ಹೋಗುತ್ತಾರೆ. ಇಲ್ಲಿ ಉಸಿರಿನಿಂದೂದುವಾಗ ಏರಿಳಿತ ಸಹ ಮುಖ್ಯವೆನಿಸುತ್ತದೆ. ಎಲ್ಲೆಲ್ಲಿ ದಟ್ಟವಾಗಿ ಗಾಢ ಛಾಯೆ ಬರಬೇಕು. ಎಲ್ಲೆಲ್ಲಿ ತೆಳು ಛಾಯೆ ಬರಬೇಕು ಎಂಬುದನ್ನು ಪೂರ್ವಭಾವಿಯಾಗಿ ಮನನಿಸಿಕೊಂಡೇ ಮಾಡಬೇಕಾಗುತ್ತದೆ. ಇಲ್ಲಿ ಮತ್ತೊಂದು ಅಂಶವೆಂದರೆ ಬಿಳಿ ಬಣ್ಣಕ್ಕೆ ಪ್ರವೇಶವಿಲ್ಲ. ಕಾಗದದ ಹಿನ್ನೆಲೆಯ ಬಿಳಿಯನ್ನೇ ಹಾಗೇ ಉಳಿಸಿಕೊಂಡು ಚಿತ್ರ ರಚಿಸಿದ್ದಾರೆ. ಈ ಸೂತ್ರವನ್ನು ಜಲವರ್ಣದ ಭೂದೃಶ್ಯ ರಚಿಸುವಾಗ ನಮ್ಮ ಹಿಂದಿನ ಕಲಾವಿದರು ಅನುಸರಿಸುತ್ತಿದ್ದರು. ಇದೊಂದು ಕಷ್ಟದಾಯಕವಾದ ದೈಹಿಕ ಶ್ರಮದ ಕೆಲಸ.

ಸಣ್ಣ ಪ್ರಮಾಣದ ಸ್ಪ್ರೇಯರ್ ಬಂದಿರುವುದಾದರೂ ಅದನ್ನು ಬಳಸದೇ ಊದು ಗೊಳವೆಯ ಮೂಲಕವೇ ಮಾಡಿರುವುದು ಕಲಾವಿದರಲ್ಲಿರುವ ಶ್ರದ್ಧೆ ಮತ್ತು ಅದನ್ನು ಬಿಂಬಿಸುವ ವಿಧಾನ ಇಲ್ಲಿ ಮುಖ್ಯವೆನಿಸುತ್ತದೆ.

ಇಂಡಿಯನ್ ಇಂಕ್ ಅಲ್ಲದೇ ಇತರ ಪಾರದರ್ಶಕವಾದ ದ್ರವರೂಪದ ವರ್ಣಗಳನ್ನು ಸಹ ಬಳಸಿದ್ದಾರೆ. ಆದರೆ ಚಿತ್ರದ ಪ್ರಧಾನ ಭಾಗ ಮಾತ್ರ ಇಂಡಿಯನ್ ಇಂಕ್‌ನದೇ ಆಗಿರುತ್ತದೆ. ಉಳಿದ ವರ್ಣಗಳೆಲ್ಲವೂ ಪೋಷಕ ಮಾತ್ರ.

ಸಿಂಪರಣೆ ಚಿತ್ರ ಸರಣಿಯಲ್ಲಿ ಒಂದೆರಡನ್ನು ವಿವರಿಸುವುದು ಸೂಕ್ತವೆನಿಸುತ್ತದೆ. ಯುವತಿಯ ಬಯಕೆ ಎಂಬ ಚಿತ್ರದಲ್ಲಿ ವಿವಾಹ ಪೂರ್ವದ ಮನದ ಕಾಮನೆಗಳನ್ನು ವೃಕ್ಷಕ್ಕೆ ದೋಲಿಸಿ ಮನ್ಮಥ ಚೇಷ್ಟೆಗಳನ್ನು ವೃಕ್ಷದ ಟೊಂಗೆಗಳೋಪಾದಿಯಲ್ಲಿ ಚಿತ್ರಿಸಿ ಹೊರ ನೋಟಕ್ಕೊಂದು ಮಹಾವೃಕ್ಷವೆಂದು ಕಂಡರೂ, ಸನಿಹದಿಂದ ದೃಷ್ಟಿಯಿಟ್ಟು ಗಮನಿಸಿದರೆ ಅದೆಷ್ಟು ವಿಷಯವಡಗಿದೆ ಇದರಲ್ಲಿ! ಎಂದೆನಿಸುತ್ತದೆ. ವೃಕ್ಷದ ಮೇಲೆರಡು ಹಕ್ಕಿಗಳು ಗರಿ ಕೆದರಿ ಹಾರಾಡುವ ಚಿತ್ರವಿದೆ. ಬಹುಶಃ ಆಸೆಯೆಂಬ ಹಕ್ಕಿಗಳು ಹಾರಾಡುವ ಸಂಕೇತ ಇರಬಹುದು.


ಸ್ತ್ರೀ ಶೋಷಣೆ ಕುರಿತಾದ ಚಿತ್ರಸರಣಿಯಲ್ಲಿ ಚಪ್ಪಲಿಗಳನ್ನು ಮೆಟ್ಟಿ ನಿಂತ ಎರಡು ಪಾದಗಳು ಮಹಿಳೆಯೋರ್ವಳನ್ನು ಅಂಗಾತವಾಗಿ ಮಲಗಿಸಿ ತುಳಿಯುವಂತೆ ಇದೆ. ಅಷ್ಟೇ ಅಲ್ಲದೇ ಪುರುಷನ ಬರ್ಬರತೆಯ ಸಂಕೇತವಾಗಿ ಸ್ತ್ರೀಯ ಮರ್ಮಾಂಗವನ್ನು ಚಾಕುವಿನಿಂದ ಚುಚ್ಚುವಂತಹ ದೃಶ್ಯ ರಚಿಸಿದ್ದು ಕಣ್ಣೀರು ಮಡಿಲಲ್ಲಿ ತೋಯುವ ಹೆಣ್ಣಿನ ಕಂಗಳ ಅಶ್ರುಧಾರೆ ಅವ್ಯಾಹತವಾಗಿ ಹರಿಯುವ ಸನ್ನಿವೇಶವನ್ನು ಒಂದೇ ತೆರನಾದ ಇಂಡಿಯನ್ ಇಂಕ್‌ನಿಂದಲೇ ಸಿಂಪರಣೆ ಮಾಡಿ ಅಭಿವ್ಯಕ್ತಪಡಿಸಿದ್ದಾರೆ.

ಮತ್ತೊಂದು ಚಿತ್ರವಾದ ಸ್ತ್ರೀ ಶೋಷಣೆ ಚಿತ್ರದಲ್ಲಿ ಓರ್ವ ಸ್ತ್ರೀಯ ಸುತ್ತ ಹಲವಾರು ಪುರುಷ ಕೈಗಳು ನಾಮುಂದೆ, ತಾಮುಂದು ಎಂದು ಹಣವನ್ನು ನೀಡುವುದಕ್ಕೆ ಕೈ ಮುಂದೆ ಚಾಚಿವೆ. ಕಷ್ಟದಲ್ಲಿದ್ದಾಳೆಂದು ಧನ ಸಹಾಯ ಮಾಡುವ ಕೈಗಳಲ್ಲ ಇವು. ತಮ್ಮ ಕಾಮ ಪಿಪಾಸೆಗಾಗಿ ಅವಳ ಶೀಲಹರಣ ಮಾಡಲಿಕ್ಕಾಗಿ ಹಣದಾಸೆ ತೋರಿಸುವ ಕೈಗಳು. ಇಂತಹ ಕೈಗಳ ಮಧ್ಯೆ ಅಸಹಾಯಕಳಾಗಿರುವ ಅವಳ ಮುಖಭಾವ ಸ್ತ್ರೀಯ ಅಸಹಾಯಕತೆಗೆ ಮತ್ತು ದೈಹಿಕ ಭ್ರಾಂತಿಗಳನ್ನು ಹೊಂದಿರುವ ಇಂದಿನ ಪುರುಷ ಸಮಾಜದ ಒಂದು ಮುಖವಾದ ಕಾಮಲೋಲುಪತೆಗೆ ಹಿಡಿದ ಕನ್ನಡಿಯಂತಿದೆ. ಶಿವಲಿಂಗಪ್ಪನವರು ಸಮಾಜವನ್ನು ತಿದ್ದುವ ಕೆಲಸವನ್ನು ಚಿತ್ರದ ಮೂಲಕ ಮಾಡಲೆತ್ನಿಸಿದ್ದಾರೆ.

ಭ್ರಮೆಗಳು ಎಂಬ ಚಿತ್ರದಲ್ಲಿ ಕನಸಿನಲ್ಲಿ ಕಾಣುವ ಅವ್ಯಕ್ತ ದೃಶ್ಯಗಳು ಮನಸ್ಸಿನಲ್ಲಾಗುವ ಮನೋವಿಪ್ಲವನ್ನು ಚಿತ್ರಿಸಿದ್ದಾರೆ. ಎಲ್ಲಿಯೂ ನಿಖರವಾಗಿ ಇಂತಹದೇ ರೂಪವೆಂದು ಹೇಳಲಾಗದಂತಿದ್ದು ಹಲವು ದ್ರವ ವಣವನ್ನು ಬಳಸಿದ್ದಾರೆ. ಇಂಡಿಯನ್ ಇಂಕ್‌ನ ಪಾತ್ರವಿಲ್ಲಿ ಮಹತ್ವ ಹೊಂದಿಲ್ಲ. ಇದೊಂದು ರೀತಿಯ ಅಮೂರ್ತ ಚಿತ್ರ. ಇಲ್ಲಿಯೂ ಯುವ ಮನಸ್ಸಿನಲ್ಲಿನ ಭಾವನೆಯನ್ನು ಬಿಂಬಿಸಿದ್ದಾರೆ. ಬರಗಾಲ ಎಂಬ ಚಿತ್ರದಲ್ಲಿ ಭೂಮಿ ಒಣಗಿ ಬಿರುಕು ಬಿಟ್ಟು ಬಾಯ್ತೆರೆದಂತಿದ್ದು, ಅಲ್ಲಿಂದಲೇ ಕ್ರೂರ ರಕ್ಕಸಿಯೋರ್ವಳು

ಕೆನ್ನಾಲಿಗೆ ಚಾಚಿ ಹೊರ ಹೊಮ್ಮಿಬರುವಂತಿದ್ದು ಸುತ್ತಲೂ ದಹಿಸುತ್ತಿರುವ ಬೆಂಕಿಯ ಜ್ವಾಲೆಯಿಂದ ಸಸ್ಯ ಸಂಕುಲ ಉರಿದು ಬೀಳುತ್ತಿರುವ ದಾರುಣ ದೃಶ್ಯವನ್ನು ರಚಿಸಿದ್ದಾರೆ.

ಒಟ್ಟಾರೆ ಇವರ ಸಿಂಪರಣೆ ಚಿತ್ರಗಳನ್ನು ನೋಡಿದಾಗ ಮುಂಬೈನ ಖ್ಯಾತ ಕಲಾವಿದ (ಮೂಲತಃ ಬಿಜಾಪುರದವರು) ವಿಶ್ವನಾಥ ಬರಾನ್‌ಪುರ್ ಅವರ ಚುಕ್ಕಿ ಚಿತ್ರಗಳಂತೆ ಕಂಡುಬರುತ್ತವೆಯಾದರೂ ರಚನಾ ವಿಧಾನದಲ್ಲಿ ವ್ಯತ್ಯಾಸವಿದೆ. ಚುಕ್ಕಿ ಚಿತ್ರರಚನೆಯಲ್ಲಿ ಬ್ರೊಮೈಡ್ ಪೇಪರ್ ಬಳಕೆ ಇರುತ್ತದೆ. ಇದರ ಮೇಲೆ ರಚಿಸಬೇಕೆಂದಿರುವ ಚಿತ್ರ ಸ್ವರೂಪವು ಅತ್ಯಂತ ತೆಳುವಾಗಿ ಮುದ್ರಣಗೊಂಡಿರುತ್ತದೆ. ಅವಶ್ಯವಿದ್ದಲ್ಲಿ ಪೆನ್ಸಿಲ್‌ನಿಂದ ಬರೆದು ಚುಕ್ಕಿಗಳಿಂದ ಆ ಸ್ಥಳವನ್ನು ತುಂಬುವ ಮೂಲಕ ಚಿತ್ರದ ಸ್ವರೂಪ ತರಬಹುದು. ಸಿಂಪರಣೆ ಚಿತ್ರಗಳಲ್ಲಿ ಈ ಸಾಧ್ಯತೆ ಇಲ್ಲ. ನಳಿಕೆಯಿಂದ ಊದುವಾಗ ಬಣ್ಣಗಳು ಸಹಜವಾಗಿ ಎಲ್ಲೆಡೆಯೂ ಹರಡ ಬಹುದಾದ್ದರಿಂದ ಅವಶ್ಯಕವಾದ ಸ್ಥಳ ಹೊರತುಪಡಿಸಿ ಮಿಕ್ಕೆಲ್ಲವನ್ನು ಸಾವಧಾನವಾಗಿ ಎಚ್ಚರಿಕೆಯಿಂದ ಬಣ್ಣವನ್ನು ಊದಿಯೇ ಮುಚ್ಚಬೇಕು. ಸಿಂಪರಣೆಚಿತ್ರ ಕುರಿತಂತೆ ಪತ್ರಿಕಾ ಅಭಿಪ್ರಾಯಗಳು ಗಮನಾರ್ಹವಾಗಿವೆ.




ಚಿತ್ರ-೧



ಚಿತ್ರ-೨

ವ್ಯಂಗ್ಯ ಚಿತ್ರಗಳು










ಶಿವಲಿಂಗಪ್ಪನವರು ಕಲಾವಿದ್ಯಾರ್ಥಿಯ ದೆಸೆಯಲ್ಲಿ ರಚಿಸಿದ ಚಿತ್ರಗಳು




ಚಿತ್ರ–೧



ಚಿತ್ರ–೨



ಚಿತ್ರ–೩



ಅಧ್ಯಾಯ ೫

ಕಲಾವಿದ ಎಲ್. ಶಿವಲಿಂಗಪ್ಪನವರ ಶಿಲ್ಪಾ ಕಲಾಕೃತಿಗಳು

ಭಾರತೀಯ ಸಂಸ್ಕೃತಿ ವಿಶ್ವದ ಅತ್ಯಂತ ಪ್ರಾಚೀನವಾದ ಸಂಸ್ಕೃತಿಗಳಲ್ಲಿ ಒಂದಾಗಿದೆ. ಇದಕ್ಕೆ ಸುಮಾರು ೫೦೦೦ ವರ್ಷಗಳ ಪ್ರಾಚೀನತೆ ಇದ್ದು, ನಿರಂತರವಾಗಿ ಬೆಳೆದುಬಂದಿರುವ ಗುಣವೊಂದೇ ಅಲ್ಲದೇ ಇಂದಿಗೂ ಜೀವಂತವಾಗಿರುವ ಹೆಗ್ಗಳಿಕೆ ಇದೆ. ಈ ದೇಶದ ಸಾಂಸ್ಕೃತಿಕ ಪರಂಪರೆಯ ಉಗಮ, ವಿಕಾಸ ಇವುಗಳ ಅಧ್ಯಯನ ಅತ್ಯಂತ ಲಾಭದಾಯಕ, ಮನಸ್ಸಿಗೆ ಮುದವೀ ಕಾರ್ಯವೊಂದೇ ಅಲ್ಲದೇ ಅತಿ ಅವಶ್ಯಕವಾಗಿ ಜರುಗಬೇಕಾಗಿದೆ. ಈ ದೇಶದ ಸಂಸ್ಕೃತಿ ಇಂದು ಮುಟ್ಟಿರುವ ಔನ್ನತ್ಯದ ಮಟ್ಟಕ್ಕೆ ಈ ದೇಶದ ಲಲಿತ ಹಾಗೂ ಕುಶಲ ಕಲೆಗಳ ಅನೇಕ ಪ್ರಕಾರಗಳು ಮಹತ್ತರ ಕೊಡುಗೆ ನೀಡಿವೆ. ಈ ಕಲೆಗಳ ಉಗಮ, ವಿಕಾಸಗಳು ದೇಶದ ಸಾಂಸ್ಕೃತಿಕ ಬೆಳವಣಿಗೆಯ ಭಾಗವಾಗಿವೆ. ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ, ವಾಸ್ತು ಹಾಗೂ ಮೂರ್ತಿ ಶಿಲ್ಪ, ಜನಪದ ಇವುಗಳು ದೇಶದ ಜನರ ಜೀವನದ ಅವಿಭಾಜ್ಯ ಅಂಗಗಳಾಗಿರುವುದೇ ಅಲ್ಲದೇ ಜೀವನದ ಸೊಬಗು, ಮತ್ತು ಗಾಂಭೀರ್ಯಗಳನ್ನು ಸಮೃದ್ಧಿಗೊಳಿಸುವ ಸಾಧನಗಳಾಗಿವೆ. ಪ್ರತಿಯೊಬ್ಬ ವ್ಯಕ್ತಿಯ ಮಹತ್ವದ ವಿಕಾಸದ ಕ್ರಿಯೆಯಲ್ಲಿ ಜೀವನದ ಸಮಗ್ರತೆಯ ದೃಷ್ಟಿಕೋನ ಮೂಡಿಸುವುದರಲ್ಲಿ ಕಲೆಯ ಅನೇಕ ಪ್ರಕಾರಗಳು ಮಹತ್ತರವಾದ ಹಾಗೂ ಯಶಸ್ವಿಯಾದ ಪಾತ್ರವಹಿಸಿವೆ.

ಶಿಲ್ಪಕಲೆಯಲ್ಲಿ ಹಲವಾರು ಅಂಗಗಳು ಮತ್ತು ಪ್ರಕ್ರಿಯೆಗಳಲ್ಲಿ ಶಿಲ್ಪದ ಕೆತ್ತನೆ ಅತಿ ಪ್ರಧಾನವಾದ



ಕ್ರಿಯೆ. ಶಿಲ್ಪಿ, ಮರ, ಶಿಲೆ, ಲೋಹ, ಜೇಡಿಮಣ್ಣು ಮೊದಲಾದ ವಸ್ತುಗಳನ್ನು ಉಪಯೋಗಿಸಿ ಮೂರ್ತಿಗಳ ಸೃಷ್ಟಿಕ್ರಿಯೆ ಮೊದಲಾದ ವಸ್ತುಗಳನ್ನು ಉಪಯೋಗಿಸಿ ಮೂರ್ತಿಗಳ ಸೃಷ್ಟಿಕ್ರಿಯೆ ಕ್ಲಿಷ್ಟವಾದದ್ದು. ಶಿಲ್ಪಿಗೆ ಇಂತಹ ಪ್ರಯತ್ನ ಸಫಲಗೊಳ್ಳಬೇಕಾದಲ್ಲಿ ಶಿಲ್ಪಿ ಕಲೆಯ ಹಲವಾರು ವಿಭಾಗಗಳಲ್ಲಿ ಪರಿಣತಿಯಿರಬೇಕಾಗಿರುತ್ತದೆ. ಮೂರ್ತಿಗಳ ವಿವರ, ವಿಭಾಗಗಳಲ್ಲಿ ಪ್ರಮಾಣ, ಅವುಗಳು ಹೊಂದಿರುವ ಆಯುಧಗಳು ಮುಂತಾದ ವಿವರಗಳನ್ನು ಅವನು ಪಡೆಯಬೇಕಾದಲ್ಲಿ ಹಲವಾರು ಶಾಸ್ತ್ರಗ್ರಂಥಗಳ ಆಧಾರಕ್ಕೆ ಮೊರೆ ಹೋಗಬೇಕು. ವಂಶಪಾರಂಪರ್ಯವಾಗಿ ಬಂದಿರುವ ತಿಳುವಳಿಕೆ, ಅನುಭವ, ಸಾಂಪ್ರದಾಯಿಕ ಶಿಲ್ಪ ಮೂಡಿಸಿರುವ ಹಲವಾರು ಶೈಲಿಗಳ ವೈವಿಧ್ಯತೆ ಇವುಗಳು ಶಿಲ್ಪಿಯ ಜ್ಞಾನ ದಿಗಂತವನ್ನು ವಿಸ್ತರಿಸುವಲ್ಲಿ ಸಾಧನಗಳಾಗಿವೆ. ಇಷ್ಟಾದರೂ ಯಾವುದೇ ಸಾಂಪ್ರದಾಯಿಕ ಶೈಲಿಯ ಚೌಕಟ್ಟನ್ನು ಅನುಸರಿಸಿ ಶಿಲ್ಪ ಕೆತ್ತುವ ತನ್ನ ಕೃತಿ ಸೃಜನಶೀಲತೆಯಲ್ಲದೇ ತನ್ನ ಸಕ್ರೀಯತೆಯನ್ನು ಸಹ ಒಳಗೊಂಡಿರಬೇಕೆಂಬ ಹಂಬಲವುಳ್ಳವ ನಾಗಿರುತ್ತಾನೆ. ಇಂತಹ ಸಂದಭದಲ್ಲಿ ಅವನಿಗೆ ಸಹಾಯ ಮಾಡುವ ಅಂಶಗಳೆಂದರೆ ಅವನ ಕಲ್ಪನೆ, ಸಾಮರ್ಥ್ಯ, ಕೌಶಲ್ಯ, ಕೈಚಳಕಗಳು ನಾವು ವಿಶ್ವದ ಹಲವಾರು ದೇಶಗಳ ನಾಗರೀಕತೆಗಳನ್ನು ಮತ್ತು ಸಂಸ್ಕೃತಿಗಳನ್ನು ಪರಿಚಯ ಮಾಡಿಕೊಳ್ಳಬೇಕಾದರೆ, ಆ ದೇಶಗಳ ಇತಿಹಾಸದ ಪರಿಚಯ ಮಾಡಿಕೊಂಡಾಗ, ಎಲ್ಲಾ ದೇಶಗಳಲ್ಲೂ ವಾಸ್ತು ಶಿಲ್ಪ ಮತ್ತು ಮೂರ್ತಿ ಶಿಲ್ಪ ಒಂದರ ಜೊತೆಗೊಂದು ಕೂಡಿಕೊಂಡಿವೆಯಲ್ಲದೇ, ಒಂದಕ್ಕೊಂದು ಪೂರಕವಾಗಿ ಬೆಳೆದುಬಂದಿರುವ ವಿಷಯ ನಮಗೆ ಸ್ಪಷ್ಟವಾಗಿ ಗೋಚರವಾಗುತ್ತದೆ. ವಾಸ್ತು ಶಿಲ್ಪ ಪಾರಮಾರ್ಥಿಕದೆಡೆಗೆ ವಾಲಿದಾಗ, ಧಾರ್ಮಿಕ ಸಂಬಂಧವಾದ ಕಟ್ಟಡಗಳ ನಿರ್ಮಾಣ ಅವಶ್ಯಕವಾಗುತ್ತದೆ. ಅಂತಹ ಕಟ್ಟಡಗಳಲ್ಲಿ ಪ್ರತಿಷ್ಠಾಪನೆಗೊಳ್ಳಬೇಕಾದ ಮೂರ್ತಿಗಳ ಕೆತ್ತನೆಯ ಅವಶ್ಯಕತೆ ಕಂಡುಬರುತ್ತದೆ. ಈ ಮೂರ್ತಿಗಳ ನಿರ್ಮಾಣ ವಿವರ, ವಿಧಿ, ವಿಧಾನಗಳು ಶಿಲ್ಪಶಾಸ್ತ್ರದ ಕಕ್ಷೆಯೊಳಗೆ ಬರುತ್ತವೆ. ಹೀಗಾಗಿ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳು ಒಂದನ್ನೊಂದು ಅವಲಂಬಿಸಿ ಸಮಾನಾಂತರವಾಗಿ ಬೆಳೆದು ಬಂದಿವೆ. ನಮ್ಮ ದೇಶದ ಸಾಂಸ್ಕೃತಿಕ ಬೆಳವಣಿಗೆಯ ವಿಷಯದಲ್ಲೂ ಈ ತತ್ವ ನಿಜವಾಗಿದೆ. ಹಲವು ಸಾವಿರ ವರ್ಷಗಳಿಂದ ನಿರಂತರವಾಗಿ ಬೆಳೆದು ಬಂದಿರುವ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಭಾರತೀಯ ಶಿಲ್ಪಕಲೆ ಬಂದಿರುವುದರಿಂದ, ಕೆಲವು ಸಹಸ್ರ ವರ್ಷಗಳ ಅಡೆತಡೆಯಿಲ್ಲದ ಬೆಳವಣಿಗೆ ಒಂದು ಹೆಗ್ಗಳಿಕೆಯ ವಿಷವಾಗಿದೆ.[೧]

ವಿಶ್ವದ ಹಲವಾರು ಪುರಾತನ ಸಂಸ್ಕೃತಿಗಳ ಪರಿಚಯ ಮಾಡಿಕೊಂಡಾಗ, ಹಲವು ದೇಶಗಳ ಇತಿಹಾಸವನ್ನು ಅಧ್ಯಯನ ಮಾಡಿದಾಗ, ನಮಗೆ ಭಾರತ ಹಾಗೂ ಗ್ರೀಸ್ ದೇಶಗಳ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಒಂದು ಸಾಮ್ಯವಿರುವುದು ಗೋಚರಿಸುತ್ತದೆ. ಭಾರತೀಯರಂತೆಯೇ ಗ್ರೀಕರು ಅನಕ ದೇವ ದೇವತೆಗಳ ಆರಾಧಕರು,

---

೧. ಪಿ.ಆರ್. ತಿಪ್ಪೇಸ್ವಾಮಿ ಪ್ರ.ಸಂ. ಚಿತ್ರಕಲಾ ಪ್ರಪಂಚ, ಪು. ೧೧೨

ಹೀಗಾಗಿ ಗ್ರೀಸ್ ದೇಶದ ಶಿಲ್ಪಿಗಳು ಅನೇಕ ದೇವ ದೇವತೆಗಳ ವಿಗ್ರಹಗಳನ್ನು ಕೆತ್ತಿದ್ದಾರೆ. ಭಾರತದಂತೆಯೇ ಗ್ರೀಸ್ ದೇಶ ಸಹಾ ಶಿಲ್ಪಕಲೆಗೆ ಮಹತ್ತರ ಕಾಣಿಕೆ ಇತ್ತಿದೆ. ಆದರೆ ಈ ದೇಶಗಳ ಶಿಲ್ಪಗಳ ಆದರ್ಶ ಬೇರೆ ಬೇರೆಯದು. ಗ್ರೀಕ್ ಶಿಲ್ಪಿಗಳು ಮೂಡಿಸಿದ ದೇವ ದೇವತೆಯರ ಶಿಲ್ಪಗಳಲ್ಲಿ ಆಕಾರ, ಅಂಗಾಂಗ ಅನುರೂಪತೆ ಇವುಗಳ ಹೊಂದಾಣಿಕೆಯಿಂದ ಒಂದು ವಿಧವಾದ ಮನೋಹರತೆ ಉಂಟಾಗಿದೆ. ಎಲ್ಲಾ ಮೂರ್ತಿಗಳಲ್ಲೂ ಗಾಂಭೀರ್ಯ ಒಂದು ಎದ್ದು ಕಾಣುವ ಅಂಶ. ಪುರುಷ ದೇವತೆಗಳಲ್ಲಿ ಮಾಂಸ ಪುಷ್ಟಿಯುಳ್ಳ ಮೂರ್ತಿಗಳು ಸೌಂದರ್ಯದ ಪ್ರತೀಕಗಳಾಗಿವೆ. ಭಾರತೀಯ ಕಲೆಯ ಪ್ರಧಾನ ಲಕ್ಷಣ ಮತ್ತು ಮುಖ್ಯ ಭಾವ, ಪಾರಮಾರ್ಥಿಕ ವಿಚಾರಶೀಲತೆಯಾಗಿದೆ. ಇಲ್ಲಿ ಹಿಂದೂ ಮತ್ತು ಬೌದ್ಧ ಧರ್ಮದ ಅನುಯಾಯಿಗಳು ಜನ ಸಾಮಾನ್ಯರ ಗಮನವನ್ನು ವಿಷಯಾಸಕ್ತಿಯಿಂದ ಪಾರಮಾರ್ಥಿಕದೆಡೆಗೆ ಹರಿಸುವ ಪ್ರಯತ್ನ ಮಾಡಿದರು. ಈ ಪ್ರಯತ್ನದಲ್ಲಿ ಕಲೆಯನ್ನು ಒಂದು ಮಾಧ್ಯಮವಾಗಿ ಬಳಸಿದ್ದರಿಂದ ಭಾರತೀಯ ಶಿಲ್ಪಗಳಲ್ಲಿ ಈ ದೃಷ್ಟಿಕೋನ ಮೂಡಿತು. ಆದ್ದರಿಂದ ಇಲ್ಲಿನ ಪುರುಷಮೂರ್ತಿಗಳಲ್ಲಿ ಧ್ಯಾನಾಸಕ್ತವಾಗಿರುವ ಮುದ್ರೆಗೆ ಪ್ರಾಮುಖ್ಯತೆ ಬಂದಿತು. ವಿಷಯಾಸಕ್ತಿಯ ಬಗ್ಗೆ ಕಡಿಮೆ ಗಮನ ಹರಿಯಿತು. ಭಾರತೀಯ ಶಿಲ್ಪ ಆದರ್ಶವಾದಿ, ಸಂಕೇತ ಪ್ರಧಾನ, ಪಾರಮಾರ್ಥಿಕ ಒಲವು ಮತ್ತು ಗೂಢ ತತ್ವಗಳಿಂದ ಕೂಡಿದ ವಿಷಯಗಳ ಆಧಾರದ ಮೇಲೆ ರೂಪಿತವಾದ ಕಲಾ ಪ್ರಕಾರವಾಗಿ ಪರಿಣಮಿಸಿತು.

"ಕಲೆ ಮತ್ತು ಧರ್ಮಗಳ ನಡುವೆ ಅಗಲಿಸಲಾರದು ನಂಟೊಂದಿದೆ ಎಂಬ ವಿಷಯ ಅನೇಕ ದೇಶಗಳ ಸಾಂಸ್ಕೃತಿಕ ಅಧ್ಯಯನದಿಂದ ತಿಳಿದುಬಂದಿದೆ. ಭರತ ಖಂಡದ ಸಂಗೀತ, ನೃತ್ಯ, ಚಿತ್ರಕಲೆ ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಪರಿಚಯವಾದಾಗ ನಮ್ಮ ದೇಶದ ಸಂಸ್ಕೃತಿಯೂ ಕಲೆ ಮತ್ತು ಧರ್ಮಗಳಿಗಿರುವ ಈ ಸಾವಯವ ಸಂಬಂಧವನ್ನು ಸ್ವೀಕರಿಸುವುದು ನಮಗೆ ಮನವರಿಕೆಯಾಗುತ್ತದೆ ಮತ್ತು ಶಿಲ್ಪಕಲೆಗೆ ವಾಸ್ತು ಶಿಲ್ಪಕ್ಕಿಂತ ಹಿಂದಿನ ಇತಿಹಾಸವಿರುವುದು ಸ್ಪಷ್ಟವಾಗುತ್ತದೆ. ಈ ನಾಡಿನ ಸಂಸ್ಕೃತಿಯ ಮೇಲೆ ವೈದಿಕ ಧರ್ಮ, ನಂತರ ಅದರಿಂದ ಸಿಡಿದೆದ್ದ ಜೈನ ಮತ್ತು ಬೌದ್ಧ ಧರ್ಮಗಳು, ನಂತರ ದೇಶದ ಆಕ್ರಮಣ ನಡೆದು ಇಸ್ಲಾಂ, ಕ್ರಿಶ್ಚಿಯನ್ ಧರ್ಮಗಳು, ಸಿಖ್, ಪಾರ್ಸಿ ಧರ್ಮ ಮುಂತಾದವು ಹಲವಾರು ರೀತಿಯ ಅಚ್ಚಳಿಯದ ಪ್ರಭಾವ ಬೀರಿವೆ. ಇವುಗಳಲ್ಲಿ ಇಸ್ಲಾಂ ಧರ್ಮವೊಂದನ್ನು ಬಿಟ್ಟು ಮಿಕ್ಕೆಲ್ಲವುಗಳ ಗಾಢ ಪ್ರಭಾವಗಳನ್ನು ಭಾರತೀಯ ಶಿಲ್ಪಕಲೆ ಮೂಡಿಸಿಕೊಂಡಿದೆ".[೨]

ಭಾರತೀಯರು ವೇದಗಳ ಯುಗದಲ್ಲಿ ವಿಗ್ರಹಗಳ ಪೂಜೆಗೆ ಪ್ರಾಧ್ಯಾನತೆ ಕೊಟ್ಟಿರಲಿಲ್ಲವೆಂಬ ಅಂಶ ನಮಗೆ ತಿಳಿದು ಬಂದರೂ, ಇಂದ್ರ, ವರುಮ, ರುದ್ರ ಮುಂತಾದ ದೇವತೆಗಳಿಗೆ ಮನುಷ್ಯಾಕಾರದ ಕಲ್ಪನೆಯನ್ನು ಕೊಟ್ಟಿರುವುದು ಕಾಣಬರುತ್ತದೆ. ಹಲವಾರು ಋಷಿಗಳು ತಮ್ಮ ಮನೆಗಳಲ್ಲಿ ವಿಗ್ರಹಗಳನ್ನು

---

೨. ಪಿ.ಆರ್. ತಿಪ್ಪೇಸ್ವಾಮಿ ಪ್ರ.ಸಂ. ಚಿತ್ರಕಲಾ ಪ್ರಪಂಚ, ಪು. ೧೧೩

ಪೂಜಿಸುತ್ತಿದ್ದರಂದೂ, ಸಹಸ್ರ ಗೋವುಗಳನ್ನು ಕೊಟ್ಟರೂ ವಿಗ್ರಹಗಳನ್ನು ಇತರರಿಗೆ ಕೊಡುತ್ತಿರಲಿಲ್ಲವೆಂದೂ ಉಲ್ಲೇಖಗಳಿರುವುದರಿಂದ ಆ ಕಾಲದಲ್ಲೆ ವಿಗ್ರಹಾರಾಧನೆ ಸುಮಾರು ಪ್ರಚಲಿತವಾಗಿದ್ದ ಪದ್ಧತಿಯಾಗಿತ್ತೆನ್ನಬಹುದ. ರಾಮಾಯಣ, ಮಹಾಭಾರತಗಳಲ್ಲೂ ದೇವಾಲಯಗಳ ವಿಷಯ ಬರುವುದರಿಂದ ಅವುಗಳಲ್ಲಿ ಆ ವೇಳೆಗೆ ಮೂರ್ತಿಗಳು ಪ್ರತಿಷ್ಠಿತವಾಗಿದ್ದಿರಬೇಕು. ಭೌದ್ಧ ಧರ್ಮ ಹೆಚ್ಚು ಪ್ರಸಾರವಾದ ನಂತರ ಬುದ್ಧನ ಪುರುಷಾಕಾರದ ವಿಗ್ರಹಗಳು ಸಂಖ್ಯಾ ಬಾಹುಳ್ಯದಲ್ಲಿ ರೂಪುಗೊಳ್ಳತೊಡಗಿದವು. ಭಾರತದಲ್ಲಿ ಮೂರ್ತಿಗಳನ್ನು ಆರಾಧಿಸುವ ಪದ್ಧತಿ ಬಹಳ ಹಿಂದಿನಿಂದ ಬಂದಿದ್ದರೂ, ಮೂರ್ತಿ ಪೂಜೆ ಆಚರಿಸುವ ಕಾರಣಗಳು ಸ್ಪಷ್ಟವಾಗಿಲ್ಲ. ಅನೇಕ ವಿದ್ವಾಂಸರುಗಳ ಮತದ ಪ್ರಕಾರ, ಗೌತಮ ಬುದ್ಧನ ಪರಿನಿರ್ವಾಣದ ನಂತರ, ಆತನ ಅನುಯಾಯಿಗಳು ಬುದ್ಧನನ್ನು ಭಕ್ತಿ ವಿಶ್ವಾಸಗಳಿಂದ ಕಾಣುತ್ತಿದ್ದರಲ್ಲದೇ ಆತನನ್ನು ದಿವ್ಯ ಪುರುಷ ವರ್ಗಕ್ಕೆ ಸೇರಿಸುವ ಕ್ರಮ ಕೈಗೊಂಡರು. ಈ ಘಟ್ಟದಲ್ಲಿ ಬುದ್ಧನ ಮೂರ್ತಿಯ ಆರಾಧನೆ ಆರಂಭವಾಯಿತು. ಈ ನಂಬಿಕೆ ನಮ್ಮಲ್ಲೀಗ ಬಲವಾಗಿ ಊರಿದ್ದರೂ, ಬುದ್ಧನ ಕಾಲಕ್ಕಿಂತ ಮುಂಚೆಯೇ ನಮ್ಮ ದೇಶದಲ್ಲಿ ಮೂರ್ತಿ ಪೂಜೆ ನಡೆಯುತ್ತಿದ್ದ ಸ್ಪಷ್ಟ ಉದಾಹರಣೆಗಳು ದೊರೆಯುತ್ತವೆ.

ಭೌದ್ಧ ಧರ್ಮದ ಪ್ರಭಾವವಾದ ಸ್ತೂಪ ಅನೇಕ ಬದಲಾವಣೆಗಳನ್ನು ಕಂಡಿದೆ. ಮೊದಲಿಗೆ ಇದು ಗೋರಿಯ ಮೇಲಿನ ದಿಬ್ಬವಾಗಿತ್ತು. ಅಶೋಕನ ಕಾಲದಲ್ಲಿ ಇದರ ರೂಪರೇಷಗಳ ಬದಲಾವಣೆಯಾಯಿತು. ಬುದ್ಧ ಅಥವಾ ಬೌದ್ಧ ಸನ್ಯಾಸಿಗಳ ಅವಶೇಷಗಲು ಅಥವಾ ಭಸ್ಮ ಇರಿಸಿ ನಂತರ ಪೂಜಾಸ್ಥಳವಾಗಿ ಮಾರ್ಪಾಡಾಯಿತು. ಬಾರ್ಹೂತ ಮತ್ತು ಸಾಂಜಿಯ ಸ್ತೂಪಗಳಲ್ಲಿ ಇದರ ಸುತ್ತ ಕಟಾಂಜನ ನಿರ್ಮಿಸಿ, ಇವುಗಳಲ್ಲಿ ಹೇರಳವಾಗಿ ಕೆತ್ತನೆಯ ಇರುವ ದ್ವಾರಗಳಿವೆ. ಧರ್ಮಶಾಸ್ತ್ರದ ಗ್ರಂಥಗಳ ಆಧಾರದ ಮೇಲೆ ಹಿಂದು ಹಾಗೂ ಭೌದ್ಧ ಧರ್ಮಗಳಲ್ಲಿರುವ ಭಿನ್ನತೆ ಕಲೆಯ ಮೇಲೆ ಎಷ್ಟು ಪರಿಣಾಮ ಬೀರಿದೆ ಎಂದು ನಿಶ್ಚಯಿಸುವುದು ಕಷ್ಟಸಾಧ್ಯವಾದ ಕೆಲಸ. ಭೌದ್ಧ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಭಾರತದಲ್ಲಿ ಲಲಿತಕಲೆಗಳು ಹೆಚ್ಚು ಬೆಳವಣಿಗೆಯ ಹಂತದಲ್ಲಿದ್ದುವೆಂದು ತಿಳಿದುಬರುತ್ತದೆ. ಮತ್ತೊಂದು ಕುತೂಹಲಕಾರಿ ಅಂಶವೆಂದರೆ ಭೌದ್ಧ ಧರ್ಮ ಪ್ರಚಲಿತವಾಗಿದ್ದ ಎಡೆಗಳಲ್ಲಿ ಕುಶಲ ಶಿಲ್ಪಿಗಳಿದ್ದರು. ಸನಾತನ ಹಿಂದೂ ಧರ್ಮವಿದ್ದೆಡೆ ಶಿಲ್ಪಿಗಳು ಅಷ್ಟೊಂದು ಕುಶಲಿಗಳಾಗಿರಲಿಲ್ಲ. ಮ್ಲೇಚ್ಚರಿದ್ದೆಡೆ ಶಿಲ್ಪಿಗಳೇ ಇರಲಿಲ್ಲ. ೯ನೇ ಶತಮಾನದಲ್ಲಿದ್ದ ಹಿಂದೂ ಧರ್ಮ ಪ್ರವರ್ತಕರಲ್ಲಿ ಆದ್ಯರಾಗಿದ್ದ ಶಂಕರಾಚಾರ್ಯರಿಗೆ ಸಹಾ, ಅವರ ಹಿಂದೆ ಇದ್ದ ವೇದ ಯುಗದ ದಾರ್ಶನಿಕರುಗಳಂತೆ ಮೂರ್ತಿ ಪೂಜೆಯಲ್ಲಿ ಪ್ರಾಯಶಃ ಅಷ್ಟೊಂದು ಒಲವಿರಲಿಲ್ಲವೆಂದು ತೋರುತ್ತದೆ. ಸಾಮಾನ್ಯವರ್ಗದ ಜನರಿಗೆ ಆಧ್ಯಾತ್ಮದ ಮಾರ್ಗ ಅವಲಂಬನೆ ಮಾಡುವಾಗ ಮೂರ್ತಿಪೂಜೆ ಸಹಾಯಕರವಾಗುತ್ತದೆಂದು ಅವರು ನಂಬಿದ್ದರೂ, ಅವರೇ ಜ್ಯಾಮಿತಿಯ ಆಧಾರದ ಮೇಲೆ ರಚಿತವಾದ ಸಂಕೇತ ಪ್ರಧಾನವಾದ ಶ್ರೀ ಚಕ್ರವೆಂಬ ಸಾಧನವನ್ನು ತಮ್ಮ ಸಾಧನೆಯಲ್ಲಿ ಬಳಸುತ್ತಿದ್ದರು. ಮುಂದೆ ಜೈನ ಧರ್ಮ ಸಹಾ ಭಾರತೀಯ ಶಿಲ್ಪಕಲೆಗೆ ಮಹತ್ವದ ಕಾಣಿಕೆ ನೀಡಿತು. ಆದರೆ ಭಾರತದಲ್ಲಿ ಮಹಮದೀಯರ

ಧಾಳಿಯ ನಂತರ ಊಟ, ತಿಂಡಿ, ಉಡುಪು, ಸಂಗೀತ, ಸಾಹಿತ್ಯ ಮತ್ತು ವಾಸ್ತುಶಿಲ್ಪಗಳ ಕ್ಷೇತ್ರಗಳ್ಲಿ ಪ್ರಭಾವಶಾಲಿಯಾದ ಪರಿಣಾಮವನ್ನು ಇಸ್ಲಾಮಿಕ್ ಧರ್ಮದ ಭೀರಿದರೂ, ಶಿಲ್ಪಕಲೆಯ ಕ್ಷೇತ್ರದಲ್ಲಿ ಏನೂ ಪರಿಣಾಮ ಬೀರಲಿಲ್ಲ. ಯೂರೋಪಿಯನ್ನರು, ಅದರಲ್ಲೂ ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಕಲೆಗಳ ಬಗ್ಗೆ ನಮ್ಮ ದೃಷ್ಟಿಕೋನ ಬದಲಾಯಿಸಿತು.

ಅನೇಕ ಪಾಶ್ಚಾತ್ಯ ವಿದ್ವಾಂಸರು ಭಾರತೀಯ ಸಾಂಸ್ಕೃತಿಕ ಕ್ಷೇತ್ರದ ಹಲವಾರು ಅಂಗಗಳ ತಲಸ್ಪರ್ಶಿ ಅಧ್ಯಯನವನ್ನು ಮಾಡಿದ್ದಾರೆ. ಇವರಲ್ಲಿ ಕೆಲವರಿಗೆ ಭಾರತೀಯ ಜೀವನದ ಸೂಕ್ಷ್ಮ ರೀತಿ ನೀತಿಗಳು ಅರ್ಥವಾದಂತಿಲ್ಲ. ಹಲವಾರು ಸಂದರ್ಭಗಳಲ್ಲಿ ಈ ವಿದ್ವಾಂಸರುಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಭಾರತೀಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಒಪ್ಪತಕ್ಕವುಗಳಲ್ಲ. ಆದರೂ ನಮ್ಮ ದೇಶದ ಹಿರಿಮೆಯ ಅನೇಕ ಒಳ್ಳೆಯ ಅಂಶಗಳ ಕಡೆ ಭಾರತೀಯರ ಹಾಗೂ ವಿಶ್ವದ ಇನ್ನಿತರ ಜನಗಳ ಗಮನ ಸೆಳೆದು ಕಣ್ತೆರಿಸಿದ ಕೆಲಸವನ್ನು ಅನೇಕ ಪಾಶ್ಚಾತ್ಯ ಮಹನೀಯರುಗಳು ಮಾಡಿದ್ದಾರೆ. ನಮ್ಮ ದೇಶದ ಮೂಲೆ ಮೂಲೆಗಳಲ್ಲೂ ವಿಪುಲವಾಗಿರುವ ಭಗ್ನಾವಶೇಷಗಳ ದುರಸ್ತಿ, ಸಂರಕ್ಷಣೆ, ಇವುಗಳ ವಿಷಯದಲ್ಲಿ ಅವರುಗಳು ತೋರಿಸಿದ ಕಳಕಳಿ, ಆಸಕ್ತಿ ಮತ್ತು ಶ್ರದ್ಧೆ ಭಾರತೀಯರ ಮೆಚ್ಚುಗೆಗಳಿಸಿವೆ. ಭಾರತ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯನ್ನು ಆರಂಭಿಸಿದ ಕೀರ್ತಿ ಬ್ರಿಟಿಷರಿಗೇ ಸಲ್ಲುತ್ತದೆ. ಈ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ಅನೇಕ ಪಾಶ್ಚಾತ್ಯರೂ, ಭಾರತೀಯರೂ ಭಾರತೀಯ ಶಿಲ್ಪಕಲೆಗೆ ಮಹದುಪಕಾರ ಮಾಡಿದ್ದಾರೆ. ಭಾರತ ದೇಶದ ಹೊರಗೆ ದಟ್ಟ ಪ್ರಭಾವ ಬೀರಿದೆ. ಭಾರತೀಯ ಸಂಸ್ಕೃತಿ ಮೇಲುಗೈ ಪಡೆದಿದ್ದ ಕಾಲದಲ್ಲಿ, ಜಾವ, ಸುಮಾತ್ರ, ಕಂಭೋಜ ಮೊದಲಾದೆಡೆಗಳಲ್ಲಿ ನಿರ್ಮಿತವಾಗಿರುವ ಭಾರತೀಯ ಶೈಲಿಯ ಅವಶೇಷಗಳ ಸಂರಕ್ಷಣೆ ಮತ್ತು ದುರಸ್ತಿಗಾಗಿ ಇಂದಿಗೂ ಭಾರತ ಸರ್ಕಾರ ಪ್ರಾಚ್ಯವಸ್ತು ಇಲಾಖೆಯ ತಜ್ಞರ ಬೇಡಿಕೆ ಇದೆ. ಭಾರತೀಯರು ಶಿಲ್ಪಕಲೆಯ ಹಲವಾರು ವಿಭಾಗಗಳಲ್ಲಿ ಪಡೆದಿರುವ ಪರಿಣತಿಯ ದ್ಯೋತಕವಾಗಿದೆ ಈ ಅಂಶ. ಭಾರತೀಯ ಶಿಲ್ಪಕಲೆಯನ್ನು ಹಲವಾರು ಪಾಶ್ಚಾತ್ಯ ವಿದ್ವಾಂಸರುಗಳು ದೀರ್ಘಕಾಲ, ಅತಿ ಆಸಕ್ತಿಯಿಂದ ಅಧ್ಯಯನ ಮಾಡಿ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಇಂದಿಗೂ ಈ ಕ್ಷೇತ್ರದಲ್ಲಿ ಆಧಾರ ಗ್ರಂಥಗಳಾಗಿವೆ. ಅನೇಕ ಭಾರತೀಯ ವಿದ್ವಾಂಸರುಗಳು ಸಹಾ ಈ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಎಲ್ಲರ ಹೆಸರುಗಳನ್ನು ಈ ಸಂದರ್ಭದಲ್ಲಿ ಪಟ್ಟಿಮಾಡುವುದು ಅಸಾಧ್ಯ ಮತ್ತು ಶ್ರಮಸಾಧ್ಯವಾದ ಕೆಲಸವಾದರೂ ಪ್ರಮುಖರಾದ ಹಲವು ವಿದ್ವಾಂಸರುಗಳು ಹೆಸರು ಉಲ್ಲೇಖ ಮಾಡದಿದ್ದಲ್ಲಿ ಅದು ಅತಿ ದೊಡ್ಡ ಕರ್ತವ್ಯ ಲೋಪವಾಗುತ್ತದೆ.

ಭಾರತೀಯ ಶಿಲ್ಪಕಲೆಯ ಬಗ್ಗೆ ದೀರ್ಘವಾದ ತಲಸ್ಪರ್ಶಿ ಅಧ್ಯಯನ ಮಾಡಿ, ಆ ಕ್ಷೇತ್ರಕ್ಕೆ ಬೆಲೆ ಕಟ್ಟಲಾಗದ ಸೇವೆ ಸಲ್ಲಿಸಿರುವ ಕಟ್ಟಲಾಗದ ಸೇವೆ ಬರ್ಗೆಸ್, ಫರ್ಗುಸೆನ್, ಪ್ರಮುಖರು ಅಲೆಕ್ಸಾಂಡರ್ ಕನಿಂಗ್‌ಹ್ಯಾಂ, ಕಸಿನ್ಸ್, ಆನಂದ ಕೆಂಟಿಷ್ ಕುಮಾರಸ್ವಾಮಿ, ಕಾಡ್‌ರಿಂಗ್‌ಟನ್, ಜಾನ್ ಮಾರ್ಷಲ್,

ಸ್ಟೆಲ್ಲಾ ಕ್ರಾಮರಿಷ್ ಪ್ರಮುಖರು. ಭಾರತೀಯರಲ್ಲಿ ಗಂಗೂಲಿ, ಗೋಪಿನಾಥರಾವ್, ಶಿವರಾಮ ಮೂರ್ತಿ, ಕಾರ್ಲ್ ಖಂಡಲ್‌ವಾಲಾ, ಯಜ್ಡಾನಿ, ಕೆ.ಪಿ. ಜಯಸ್ವಾಲಂ, ಪ್ರಿಯಬಾಲಾಷಾ ಮೊದಲಾದವರು ಪ್ರಮುಖರು. ಕರ್ನಾಟಕದ ವಿದ್ವಾಂಸರಲ್ಲಿ ಆರ್. ನರಸಿಂಹಾಚಾರ್ಯ ಮತ್ತು ಡಾ. ಎಂ.ಎಚ್. ಕೃಷ್ಣ ಈ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ್ದಾರೆ. ಹೊಯ್ಸಳ ವಾಸ್ತುಶಿಲ್ಪ ಮತ್ತು ಶಿಲ್ಪಿ ಶೈಲಿ ಚಾಲುಕ್ಯಶೈಲಿಯಿಂದ ಭಿನ್ನವಾದದ್ದು ಮತ್ತು ತನ್ನದೇ ಆದ ವೈಶಿಷ್ಟ್ಯ ಹೊಂದಿದೆ ಎಂದು ಮೊದಲ ಬಾರಿ ನಿರೂಪಿಸಿದವರು ನರಸಿಂಹಾಚಾರ್ಯರು. ಈಗಿನ ಕರ್ನಾಟಕದ ಭಾಗವಾದ ಹಳೆಯ ಮೈಸೂರು ಸಂಸ್ಥಾನದ ಮೂಲೆ ಮೂಲೆಗಳಲ್ಲಿ ಸಂಚರಿಸಿ ವಾಸ್ತು ಶಿಲ್ಪ ಹಾಗೂ ಶಿಲ್ಪಕಲೆಗಳ ಅನೇಕ ಅನರ್ಘ್ಯ ರತ್ನಗಳ ಪರಿಚಯ ಮಾಡಿಕೊಟ್ಟ ಹೆಮ್ಮೆ ಡಾ. ಎಂ.ಎಚ್. ಕೃಷ್ಣ ಅವರದು. ಭಾರತದ ಬೇರಾವ ಪ್ರಾಂತ್ಯದಲ್ಲೂ ಇಂತಹ ವೈಜ್ಞಾನಿಕ ಸರ್ವೇಕ್ಷಣೆ ನಡೆದಿಲ್ಲ. ಅವರು ದಾಖಲಿಸಿರುವ ವಿವರಗಳು ಭಾರತೀಯ ಕಲೆಯ ಇತಿಹಾಸದ ರಚನೆ ಮಾಡುವವರಿಗೆ ಅತ್ಯಮೂಲ್ಯವಾದ ಆಧಾರವಾಗಿದೆ.

"ಹಲವಾರು ಶತಮಾನಗಳ ಹಿಂದೆಯೇ ಶಿಲ್ಪಕಲೆ ಭಾರತ ದೇಶದ ಕಲೆಗಳಲ್ಲಿ ಪ್ರಮುಖವಾಗಿದ್ದಿತು. ನಮಗೆ ಪರಂಪರಾನುಗತವಾಗಿ ಬಳುವಳಿಯಾಗಿ ಬಂದಿರುವ ಗುಹಾಂತರ ದೇವಾಲಯಗಳು, ಮಠ, ಶಿಲೆ, ಕಂಚು ಹಾಗೂ ಮಣ್ಣಿನಲ್ಲಿ ರೂಪಿಸಿದ ಸಹಸ್ರಾರು ಮೂರ್ತಿಗಳು ಈ ಮಾತಿಗೆ ಸುಪ್ತವಾಗಿದ್ದಿತು. ಯೂರೋಪಿಯನ್ನರ ಆಗಮನದ ನಂತರ ಶಿಲ್ಪಕಲೆ ಪುನಶ್ಚೇತನಗೊಂಡಿತು. ಭಾರತೀಯ ಸಾಂಪ್ರದಾಯಿಕ ಶಿಲ್ಪಕಲೆ ಧರ್ಮದೊಂದಿಗೆ ನಿಕಟಸಂಪರ್ಕ ಹೊಂದಿದ್ದು ಈ ಕಲೆಗೆ ಪಾರಮಾರ್ಥಿಕ ಒಲವೇ ಹೆಚ್ಚಾಗಿದ್ದಿತು. ಭಾರತದ ಉದ್ದಗಲಕ್ಕೆ ದ್ರಾವಿಡ, ನಾಗರ, ವೇಸರ ಮುಂತಾದ ಶೈಲಿಗಳಲ್ಲಿ ನಿರ್ಮಾಣವಾದ ಸಹಸ್ರಾರು ದೇವಾಲಯಗಳಲ್ಲಿ ದ್ವಾರ, ಮೂಲೆಗಳು, ಗೋಡೆಗಳಲ್ಲಿ ನಿರ್ಮಿಸಿದ ಗೂಡುಗಳು ಇವುಗಳಲ್ಲಿ ಶಿಲ್ಪಗಳು ರಾರಾಜಿಸತೊಡಗಿದವು. ಸರ್ವಶಕ್ತ, ಸರ್ವಾಂತರ್ಯಾಮಿ ದೇವನ ಪೂಜೆಗೆ ಪೂಜಾಸ್ಥಳಗಳು ನಿರ್ಮಾಣವಾದಂತೆ ಶಿಲ್ಪಕಲೆಯ ಬೆಳವಣಿಗೆ ಒಂದು ಭದ್ರವಾದ ಬುನಾದಿಯಾಯಿತು".[೩]

ಶಿವಲಿಂಗಪ್ಪನವರು ರಚಿಸಿದ ಶಿಲ್ಪ ಕಲಾಕೃತಿಗಳು

ಶಿಲ್ಪ ಎಂದೊಡನೆಯೇ ಎಲ್ಲರ ಮನಸ್ಸಿನಲ್ಲಿ ಶಿಲೆಯ ವಿಗ್ರಹವೆಂಬ ಭಾವನೆ ಬರುವುದು ಸಹಜ. ಕಾರಣ ಎಲ್ಲೆಲ್ಲಿ ದೇವಾಲಯಗಳಿರುವುದೋ ಅಲ್ಲೆಲ್ಲಾ ಶಿಲಾವಿಗ್ರಹಗಳಿಗೆ ಪ್ರಮುಖ ಸ್ಥಾನ ಮಾನ. ನಂತರದ ಸ್ಥಾನ ಲೋಹಗಳದ್ದು, ಇವುಗಳನ್ನು ಉತ್ಸವಾದಿಗಳಲ್ಲಿ ಮೆರೆಸಲು ಮಾತ್ರ ಮಾಡಿಸುತ್ತಾರೆ. ಇನ್ನು ಮರದ ವಿಗ್ರಹ ಮಾಡಿಸಿ ಪೂಜಿಸುವವರ ಸಂಖ್ಯೆ ಕಡಿಮೆ. ಮರದ ಬಳಕೆ ಏನಿದ್ದರೂ ರಥ, ತೇರು, ಪಲ್ಲಕ್ಕಿ, ಬಾಗಿಲು ಚೌಕಟ್ಟುಗಳಲ್ಲಿ ಚಿತ್ತಾರ ಮಾಡಿಸುವುದಕ್ಕೆ ಅನುಗುಣವಾಗಿ ಇದನ್ನು ಬಳಸುತ್ತಾರೆ. ಇತ್ತೀಚೆಗೆ

---

೩. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ.) ಚಿತ್ರಕಲಾ ಪ್ರಪಂಚ, ಪು. ೧೬

ಸಿಮೆಂಟ್ ಶಿಲ್ಪ ಹೆಚ್ಚಾಗಿ ಜನಪ್ರಿಯವಾಗುತ್ತಿದೆಯಾದರೂ ಪೂಜಾ ವಿಗ್ರಹವಾಗುವುದಿಲ್ಲ. ಸಿಮೆಂಟ್ ಬಳಕೆಗಿಂತ ಪೂರ್ವದಲ್ಲಿ ಗಾರೆಯಿಂದ ವಿಗ್ರಹ, ಮಂಟಪ, ಶಿಖರ, ದ್ವಾರದ ಮಂಟಪ, ಗರ್ಭಗುಡಿಯ ಗೋಪುರ, ಇತ್ಯಾದಿ ಮಾಡಿಸಿರುವುದನ್ನು ಎಲ್ಲೆಡೆ ಕಾಣುತ್ತೇವೆ. ಇದೇ ರೀತಿ ಮಣ್ಣಿನಿಂದ ಮಾಡಿದ ವಿಗ್ರಹಗಳು ಸಹ ತಾತ್ಕಾಲಿಕ ಉಪಯೋಗಕ್ಕೆ ವಿನಃ ದೀರ್ಘಕಾಲದ ಬಾಳಿಕೆಗಾಗಿ ಅಲ್ಲ. ಈ ಮೇಲೆ ಹೇಳಿದವೆಲ್ಲವೂ ಸಾಂಪ್ರದಾಯಿಕ ನೆಲೆಗಟ್ಟಿನಲ್ಲಿ ಸಹಸ್ರಾರು ವರ್ಷಗಳಿಂದ ನಿರ್ಮಿಸುತ್ತಾ ಬಂದಿರುವ ಶಿಲ್ಪಕಲೆಗಳು.[೪]

ಆದರೆ ಶಿವಲಿಂಗಪ್ಪನವರು ಮಾಡಿರುವ ಶಿಲ್ಪಗಳು ಅಸಂಪ್ರದಾಯಿಕ ಶಿಲ್ಪಗಳು ಅರ್ಥಾತ್ ಸಮಕಾಲೀನ ಶಿಲ್ಪ ಅಥವಾ ನವ್ಯಶಿಲ್ಪಳಾಗಿದ್ದ ಇವೆಲ್ಲವುಗಳಿಗಿಂತ ಭಿನ್ನವಾದ ಮರಳಚ್ಚಿನಲ್ಲಿ ಮಾಡಿರುವುದು ವಿಶೇಷವೆನಿಸುತ್ತದೆ. ಶಿವಲಿಂಗಪ್ಪನವರು ಶುದ್ಧವಾದ ಸಣ್ಣ ಮರಳನ್ನು ಕೆಲವು ಅಂಟು ದ್ರಾವಣಗಳಿಂದ ಒಂದು ಘನ ರೂಪಕ್ಕೆ ತಂದು ನಂತರದಲ್ಲಿ ಅದನ್ನು ಕೆತ್ತನೆ ಮೂಲಕ ಶಿಲ್ಪವನ್ನಾಗಿಸುತ್ತಾರೆ. ಈ ತೆರನಾದ ಮಾಧ್ಯಮದಿಂದ ಮಾಡಿದವುಗಳನ್ನು ದೇವತಾ ಮೂರ್ತಿಗಳೆಂದು ಮಾತ್ರ ಪರಿಗಣಿಸುವುದಿಲ್ಲ. ಕಾರಣ ಕಲ್ಲಿನಂತಹ ಕಾಠಿಣ್ಯವಿರುವುದಿಲ್ಲ. ಆದರೆ ಕಲಾವಿದ ಶಿಲ್ಪಿಯ ಕಲಾತ್ಮಕತೆ, ನೈಪುಣ್ಯ, ಜಾಣ್ಮೆ ಮತ್ತು ಬುದ್ಧಿವಂತಿಕೆಗನುಗುಣವಾಗಿ ಶಿಲ್ಪವನ್ನು ಮಾಡಬಹುದು. ಇಂತಹ ವಿನೂತನ ಪ್ರಯತ್ನವನ್ನು ಮೊದಲ ಬಾರಿಗೆ ಮಾಡಿದವರು.

ಮರಳಚ್ಚಿನ ಶಿಲ್ಪಗಳು

೧. **ತಾಯಿ ಮಗು :** ಇದೊಂದು ಮೂರು ಮುಖವುಳ್ಳ ಶಿಲ್ಪ, ಪ್ರತಿಯಂದು ಕಡೆಗೆ ತಿರುಗಿಸಿದಂತೆಯೂ ತಾಯಿ ಮಗುವೇ ಕಾಣುತ್ತದೆ. ಒಂದೆಡೆ ತಾಯಿ ತನ್ನ ಮಗುವನ್ನು ಸೊಂಟದ ಮೇಲೆ ಕೂರಿಸಿಕೊಂಡಿದ್ದರೆ ಮತ್ತೊಂದು ಕಡೆಯಲ್ಲಿ ಕೈಯಲ್ಲಿ ಹಿಡಿದು ಕೊಂಡಂತೆ, ಮಗದೊಂದು ಕಡೆಯಲ್ಲಿ ತಾಯಿ ಕಾಲ ಬಳಿಯಲ್ಲಿ ಮಗು ನಿಂತಂತೆ, ತಾಯಿ ತಲೆ ಪ್ರಥಮ ನೋಟಕ್ಕೆ ಒಂದೇ ಎಂದು ಕಂಡುಬಂದರೂ ಒಂದೊಂದು ದಿಕ್ಕಿನಲ್ಲಿ ಒಂದೊಂದು ತೆರನಾಗಿದೆ. ಉಬ್ಬುಗೆತ್ತನೆ ಒಂದೆಡೆ, ಮತ್ತೊಂದೆಡೆ ಇಳಿಗೆತ್ತನೆ. ಹೀಗೆ ಕೆತ್ತನೆಯನ್ನು ವೈವಿಧ್ಯಮಯಗೊಳಿಸಿ ಶಿಲ್ಪವನ್ನು ಸುಂದರಗೊಳಿಸಿದ್ದಾರೆ. ಇದರ ಮತ್ತೊಂದು ವಿಶೇಷವೆಂದರೆ ಪೀಠ ಮತ್ತು ವಿಗ್ರಹದ ನಡುವೆ ಲೋಹದ ತುಂಡೊಂದನ್ನು ಅಳವಡಿಸಿರುವುದರಿಂದ ನಿಂತಲ್ಲಿಯೇ ಅದನ್ನು ತಿರುಗಿಸುತ್ತ ನೋಡಬಹುದಾಗಿದೆ.

ಕಲ್ಪನೆಯ ಸಾಮ್ರಾಜ್ಯಕ್ಕೆ ದೃಶ್ಯದ ಸ್ವರೂಪ ಕೊಡುವುದು ಸುಲಭದ ಕೆಲಸವೇನಲ್ಲ. ಅದರಲ್ಲೂ ಶೀರ್ಷಿಕೆ ಇಡುವುದು ಎರಡೂ ಕಷ್ಟದಾಯಕವಾದ ಕೆಲಸವೇ. ಅನುಭವ, ಬುದ್ಧಿವಂತಿಕೆ, ಎರಡೂ ಅವಶ್ಯಕ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

---

೪. ಡಾ. ಎಸ್.ಸಿ. ಪಾಟೀಲ, ಸಾಧನೆಯ ಸಮುಚ್ಚಯ ಎಲ್. ಶಿವಲಿಂಗಪ್ಪ, ಪು. ೩೮

೨. ಧ್ಯಾನ ಮಗ್ನ : ಈ ಶಿಲ್ಪವು ಸುಮಾರು ಒಂದೂವರೆ ಅಡಿ ಎತ್ತರವಿದ್ದು, ಗುಹೆಯೊಳಗೆ ಕುಳಿತ ಧ್ಯಾನಿಯಂತೆ ಕೆತ್ತನೆಮಾಡಿದ್ದಾರೆ. ಮುಖಕ್ಕೆ ಆಕಾರವಿಲ್ಲ. ಅದೊಂದು ಅವ್ಯಕ್ತರೂಪ. ಎರಡೂ ಹಸ್ತಗಳು ಮಡಚಿದ ಮಂಡಿಯ ಬಳಿ ಧ್ಯಾನಾಸಕ್ತ ಮುದ್ರೆಯಲ್ಲಿರುವಂತಿದ್ದು ಎದೆಯ ಭಾಗದಲ್ಲಿ ಜ್ಯೋತಿಯೊಂದನ್ನು ಇಳಿಗೆತ್ತನೆಯ ಮೂಲಕ ರಚಿಸಿ ಅವ್ಯಕ್ತತೆಯಲ್ಲಿಯೇ ವ್ಯಕ್ತತೆಯನ್ನು ಬಿಂಬಿಸುವಂತೆ ಶಿಲ್ಪವನ್ನು ಕಡೆದಿದ್ದಾರೆ.

೩. ಚಿಂತೆ : ಈ ಶಿಲ್ಪದ ಮೂಲಕ ಚಿಂತೆ ಎಂಬ ಹಲವಾರು ಶಿಲ್ಪಗಳನ್ನು ಮಾಡಿದ್ದು ದುಗುಡು ಹೊತ್ತ ದಪ್ಪ ಮುಖ, ಕೃಶವಾದ ಶರೀರ, ಮತ್ತೊಂದರಲ್ಲಿ ಅಸ್ಥಿಪಂಜರದಂತಾಗಿರುವ ಶರೀರ, ಗುಳಿಬಿದ್ದ ಕಣ್ಣಗಳು, ಇನ್ನೊಂದರಲ್ಲಿ ಕಾಲು ಕೈಗಳೇ ಇರದ ಶರೀರ ಹೀಗೆ ಮಾನವನ ವಿವಿಧ ಸ್ತರದ ಬದುಕಿನ ಚಿತ್ರಣವಿದೆ. ಅರ್ಧ ಅಡಿಯಿಂದ ಹಿಡಿದು ಎರಡು ಅಡಿವರೆಗಿನ ಈ ಶಿಲ್ಪಗಳಲ್ಲಿ ವೈವಿಧ್ಯತೆ ಇದೆ.

೪. ಚಿಂತಾಕ್ರಾಂತ ಗಣಪ : ಸುಮಾರು ಎರಡು ಅಡಿ ಎತ್ತರ ಒಂದೂವರೆ ಅಡಿ ಅಗಲದ ಗಣಪ. ಇದುವರೆಗೆ ಮಾಡಿರುವ ಎಲ್ಲಾ ಶಿಲ್ಪಗಳಿಗಿಂತ ಭಿನ್ನ ಅಭಿವ್ಯಕ್ತಿಯುಳ್ಳದ್ದು ಹಾಗೂ ಇದು ರಾಷ್ಟ್ರೀಯ ಬಡತನದ ಸಂಕೇತವಾಗಿದೆ.

ಗಣಪತ ಎಂದೊಡನೆಯೇ ಉಬ್ಬಿದ ಹೊಟ್ಟೆ ಇರುವುದು ಸಹಜ. ಈ ಶಿಲ್ಪದಲ್ಲಿ ಹಾಗಿಲ್ಲ. ಹೊಟ್ಟೆ ಒಳಕ್ಕೆ ಹೋಗಿದೆ, ಗಣಪನಿಗೆ ಆಹಾರವಿಲ್ಲದಿದ್ದಾಗ ಅವನ ಹೊಟ್ಟೆ ಒಡೆದು ಹೋಗದಂತೆ ಸುತ್ತಿಕೊಂಡಿರಬೇಕಾದ ಹಾವಿಗೇನು ಸ್ಥಾನ? ಅದು ಸಹ ಗಣಪನನ್ನು ನೆಚ್ಚಿಕೊಂಡಿದ್ದರೆ ಸಾಧ್ಯವಿಲ್ಲವೆಂದು ಭಾವಿಸಿ ಹೊರಡುತ್ತದೆ. ಅದೇ ದಾರಿಯನ್ನು ಗಣಪತಿ ವಾಹನವಾದ ಮೂಷಿಕವೂ ಸಹ ಅನುಸರಿಸುತ್ತದೆ.

ಹಸಿವು ಎಂಬುದು ತುಡುಗನ್ನಾದರೂ ಮಾಡಿ ತಿನ್ನು ಎಂದು ಬಾಧಿಸುತ್ತಿರುತ್ತದೆ. ಆ ತೆರನಾಗಿ ಹಾವು ಗಣಪತಿಯ ವಾಹನವಾದ ಮೂಷಿಕವನ್ನೇ ತಿನ್ನಲು ಧಾವಿಸುತ್ತದೆ. ಮೂಷಿಕವಾದರೋ ಜೀವ ಭಯದಿಂದ ಓಡಲೆತ್ನಿಸುತ್ತದೆ. ಇವೆಲ್ಲವನ್ನೂ ಮೂಕ ಪ್ರೇಕ್ಷಕನಾಗಿ ತಲೆಯ ಮೇಲೆ ಕೈ ಹೊತ್ತು ನೋಡುತ್ತಾ ಕುಳಿತಿದ್ದಾನೆ ಗಣಪ. ಹಸಿವಿನಿಂದ ಕಂಗೆಟ್ಟ ಗಣಪನ ಸ್ಥಿತಿ ಶಿಲ್ಪದಲ್ಲಿ ಚೆನ್ನಾಗಿ ಮೂಡಿ ಬಂದಿದೆ.

ಗಣಪ ಎಂದೊಡನೆಯೇ ಭಾರತೀಯರೆಲ್ಲರಿಗೂ ಕೇಳಿದುದನ್ನು ನೀಡುವ ದೇವರು, ನಮ್ಮ ಕಷ್ಟಗಳನ್ನು ಪರಿಹರಿಸುವವನು ಎಂಬ ನಂಬಿಕೆ. ಹಾಗೆಯೇ ದೇಶದ ಪ್ರಗತಿಯು ದೇಶಕ್ಕೆರಗುವ ಪ್ರವಾಹ, ಪ್ರಕೃತಿ, ಪ್ರಕೋಪ, ಯುದ್ಧ ಇತ್ಯಾದಿ ಸಂಕಷ್ಟಗಳಿಗೆ ಸಿಕ್ಕಿ ತತ್ತರಿಸುತ್ತಿರುವಾಗ ನೆರವಿಗೆ ಹೋಗುವುದು ವರ್ಲ್ಡ್ ಬ್ಯಾಂಕಿನತ್ತಾ. ಆ ವರ್ಲ್ಡ್ ಬ್ಯಾಂಕ್ ಬರಿದಾಗಿದ್ದರೆ ಅಥವಾ ಅದೇ ಸಂಕಷ್ಟದಲ್ಲಿ ಸಿಕ್ಕಿ ಹಾಕಿಕೊಂಡಿದ್ದರೆ ಪರಿಸ್ಥಿತಿ ಏನಾಗುತ್ತದೆಂಬುದನ್ನು ಊಹಿಸಿಯೇ ತಿಳಿಯಬೇಕು. ಇಂತಹ ದಾರುಣ ಪರಿಸ್ಥಿತಿಯ ಪಕ್ಷಿನೋಟವನ್ನು ಪತ್ರಿಕೆಯೊಂದರಲ್ಲಿ ಓದಿದಾಗ ಮನಸ್ಸಿನಲ್ಲಾದ ಭಾವನೆಗೆ ಮೂರ್ತರೂಪ ಕೊಟ್ಟು, ಚಿಂತಾಕ್ರಾಂತ ಗಣಪನನ್ನಾಗಿಸಿದ್ದಾರೆ ಶಿಲ್ಪಿ ಶಿವಲಿಂಗಪ್ಪ. ಇದೊಂದು ಪಾರ್ಶ್ವನೋಟ. ಆನೆಯ ಮುಖ, ಹಸಿದು

ಒಳಗ್ಹೋಗಿರುವ ಹೊಟ್ಟೆ ಮೇಲೆ ಸೊಂಡಿಲು, ಹಾವು ತನ್ನ ಯಜಮಾನನ ವಾಹನವೆಂದು ತಿಳಿದಿದ್ದರೂ ತಿನ್ನಲು ಹೋಗುತ್ತಿರುವ ದಾರುಣ ದೃಶ್ಯ. ಪ್ರಸ್ತುತ ಸಮಾಜದಲ್ಲಾಗುವ ಬೆಳವಣಿಗೆಯ ಮೇಲೆ ಬೆಳಕು ಚೆಲ್ಲುವಂತಹದ್ದು. ಈ ವಿಗ್ರಹ ಖಾಸಗಿಯಾಗಿ ಬೆಂಗಳೂರಿನಲ್ಲಿ ಸಂಗ್ರಹವಾಗಿದೆ.

೫. **ವಿದ್ಯಾ ವಿನಾಯಕ :** ಈ ಶಿಲ್ಪದಲ್ಲಿ ಎಲ್ಲವನ್ನೂ ಸಾಂಕೇತಿಕಗೊಳಿಸಲಾಗಿದೆ. ವಿದ್ಯೆಯ ಪರಿಕರಗಳಾದ ಪುಸ್ತಕಗಳನ್ನು ತಲೆಯ ಭಾಗದಲ್ಲಿ ಜೋಡಿಸಿರುವಂತೆಯೂ, ನೆತ್ತಿಯ ಅಗಲದ ಭಾಗದಲ್ಲಿ ಪುಸ್ತಕವನ್ನು ತೆರೆದಿಟ್ಟಂತೆಯೂ ಕಿವಿಗಳ ಭಾಗದಲ್ಲಿ ವೀಣೆ, ಮೃದಂಗದಂತಹ ಲಲಿತ ವಾದ್ಯಗಳನ್ನೂ, ಸೊಂಡಿಲನ್ನು ಕಹಳೆಯ ರೀತಿಯಲ್ಲಿಯೂ ಕೆತ್ತನೆ ಮಾಡಿ ಅಭಯ ಮತ್ತು ವರದ ಹಸ್ತವನ್ನು ತೋರುವ ಮೂಲಕ ವಿದ್ಯಾಗಣಪ ಇಲ್ಲಿ ಸಿಂಬಾಲಿಕ್ ಆಗಿ ಹೊರಹೊಮ್ಮಿದ್ದಾರೆ.

ಪುಸ್ತಕದ ಕಟ್ಟನ್ನು ಜೋಡಿಸುವ ರೀತಿಯಲ್ಲಿ ಕೆತ್ತನೆ ಮಾಡಿರುವೆಡೆಯಲ್ಲಿ ಅಕ್ಷರಗಳನ್ನು ಕೆತ್ತಿದ್ದು ಸ್ಪಷ್ಟವಾಗಿ ನಿಖರವಾಗಿ ತಿಳಿಯುವಂತಾಗಲು ಅಲ್ಲಲ್ಲಿ ಕಪ್ಪು ಇಂಕಿನ ಗೆರೆಗಳಿಂದ ಅಕ್ಷರ ವಿನ್ಯಾಸಗೊಳಿಸಿ ಶಿಲ್ಪಕ್ಕೊಂದು ದೈವಿಕ ಸ್ವರೂಪ ಬರುವಂತೆ ಮಾಡಿದ್ದಾರೆ. ಸುಮಾರು ಒಂದೂವರೆ ಅಡಿ ಎತ್ತರ, ಒಂದು ಅಡಿ ಅಗಲದ ಹಲವಾರು ಶಿಲ್ಪಗಳನ್ನು ಮಾಡಿದ್ದು ಮಾರಾಟವಾಗಿದೆ ಎನ್ನುತ್ತಾರೆ ಶಿಲ್ಪಿ. ರಾಜ್ಯ ಶಿಲ್ಪಕಲಾ ಅಕಾಡೆಮಿ ಆಯೋಜಿಸಿದ್ದ ಅಖಿಲ ಭಾರತ ಮಟ್ಟದ ಶಿಲ್ಪ ಶಿಬಿರದಲ್ಲಿ ಸಹ ಇದೇ ತೆರನಾದ ಶಿಲ್ಪವನ್ನು ಮಾಡಿದ್ದು ಎರಡು ಕಡೆಯೂ ಸಂದರ್ಶಕರು ನೋಡುವಂತಿದೆ.

೬. **ದ್ವಾಸುಪರ್ಣ ಶಿಲ್ಪ :** ಸುಮಾರು ಒಂದೂ ಕಾಲು ಅಡಿ ಉದ್ದ ಅಗಲದ ಅರ್ಧ ಅಡಿ ದಪ್ಪದ ತ್ರಿಮಾನವುಳ್ಳ ಶಿಲ್ಪ. ಇದರಲ್ಲಿ ಮಹಿಳೆಯರು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಕುಳಿತಿದ್ದಾರೆ. ಹೊಂದಾಣಿಕೆ ಇಲ್ಲದ ಮನಸ್ಸುಗಳ ಮುಖಚರ್ಯೆ ಇದೆ. ಈ ಶಿಲ್ಪದಲ್ಲಿ ಕೈ, ಕಾಲು, ದೇಹಗಳನ್ನು ಉಬ್ಬುಗೆತ್ತನೆ ಮತ್ತು ಇಳಿಗೆತ್ತನೆ ಮೂಲಕ ವಿಂಗಡಿಸಿರುವುದು ವಿಶೇಷವೆನಿಸುತ್ತದೆ.

೭. **ನಾಗರ ಕಲ್ಲು :** ಇದರಲ್ಲಿ ಏನು ವಿಶೇಷವಿದೆ ಎಲ್ಲಿ ನೋಡಿದರಲ್ಲಿ ನಾಗರ ಕಲ್ಲು ಇರುವುದನ್ನು ಕಾಣುತ್ತೇವೆ ಎಂಬ ಮನೋಭಿಪ್ರಾಯ ಬರುವುದು ಸಹಜ. ಹೊರನೋಟಕ್ಕೆ ಎರಡು ನಾಗಗಳು ಸುತ್ತಿಕೊಂಡು ಎರಡು ಮುಖಗಳು ಪರಸ್ಪರ ಇದಿರು ಬದಿಯ ದಿಕ್ಕಿನಲ್ಲಿದ್ದಂತೆ ಕಾಣುತ್ತದೆ. ಇಂತಹವು ಅನೇಕ ಕಡೆಗಳಲ್ಲಿ ಶಿಲೆಯಲ್ಲಿ ಮಾಡಿರುವುದನ್ನು ನೋಡಬಹುದಾದರೂ ಈ ಮರಳಚ್ಚಿನಲ್ಲಿ ಒಂದು ವಿಶೇಷತೆ ಇದೆ.

ಸಾಮಾನ್ಯವಾಗಿ ಮಕ್ಕಳಾಗದವರು ಮಕ್ಕಳನ್ನು ಬಯಸಿ ನಾಗಗಳನ್ನು ಪೂಜಿಸುವುದು, ಪ್ರತಿಷ್ಠಾಪಿಸುವುದು ಸಹಜ. ಇದರಲ್ಲಿ ಒಂದು ಅರ್ಥ ಅಡಗಿದೆ. ಇದೊಂದು ಮಿಥುನ ಕ್ರಿಯೆಗೆ ಚಾಲನೆ ಕೊಡುವ ಶಿಲ್ಪವೆಂಬುದರ ದ್ಯೋತಕವಾಗಿ, ಈ ನಾಗರಕಲ್ಲಿನಲ್ಲಿ ಲೈಂಗಿಕಾರ್ಷಣೆಯ ಅಂಶಗಳನ್ನು ಕೆತ್ತನೆ ಮಾಡಿ ಮಾನಿನಿಯರ ಮನದಿಂಗಿತವನ್ನು ಬಯಲು ಮಾಡಿದ್ದಾರೆ.

೮. ರೂಪಶಿಲ್ಪ : ಒಂದೂವರೆ ಅಡಿ ಎತ್ತರ, ಒಂದು ಅಡಿ ಅಗಲ, ಅರ್ಧ ಅಡಿ ದಪ್ಪದ ಮರಳಚ್ಚಿನಲ್ಲಿ ಇತ್ತಿ ಶಿಲ್ಪವನ್ನು ಮಾಡುವಂತೆ ಒಂದೆರಡು ರೂಪಶಿಲ್ಪವನ್ನು ಮಾಡಿದ್ದಾರೆ. ಮಣ್ಣಿನ ಶಿಲ್ಪ ಮತ್ತು ಪ್ಲಾಸ್ಟರ್ ಆ ಪ್ಯಾರಿಸ್‌ನಲ್ಲಿ ಮೆತ್ತುವ ಮೂಲಕ ತದ್ರೂಪ ತರುವಂತೆ ಇದರಲ್ಲಿ ಸಾಧ್ಯವಾಗುವುದಿಲ್ಲ. ಕಲ್ಲಿನ ಕೆಲಸದಲ್ಲಿ ಒಮ್ಮೆ ವ್ಯತ್ಯಯವಾದರೆ ಹೇಗೆ ರೂಪವೇ ಬಾರದಂತಾಗುತ್ತದೆಯೋ ಹಾಗೆ ಮರಳಚ್ಚಿನಲ್ಲಿ ಮಾಡುವಾಗಲೂ ಅತ್ಯಂತ ನಿಗಾವಹಿಸಿ ಮಾಡಬೇಕಾಗುತ್ತದೆ. ನಿಶ್ಚಿತ ರೂಪ ಬರಬೇಕಾದರೆ ಅನುಭವ, ಪರಿಶ್ರಮ ಅತ್ಯಗತ್ಯ ಎನ್ನುತ್ತಾರೆ ನವ್ಯಶಿಲ್ಪಿ.

೯. ಆಧುನಿಕ ಶಿಲ್ಪ : ಈ ಶಿಲ್ಪವು ಆಧುನಿಕವಾಗಿದ್ದು ಇದರ ಎತ್ತರ ಒಂದೂವರೆ ಅಡಿ ಇದೆ. ಈ ಶಿಲ್ಪ ಆಕಾರವು ಅದರ ತಲೆ ದಪ್ಪವಾಗಿರುವ ಮತ್ತು ಅದರ ಕಣ್ಣು ಯಾವುದೊ ಒಂದು ಪ್ರಾಣಿಯ ಕಣ್ಣಿನ ತರಹ ಕಾಣುತ್ತದೆ. ಅದರ ವಿನ್ಯಾಸ ಅದರ ದೇಹ ಮೈವಳಿಕೆ ತಿಳಿಯಾಗಿ ಇದು ಒಂದು ಕಲ್ಲಿನ ಮೇಲೆ ಕುಳಿತ ಹಾಗೆ ಕಂಡುಬರುತ್ತದೆ. ಈ ಚಿತ್ರವು ಮರಳಚ್ಚಿನ ಚಿತ್ರವೆಂದೇ ಹೇಳಬಹುದು.

೧೦. ಶಿರಸ್ಸು : ಈ ಶಿಲ್ಪದ ಮೂಲಕ ಶಿರಸ್ಸು ಎಂಬ ಹಲವಾರು ಮುಖಗಳು ಮನುಷ್ಯನಲ್ಲಿ ಹಲವಾರು ರೂಪಗಳು ಇರುತ್ತವೆ. ಗಾಂಭೀರ್ಯ, ಸರಳತೆ, ಕಾಮ, ಕ್ರೋದ, ಮದ, ಮತ್ಸರ, ವಿಭಿನ್ನವಾಗಿ ಸಮಯಕ್ಕೆ ತಕ್ಕಹಾಗೆ ಮನುಷ್ಯನ ಮುಖಭಾವನ್ನು ತೋರಿಸುತ್ತಾನೆ. ಒಂದು ಅಡಿ ಅಗಲ, ಅರ್ಧ ಅಡಿ ದಪ್ಪದ ಮರಳಚ್ಚಿನಲ್ಲಿ ರೂಪಿಸಿದ ಶಿಲ್ಪವಾಗಿದೆ.

೧೧. ನವ್ಯ ಶಿಲ್ಪಿ : ಮಹಿಳೆ ತನ್ನ ಜೀವನದಲ್ಲಿ ಆಗುಹೋಗುವ ಸನ್ನಿವೇಶಗಳನ್ನು ಹಲವಾರು ಸಮಸ್ಯೆಗಳು ಎದುರಿಸಿಕೊಂಡು ಜೀವನವನ್ನು ಸಾಗಿಸುತ್ತಾಳೆ. ಚಿಂತಕ್ರಾಂತವಾದ ಮಹಿಳೆ ಇದು ಮರಳಚ್ಚಿನ ಶಿಲ್ಪವಾಗಿದ್ದು ಇದರ ಎತ್ತರ ಒಂದು ಅಡಿ, ಅಗಲ ಅರ್ಧ ಅಡಿ ದಪ್ಪದಲ್ಲಿದೆ. ಇದು ನವ್ಯ ಶಿಲ್ಪಿಯಾಗಿರುತ್ತದೆ.

೧೨. ಶಿವ ಗಣಪ : ಒಂದು ಕಡೆ ವಿನಾಯಕನಾದರೆ ಮತ್ತೊಂದು ಕಡೆ ಶಿವನನ್ನು ಕಾಣಬಹುದು. ಇಲ್ಲಿಯೂ ಸಹ ಶಿವ ಸಿಂಬಾಲಿಕ್ ಆಗಿ ಹೊರಹೊಮ್ಮಿದ್ದಾನೆ. ತ್ರಿಶೂಲ, ಡಮರುಗ, ಮೂರನೇ ಕಣ್ಣುಳ್ಳ ವಿಭೂತಿ ಧರಿಸಿದ ಹಣೆ, ಶಿವನ ಕೊರಳನ್ನು ಸದಾ ಅಲಂಕರಿಸಿರುವ ಹಾವು, ಅವನ ವಾಹನವಾದ ನಂದಿ ಎಲ್ಲವನ್ನು ಸಾಂಕೇತಿಕಗೊಳಿಸಿ ಕೆತ್ತನೆ ಮಾಡಿದ್ದಾರೆ. ಗಣಪತಿಯ ಭಾಗ ಉಬ್ಬುಗೆತ್ತನೆಯಾದರೆ, ಶಿವನ ಭಾಗ ಇಳಿಗೆತ್ತನೆಯದಾಗಿದೆ. ಅಪ್ಪ, ಮಗ (ಶಿವ, ಗಣಪ)ನನ್ನು ಒಂದೇ ಮರಳಚ್ಚಿನಲ್ಲಿ ಮಾಡಿದ್ದು ಇದು ಒಂದೂವರೆ ಅಡಿ ವ್ಯಾಪ್ತಿಯ ಉದ್ದಗಲದಲ್ಲಿದೆ.

ಶಿಲ್ಪ ಶಿಬಿರ ನಿರ್ದೇಶಕರಾಗಿ

ಮರಳಚ್ಚಿನ ಶಿಲ್ಪವೆಂದರೆ ಏನೋ ಕುತೂಹಲ, ಇದೇನು ಹೊಸ ಮಾಧ್ಯಮ? ಮಾಡುವುದಕ್ಕೆ ಸಾಧ್ಯವೇ? ಎಂಬ ಜಿಜ್ಞಾಸೆ. ಈ ಎಲ್ಲಾ ಕೌತುಕಗಳ ನಡುವೆ ಶಿಬಿರಕ್ಕೆ ಬರುವವರ ಸಂಖ್ಯೆ ಅಧಿಕವಾದರೂ

ಒಂದೊಂದುಸಲಕ್ಕೆ ಶಿಬಿರಕ್ಕೆ ಹತ್ತು ಜನರಿಗಿಂತ ಹೆಚ್ಚಿಗೆ ಭಾಗವಹಿಸಿದಂತೆ ನಿಗಾವಹಿಸಿ ಮಾಡಿದ ಶಿಬಿರಗಳು ಬೆಂಗಳೂರು (೧೯೯೯) ಮೈಸೂರು (೨೦೦೦) ಸಾಗರ (೧೯೯೮) ಶಿರಸಿಗಳಲ್ಲಿ (೨೦೦೧) ಮಾಡಿದವುಗಳು ಹೊಸ ಮಾಧ್ಯಮದತ್ತ ಜನರ ಒಲವು ಮೂಡಿಸಲು ಸಹಕಾರಿಯಾಯಿತೆನ್ನುತ್ತಾರೆ.

ಕಲಾವಿದರ ಜಡನಾಗದೆ ಚೇತನನಾಗಿದ್ದಾನೆನ್ನಬೇಕಾದರೆ ಅವರವರು ಆರಿಸಿಕೊಂಡ ಕಲೆಗೆ ಸಂಬಂಧಿಸಿದಂತೆ ಏನಾದರೂ ಸಾಧನೆಗೆ ಕಾರ್ಯೋನ್ಮುಖರಾಗಿರಬೇಕು. ಅದು ವಾಣಿಜ್ಯ ನೆಲೆ ಇರಬಹುದು. ಇಲ್ಲವೇ ಪ್ರದರ್ಶನಾತ್ಮಕ ನೆಲೆಯಲ್ಲಿರಬಹುದು. ಇದಾವುದೂ ಅಲ್ಲದಿದ್ದರೆ ಪ್ರಯೋಗಾತ್ಮಕ ನೆಲೆಯೂ ಆಗಿರಬಹುದು. ಈ ದಿಸೆಯಲ್ಲಿನ ಚಿಂತನೆ ಶಿವಲಿಂಗಪ್ಪನವರಿಗೆ ಹೊಸತಲ್ಲ. ೧೯೭೪ರಿಂದ ಕಲಾ ಪ್ರದರ್ಶನ ಆರಂಭಿಸಿ ಇದುವರೆಗೆ ೩೦ಕ್ಕೂ ಮಿಗಿಲಾದ ಚಿತ್ರ ಮತ್ತು ಶಿಲ್ಪಗಳ ಪ್ರದರ್ಶನ ಮಾಡಿದ್ದಾರೆ.

ರಾಜ್ಯ-ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶಿಸಿರುವ ಇವರು ೨೦೦೮ರಲ್ಲಿ ಆಸ್ಟ್ರೇಲಿಯಾ ಸಂಸ್ಥೆಯವರು ಅಂತರಾಷ್ಟ್ರೀಯ ಶರಣ ಸಾಹಿತ್ಯ ಸಮ್ಮೇಳನವನ್ನು ಆಕ್ಲೆಂಡ್, ನ್ಯೂಜಿಲೆಂಡಂ, ಆಸ್ಟ್ರೆಲಿಯಾಗಳ ಸಹಭಾಗಿತ್ವದಲ್ಲಿ ಏರ್ಪಡಿಸಿದಾಗ ಶರಣರ ಜೀವನ ಸಾಧನೆ ಕುರಿತಂತೆ ಹಾಗೂ ವಚನಗಳ ಆಧಾರದ ಮೇಲೆ ಚಿತ್ರರಚಿಸಿರುವುದನ್ನು ಅಲ್ಲಿ ಪ್ರದರ್ಶಿಸಿದ್ದು ಇವರ ಜೀವನದ ಮೈಲಿಗಲ್ಲು ಎನ್ನಬಹುದು.

ರಾಜ್ಯದಲ್ಲಿನ ಚಿತ್ರಕಲಾ ಶಿಬಿರ, ಶಿಲ್ಪಕಲಾ ಶಿಬಿರ, ಕಲಾಮೇಳ, ಚಿತ್ರ ಸಂತೆ, ಶಿಲ್ಪೋತ್ಸವ, ಪ್ರಾಚ್ಯವಸ್ತು ಸಂಶೋಧನಾ ಇಲಾಖೆ ಸಂಸ್ಥೆ, ಆಳ್ವಾಸ್‌ನುಡಿ ಸಿರಿ, ವಿವಿಧ ಕಲಾ ಶಾಲೆಗಳು, ಅಕಾಡೆಮಿಗಳು ಆಯೋಜಿಸಿದ ಶಿಬಿರಗಳಲ್ಲಿ ಭಾಗವಹಿಸಿ ಕಲಾಕೃತಿ ರಚಿಸಿದ ಅನುಭವ. ಆಚಾರ್ಯ ಚಿತ್ರಕಲಾ ಭವನ ಹಾಗೂ ಇತರ ಕಲಾಶಾಲೆಗಳ ವಿದ್ಯಾರ್ಥಿಗಳಿಗಾಗಿ ಮುಖಚಿತ್ರ ರಚನೆ, ನಿಸರ್ಗ ಚಿತ್ರ ರಚನೆ, ಸಂಯೋಜನ ಚಿತ್ರ ರಚನೆ ಸೇರಿದಂತೆ ಪ್ರಾತಕ್ಷಿಕೆ ನಡೆಸಿದ ಅಪಾರ ಅನುಭವ.

ಬೆಂಡಿನ ಶಿಲ್ಪಗಳು

ಜನಬಳಕೆಯಲ್ಲಿರುವ ಥರ್ಮಾಕೋಲ್ ಎಂಬ ಪದವನ್ನು ಬಿಳಿಯ ಬೆಂಡು ಎಂದು ಲೇಖನದಲ್ಲಿ ಬಳಸಾಗಿದೆ. ಬಿಳಿಯ ಬೆಂಡಿನಲ್ಲಿ ಶಿಲಾ ಕೆತ್ತನೆಯ ಎಲ್ಲಾ ವ್ಯಾಕರಣಾಂಶಗಳನ್ನು ಅಳವಡಿಸಿಕೊಂಡು ವಿಗ್ರಹದಂತೆ ಮಾಡಿದ ಮೊದಲಿಗರು ಶಿವಲಿಂಗಪ್ಪನವರು.

ಸಾಮಾನ್ಯವಾಗಿ ಬಿಳಿಯ ಬೆಂಡನ್ನು ವೇದಿಕೆ ಅಲಂಕರಣಕ್ಕಾಗಿ ಬಳಸುತ್ತಾರೆ. ಅಕ್ಷರಗಳ ಹೊರ ಆಕಾರವನ್ನು ಬೆಂಡಿನ ಮೇಲೆ ಬರೆದು ಅದರ ಹೊರ ಆಕಾರ ಮಾತ್ರ ಕತ್ತರಿಸಿ ಅವಶ್ಯವಿದ್ದರೆ ಅವುಗಳ ಮೇಲೆ ಬಣ್ಣ ಹಚ್ಚಿ ಆಕರ್ಷಣೆಯವಾಗುವಂತೆ ಮಾಡುತ್ತಾರೆ. ಮಕ್ಕಳಿಗಾಗಿ ವಿವಿಧ ನಮೂನೆಗಳನ್ನು ಕತ್ತರಿಸಿ ಅಂಟಿಸಿ ತೋರಿಸುತ್ತಾರೆ. ಇನ್ನೂ ವಸ್ತು ಸಾಗಾಣಿಕೆ ಸಂದರ್ಭದಲ್ಲಂತೂ ಒಂದು ವಸ್ತುವಿಗೂ ಮತ್ತೊಂದಕ್ಕೂ ತಾಗಿ ವಿರೂಪವಾಗುವುದನ್ನು ತಡೆಗಟ್ಟಲು ಎರಡರ ನಡುವೆ ಇಡುವ ಸಾಧನವಾಗಿ ಬಳಸುತ್ತಾರೆ. ಆದರೆ ಆ

[illegible]

ಬಿಳಿಯ ಬೆಂಡನ್ನು ವಿಗ್ರಹದೋಪಾದಿಯಲ್ಲಿ ದುಡಿಸಿಕೊಳ್ಳುವ ಪ್ರಥಮ ಯತ್ನ ಮಾಡಿದವರು ಶಿವಲಿಂಗಪ್ಪನವರು. ಸನ್ಯಾಸಿಗೆ ಶಿಷ್ಯನ ಜೋಡಿ ಹೀಗೆ ಬದುಕಲು ಒಬ್ಬರಿಗೊಬ್ಬರು ಜೋಡಿಯಾಗಲೇಬೇಕು. ಇವರ ಶಿಲ್ಪಗಳಲ್ಲಿ ಹಲವು ತೆರನಾದ ಜೋಡಿಗಳನ್ನು ಕಾಣಬಹುದಾಗಿದೆ. ಎಲ್ಲದರಲ್ಲಿಯೂ ಅವ್ಯಕ್ತರೂಪ. ವೀಕ್ಷಕ ಪ್ರತಿಯೊಂದು ಶಿಲ್ಪವನ್ನು ಗಮನವಿಟ್ಟು ನೋಡಿದಾಗಲೇ ಅದರ ಅಂತರಾರ್ಥ ತಿಳಿಯುವುದು. ಶಿಲ್ಪ ಹೃದಯವುಳ್ಳವರಿಗೆ ಈ ಶಿಲ್ಪಗಳು ಹೆಚ್ಚು ಹತ್ತಿರವಾಗುತ್ತವೆ.

೧. ಬೆಂಡಿನ ಗಣೇಶ ಶಿಲ್ಪ : ಈ ಚಿತ್ರವು ಒಂದು ಶಿಲಾಬಲೆ ಭಂಗಿಯ ಆಕಾರದಲ್ಲಿ ನಿಂತಿರುವ ಗಣೇಶನ ಶಿಲ್ಪವಾಗಿದ್ದು, ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿರುವ ಶಿಲ್ಪವಾಗಿದೆ. ಆಧುನೀಕ ಶಿಲ್ಪದ ಹಾಗೆ ಕಂಡುಬರುತ್ತದೆ. ಇದರ ಅಳತೆಯು ಎರಡು ಅಡಿ ಎತ್ತರ ಮೂರುವರೆ ಅಡಿ ಅಗಲವಿದೆ. ಇದರ ಮೇಲೆ ನೀಲಿ ಬಣ್ಣವನ್ನು ಬಳಸಲಾಗಿದೆ.

೨. ಆಧುನಿಕ ಶಿಲ್ಪ : ಆಧುನಿಕ ಶಿಲ್ಪವು ಆಗಿದ್ದು ಇದರ ಅಳತೆ ಎರಡು ಅಡಿ ಉದ್ದ ಒಂದೂವರೆ ಅಡಿ ಅಗಲವಾಗಿರುವ ಈ ಸಿಲ್ಪವು ಒಬ್ಬ ಮನುಷ್ಯನ ಆಕಾರದಲ್ಲಿರುವ ಹಾಗೆ ಮತ್ತು ಇದರ ದೇಹದ ಮೇಲೆ ಒಂದು ಬಟ್ಟೆಯನ್ನು ಹಿಡಿದುಕೊಂಡು ಇರುವ ಹಾಗೆ ಇದನ್ನು ರಚಿಸಿದ್ದಾರೆ. ಒಟ್ಟಾರೆ ಈ ಶಿಲ್ಪವು ಒಬ್ಬ ರೈತನ ಬದುಕು ಹೋಲುತ್ತದೆ ಎಂದು ಹೇಳಬಹುದು.

೩. ಆಧುನಿಕ ಶಿಲ್ಪ : ನಾವು ಆಧುನಿಕ ಇಸ್ಟೋಲೇಷನ್ ಶಿಲ್ಪಕ್ಕೆ ಹೋಲುವ ಹಾಗೆ ಕಂಡುಬರುತ್ತದೆ. ಈ ಶಿಲ್ಪವು ಒಂದು ಕ್ರೊಚಿ ಆಕಾರದಲ್ಲಿ ಕಂಡುಬರುತ್ತದೆ. ಮನುಷ್ಯನ ದೇಹನ್ನು ಹೊಂದಿರುವ ಹಾಗೆ ತೋರುತ್ತದೆ. ಈ ಶಿಲ್ಪದ ಅಳತೆಯು ಮೂರು ಅಡಿ ಎತ್ತರವಾಗಿದ್ದು, ಎರಡು ಅಡಿ ಅಗಲವಾಗಿರುತ್ತದೆ. ಬೆಂಡಿನಲ್ಲಿ ತಯಾರಿಸಿದರೆ ಮತ್ತು ಶಿಲ್ಪದ ಮೇಲೆ ಪ್ಲಾಸ್ಟರ್ ಆಫ್ ಪ್ಯಾರಿಸನ್ನ ಮಾಧ್ಯಮವನ್ನು ಬಳಸಲಾಗಿದೆ.

ಕೊಳವೆಗಳ ಶಿಲ್ಪ

೨೦೦೩ರಲ್ಲಿ ಮಾಡಿದ ವಿನೂತನ ಶಿಲ್ಪವಿದು. ಸಾಮಾನ್ಯವಾಗಿ ಪಿ.ವಿ.ಸಿ. ಪೈಪ್ ನೀರನ್ನು ಹರಿಸುವುದುಕ್ಕೆ ಉಪಯೋಗಿಸುವ ಸಾಧನ. ಇದನ್ನು ಶಿಲ್ಪವನ್ನಾಗಿಸುವ ನಿಟ್ಟಿನಲ್ಲಿ ಯೋಚಿಸಿದ ಪ್ರಥಮಿಗರು ಇವರು.

೧. ನಾವಿಬ್ಬರು ನಮಗೊಬ್ಬರು : ಈ ಶೀರ್ಷಿಕೆಯಲ್ಲಿ ಕುಟುಂಬ ಯೋಜನೆಯ ವಿಷಯವನ್ನು ಪ್ರತಿಪಾದಿಸಿದ್ದಾರೆ. ಇದರ ವಿಶೇಷವೆಂದರೆ ಪೈಪನ್ನೇ ಅವಶ್ಯಕತೆಗೆ ತಕ್ಕಂತೆ ಕತ್ತರಿಸಿ, ತಲೆಯ ಭಾಗದಲ್ಲಿ ಮಾತ್ರ ಅದನ್ನು ಮಟ್ಟವಾಗಿಸಿಕೊಂಡು, ಪುರುಷನ ಮುಖದ ಗಡಸುತನ, ಸ್ತ್ರೀ ಮುಖದ ಕೋಮಲತೆಯನ್ನು ನಿಚ್ಚಳವಾಗಿ ಕಾಣುವಂತೆ ಮಾಡಿದ್ದಾರೆ. ಎರಡು ಪೈಪುಗಳ ಪುರುಷ ಸ್ತ್ರೀ ನಡುವೆ ಮತ್ತೊಂದು ಪೈಪನ್ನು ಅಳವಡಿಸಿ ಮಗುವಿನ ರೂಪ ಕೊಟ್ಟಿದ್ದಾರೆ. ಅಪ್ಪ ಅಮ್ಮಂದಿರ ಒಂದೊಂದು ಕೈಗಳು ಮಗುವಿನ ಅಪ್ಪುಗೆಗಾಗಿ ಚಾಚಿದ್ದರೆ ಹಾಗೇ ಇನ್ನೆರಡು ಕೈಗಳು ಆಕಾಶಮುಖವಾಗಿ ಕೈ ಎತ್ತಿ ನಾವಿಬ್ಬರು ನಮಗೊಬ್ಬಳೇ ಎಂದು ಸಾರಿ

ತಿಳಿಸುವಂತಿದೆ. ಸುಮಾರು ೫ ಅಡಿ ಎತ್ತರವಿರುವ ಈ ಶಿಲ್ಪವು ರಾಜ್ಯಮಟ್ಟದ ಐಪೆಕ್ಸ್ ಕಲಾ ಪ್ರದರ್ಶನದಲ್ಲಿ (ಬೆಂಗಳೂರು) ಪ್ರದರ್ಶನಗೊಂಡು. ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

೨. ಮೈತ್ರಿ : ಇದು ಅವರ ಮತ್ತೊಂದು ಪೈಪ್ ಶಿಲ್ಪ. ಭಾರತ ಪಾಕಿಸ್ತಾನ ಮೈತ್ರಿ ಮಾಡಿಕೊಳ್ಳುತ್ತಿರುವ ದ್ಯೋತಕವಾಗಿ ಮಾಡಿದ ಶಿಲ್ಪವಿದು. ಸುಮಾರು ೫ ಅಡಿ ಎತ್ತರವಿದ್ದು ಪೈಪಗಳೆರಡನ್ನು ಬಾಗಿಸಿ ಪರಸ್ಪರ ಆಲಿಂಗಿಸಿಕೊಳ್ಳುವಂತೆ ಮಾಡಿದ್ದಾರೆ. ಹಿಂದೂ, ಮುಸ್ಲಿಂ ಹೋಲಿಕೆ ತರಲು ಮುಖದ ಭಾಗಕ್ಕೆ ಸೂಚ್ಯವಾಗಿ ಗಡ್ಡಮೀಸೆ ಮತ್ತು ವಿಭೂತಿ ಹಾಗೆಯೇ ಆಯಾ ಧರ್ಮಗಳ ಲಾಂಛನವಾದ ತ್ರಿಶೂಲ ಮತ್ತು ಚಂದ್ರನನ್ನು ಅಳವಡಿಸಿ ಒಟ್ಟು ಶಿಲ್ಪಕ್ಕೆ ಅರ್ಥವಂತಿಕೆ ತಂದಿದ್ದಾರೆ.

ಭಾರತದ ಪ್ರಧಾನ ಮಂತ್ರಿಯಾಗಿ ಪ್ರಥಮವಾಗಿ ಆಯ್ಕೆಯಾದ ಡಾ. ಮನಮೋಹನ ಸಿಂಗ್‌ರವರು ಅಮೆರಿಕಾದ ಅಧ್ಯಕ್ಷ ಬುಷ್‌ರವರ ಅಪೇಕ್ಷೆ ಮೇರೆಗೆ ಅಮೆರಿಕಾದಲ್ಲಿ ಪಾಕಿಸ್ತಾನದ ಪ್ರಧಾನಿ ಮುಷರಪ್ ಅವರೊಡನೆ ಸ್ನೇಹ ಬೆಳೆಸಲು ಯೋಜಿತ ಕಾರ್ಯಕ್ರಮ ರೂಪಿಸಿದ್ದು ಸ್ನೇಹಹಸ್ತ ಕುಲಕುಲ ದಿನದಂದು ಬೆಂಗಳೂರಿನ ಬಹುತೇಕ ಎಲ್ಲಾ ಭಾಷೆಯ ಪತ್ರಿಕೆಗಳು ಈ ಚಿತ್ರವನ್ನು ಮುದ್ರಿಸಿ, ಕಾರ್ಗಿಲ್ ಕದನದ ನಂತರ ಮತ್ತೆ ಎರಡು ದೇಶಗಳ ಬಾಂದವ್ಯದ ಬೆಸುಗೆಯಾಗುತ್ತಿದೆಯೆಂದು ವಿಮರ್ಶಿಸಿ ಚಿತ್ರವನ್ನು ಪ್ರಕಟಿಸಿದ್ದಾರೆ. ಅಂದಿನ ಸುಮಾರು ೨೦ ಪತ್ರಿಕೆಗಳ ಏಕಕಾಲದಲ್ಲಿ ಪ್ರಕಟವಾದದ್ದು ಶಿವಲಿಂಗಪ್ಪನವರ ಸಾಧನೆಯ ಮೈಲಿಗಲ್ಲು ಅನ್ನುವುದರಲ್ಲಿ ಅನುಮಾನವಿಲ್ಲ.

ಶಿಲ್ಪಗಳು



ಶಿರಸ್ಸು



ಧ್ಯಾನಮಗ್ನ



ದ್ವಾಸುಪರ್ಣ



ಚಿಂತಾಕ್ರಾಂತ ಗಣಪ

ಮರಳಚ್ಚಿನ ಶಿಲ್ಪಗಳು



ವಿದ್ಯಾವಿನಾಯಕ



ದ್ವಾಸುಪರ್ಣ



ನಾಗರ ಕಲ್ಲು



ರೂಪಶಿಲ್ಪ

ಶಿಲ್ಪಗಳು



ಶಿಲ್ಪ



ಬೆಂಡಿನ ಶಿಲ್ಪ ಗಣೇಶ



ಬೆಂಡಿನ ಶಿಲ್ಪ



ಬೆಂಡಿನ ಶಿಲ್ಪ

ಶಿಲ್ಪಗಳು



ತಾಯಿ ಮಗು



ಬುದ್ಧ



ಬೆಂಡಿನ ಶಿಲ್ಪ



ಜೋಡಿಗಳು

ಪ್ಲಾಸ್ಟಿಕ್ ಕೊಳವೆಗಳ ಶಿಲ್ಪಗಳು



ನಾವಿಬ್ಬರು ನಮಗೊಬ್ಬರು



ಮೈತ್ರಿ

ಅಧ್ಯಾಯ ಆರು

ಕಲಾವಿದ ಎಲ್. ಶಿವಲಿಂಗಪ್ಪನವರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ ಮತ್ತು ತಂತ್ರಶೈಲಿ

ಕಲಾವಿದರನ್ನು ಆವರಿಸಿರುವ ಸಾಮಾಜಿಕ, ಸಾಂಸ್ಕೃತಿಕ ಪರಿಸರವು ಸೂಕ್ಷ್ಮಾತೀ ಸೂಕ್ಷ್ಮವಾಗಿ ಅವರ ಮೇಲೆ ದೀರ್ಘವಾದ ಪ್ರಭಾವವನ್ನು ಬೀರುತ್ತದೆ. ಮಾನವನು ಮಾನವಾತವಾದಕ್ಕೆ ಸಲ್ಲಿಸುವ ಗೌರವವೇ ಕಲೆ ಎಂದು ಕೆಲವರು ಹೇಳುತ್ತಾರೆ. ವ್ಯಕ್ತಿಚಿತ್ರಣ ಅಥವಾ ನಿಸರ್ಗ ಚಿತ್ರಣಕರರು ಈ ಸಾಲಿಗೆ ಸೇರುತ್ತವೆ. ಕಲಾವಿದ ತನ್ನ ಸಮೂಹದ ಸಮಾಜದ ಅತಿಸುಂದರ ವ್ಯಕ್ತಿಯ ಮತ್ತು ಸುಂದರವಾದ ನಿಸರ್ಗ ಚಿತ್ರವನ್ನು ಬರೆದಿದ್ದಾರೆ. ಅದೇ ರೀತಿಯಾಗಿ ಕುರೂಪಿಯಾದವನ ಚಿತ್ರವನ್ನು ಬಿಡಿಸಿದ್ದಾರೆ. ಹಾಗೆಯೇ ಕೊಳಚೆ ಪ್ರದೇಶದ ನಿಸರ್ಗ ಚಿತ್ರವನ್ನು ಬಿಡಿಸಿದ್ದಾರೆ. ಕಲಾವಿದ ತನ್ನ ಚಿತ್ರಕ್ಕಾಗಿ ಒಬ್ಬ ವ್ಯಕ್ತಿ ಅಥವಾ ನಿಸರ್ಗ, ಪ್ರಾಣಿ, ಪಕ್ಷಿ ಹೀಗೆ ಅನೇಕ ಬಗೆಯ ವಸ್ತುಗಳನ್ನು ಆಯ್ದುಕೊಳ್ಳಲು ಒಂದು ಅಂತಃ ಪ್ರೇರಣೆ ಅಥವಾ ಉದ್ದೇಶವಿದ್ದೆ ಇರುತ್ತದೆ. ಕೆಲವು ಸಂದರ್ಭದಲ್ಲಿ ವ್ಯಕ್ತಿ ಬಾಹ್ಯ ಆಕಾರ ಅಥವಾ ಪ್ರಾಣಿಗಳು ನಿಸರ್ಗದ ಸೌಂದರ್ಯಕ್ಕೆ ಮತ್ತು ಅದರ ಆಕಾರಕ್ಕೆ ಅಥವಾ ಆಕೃತಿಗಳಿಗೆ ಪ್ರೇರಣೆಯಾದರೆ ಬೇರೆ ಸಂದರ್ಭದಲ್ಲಿ ವ್ಯಕ್ತಿಯ ಒಳಗಿರುವ ವ್ಯಕ್ತಿತ್ವ ಪ್ರೇರಣೆಯಾಗಿರುವ ಸಾಧ್ಯತೆ ಇದೆ. ಇಲ್ಲಿ ಕಲಾವಿದರು ತಮ್ಮ ಸಮಾಜ ಅಥವಾ ಸಮುದಾಯದಿಂದ ಪ್ರಭಾವಿತರಾಗುತ್ತಾರೆ. ಚಿತ್ರಕಾರರೂ ಇದಕ್ಕೆ ಹೊರತಾಗಿಲ್ಲ. ಒಂದು ಸಮುದಾಯದಲ್ಲಿ ವಿಶಿಷ್ಟವಾದ ಕೆಲವು

[illegible]

ಸಂಪ್ರದಾಯ ಅಥವಾ ಪರಂಪರೆಗಳು ಹಾಗೂ ಕಲಾಪಂಥಗಳು ಹುಟ್ಟಿಕೊಳ್ಳುವವು. ಬೆಳೆಯುತ್ತಿರುವ ಕಲಾವಿದರು ಅವುಗಳ ಪ್ರಭಾವಕ್ಕೆ ಸಿಲುಕಿಕೊಳ್ಳುತ್ತಾರೆ. ಚಿತ್ರ ರಚನೆಯ ಕಾಲದಲ್ಲಿ ಕಲಾವಿದನಿಗಿರುವ ಮಾನಸಿಕ ಭಾವನೆಗಳಂತೆ ಅವರ ಕಲಾಕೌಶಲ್ಯ ಕೂಡಾ ಬದಲಾಗುತ್ತದೆ. "ಒಂದೊಂದು ಬಗೆಯ ವಿಚಾರಗಳನ್ನು ತಿಳಿಸಲು ಒಂದೊಂದು ಬಗೆಯ ಕೌಶಲ್ಯ ಹಾಗೂ ಶೈಲಿ ಬೇಕಾಗಬಹುದು. ಅದನ್ನು ಕಲಾವಿದ ತನಾಗಿಯೇ ತನ್ನ ಮನಸ್ಸಿನಿಂದ ಹೊರಹೊಮ್ಮುವ ಭಾವನೆಗಳಿಗೆ ರೂಪಕೊಡಲು ಯೋಗ್ಯವೆನಿಸಿರುವ ಶೈಲಿಯನ್ನು ಪ್ರಾಯೋಗಿಸುತ್ತಾನೆ. ಮಾನಸಿಕ ಭಾವಗಳನ್ನು ಹೊರಗೆಡಹಲು ಪ್ರತಿಯೊಬ್ಬ ಕಲಾವಿದ ತನ್ನದೇ ಆದ ಶೈಲಿಯನ್ನು ಗುರುತಿಸಿ ರೂಪಿಸಿ ಬೆಳೆಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಎಷ್ಟೋ ವಿಷಯಗಳ ಹಾಗೂ ಎಷ್ಟೋ ಬಗೆಯ ಕಲಾಕೃತಿಗಳನ್ನು ನೋಡುವಂತೆ ಅನೇಕ ಬಗೆಯ ಚಿತ್ರ ರಚನಾ ಕೌಶಲ್ಯಗಳನ್ನು, ತಂತ್ರಗಳನ್ನು, ಶೈಲಿಗಳನ್ನು ಕಾಣುತ್ತೇವೆ".[೧] "ನಾವು ನಮ್ಮ ಸಮಕಾಲೀನ ಕಲೆ ಪಾಶ್ಚಾತ್ಯ ಪ್ರಭಾವಗಳಿಗೆ ಒಳಗಾಗಿದೆಯೆಂದು ಹೇಳಿದರು ಈ ಪ್ರಭಾವ ಹೆಚ್ಚಾಗಿ ಆಗಿರುವುದು ರೂಪ ಮತ್ತು ತಂತ್ರಗಳಲ್ಲೆ ಹೊರತು ವಸ್ತು ಹಾಗೂ ಅನುಭವಗಳಲ್ಲಿ ಅಲ್ಲ. ಚಿತ್ರಕಲೆ ಮತ್ತು ಸಮಾಜ ಇವೆರಡರ ಪರಸ್ಪರ ಸಂಬಂಧ ಮತ್ತು ಪ್ರಭಾವಗಳನ್ನು ಚರ್ಚಿಸುವ ಸಂದರ್ಭದಲ್ಲಿ ನಾವು ಸಮಾಜ ಎಂಬ ಪದವನ್ನು ವಿಶಾಲ ಅರ್ಥದಲ್ಲಿ ಬಳಸುತ್ತೇವೆ. ಈ ಅರ್ಥದ ವಿಸ್ತರದಲ್ಲಿ ಸುತ್ತಲಿನ ಜನ, ಸಮುದಾಯ, ಅವರ ಪರಂಪರೆಗಳು, ಮೌಲ್ಯಗಳು, ನಂಬಿಕೆಗಳು, ಜನರ ಭೌತಿಕ ಪರಿಸರ, ದೇಶ, ಕಾಲ, ಸನ್ನಿವೇಶದ ಮೀತಿಗಳು, ಸಂಸ್ಕೃತಿಯ ವಿಭಿನ್ನ ಶೈಲಿಗಳು ಇವೆಲ್ಲ ಒಳಗೊಳ್ಳುತ್ತವೆ. ಹೀಗೆ ವಿಶಾಲವಾದ ಅರ್ಥದಲ್ಲಿ ಬಳಸಿದಾಗ ಚಿತ್ರಕಲೆ ಮತ್ತು ನಾವು ಸಮಾಜದ ಪರಿಕಲ್ಪನೆಯಲ್ಲಿ ಒಳಗೊಳ್ಳುತ್ತದೆಂದು ಹೇಳಿದ ಎಲ್ಲಾ ಸಂಗತಿಗಳಿಗೆ ಸಂಬಂಧವಿದೆ".[೨]

ಪ್ರಭಾವ

ಮಾನವನ ಜೀವನಕ್ಕೂ ಕಲೆಗೂ ನಿಕಟವಾದ ಸಂಬಂಧವಿದೆ. ವ್ಯಕ್ತಿಯು ಅನುಭವಿಸಿದ ಘಟನೆ, ಸ್ಥಳ, ಸ್ಥಿತಿಗತಿಗಳ ನೋವು ನಲಿವು ಮುಂತಾದವುಗಳ ಒತ್ತಡದಿಂದ ಒಂದೊಂದು ರೀತಿಯ ಸಂವೇದನೆಯನ್ನು ಪಡೆಯುತ್ತಾನೆ. ಅದಕ್ಕನುಗುಣವಾಗಿ ತನ್ನ ಅನಿಸಿಕೆಗಳನ್ನು ಹೇಳಬೇಕು ಎನ್ನುವ ಬಾವನೆ ಆಕಾಂಕ್ಷೆ ಪ್ರತಿಯೊಬ್ಬನಲ್ಲಿ ಸ್ವಭಾವ ಜನ್ಯವಾಗಿರುತ್ತದೆ. ಆದರೆ ಆ ಗುಣ, ಅನುಭವಗಳು, ಪ್ರಜ್ಞೆಯ ವಸ್ತುಗಳಾದಾಗ ಅವು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತವೆ. ಇವು ವಿವಿಧ ರೀತಿಯ ಸಂವಹನ ಮಾಧ್ಯಮಗಳ ಮೂಲಕ ಸೃಷ್ಟಿಸುವ ಪ್ರತಿ ಮಡುವಿನಲ್ಲಿರುವ ಗಿಡ, ಮರ, ಹೂಬಳ್ಳಿ, ಹೀಗೆ ಅವನು ನೆಲೆಸಿರುವ ಈ ಒಂದು ವಾತಾವರಣವು ಅವನಲ್ಲಿ ಪ್ರೇರಣೆಯನ್ನು ತುಂಬುತ್ತವೆ. ಈ ಪರಿಸರದ ವಾತಾವರಣವನ್ನು ತಾನು ಅನುಭವಿಸಿದಾಗ ಮಾತ್ರ ಅದು ಕಲಾತ್ಮಕವಾಗಿ ರೂಪಿತವಾಗುತ್ತದೆ. ಅದಕ್ಕಾಗಿ ಸಾಮಾನ್ಯ ಮನುಷ್ಯನಿಗೂ

---

೧. ಜಿ.ಎಸ್. ಶಿವರುದ್ರಪ್ಪ, ಸೌಂದರ್ಯ ಸಮೀಕ್ಷೆ, ಪು. ೧೪೫

೨. ಎನ್. ಮರಿಶಾಮಾಚಾರ್, ದೃಶ್ಯಕಲಾವಿದರು, ಪು. ೧೮

ಕಲಾವಿದನಿಗೂ ಸ್ವಲ್ಪ ವ್ಯತ್ಯಾಸವಿದೆ. ಸಾಮಾನ್ಯ ಮನುಷ್ಯನಾದ ತನ್ನ ಸುತ್ತಮುತ್ತಲಿನ ಪರಿಸರವನ್ನು ನೋಡುವ ರೀತಿ ಅದೇ ಪರಿಸರವನ್ನು ಒಬ್ಬ ಕಲಾವಿದನಾದವನು ನೋಡುವ ರೀತಿಗೆ ತುಂಬ ವ್ಯತ್ಯಾಸವಿರುವುದು ಸಾಮಾನ್ಯ. ಮನುಷ್ಯನಾದವನ್ನು ಈ ವಾತಾವರಣವನ್ನು ನೋಡಿಯೂ ಅವನಿಗೆ ಅಲ್ಲೇ ಇದ್ದರೂ ಕೂಡ ಅದು ಅವನಿಗೆ ಯಾವ ರೀತಿಯ ಪರಿಣಾಮ ಬೀರಬಲ್ಲದು. ಆದರೆ ಅದೇ ಪರಿಸರವನ್ನು ವಾತಾವರಣವನ್ನು ಒಬ್ಬ ಕಲಾವಿದನಾದವನ್ನು ಕಲಾತ್ಮಕ ದೃಷ್ಟಿಯಿಂದ ನೋಡುತ್ತಾನೆ.

ಒಳ್ಳೆಯ ಪರಿಸರದಿಂದ ಒಬ್ಬ ಕಲಾವಿದನಾಗಲು ಸಾಧ್ಯ ಎಂಬುದನ್ನು ಒಪ್ಪಿಕೊಂಡರೆ ಆ ಪರಿಸರ ಎಂಥದ್ದು ಇರಬೇಕು ಎನ್ನುವುದನ್ನು ತಿಳಿಯುವುದು ಮುಖ್ಯವಾಗುತ್ತದೆ. ಪರಂಪರೆ ನಮಗೆ ಕಲೆಯನ್ನು ಕೊಟ್ಟಿದೆ ಎನ್ನುವುದಾದರೆ ನಮ್ಮ ತಂದೆ ತಾಯಿ ಮತ್ತು ತಾತಂದಿರು ನಮಗೆ ಮೊದಲ ಗುರುಗಳಾಗುತ್ತಾರೆ. ಒಲವು ಇರದೇ ಹೋದರೆ ಅನಿವಾರ್ಯವಾಗಿ ಉದರ ಪೋಷಣೆಗಾಗಿ ತಮ್ಮ ಹಿರಿಯರ ವೃತ್ತಿಯನ್ನು ಕೆಲವರು ಅನುಸರಿಸುತ್ತಾರೆ. ಅಂಥವರು ತಂದೆ ಮಾಡಿದ್ದನ್ನೇ ಮುಂದುವರೆಸಿಕೊಂಡು ಬರುತ್ತಾರೆ. ಅದು ಕೇವಲ ನಕಲು ಅಥವಾ ಪ್ರತಿಕೃತಿ ಮಾತ್ರವಾಗಿರುತ್ತದೆ. ಅದರಲ್ಲಿ ನಾವು ಒಳ್ಳೆ ಕಲೆಯ ಲಕ್ಷಣಗಳನ್ನು ಕಾಣಬಹುದು. ಆದರೆ ಅದು ಅವನ ಕೃತಿಯಂದಲೂ ಅಲ್ಲ. ಕೇವಲ ಸಾಂಪ್ರದಾಯಿಕವಾಗಿ ಬಂದದ್ದು ಅದರಲ್ಲಿ ಕೌಶಲ್ಯ ಮಾತ್ರ ಕಾಣಬಹುದು. ಆದರೆ ಸೃಜನಶೀಲತೆ ಕಾಣದು.

"ಇನ್ನು ಕಲೆಯ ಕಡೆಗೆ ಒಲವು ಇದ್ದು ಕಲಾವಿದನಾಗಬೇಕೆಂಬ ಹಂಬಲದಿಂದ ಪ್ರಯತ್ನದಲ್ಲಿ ತೊಡಗುವವರು ಇನ್ನೊಂದು ಬಗೆಯವರು. ಅವರು ಪರಿಸರವನ್ನು ಹುಡುಕಿಕೊಂಡು ಹೋಗುವಂಥವರು. ಅಂಥವರು ಅಧ್ಯಯನಶೀಲರು. ಸಂಪ್ರದಾಯಗಳ ಬಗ್ಗೆ ತಿಳಿದುಕೊಂಡು ಅಂಥದ್ದೇ ನಕಲುಗಳನ್ನು ಮಾಡುತ್ತಾ ಸಮಾಧಾನ ಸಿಗದೇ ಹೊಸದನ್ನು ಸೃಷ್ಟಿಸುವ ಕಡೆಗೆ ಗಮನಹರಿಸುವರು. ಕೌಶಲ್ಯವನ್ನು ಕರಗತಮಾಡಿಕೊಂಡು ಮುಂದೆ ಹೋಗಬೇಕೆನ್ನುವ ಮನೋಭಾವದವರು. ಹೊಸ ಹೊಸ ವಿಷಯಗಳತ್ತ ಆಸಕ್ತಿ ಹೊಂದಿ ಅನೇಕ ವಿಚಾರಗಳನ್ನು ತಿಳಿಯ ಬಯಸುವರು. ಬುದ್ಧಿವಂತರ ಸಾನ್ನಿಧ್ಯ ಬಯಸುವಂಥವರು. ಕಲಾಶಾಲೆಗಳು ಬಹುಶಃ ಇವರ ದಾಹವನ್ನು ನೀಗಿಸುವಲ್ಲಿ ಸಹಕಾರಿ ಆಗಬಲ್ಲವು. ಅಂಥವರಿಗೆ ಕಲಾಶಾಲೆಗಳು ಮಾರ್ಗದರ್ಶನವನ್ನು ನೀಡಬಲ್ಲವು. ಬೇರೆ ಬೇರೆ ಕಲಾವಿದರ ಶೈಲಿ, ತಂತ್ರ, ವಿಷಯ ಇತ್ಯಾದಿಗಳ ಬಗ್ಗೆ ತಿಳುವಳಿಕೆ ಸಿಗುವುದು. ಗ್ರಂಥ ಭಂಡಾರದ ನೆರವು ಸಿಗುವುದು. ಜೊತೆಗೆ ಅವರ ಮನಸ್ಸಿನಲ್ಲಿ ಮೂಡುವ ಪ್ರಶ್ನೆಗಳಿಗೆ, ಅನುಮಾನಗಳಿಗೆ ಸಾಂತ್ವನ ನೀಡಬಲ್ಲ ಸಂವಾದದಿಂದ ತಿಳುವಳಿಕೆ ಹಾಗೂ ಚೈತನ್ಯ ತುಂಬಬಲ್ಲ ಪ್ರಜ್ಞಾವಂತ ಜ್ಞಾನಿಯಾದ ಕಲಾವಿದನಿಗೆ ಗುರು ಒಬ್ಬ ಬೇಕಾಗುತ್ತಾನೆ".[೩]

ಜೀವನದ ಅನುಭವಗಳನ್ನು ಮನಸ್ಸಿನ ಭಾವನೆಗಳನ್ನು ಕಲಾವಿದ ತನ್ನ ಚಿತ್ರದಲ್ಲಿ ಬೆರೆಸುವುದು ಸಹಜ. ಸಾಹಿತಿಗೆ ಶಬ್ದಗಳು ಸಾಧನವಾದಂತೆ ಕಲಾವಿದನಿಗೆ ಬಣ್ಣಗಳು ರೇಖೆಗಳು ಆಕೃತಿಗಳು ಸಾಧನವಾಗಿವೆ.

---

೩. ಶಂಕರ ಪಾಟೀಲ ಚಿತ್ರಾಂತಾಂಗ ಪು. ೧೧೨

ಶಬ್ದಗಳಿಗೆ ಕೋಶದಲ್ಲಿ ಅರ್ಥ ದೊರೆಯುತ್ತದೆ. ಆದರೆ ಬಣ್ಣಗಳಿಗೆ ಆಕೃತಿಗಳಿಗೆ ಯಾವುದಕ್ಕೆ ಪ್ರತೀಕಗಳಾಗಿ ಬಂದಿವೆ. ಪ್ರತಿಮೆಗಳಾಗಿ ಮೂಡಿವೆ, ಏನನ್ನು ಹೇಳುತ್ತವೆ ಎನ್ನುವುದನ್ನು ಆಲೋಚಿಸಬೇಕಾಗುತ್ತದೆ. ಪ್ರತಿಯೊಬ್ಬ ಕಲಾವಿದನೂ ತನನ್ನೇ ಆದ ಅನುಭವ ಹಾಗೂ ಕಲ್ಪನಾ ಶಕ್ತಿಯಿಂದ ಬೇರೆ ಬೇರೆ ಅರ್ಥಗಳನ್ನು ಕಂಡು ಕೊಂಡಿದ್ದಾರೆ. ಅದೇ ರೀತಿ ವಿಕ್ಷಕನೂ ಕೂಡಾ ಕಲ್ಪನಾ ಶಕ್ತಿಯ ವೃದ್ಧಿಸಿಕೊಳ್ಳಬಹುದು.

ಮೊದ ಮೊದಲು ಚಿತ್ರಕಲಾವಿದ ಹಲವಾರು ವಸ್ತುಗಳನ್ನು ಪ್ರತಿಮೆ ಪ್ರತೀಕ ಅಂತ ಇಟ್ಟುಕೊಂಡು ಭಾವನೆಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸಿದ. ಈ ಪ್ರಯತ್ನದಲ್ಲಿ ಸಾಧಿಸಿ ಗೆದ್ದು ಮುನ್ನಡೆದ. ವಸ್ತುವಿನ ಆಕಾರಗಳಲ್ಲಿ ಬದಲಾವಣೆಗಳನ್ನು ಮಾಡುತ್ತ ಸರಳೀಕರಿಸುತ್ತ ಬಂದನು. ಇದೊಂದು ಹಂತದ ನಂತರ ವಸ್ತುವಿನ ಮೂಲ ಆಕಾರಕ್ಕೆ ಹಾಗೂ ಕಲಾವಿದ ನಿರ್ಮಿಸಿದ ಆಕಾರಕ್ಕೆ ಸಾಕಷ್ಟು ಬದಲಾವಣೆ ಇದ್ದರೂ ಮೂಲ ವಸ್ತುವಿನ ಭಾವನೆಯನ್ನು ಅದರಲ್ಲಿ ವ್ಯಕ್ತಪಡಿಸುವ ಒಂದು ಘಟ್ಟವನ್ನು ಕಂಡುಕೊಂಡ. ಬದುಕಿನಿಂದ ಸಂವೇದನೆಗೊಂಡು ಬದುಕಿಗೆ ಸ್ಫೂರ್ತಿಯನ್ನು ಕೊಡುವ ಚಿತ್ರಕಲೆ ಬದುಕಿನ ನಿಯಮವನ್ನು ಒಂದು ರೀತಿ ಅನುಸರಿಸುತ್ತದೆ. ಅದರಲ್ಲಿಯೂ ಜೀವನದಲ್ಲಿರುವಂತೆಯೇ ಏಳು ಬೀಳುಗಳ ಸಂಪ್ರದಾಯಗಳು. ಅವುಗಳ ವಿರುದ್ಧ ಕ್ರಾಂತಿ ಇತ್ಯಾದಿಗಳನ್ನು ಕಾಣುತ್ತೇವೆ. ಜೀವನ ಬದಲಾಯಿಸಿದಂತೆ ಜೀವನದ ಮೌಲ್ಯಗಳು ಬದಲಾದಂತೆ ಕಲೆಯು ಬದಲಾಗುತ್ತದೆ. ಹಳೆಯದರ ಸ್ಥಾನಕ್ಕೆ ಹೊಸದೊಂದು ನಿಲ್ಲುತ್ತದೆ. ಈ ಹೊಸದೊಂದು ಕೂಡ ಮುಂದೆ ಮತ್ತೊಂದು ಹೊಸ ಸಂಪ್ರದಾಯಕ್ಕೆ ದಾರಿ ಮಾಡಿಕೊಡುತ್ತದೆ. ಈ ಕಲಾನುಗುಣ ಅಭಿವ್ಯಕ್ತಿಯಾಗಿ ಹೊರಬರುತ್ತವೆ. ಈ ಕ್ರಿಯೆಯನ್ನು ಸೃಷ್ಟಿಕ್ರಿಯೆ ಎಂದು ಹೇಳಬಹುದು. ಹೀಗಾಗಿ ಕಲಾವಿದನಿಗೆ ಸೃಷ್ಟಿಯೇ ಮೊದಲ ಪ್ರೇರಣಾ ಶಕ್ತಿಯಾಗಿ ಹೊರಹೊಮ್ಮುತ್ತದೆ. ಒಬ್ಬ ಕಲಾವಿದನ ಸುತ್ತಮುತ್ತಲಿನ ಪರಿಸರ ಅಲ್ಲಿಯ ವಾತಾವರಣವೇ ಅವನಿಗೆ ಪ್ರೇರಣೇಭೂತವಾಗುವುದರಲ್ಲಿ ಸಂದೇಹವೇ ಇಲ್ಲ. ನಿಸರ್ಗದಲ್ಲಿ ನಿರಂತರವಾಗಿ ನಡೆಯುವ ಕ್ರಿಯೆ ಅದೊಂದು ರಾಜಕೀಯ, ಧಾರ್ಮಿಕ, ಸಾಮಾಜಿಕ, ಬದಲಾವಣೆಗಳಿಗೆ ಪ್ರತಿಕ್ರಿಯೆ ತೋರುವ ಕಾರಣ ಕಲೆಯ ವಿಕಾಸ ಮಾರ್ಗದಲ್ಲಿ ಹಲವು ವಿಶಿಷ್ಟ ಲಕ್ಷಣ, ವೈಶಿಷ್ಟ್ಯ, ವೈಚಿತ್ರ್ಯಗಳನ್ನು ಇಂದಿನ ಸಮಕಾಲೀನ ಕಲೆಯಲ್ಲಿ ಗುರುತಿಸಬಹುದಾಗಿದೆ. ಮಾನವನ ಗತ ಪ್ರಭಾವವನ್ನು ಬೀರುತ್ತದೆಂಬುದು ತಿಳಿಯುತ್ತದೆ.

ಒಬ್ಬ ಕಲಾವಿದನಾದವನ್ನು ಅನ್ಯಶಾಸ್ತ್ರವನ್ನು ತನ್ನ ಚಿಂತನಾಶೀಲ ಎಳೆಯಾಗಿ ಹೀಗೆ ಪರಿವರ್ತಿಸಿ ಕೊಳ್ಳುತ್ತಾನೆ. ಮತ್ತು ಈ ಬಗೆಯ ಎಳೆಯ ಸುಪ್ತ ಸ್ವರಗಳಲ್ಲಿ ಪರಿಚಯಿಸುತ್ತಿರುವಾಗಲೇ ಸಂವೇದನೆಗೆ ಶಕ್ತಿದಾಯಕವಾಗುತ್ತದೆ. ಅಂದರೆ ಸೃಷ್ಟಿಕ್ರಿಯೆ ಎಷ್ಟರ ಮಟ್ಟಿಗೆ ಪುಷ್ಟಿದಾಯವಾದೀತು ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಚಿತ್ರಕಲೆ, ರೇಖೆಗಳು, ಆಕಾರಗಳ ಮೂಲಕ ವರ್ಣಮಯ ರೂಪವನ್ನು ತಾಳುತ್ತ ಬಂದು ವರ್ಣಶೋಭೆ ಚಿತ್ರಕಲೆಗೆ ಹೆಚ್ಚಿನ ಆಯಾಮ ಪ್ರಭಾವಮಯವನ್ನು ನೀಡಿತು. ನಾವು ಬರೆಯುವ ಎಲ್ಲಾ ಭಾಷೆಗಳ ಅಕ್ಷರಗಳೂ ಸಹ ಚಿತ್ರಕಲೆಯ ಆಕಾರಗಳ ಮುದ್ರಣಾಲಯಗಳಲ್ಲದೆ ಇತ್ತೀಚೆಗೆ

[illegible]

[illegible]

ಕಂಪ್ಯೂಟರ್‌ಗಳಲ್ಲಿ ಮೂಡುತ್ತಿರುವುದು. ಚಿತ್ರಗಳು ವಿವಿಧ ಮಾದರಿಯ ಅಕ್ಷರ ವಿನ್ಯಾಸಗಳನ್ನು ಸಹ ಚಿತ್ರಕಲೆ, ಚಾಕ್ಷುಕ ಪ್ರಭಾವ ದೃಷ್ಟಿಯೇ ಕೆಲಸ ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ.

ಶಿವಲಿಂಗಪ್ಪನವರು ತಮ್ಮ ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೆ ಹಲವಾರು ರೀತಿಯ ಪ್ರಭಾವಕ್ಕೆ ಒಳಗಾಗಿ ಕಲಾ ಸೃಷ್ಠಿಯಲ್ಲಿ ತೊಡಗಿರುವುದನ್ನು ನಾವು ಕಾಣಬಹುದು. ಇವರು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಅಲ್ಲಿ ಬೇರೆ ವಿಷಯಗಳೊಂದಿಗೆ ಚಿತ್ರಕಲೆ ಇರಲಿಲ್ಲ. ಆಗಿನ ಕಾಲದಲ್ಲಿ ಸರ್ಕಾರಿ ಶಾಲೆಯಲ್ಲಿ ಕಡ್ಡಾಯವಾಗಿ ಚಿತ್ರಕಲೆ ಇರಲಿಲ್ಲ. ಕೆಲವು ಮೂರ್‍ನಾಲ್ಕು ಸರ್ಕಾರಿ ಶಾಲೆಗಳಲ್ಲಿ ಚಿತ್ರಕಲೆ ಮತ್ತು ಸಂಗೀತ ಇರುತ್ತಿದ್ದವು. ಆದರೆ ಶಿವಲಿಂಗಪ್ಪನವರ ಪ್ರಾಥಮಿಕ ಶಿಕ್ಷಣದಲ್ಲಿ ಅವರ ಮನೆಯ ಮಧ್ಯೆ ಇರುವ ಗುರುಕುಲ ಕಲಾಶಾಲೆಯಲ್ಲಿ ಇವರ ಚಿತ್ರಕಲೆ ಪ್ರಾರಂಭ ಮಾಡಿದರು. ಶಿವಲಿಂಗಪ್ಪನವರು ಬೆಳಿಗ್ಗೆ ೧೧ ಗಂಟೆಗೆ ಶಾಲೆ ಪ್ರಾರಂಭವಾಗುತ್ತಿತ್ತು. ಮನೆಯಲ್ಲಿ ಕಡುಬಡುತನ ಇರುವುದರಿಂದ ಇವರು ಒಂದು ನಿರ್ಧಾರಮಾಡಿದರು. ಬೆಳಿಗ್ಗೆ ೮ ರಿಂದ ೧೧ ಗಂಟೆಯವರೆಗೆ ಚಿತ್ರಕಲೆ ಅಭ್ಯಾಸ ಮಾಡಬೇಕು. ನಂತರ ೧೦ ಗಂಟೆಗೆ ಶಾಲೆಗೆ ಹೋಗಬೇಕು. ಶಾಲೆಯಿಂದ ಸಂಜೆ ೫ ಗಂಟೆಗೆ ಬಂದು ಪುನಃ ಚಿತ್ರಕಲೆ ಅಭ್ಯಾಸ ಮಾಡಬೇಕು ಎಂದುಕೊಂಡು ಅವರು ಗುರುಕುಲದಲ್ಲಿ ಚಿತ್ರಕಲೆ ಕಲಿಯುವುದಕ್ಕೆ ಹೋದರು. ಗುರುಕುಲದಲ್ಲಿ ಪ್ರವೇಶಕ್ಕೆ ಮುಂಚೆ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಒಳಪಡಿಸುತ್ತಿದ್ದರು. ಇವರಿಗೆ ಅಷ್ಟೊಂದು ಕಷ್ಟವಾಗಲಿಲ್ಲ. ಚಿತ್ರಗಳನ್ನು ಬಿಡಿಸಿ ಕೊಟ್ಟಮೇಲೆ ಇವರ ಚಿತ್ರಗಳನ್ನು ನೋಡಿ ಗುರುಗಳು ತುಂಬಾ ಸಂತೋಷಪಟ್ಟರು. ಬಾಲಕ ತುಂಬಾ ಚುರುಕಾಗಿದ್ದಾನೆ ಎಂದುಕೊಂಡರು. ಇವರಿಗೆ ಗುರುಕುಲದಲ್ಲಿ ಪ್ರವೇಶ ದೊರೆಯಿತು. ಗುರುಕುಲಕ್ಕೆ ಹೆಚ್ಚು ಜನ ಬರುತ್ತಿರಲಿಲ್ಲ. ಅವರು ಚಿತ್ರಕಲೆಯ ಎಲ್ಲಾ ಆಗುಹೋಗುಗಳನ್ನು ಹೇಳಿಕೊಡುತ್ತಿದ್ದರಲ್ಲದೇ ಸ್ವತಃ ತಾವೇ ಒಂದೆರಡು ಚಿತ್ರಗಳನ್ನು ಬಿಡಿಸಿ ತೋರಿಸುತ್ತಿದ್ದರು. ಇದಲ್ಲದೆ ಅವರು ಪೌರಾಣಿಕ ವಿಷಯದಲ್ಲಿ ಬರುವ ರಾಮಾಯಣದ ವಿಷಯಗಳನ್ನು ಹೇಳುತ್ತಿದ್ದರು. ಹೀಗೆ ವೇದ ಪುರಾಣದಲ್ಲಿ ಬರುವ ಸನ್ನಿವೇಶಗಳನ್ನು ಹೇಳುತ್ತಿದ್ದರು. ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ರಾಜ ವಂಶದವರ ಆಳ್ವಿಕೆಯ ನಡೆಸಿದರು ಎಂಬುವ ಹತ್ತು ಹಲವು ವಿಷಯಗಳನ್ನು ತೋರಿಸಲಾಗುತ್ತಿತು. ಇದಲ್ಲದೆ ಶಿಲ್ಪಕಲೆಯಲ್ಲಿ ಬರುವ ರೇಖಾಚಿತ್ರಗಳು ಮತ್ತು ಅವರ ಭಾವಚಿತ್ರಗಳನ್ನು ಮತ್ತು ಆಕೃತಿಗಳನ್ನು ಚಿತ್ರಿಸುವುದು ಈ ವಿಷಯದಲ್ಲಿ ಗುರುಗಳು ತುಂಬಾ ಆಸಕ್ತಿಯಿಂದ ಹೇಳುತ್ತಿದ್ದರು. ಹೀಗಿರುವಾಗ ಚಿತ್ರಕಲೆಯಲ್ಲಿ ಪ್ರಭಾವಿತಕೊಂಡೆ. ಗುರುಗಳಾದ ನಾಗೇಂದ್ರ ಸ್ಥಪತಿಗಳು ಹೇಳಿದ ಹಾಗೆ ಒಂದನ್ನು ಬಿಟ್ಟು ಬಿಡದೆ ಚಿತ್ರವನ್ನು ಮಾಡುತ್ತಿದ್ದರು. ಗುರುಗಳಿಗೆ ಮಾಡಿದ ಚಿತ್ರವನ್ನು ತೋರಿಸುತ್ತಿದ್ದೆ ಆಗ ಅವರು ಬಿಡಿಸಿದ ಚಿತ್ರಗಳನ್ನು ನೋಡಿ ಸರಿಯಿದ್ದುದನ್ನು ಸರಿ ಎಂದು ತಪ್ಪಿದ್ದರೆ ಅದನ್ನು ತಿದ್ದಿಕೊಳ್ಳಲು ಹೇಳುತ್ತಿದ್ದರು.

ಒಂದೊಂದು ಸಾರಿ ಅವರು ತೆಗೆದ ಚಿತ್ರಗಳನ್ನು ನೋಡಿ ಸರಿ ಇದ್ದರೆ ಅದರ ಮೇಲೆ ಗುಡ್ ಎಂದು ಸಹಿ ಮಾಡುತ್ತಿದ್ದರು. ಎಂದಿಗೂ ಗುರುಕುಲಕ್ಕೆ ತಪ್ಪಿಸುತ್ತಿರಲಿಲ್ಲ. ಹೀಗಿರುವಾಗ ಮತ್ತೆ ಮತ್ತೆ ಹೆಚ್ಚಿನ

ರೀತಿಯಲ್ಲಿ ಚಿತ್ರ ರಚನೆಯಲ್ಲಿ ಮುಂದಾಗುತ್ತಿತ್ತು. ಇದು ಒಂದು ರೀತಿಯಲ್ಲಿ ಪ್ರಭಾವವನ್ನು ಬೀರಿದರೆ ಇನ್ನೊಂದು ರೀತಿಯಲ್ಲಿ ತುಂಬಾ ಪ್ರಭಾವಿತಗೊಂಡಿದ್ದೆ. ಅದು ಹೇಗೆಂದರೆ ಇಬ್ಬರೂ ಸ್ನೆಹಿತರು ಕೂಡಿಕೊಂಡು ದಿನಾಲು ಸಂಜೆ ಶಾಲೆಯಿಂದ ಬರುವಾಗ ಸಿನಿಮಾ ಪೋಸ್ಟರ್‌ಗಳನ್ನು ಅಂದರೆ ನಟ, ನಟಿಯರ ಭಾವಚಿತ್ರಗಳನ್ನು ದೊಡ್ಡ ದೊಡ್ಡ ಬಟ್ಟೆಯ ಮೇಲೆ ಚಿತ್ರಗಳನ್ನು ಬರೆಯುತ್ತಿದ್ದರು. ಅದನ್ನು ನೋಡುತ್ತ ಮನೆಗೆ ಹೋಗುತ್ತಿದ್ದೇವು. ಶಾಲೆಯಲ್ಲಿ ಮಧ್ಯದಲ್ಲಿ ಸ್ವಲ್ಪ ಬೇಜಾರೆನಿಸಿದರೆ ಅಲ್ಲೇ ಹತ್ತಿರದಲ್ಲಿ ಇವರು ಸಿನಿಮಾ ಪೋಸ್ಟರ್‌ಗಳನ್ನು ತಯಾರಿ ಮಾಡುತ್ತಿದ್ದರು. ಅವರು ರಾತ್ರಿಯಲ್ಲಿ ಚಿತ್ರಗಳನ್ನು ಬರೆಯುತ್ತಿದ್ದರು. ನಾವುಗಳು ಆ ಸಿನಿಮಾ ಪೋಸ್ಟರ್ ಮಾಡುವ ಕಡೆ ಹೋಗುತ್ತಾ ಇದ್ದೇವು. ಚಿತ್ರ ಬಿಡಿಸುವ ಸ್ಥಳಕ್ಕೆ ಮಾತ್ರ ಹೋಗುತ್ತಿರಲಿಲ್ಲ. ಏಕೆಂದರೆ ನಮ್ಮ ಮನೆಯಲ್ಲಿ ಅಲ್ಲಿಗೆ ಹೋಗುವುದನ್ನು ಕಂಡರೆ ಬಯ್ಯುತ್ತಿದ್ದರು. ತುಂಬಾ ಕಟ್ಟಾಪಣೆಯಾಗಿತ್ತು. ಅದರೂ ನಾನು ಮತ್ತು ನನ್ನ ಇಬ್ಬರು ಸ್ನೇಹಿತರು ಸೇರಿಕೊಂಡು ದಿನಾಲು ಒಂದು ಸಾರಿಯಾದರೂ ಆ ಚಿತ್ರಗಳ ಕಡೆ ತಿರುಗುತ್ತಿದ್ದೇವು. ಒಂದೊಂದು ಸಾರಿ ಭಯವು ಆಗುತ್ತಿತ್ತು. ಯಾರಾದರೂ ನೋಡಿದರೆ ಎಲ್ಲಿ ನಮ್ಮ ಮನೆಯಲ್ಲಿ ಹೇಳುತ್ತಾರೆಯೋ ಎಂದು ನಾವು ಆ ಸಿನಿಮಾ ಚಿತ್ರಗಳ ಕಡೆ ಭಯದಿಂದ ನೋಡುತ್ತಾ ಹೋಗುತ್ತಿದ್ದೆವು.

ನಾವು ಆ ಸಿನಿಮಾ ಕಡೆ ಬರಬೇಕಾದರೆ ಒಂದು ಕಾರಣವೂ ಇತ್ತು. ಅದೊಂದು ದೊಡ್ಡ ಕಟ್ಟಡ ಅದರೊಳಗೆ ಚಿತ್ರಗಳನ್ನು ರಚಿಸುತ್ತಿದ್ದರು. ಅವು ಪೂರ್ತಿಗೊಂಡ ಮೇಲೆ ಚಿತ್ರಗಳನ್ನು ಹೊರತಂದು ನಿಲ್ಲಿಸುತ್ತಿದ್ದರು. ಹಲವಾರು ರೀತಿಯಲ್ಲಿ ಸುಂದರವಾದ ಚಿತ್ರಗಳಿಂದ ಚಿತ್ರಿಸಲಾಗಿತ್ತು. ನಟ, ನಟಿಯರ ಚಿತ್ರಗಳು ಮತ್ತು ನಿಸರ್ಗ ಚಿತ್ರಗಳು, ಸುಂದರವಾದ ನಕ್ಷೆಗಳು, ಆ ಕಟ್ಟಡದ ಗೋಡೆಗಳ ತುಂಬಾ ಅವರಿಸಿಕೊಂಡು ಬಿಟ್ಟಿದ್ದವು. ನೋಡಲು ಅವು ಸುಂದರವಾಗಿ ಕಾಣುತ್ತಿದ್ದವು. ನಾವು ಆ ಚಿತ್ರಗಳನ್ನು ನೋಡಿದಾಗ ಆಶ್ಚರ್ಯಚಕಿತರಾಗಿ ಬಿಡುತ್ತಿದ್ದೇವು. ಅಷ್ಟೊಂದು ಸುಂದರವಾದ ಚಿತ್ರಗಳಾಗಿದ್ದವು. ಅವುಗಳ ಬಣ್ಣಗಳ ಬಳಕೆಯು ಅಷ್ಟೇ ಸೊಗಸಾದದ್ದು. ಅವುಗಳನ್ನು ನೋಡಿಕೊಂಡು ನೇರವಾಗಿ ಶಾಲೆಗೆ ಬಂದರೆ ಆ ಚಿತ್ರಗಳಂತೆ ಚಿತ್ರಿಸಲು ಪ್ರಯತ್ನ ಮಾಡುತ್ತಿದ್ದೇವು. ಇದು ಕೂಡ ನನಗೆ ಒಂದು ರೀತಿಯಲ ಪ್ರಭಾವ ಬೀರಿತೆಂದರೆ ತಪ್ಪೇನಿಲ್ಲವೆಂದು ಶಿವಲಿಂಗಪ್ಪನವರು ನಾವು ಪ್ರಾಥಮಿಕ ಹಂತದ ಶಿಕ್ಷಣ ಪಡೆಯುವಾಗ ಚಿತ್ರಕಲೆಯ ಕಡೆಗೆ ತಮಗೆ ಒಲಿದ ಮನಸ್ಸು, ಆ ಹಂತದಲ್ಲಿ ತಮಗೆ ಬೀರಿದ ಪ್ರಭಾವವನ್ನು ವ್ಯಕ್ತಪಡಿಸಿದ್ದಾರೆ. ಒಂದು ರೀತಿಯಲ್ಲಿ ಸಿನಿಮಾದ ಪೋಸ್ಟರ್‌ಗಳೂ ಸಹ ಇವರಿಗೆ ಪ್ರೇರಣೆಯಾಗಿ ಸಹಕಾರಿಯಾಗಿದೆ.

ಕಲಾವಿದನಾಗಲಿ ಬೇರೆ ಯಾರೇ ಆಗಲಿ ಅವನ್ನು ಬಂದು ಸಮಾಜದಲ್ಲಿ ಬೆಳೆಯಬೇಕು. ಕಲಾವಿದನವನ್ನು ಯಾವ ಸಮಾಜದಲ್ಲಿ ಬೆಳೆಯುತ್ತಾನೆ ಆ ಸಮಾಜದಿಂದ ಆತ ಸಾಕಷ್ಟು ಪ್ರಭಾವಿತನಾಗಿರುತ್ತಾನೆ. ಹಾಗೂ ತನ್ನ ಕೃತಿಯ ಮೂಲಕ ಅವನ್ನು ವ್ಯಕ್ತಪಡಿಸುತ್ತಾನೆ. ಕಲಾವಿದನ ವಿಚಾರಾತ್ಮಕ ದೃಷ್ಟಿ ಎಷ್ಟು ಬೆಳೆಯುತ್ತೊ ಅಷ್ಟೇ ಗಾಢವಾದ ಚಿತ್ರ ರಚಿಸುತ್ತಾನೆ. ಲಲಿತಕಲೆಗಳಲ್ಲೊಂದಾದ ಚಿತ್ರಕಲೆ ತತಕ್ಷಣಕ್ಕೆ ಮುದವನ್ನು ನೀಡುತ್ತಾ ನಮ್ಮ ಭಾವ ಪ್ರಪಂಚವನ್ನು ಸೇರಿಕೊಳ್ಳುತ್ತದೆ.

ಅಂತರಂಗದಲ್ಲಿ ಅದರ ಬಾಹ್ಯ ಸೌಂದರ್ಯ ಮತ್ತು ಆಂತರಿಕ ಅರ್ಥಗಳು ಬಹುಕಾಲವದರೆಗೆ ಉಳಿದು ಬಿಡುತ್ತವೆ. ಈ ದೃಶ್ಯ ಪ್ರಪಂಚವೆಲ್ಲಾ ಸೃಷ್ಟಿಕರ್ತನ ಒಂದು ಚಿತ್ರ ಶಾಲೆಯೇ ಆಗಿದ್ದು ನಾವು ಕಣ್ಣು ತೆರೆದರೆ ಸಾಕು ಚಿತ್ರವೊಂದು ನಮ್ಮ ಕಣ್ಣ್ ಮುಂದೆ ನಿಂತೇ ಬಿಡುತ್ತದೆ. ಚಿತ್ರಕಲಾವಿದನು ರೇಖೆ ಹಾಗೂ ಬಣ್ಣಗಳಿಂದ ಒಂದು ವಿಶಿಷ್ಟವಾದ ವಸ್ತುವನ್ನು ಅನುಭವವನ್ನು ನಮ್ಮ ಮುಂದಿಟ್ಟು ಅಚ್ಚರಿಗೊಳಿಸುವನು.ಹಾಗೆಯೇ ಆನಂದವನ್ನುಂಟು ಮಾಡುವನು. ಕೆಲವು ಚಿತ್ರಗಳು ನಮ್ಮನ್ನು ತನ್ಮಯಗೊಳಿಸಿ, ಸಮಾಧಿಸಕ್ತರನ್ನಾಗಿ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಆಗಿನ ಅನುಭವ ಪ್ರೇರಣೆಯು ಆಗುತ್ತದೆ. ಹೀಗಾಗಿ ಅವನ್ನು ಒಂದು ಸಮಾಜದ ವಾತಾವರಣದ ಮೂಲಕ ಪ್ರಭಾವಿತಗೊಂಡು ಕಲಾಕ್ರಿಯೆಯಲ್ಲಿ ತಲ್ಲಿನನಾಗಿರುತ್ತಾನೆ.

ಇದಲ್ಲದೆ ಇವರು ತಮ್ಮ ಆಸಕ್ತಿಯ ಕ್ಷೇತ್ರವಾದ ಚಿತ್ರಕಲಾ ಶಿಕ್ಷಣವನ್ನು ಪಡೆಯಲು ಬೆಂಗಳೂರಿನ ಅಂಚೆ ಕಲಾಶಿಕ್ಷಣವನ್ನು ಕಲಿಯಲು ಹೋದಾಗ ಅಲ್ಲಿಯ ವಾತಾವರಣ ಮತ್ತು ಎಂ.ಟಿ.ವಿ. ಆಚಾರ್ಯರ ಶಿಕ್ಷಣ ಇವರಿಗೆ ಪ್ರಭಾವಬಿರಿದ ಮೊದಲ ಪ್ರಯತ್ನಗಳಾಗಿವೆ. ಅಂಚೆ ಕಲಾಶಾಲೆಯನ್ನು ಕಲಿಸುವ ಎಂ.ಟಿ.ವಿ. ಆಚಾರ್ಯರ ಚಿತ್ರಗಳನ್ನು ನೋಡಿದ ಕೂಡಲೆ ಅವರು ಎಂಥವರೇ ಆಗಿರಲಿ ಅವರಿಗೆ ಎಂ.ಟಿ.ವಿ. ಆಚಾರ್ಯರ ಚಿತ್ರಗಳು ಅವರಿಗೆ ಅದು ಪ್ರಭಾವ ಬೀರುವಂತೆ ಆಕರ್ಷಣೆಯನ್ನು ಹೊಂದಿದೆ. ಇವರಲ್ಲಿ ಇರುವ ಶಿಸ್ತು, ಸಂಯಮ ನಡೆನುಡಿ, ಎಲ್ಲವೂ ಅಚ್ಚುಕಟ್ಟು ಎಂಥವರಿಗೂ ಪ್ರಭಾವವನ್ನು ಹುಟ್ಟಿಸುವುದು. ಇವರನ್ನು ಕಂಡಾಗ ನನಗೆ ತುಂಬಾ ಖುಷಿಯಾಗುತ್ತಿತ್ತು. ಶಿವಲಿಂಗಪ್ಪನವರು ಇಲ್ಲಯೇ ತಮ್ಮ ಉನ್ನತ ಕಲಾ ಶಿಕ್ಷಣವನ್ನು ಪಡೆದುಕೊಂಡರು. ಇವರು ನೈಜ ಕಲಾಕೃತಿಗಳ ರಚನೆಯ ಹಂತದಲ್ಲಿ ಎಂ.ಟಿ.ವಿ. ಆಚಾರ್ಯರ ಕಲಾ ಶೈಲಿಯಿಂದ ಪ್ರಭಾವಿತಗೊಂಡರು.

ಮನುಷ್ಯ ಏನೆಲ್ಲಾ ಮಾಡಬೇಕಾದರೆ ಯಾವ ವಿಧದಿಂದವಾದರು ಅವನು ಪ್ರಭಾವಕ್ಕೆ ಒಳಪಟ್ಟಿರುತ್ತವೆ. ಇದು ಸೃಷ್ಟಿಯ ನಿಯಮ. ಪ್ರಭಾವಕ್ಕೆ ಒಳಗಗಾದ ಶಕ್ತಿಯಿಲ್ಲ. ಇದು ಕಲಾವಿದನಿಗೂ ಹೊರತಾಗಿಲ್ಲ. ಕಲಾವಿದನು ಕಲಾ ಸೃಷ್ಟಿಯಲ್ಲಿ ತೊಡಗಬೇಕಾದರೆ ಅವನ್ನು ಯಾವುದಾದರೂ ಒಂದು ರೀತಿಯಲ್ಲಿ ಪ್ರಭಾವಕ್ಕೆ ಒಳಗಾಗುತ್ತಾನೆ. ಪ್ರಭಾವಿತನಾದ ಅವನಿಂದ ಒಳ್ಳೆಯ ಕಲಾಕೃತಿಯೊಂದು ಹೊರಬರಲು ಸಾಧ್ಯ. ಹೀಗೆ ಪ್ರಭಾವ ಎನ್ನುವಂಥದ್ದು ಅದು ಸಹಜವಾಗಿಯೇ ಬರುವಂಥದ್ದು. ಅದಕ್ಕೆ ಕಟ್ಟಳೆಗಳಿಲ್ಲ, ನಿಬಂಧನೆಗಳಿಲ್ಲ. ಪ್ರಭಾವಕ್ಕೊಳಗಾದ ಮೇಲೆಯೆ ಪ್ರಭಾವದಿಂದಲೆ ಕಲಾವಿದನು ಉನ್ನತ ಮಟ್ಟಕ್ಕೆ ಬರಲು ಪ್ರಯತ್ನಿಸುತ್ತಾನೆ. ಕೆಲವರು ನಿಸರ್ಗದಿಂದ ಪ್ರಭಾವಕ್ಕೆ ಒಳಪಟ್ಟರೆ ಕೆಲವರು ತಮ್ಮ ಪರಿಸರದ ವಾತಾವರಣಿಂದ ಪ್ರಬಾವಕ್ಕೊಳ ಪಡುತ್ತಾರೆ. ಇನ್ನು ಕೆಲವರು ಬೇರೆಯವರ ಕಲಾಕೃತಿಗಳಿಂದ ಅವರ ಕಲಾ ಶೈಲಿಯಿಂದ ಪ್ರಭಾವಕ್ಕೊಳಗಾಗುತ್ತಾರೆ. ಹೀಗೆ ಪ್ರಭಾವ ಎನ್ನುವುದು ಅವರವರ ಮಾನಸಿಕ ಬುದ್ಧಿಮಟ್ಟಕ್ಕೆ ಸಂಬಂಧಿಸಿದಂತೆ ಕ್ರಿಯಾತ್ಮಕವಾಗಿ ರೂಪಗೊಂಡು ಒಳ ಹೊಕ್ಕುತ್ತದೆ.

[illegible]

ಬೆಂಗಳೂರಿನ ಮಹಾನಗರವು ಅಂದು ಸಾಂಸ್ಕೃತಿಕವಾಗಿ ಮುಂದುವರೆದ ನಗರವಾಗಿದೆ. ಇಲ್ಲಿ ದಿನಾಲು ಯಾವುದಾದರೂ ಒಂದು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದೇ ಇರುತ್ತಿದ್ದವು. ಇಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಗಳು, ಕಲಾಚಟುವಟಿಕೆಗಳಾದ ಕಲಾಪ್ರದರ್ಶನಗಳು, ಕಲಾ ವಿನ್ಯಾಸಗಳು, ಸಂಗೀತ ಕಾರ್ಯಕ್ರಮಗಳು, ಇತ್ಯಾದಿಗಳು ಶಿವಲಿಂಗಪ್ಪ ಅವರ ಮೇಲೆ ತುಂಬಾ ಪ್ರಭಾವವನ್ನು ಬೀರಿದವುಗಳಾಗಿದ್ದವು.

ಉದಾಹರಣೆಯೊಂದಿಗೆ ಹೇಳಬೇಕಾದರೆ ಒಮ್ಮೆ ಶಿವಲಿಂಗಪ್ಪನರು ಒಂದು ಗ್ಯಾಲರಿಯೊಳಗೆ ಹೋದರು. ಆ ಗ್ಯಾಲರಿಯಲ್ಲಿ ಒಬ್ಬ ಖ್ಯಾತಕಲಾವಿದರ ಪ್ರದರ್ಶನವೊಂದು ನಡೆದಿತ್ತು. ಕಲಾ ಪ್ರದರ್ಶನದಲ್ಲಿರುವ ಕಲಾಕೃತಿಗಳನ್ನು ಶಿವಲಿಂಗಪ್ಪನವರು ಒಂದೊಂದನ್ನು ನೋಡುತ್ತಾ ಬರುತ್ತಿರಬೇಕಾದರೆ ಕೆವು ಕಲಾಕೃತಿಗಳು ಶಿವಲಿಂಗಪ್ಪನವರಿಗೆ ಹಿಡಿಸಿದವು. ಎಲ್ಲಾ ಕಲಾಕೃತಿಗಳನ್ನು ನೋಡಿಕೊಂಡು ಹೊರಗೆ ಬಂದ ಶಿವಲಿಂಗಪ್ಪನವರಿಗೆ ಎಲ್ಲಿಲ್ಲದ ಸಂತಸ. ಇದಕ್ಕೆ ಕಾರಣವೆನೆಂದರೆ ಅದು ಖ್ಯಾತ ಕಲಾವಿದ ಎಂ.ಟಿ.ವಿ. ಆಚಾರ್ಯರ ಕಲಾ ಪ್ರದರ್ಶನವಾಗಿತ್ತು. ಆಚಾರ್ಯರು ಬೆಂಗಳೂರಿನ ಖ್ಯಾತ ಕಲಾವಿದರಲ್ಲಿ ಒಬ್ಬರಾಗಿದ್ದರು. ಅಂದಿನ ವೇಳೆಯಲ್ಲಿ ಬೆಂಗಳೂರಿನಲ್ಲಿ ಇವರಿಗೆ ತುಂಬಾ ಬೇಡಿಕೆ ಇತ್ತು. ಎಸ್.ಎಂ. ಪಂಡಿತ್ ಮತ್ತು ಎಂ.ಎಫ್. ಹುಸೇನ ಅವರ ಸಮಕಾಲೀನರು. ಇಂಥವರ ಹೆಸರನ್ನು ಶಿವಲಿಂಗಪ್ಪನವರು ಕೇವಲ ಕೇಳಿ ತಿಳಿದಿದ್ದರು. ಇವರನ್ನು ನೋಡಿರಲಿಲ್ಲ. ಇವರ ಕಲಾಕೃತಿಗಳ ಬಗ್ಗೆ ಶಿವಿವಿಂಗಪ್ಪನವರಿಗೆ ಹೆಮ್ಮೆಯಿತ್ತು. ಆದರೆ ಅಂದು ತಾವು ನೋಡಿದ ಕಲಾಪ್ರದರ್ಶನ ಇಂಥವರಲ್ಲಿ ಒಬ್ಬರಾದ ಎಂ.ಟಿ.ವಿ. ಆಚಾರ್ಯರ ಕಲಾಪ್ರದರ್ಶನವಾಗಿತ್ತು. ಶಿವಲಿಂಗಪ್ಪನವರಿಗೆ ಸಂತೋಷದ ಪರಿವೇ ಇರಲಿಲ್ಲ. ಸ್ವತಃ ಶಿವಲಿಂಗಪ್ಪನವರು ಹೇಳವ ಹಾಗೆ ಅಂದು ಕಲಾ ಗ್ಯಾಲರಿಗಳಲ್ಲಿ ಪ್ರದರ್ಶಿತಗೊಳ್ಳಿರುವ ಕಲಾಕೃತಿಗಳು ಹಿರಿಯ ಕಲಾವಿದರಿಂದ ಕೂಡಿರುತ್ತದಿದವು. ಒಳಗಡೆ ಕಲಾವಿದರು ಕುಳಿತಿರುತ್ತಿದ್ದರು. ಅವರೆದೂರು ಹೋಗಿ ಕಲಾಕೃತಿಗಳನ್ನು ನೋಡುವುದೆಂದರೆ ಮೈಯಲ್ಲಿ ನಡುಕ ಹುಟ್ಟುತ್ತಿತ್ತು. ಎಂ.ಟಿ.ವಿ. ಆಚಾರ್ಯರ ಕಲಾಕೃತಿಗಳಿಂದ ಪ್ರಭಾವಿತಗೊಂಡ ಶಿವಲಿಂಗಪ್ಪನವರು ಒಬ್ಬರು. ಶಿವಲಿಂಗಪ್ಪನವರು ಎಷ್ಟೋ ಕಲಾಕೃತಿಳನ್ನು ಎಂ.ಟಿ.ವಿ. ಆಚಾರ್ಯರ ಕಲಾ ಶೈಲಿಯಲ್ಲಿಯೇ ಚಿತ್ರಿಸಿರುವುದನ್ನು ನಾವು ಅವರ ಪ್ರಾರಂಭದ ಹಂತದಲ್ಲಿಯ ನಿಸರ್ಗ ಚಿತ್ರಗಳು ನೋಡಿದರೆ ತಿಳಿಯುತ್ತದೆ. ಇದೊಂದೆ ಅಂಥೆನಿಲ್ಲ ಇಡೀ ಬೆಂಗಳೂರಿನ ಕಲಾ ವಾತಾವರಣವು ಶಿವಲಿಂಗಪ್ಪನವರಿಗೆ ಒಂದು ರೀತಿಯ ಪ್ರಭಾವ ಬೀರಿದೆ ಎಂದರೆ ತಪ್ಪಾಗಲಾರದು.

ಶಿವಲಿಂಗಪ್ಪನವರು ಪ್ರತಿಯೊಂದು ಹಂತದಲ್ಲೂ ಒಂದೊಂದು ರೀತಿಯಿಂದ ಪ್ರಭಾವಕ್ಕೊಳಗಾಗಿರುವುದು ನಾವು ಕಾಣಬಹುದಾಗಿದೆ. ಇವರು ಪ್ರಭಾವಿತಗೊಂಡ ಒಂದೊಂದು ಸನ್ನಿವೇಶವು ಹೊಸ ಹೊಸ ಶೈಲಿಗಳನ್ನು ಕಂಡುಕೊಳ್ಳುವಲ್ಲಿ ಸಹಕಾರಿಯಾಗಿವೆ. ಇವರು ಬಾಲ್ಯದಲ್ಲಿ ಇರುವಾಗ ಮೈಸೂರು ಅರಮನೆಯಲ್ಲಿರುವ ಭಿತ್ತಿಚಿತ್ರಗಳು ಮತ್ತು ರಾಜರವಿವರ್ಮ ಅವರ ತೈಲವರ್ಣದ ಚಿತ್ರಗಳು ಮತ್ತು ಅಲ್ಲಿರುವ ದೇವತೆಗಳ ಪೂರ್ಣ ಭಾವಚಿತ್ರಗಳನ್ನು ನೋಡಿ ಇವರ ಮನದಲ್ಲಿ ಏನೋ ಒಂದು ರೀತಿ ಕುತೂಹಲಗಳನ್ನು

ವ್ಯಕ್ತಗೊಳ್ಳುತ್ತಿದ್ದವು. ಅರಮನೆಯಲ್ಲಿರುವ ಚಿತ್ರಗಳನ್ನು ನೋಡುತ್ತಾ ಹೋದರೆ ಆ ಕಲಾವಿದರು ಬರದೆ ಚಿತ್ರಗಳು ಮತ್ತು ಅದರಲ್ಲಿರುವ ಬಣ್ಣಗಳ ಬಳಕೆ ಯಾವು ರೀತಿಯಿಂದ ಇವುಗಳನ್ನು ರಚಿಸುತ್ತಿದ್ದರು, ಆ ಚಿತ್ರಗಳನ್ನು ರಚಿಸುವುದಕ್ಕೆ ಎಷ್ಟು ಕಾಲವಕಾಶವನ್ನು ತೆಗೆದುಕೊಳ್ಳುತ್ತಿದ್ದರು ಎನ್ನುವ ವಿಷಯಗಳನ್ನು ಶಿವಲಿಂಗಪ್ಪನವರ ಮನಸ್ಸಿನಲ್ಲಿ ಒಂದೊಂದಾಗಿ ಅಂದಿನ ದಿನದಿಂದಲೂ ಇಂದಿನ ದಿನಗಳವರೆಗೆ ಇವರ ಮನಸ್ಸಿನಲ್ಲಿ ಉಳಿದಿರುವ ಒಂದು ಪ್ರಶ್ನೆಯಾಗಿದೆ. ಏಕೆಂದರೆ ಅರಮನೆಯಲ್ಲಿ ಇರುವ ನಿಸರ್ಗ ಚಿತ್ರಗಳು, ಶಿಲ್ಪಕಲೆಗಳ ಪೂರ್ಣ ಭಾವಚಿತ್ರಗಳನ್ನು ನೋಡಿದವರ ಮೈಯಲ್ಲಿ ಪ್ರಸನ್ನತೆ ತರುವಂತ ಆ ಚಿತ್ರಗಳನ್ನು ಎಷ್ಟು ಸಾರಿ ನೋಡಿದರೆ ನೋಡಲೇ ಬೇಕು. ಪುನಃ ಪುನಃ ಮತ್ತೆ ಮೈಸೂರಿನ ಅರಮನೆಯನ್ನು ನೋಡಬೇಕು ಎನ್ನಿಸುತ್ತದೆ. ಇದು ಶಿವಲಿಂಗಪ್ಪನವರ ಬದುಕಿನಲ್ಲಿ ಒಂದು ಹೊಸ ಆಯಾಮವನ್ನೇ ಸೃಷ್ಟಿಸಿತು. ಈ ಒಂದು ಸನ್ನಿವೇಶದಿಂದ ಪ್ರಭಾವಿತರಾದ ಶಿವಲಿಂಗಪ್ಪನವರು ಈಗಲೂ ಅವರು ವಾರಕ್ಕೆ ಒಂದು ದಿನವಾದರು ಅರಮನೆಗೆ ಹೋಗುತ್ತಾರೆ. ಅಲ್ಲಿರುವ ಚಿತ್ರಗಳು ನೋಡುತ್ತಾ ಮೈ ಮನಸ್ಸು ಮರೆಯುತ್ತಾರೆ.

ಶಿವಲಿಂಗಪ್ಪನವರು ಪ್ರವಾಸದ ಅವಧಿಯಲ್ಲಿ ೨೧.೩.೨೦೦೮ ರಿಂದ ೧.೪.೨೦೦೮ರವರೆಗೆ ಕಂಡ ಕಲಾ ಗ್ಯಾಲರಿಗಳ್ನು ಪರಿಚಯಿಸಿದರು. ಸಿಂಗಾಪುರದ ಸೊಗಸು, ಇಂಗ್ಲೇಡ್ ಆಕರ್ಷಣೆ, ನ್ಯೂಜಿಲೆಂಡ್‌ನ ನೈಜತೆ, ಆಸ್ಟ್ರೆಲಿಯಾದ ಅಂತರ್ ದರ್ಶನದೊಂದಿಗೆ ಕಲಾ ಗ್ಯಾಲರಿಗಳನ್ನು ಕಂಡ ಪರಿಯಲ್ಲಿಯೇ ವಿವರಿಸುತ್ತಾರೆ. ಶಿವಲಿಂಗಪ್ಪನರು ಹೇಳಿದ ರೀತಿಯಲ್ಲೆ ವಿವರಿಸಿದರೆ ಒಂದು ಪ್ರವಾಸ ಕಥನವೇ ಆಗಿ ಒಂದು ಪುಸ್ತಕದ ಸ್ವರೂಪವನ್ನೇ ವಿರೂಪಗೊಳಿಸುವ ಸಾಧ್ಯತೆ ಇರುವುದರಿದಂ ಅವರು ಕಂಡ ಕಲಾಗ್ಯಾಲರಿಗಳನ್ನಷ್ಟೇ ಸಂಕ್ಷಿಪ್ತವಾಗಿ ವಿವೇಚಿಸಿದರೆ ಮತ್ತು ಅದರಿಂದ ಇವರ ಮೇಲೆ ಪ್ರಭಾವಬೀರಿದೆ.

ಇಂಗ್ಲೆಂಡ್ ಮ್ಯೂಜಿಯಂ ಸ್ಥಿೀಯ ಜನಪದದ ಬೇರುಗಳನ್ನೇ ಹೊಂದಿರುವಂಥದ್ದು. ಇಲ್ಲಿನ ಸಂಗ್ರಹ ನಮ್ಮ ಮೈಸೂರಿನ ವಿ.ವಿ.ಯಲ್ಲಿರುವ ಜಾನಪದದ ವಸ್ತು ಸಂಗ್ರಹಾಲಯದ ಸ್ವಲ್ಪ ಭಾಗದಷ್ಟು ಇದದರೂ ಅವರು ಜೋಡಿಸಿರುವ ರೀತಿ ಪ್ರತಿಯೊಂದಕ್ಕೂ ವಿವರಣಾ ಸೂಚಿ ವರ್ಣ ಮುದ್ರಣದ ಕಿರುಹೊತ್ತಿಗೆಯಲ್ಲಿ ಅವುಗಳ ವಿವರ ಅಲ್ಪದರಲ್ಲಿಯೂ ಅಗಾಧತೆ ತೋರುವ ಅವರ ಕಾರ್ಯ ತಂತ್ರ ಮೆಚ್ಚುವಂತಹದ್ದು. ಹಾಗೆಯೇ ನಮ್ಮಲ್ಲಿ ಕೊಟ್ಟಿಗೆಯಲ್ಲಿರುವ ಸರಂಜಾಮುಗಳಂತೆ ಜೋಡಿಸಿ ಯಾವ ವರ್ಣ ಮುದ್ರಣದ ಕಿರುಹೊತ್ತಿಗೆಯಿಲ್ಲದಿರುವುದನ್ನು ಹೋಲಿಸಿ ವ್ಯಥೆ ಪಡುತ್ತಾರೆ.

ಇಂಗ್ಲೆಂಡ್‌ನ ಆರ್ಟ್ ಗ್ಯಾಲರಿ ಅತ್ಯಂತ ದೊಡ್ಡದಾಗಿದ್ದು ಇನ್ನಿತರ ರಾಟ್ರಗಳ ಖ್ಯಾತ ಕಲಾವಿದರ ಚಿತ್ರ ಸಂಗ್ರಹಗಳನ್ನೊಳಗೊಂಡಿದೆಯಂತೆ. ಇಲ್ಲಿ ಸಂಗ್ರಹಿತವಾದವುಗಳು ನೈಜಕಲೆಯ ಹಾಗೂ ಹಿಂದಣ ಆಯಾಮ ರಾಷ್ಟ್ರಗಳ ಶೈಲಿಯನ್ನು ಬಿಂಬಿಸುವುದೇ ಆಗಿದೆ. ಆದರೆ ಇಂಗ್ಲೆಂಡ್‌ನ ನ್ಯೂ ಗ್ಯಾಲರಿ ಈ ಸಂಗ್ರಹಾಲಯಗಳಿಗಿಂತ ಮುಂದೆ ಸಾಗಿ ಸಮಕಾಲೀನ ಅಥವಾ ಅತ್ಯಾಧುನಿಕ ಎನ್ನಬಹುದಾದ ಕಲ್ಪನಾ ಪ್ರಧಾನವಾದ ಚಿತ್ರಗಳ ಸಂಗ್ರಹಕ್ಕೆ ಒತ್ತು ಕೊಟ್ಟಿದೆ.

ರೊಟೂರ್ ಎಂಬ ಪ್ರದೇಶದಲ್ಲಿನ ಮಿತಾಯ್ ಮೇರಿ ಎಂಬ ಗ್ರಾಮವು ಬುಡಕಟ್ಟು ಜನಾಂಗವಿರುವ ಸ್ಥಳ. ದಡೂತಿ ದೇಹ, ಆದಿಮಾನವನನ್ನು ನೆನಪಿಸುವಂತಹ ರೀತಿ ರಿವಾಜುಗಳು ಇದ್ದರೂ ನವ್ಯತೆಯ ಸ್ಪರ್ಶವಾಗಿ ಬದುಕನ್ನು ಕಟ್ಟಿಕೊಂಡು ತಮ್ಮದೇ ಆದ ಸಾಂಸ್ಕೃತಿ ಪ್ರದರ್ಶಿಸುವಂತಾಗಿದ್ದಾರೆ. ಇಲ್ಲಿನ ಕಲೆ ಹೆಚಚಿನವು ಬಿದಿರಿನಿಂದ ಮಾಡಿದವುಗಳಾಗಿದ್ದು, ಜನರನ್ನು ಹೆಚ್ಚು ಆಕರ್ಷಿಸುತ್ತವೆ. ರಾಕರಿಕೇವ್ ಎಂಬಲ್ಲಿ ಬೃಹತ್ ಬಂಡೆಯಡಿಯಲ್ಲಿ ನಿಸರ್ಗದತ್ತವಾಗಿ ಕಾಣುವ ಜಲ ಹರಿವು ಕಲಾವಿದನಿಗೆ ಸ್ಫೂರ್ತಿ ನೀಡುವಂತಹದ್ದಾಗಿದೆ. ಮತ್ತೊಂದಡೆಯಲ್ಲಿ ಭೂಮಿ ಬಿಸಿ ಬುಗ್ಗೆಗಳಿದ್ದು, ಭೂಮಿಯೊಳಗೆ ಅದೆಂತಹ ವಿಚಿತ್ರಗಳಿವೆ. ಇವೆಲ್ಲವನ್ನು ದೃಶ್ಯ ರೂಪದಲ್ಲಿ ಅಳವಡಿಸಲು ಅದೆಷ್ಟು ಸಮಯ ಬೇಕಾದಿತು, ಸಾಧ್ಯವೆ? ಎಂದು ಅವರನ್ನವರೇ ಪ್ರಶ್ನಸಿಕೊಳ್ಳುತ್ತಾರೆ.

ಇದಕ್ಕಿಂತಲೂ ಸೃಷ್ಟಿ ವೈಚಿತ್ರದ ನ್ಯೂಜಿಲೆಂಡ್‌ನ ಟೈಟಮೊ ಗುಹೆಗಳು ಪ್ರವಾಸಿಗರು ತಿರುಗಾಡಲು ಅನುಕೂಲವಾಗುವಂತೆ ಕೊರೆದು ಮಾಡಿರುವ ಗುಹೆಯಲ್ಲಿ ನಮ್ಮಲ್ಲಿರುವ ಕೆಲವೊಂದು ಮರಗಳು ಹಾಲಿನಂತಹ ಅಂಟು ಉತ್ಪತ್ತಿ ಮಾಡುವಂತೆ ಆ ಗುಹೆಯ ಪ್ರದೇಶದಲ್ಲಿ ಅಂಟು ಉತ್ಪತ್ತಿಯಾಗಿ ಇಳಿಬಿದ್ದು ಆಲದ ಮರದ ಬಿಳಿ ಹಾಲಿನಂತೆ ಕಾಣುವಂತಾಗಿದೆಯಂತೆ ಇದನ್ನು ನೋಡಲು ಮಾರ್ಗದರ್ಶಿಯ ಸಹಾಯ ಅತ್ಯಗತ್ಯವಾಗಿದೆ ಎನ್ನುತ್ತಾರೆ.

ಸಿಡ್ನಿಯಲ್ಲಿನ ನ್ಯೂಸೌತ್ ವೇಲ್ಸ್ ಕಲಾಗ್ಯಾಲರಿ ಅತ್ಯಂತ ದೊಡ್ಡದಾಗಿದ್ದು ಐದು ಮಹಡಿಗಳ ಕಟ್ಟಡ ಹೊಂದಿದೆ. ಆಸ್ಟ್ರೇಲಿಯಾದ ಮುಂಚೂಣಿ ಕಲಾವಿದರ ಕಲಾಕೃತಿಗಳು ಒಂದು ಮಹಡಿ ಆಕ್ರಮಿಸಿದ್ದರೆ, ಉಳಿದಂತೆ ಇತರ ರಾಷ್ಟ್ರಗಳಾದ ಚೈನಾದ ಗ್ಯಾಂಗ್‌ಬಿ ಕಲೆ, ಯುರೋಪಿಯನ್ ಕಲೆ, ಜಪಾನಿ ಕಲೆ, ಏಷ್ಯಾಕಲೆಗಳು ಒಳಗೊಂಡಿವೆ. ಸಿಡ್ನಿಯ ಆಸ್ಟ್ರೇಲಿಯನ್ ಮ್ಯೂಜಿಯಂ ಮತ್ತು ನ್ಯಾಷನಲ್ ಮ್ಯಾರಿಟೈಂ ಮ್ಯೂಜಿಯಂ ಇವೆರಡು ಸಂಗ್ರಹಿತ ವಸ್ತುಗಳ ಪ್ರದರ್ಶನಾಂಗಣವಾದರೂ ವಿಶೇಷವೆಂದರೆ ಆನೆಯ ಅಸ್ಥಿಪಂಜರ ಸೇರಿದಂತೆ ಇತರ ಪ್ರಾಣಿಗಳ ಅಸ್ಥಿಪಂಜರಗಳಿವೆ. ಮ್ಯೂಜಿಯಂ ಆಫ್ ಕಾಂಟೆಂಪರರಿ ಆರ್ಟ್ ಇಲ್ಲಿ ಸಮಕಾಲೀನ ಕಲೆ ಅಥವಾ ನವ್ಯಕಲೆ ಎಂದೆಲ್ಲಾ ಕರೆಯುವ ಕಾಲ್ಪನಿಕ ಕಲೆಯನ್ನು ನಿಶ್ಚಳವಾಗಿ ಕಾಣಬಹುದಾಗಿದೆ ಎನ್ನುತ್ತಾರೆ. ಅಲ್ಪ ಪ್ರಮಾಣದ ಮತ್ತು ಮಾರಾಟ ದೃಷ್ಟಿಯಿಂದ ಮಾಡಿರುವ ಗ್ಯಾಲರಿಗಳು ಸಿಡ್ನಿಯಲ್ಲಿ ಸಾಕಷ್ಟು ಸಂಖ್ಯೋಯಲ್ಲಿದ್ದರೂ ಮುಖ್ಯವಾಗಿ ನೋಡಿದುದು ಕೆನ್‌ಡೋನ್ ಗ್ಯಾಲರಿ. ಸ್ಥಳೀಯ ಕಲಾವಿದರಿಂದ ರಚಿಸಿದವುಗಳೇ ಹೆಚ್ಚಾಗಿದ್ದರೇ ಡೆರಿನ್ ನೈಟ್ ಗ್ಯಾಲರಿಯಲ್ಲಿ ಭಾವನಾತ್ಮಕ ಹಾಗೂ ಪ್ರಚೋದಾತ್ಮಕ ಕಲಾಕೃತಿಗಳಿವೆ. ಇಲ್ಲಿ ಗಾವಲ ಅಬೊರಿಜನಲ್ ಆರ್ಟ್ ಸೆಂಟರ್ ಸಾಹೊ ಗ್ಯಾಲರಿ ಫ್ರೀಲ್ಯಾಂಡ್ ಗ್ಯಾಲರಿ ಬ್ರೆಟ್ ವೈಟಲೇ ಸ್ಟುಡಿಯೋ ಇವು ಸ್ಥಳೀಯ ಕಲಾವಿದರ ಶೈಲಿಚಿತ್ರಗಳನ್ನೇ ಹೆಚ್ಚಾಗಿ ಪ್ರದರ್ಶಿಸಿದ್ದುದರಿಂದ ಒಂದು ಬಗೆಯ ಅನುಭವವಾದರೆ ಆಸ್ಟ್ರೇಲಿಯಾದ ನ್ಯಾಷನಲ್ ಗ್ಯಾಲರಿ ಆಫ್ ವಿಕ್ಟೋರಿಯಾ ಅಖಂಡ ಏಷ್ಯಾ ದೇಶಗಳ ಸಂಗ್ರಹಗಳು ಮುರಿದು ಹೋದ ಕಲ್ಲಿನ ಮೂರ್ತಿಗಳು, ರವೀಂದ್ರನಾಥ ಮತ್ತು ಅವನಿಂದ್ರನಾಥ

ಠಾಗೂರರ ಚಿತ್ರಗಳು, ಕರ್ನಾಟಕದ ಸಾಂಪ್ರದಾಯಿಕ ಚಿತ್ರಗಳು, ಉತ್ತರ ಭಾರತದ ರಜಪೂತ ಹಾಗೂ ಮೊಘಲ್ ಶೈಲಿ ಕಲೆಗಳು, ಮಧುಬನಿಯಂತಹ ರೇಖಾ ಪ್ರಧಾನವಾದವು ಅಲ್ಲಿ ಸಂಗ್ರಹಿತವಾಗಿರುವುದನ್ನು ಕಂಡಾಗ ಮೈ ಪುಳಕಿತವಾಯಿತೆಂಬುದಾಗಿ ಹೇಳುತ್ತಾರೆ.

ಹಾಗೆಯೇ ಕ್ರೈಸ್ತ ಚರ್ಚ್ ಆರ್ಟ್ ಗ್ಯಾಲರಿ ಮತ್ತು ಕ್ವಿನ್ಸ್ ಟೌನ್‌ನಲ್ಲಿರುವ ಐವಾನ್ ಕಾಕ್ಲಿ ಗ್ಯಾಲರಿಯಲ್ಲಿ ಸಮಕಾಲೀನ ಕಲೆಯ ಸಂಗ್ರಹಗಳ್ನು ನೋಡುವ ಮೂಲಕ ಕಲೆ ಅಂತರಾಷ್ಟ್ರೀಯ ಮಟ್ಟದಲ್ಲಿ ಹಾಗೆ ಬೆಳವಣಿಗೆ ಆಗುತ್ತಿದೆ. ಶಿವಲಿಂಗಪ್ಪನವರು ಸ್ವತಃ ತಾವೇ ಹೇಳುವ ಹಾಗೆ ದೇಶವನ್ನು ನೋಡಬೇಕು ಮತ್ತು ಕೋಶವನ್ನು ಓದಬೇಕು ಎನ್ನುವ ಮಾತು ಸುಳ್ಳಲ್ಲ. ಇಂತಹ ದೇಶ ವಿದೇಶಗಳಲ್ಲಿರುವ ಕಲಾಗ್ಯಾಲರಿಗಲ್ಲಿರುವ ಚಿತ್ರಕಲೆಗಳು ಮತ್ತು ಜನಾವಾದ ಚಿತ್ರಗಳು ಹಾಗೆ ಹಲವಾರು ವಿಷಯಗಳನ್ನು ನೋಡಿ ಅದರಿಂದ ಶಿವಲಿಂಗಪ್ಪನವರು ಪ್ರಭಾವಿತಗೊಂಡಿದ್ದರೆ.

ಪ್ರೇರಣೆ

ಕಲಾಕಾರನಿಗೆ ಅನೇಕ ವಿಧದಲ್ಲಿ ಪ್ರೇರಣೆ ದೊರಕುವುದುಂಟು. ಕೆಲವೊಮ್ಮೆ ಪ್ರತ್ಯಕ್ಷವಾಗಿ, ಕೆಲವೊಮ್ಮೆ ಪರೋಕ್ಷವಾಗಿ. ಆದರೆ ಕಲಾಕರನ ಮನಸ್ಸು, ಬುದ್ಧಿಶಕ್ತಿ ಸರ್ವದಾ ಜಾಗೃತವಾಗಿದ್ದು, ಸಂವೇದನಾ ಶೀಲವಾಗಿರಬೇಕು ಎನ್ನುವದಂತೂ ಅತ್ಯಾವಶ್ಯಕ. ಸಮಾಜದ ಕೋಟಲೆ, ಸಂಘರ್ಷ, ನಿರಾಶೆ ಹಾಗೂ ಉಲ್ಲಾಸ ದ್ವಂದ್ವ ಇವೆಲ್ಲವೂ ಕಲಾವಿದನ ಸಂವೇದನಾ ಶೀಲ ಮನಸ್ಸನ್ನು ಉತ್ತೇಜಿಸಲು ಸಮರ್ಥವಾಗುತ್ತವೆ. ಮಾನವ ಜೀವನ ಮುಖ್ಯವಾಗಿ ತನು, ಮನ, ಆತ್ಮಗಳೆಂಬ ಮೂರು ಅಂಶಗಳನ್ನು ಹೊಂದಿದೆ. ಶಿಕ್ಷಣವು ಇವುಗಳನ್ನು ಸಂಸ್ಕರಿಸುವ ಕಾರ್ಯವನ್ನು ಸದಾ ಕಾಲವೂ ಮಾಡುತ್ತಿರುತ್ತದೆ. ತನಗೆ ಬೇಕಾದ ಅಸನ ವಸತಿ ಸಂಸಾರಕ್ಕೆ ಬೇಕಾದ ಉಪಜೀವನದ ಮಾರ್ಗವನ್ನು ಮನಸ್ಸಿನ ವಿಕಾಸಕ್ಕಾಗಿ ಸಾಹಿತ್ಯ ಕಲೆ, ನೈತಿಕ ಮೌಲ್ಯಗಳನ್ನು ಆತ್ಮದ ಉದ್ಧಾರಕ್ಕಾಗಿ ಧರ್ಮ, ಆಧ್ಯಾತ್ಮ ಪರಮಾರ್ಥಿಕ ಮೌಲ್ಯಗಳನ್ನು ಕೊಡುವುದೆ ನಿಜವಾದ ಶಿಕ್ಷಣ. ಈ ರೀತಿಯ ವಿದ್ಯಾ ಪ್ರಸಾದದಿಂದ ಕರ, ಉರ, ಶಿರ, ಸಂವರ್ಧನೆಯಾಗುವುದು ಕರವು ಕಾರ್ಯವನ್ನು, ಉರವು ಹೃದಯವನ್ನು, ಶಿರವು ಅರಿವನ್ನು ಸೂಚಿಸುತ್ತದೆ. ಶಿಕ್ಷಣವು ದೇಹಕ್ಕೆ ಪುಷ್ಠಿಯನ್ನು ಮನಕ್ಕೆ ವೈಶಾಲ್ಯತೆಯನ್ನು ಆತ್ಮಕ್ಕೆ ಆನಂದವನ್ನು ಕೊಟ್ಟು ಅಂತಃಕರಣವನ್ನು ಸದ್ಗುಣಗಳನ್ನು ಮೈಗೂಡಿಸಿಕೊಂಡು ಬರಲು ಇದು ಪ್ರೇರಣೆಯನ್ನು ನೀಡುತ್ತದೆ.

ಶಿವಲಿಂಗ್ಪನವರು ಬಾಲ್ಯದಿಂದಲೇ ಕಲೆಯ ಅಭಿರುಚಿಯನ್ನು ಹೊಂದಿದವರು. ಇವರು ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಕಲೆಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಕಂಡುಕೊಂಡವರು. ಕಲೆಯು ಇವರ ಪರಂಪರಾಗತವಾಗಿ ಬಂದಿದ್ದೇ. ಇವರ ತಂದೆ ಮೈಸೂರು ದಸರಾ ಮಹೋತ್ಸವದಲ್ಲಿ ನಂದಿ ಕಂಬವನ್ನು ತಯಾರು ಮಾಡುತ್ತಿದ್ದರು. ಇದನ್ನು ದಸರಾ ಮಹೋತ್ಸವದಲ್ಲಿ ಬಳಸುತ್ತಿದ್ದರು. ಕಲೆ ಇವರ ಪರಂಪರಿಕವಾಗಿ ಬಂದದೇ. ಹೀಗಾಗಿ ಇವರ ಮನೆಯಲ್ಲಿ ಯಾರಿಗೂ ಕಲೆಯ ಬಗ್ಗೆ ತಿಳುದುಕೊಂಡಿದ್ದರು ಶಿವಲಿಂಗಪ್ಪನವರ

ಮನೆಯ ಮುಂದೆ ಒಂದು ಗುರುಕುಲ ಇರುವುದರಿಂದ ಇವರಲ್ಲಿ ಕಲಾವಾತಾವರಣವನ್ನು ಕಂಡುಕೊಳ್ಳಲು ಅಷ್ಟೊಂದು ಹೆಚ್ಚಿನ ಸಾಧ್ಯತೆಗಳು ಇದ್ದಾವು. ಇವರು ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆಯುವಾಗ ಅಲ್ಲಿ ಇತರ ವಿಷಯಗಳೊಂದಿಗೆ ಚಿತ್ರಕಲೆ ಮತ್ತು ಶಿಲ್ಪಕಲೆಯನ್ನು ಕುರಿತು ತರಬೇತಿ ನೀಡುತ್ತಿದ್ದರು. ಶಿವಲಿಂಗಪ್ಪನವರು ಗುರುಕುಲಕ್ಕೆ ಸೇರಿಕೊಂಡರು. ಸ್ವಲ್ಪ ದಿನಗಳ ನಂತರ ಶಿವಲಿಂಗಪ್ಪನವರ ಗುರುಗಳಾದ ಕಲಾವಿದರೂ ಶಿಲ್ಪಿಗಳೂ ಆಗಿದ್ದ ರಾಜಗುರು ಶ್ರೀ ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳು ಅವರ ಪುತ್ರ ನಾಗೇಂದ್ರ ಸ್ಥಪತಿಗಳು ಶಿವಲಿಂಗಪ್ಪನವರಲ್ಲಿರುವ ಕಲಾಭಿರುಚಿಯನ್ನು ಕಂಡು ಇವರಿಗೆ ಚಿತ್ರಕಲೆಯ ಬಗ್ಗೆ ಮತ್ತು ಶಿಲ್ಪಕಲೆಯ ಬಗ್ಗೆ ಆಳವಾದ ಜ್ಞಾನವನ್ನು ತುಂಬುತ್ತಾ ಇವರಿಗೆ ಪ್ರೇರಣೆಯನ್ನು ನೀಡಿದವರಲ್ಲಿ ಮಾದರಿಗರೆಂದು ಹೇಳಬಹುದು. ಒಂದು ರೀತಿಯಲ್ಲಿ ಈ ಪ್ರೇರಣೆಯು ಮನುಷ್ಯನ ಮಾನಸಿಕವಾದ ಶಕ್ತಿಗೆ ಚೈತನ್ಯ ತುಂಬುವುದು ಇದರಿಂದ ಅವನು ತನ್ನ ಕ್ಷೇತ್ರದಲ್ಲಿ ವ್ಯಾಪಕವಾಗಿ ಬೆಲೆಯಲು ದಾರಿಯನ್ನು ಕಂಡುಕೊಳ್ಳುತ್ತಾನೆ ಇದು ಯಾವುದೇ ಕ್ಷೇತ್ರಕ್ಕೆ ಸಂಬಂಧಪಟ್ಟಿಲ್ಲ. ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಚಿತ್ರಕಲಾ ಕ್ಷೇತ್ರವು ಇದಕ್ಕೆ ಹೊರತಾಗಿಲ್ಲ. ಒಬ್ಬ ಕಲಾವಿದ ಒಂದು ಹಂತವನ್ನು ತಲುಪಬೇಕಾದರೆ ಅವನ ಹಿಂದೆ ಯಾವ ರೀತಿಯಿಂದಲೂ ಪ್ರೇರಣೆ ಇದ್ದೆ ಇರುತ್ತದೆ.

ಪ್ರೇರಣೆಯು ಕಣ್ಣಿಗೆ ಕಾಣದೆ ಅಂತರ್ ಮುಖಿಯಾದ ಒಂದು ಚೈತನ್ಯಯುತ ಶಕ್ತಿ. ಇದು ಅಂತರಮುಖಿಯಾದರೂ ಬಾಹ್ಯ ಪ್ರಚೋದನೆಗೆ ಹೆಚ್ಚು ಸಹಕಾರಿಯಾಗಬಲ್ಲದು. ಕಲಾವಿದನಾದವನು ಕೆಲವು ಸಾರಿ ತನ್ನ ಸುತ್ತಮುತ್ತಿಲಿನ ಪರಿಸರದಿಂದಲೂ ವಾತಾವರಣದಿಂದಲೂ ಪ್ರೇರಣೆಯನ್ನು ಪಡೆಯುತ್ತಾನೆ. ಕಲಾವಿದ ತಾನು ಹುಟ್ಟು ಬೆಳೆದ ಪರಿಸರದಿಂದ ಪ್ರಭಾವಿತಗೊಳ್ಳುವನಲ್ಲದೆ ಅದರಿಂದ ಪ್ರೇರಣೆಯನ್ನು ಪಡೆಯುತ್ತಾನೆ. ಶಿವಲಿಂಗಪ್ಪನವರಿಗೆ ಅನೇಕ ರೀತಿಯಲ್ಲಿ ಪ್ರೇರಣೆಯು ದೊರಕಿದ್ದುಂಟು. ಶಿವಲಿಂಗಪ್ಪನವರು ಹೈಸ್ಕೂಲ್ ಶಿಕ್ಷಣವನ್ನು ಪಡೆಯುತ್ತಿದ್ದಾಗ ಇವರಲ್ಲಿರುವ ಕಲಾ ಶಕ್ತಿಯನ್ನು, ಕಲಾಭಿರುಚಿಯನ್ನು ಕಂಡು ಅವರ ಅಕ್ಕಳಾದ ಅಕ್ಕಮಹಾದೇವಿ ತಮ್ಮನಿಗೆ ಒಂದು ಕಿವಿಮಾತು ಹೇಳಿದಳು. ನಮ್ಮ ಮನೆಯಲ್ಲಿ ಯಾರು ಓದಿಲ್ಲ ನಿನಾದ್ರು ಕಲಿ. ನಮ್ಮ ಮನೆಯನ್ನು ಉದ್ಧಾರ ಮಾಡು ಎಂದು. ಇವರಿಗೆ ಸಾಕಷ್ಟು ಪ್ರೇರಣೆಯನ್ನು ನೀಡಿದ್ದಾರೆ. ಶಿವಲಿಂಗಪ್ಪನವರು ಕಂಡರೆ ಅಕ್ಕನಿಗೆ ತುಂಬಾ ಪ್ರೀತಿ. ಗುರುಕುಲದಲ್ಲಿ ಕಲಿಯುವಾಗ ಗುರುಗಳಿಗೆ ಶಿವಲಿಂಗಪ್ಪನವರಿಗೆ ಕಂಡರೆ ತುಂಬಾ ಪ್ರೀತಿ ಇರುವುದರಿಂದ ಇವರಿಗೆ ಹೆಚ್ಚಿನ ಪ್ರೇರಣೆ, ಪ್ರೋತ್ಸಾಹ ದೊರೆಯಿತು ಎಂದು ಹೇಳಬಹುದು. ಕಲಿಕೆಯ ದೃಷ್ಟಿಯಿಂದ ಪ್ರೇರಣೆಯು ಬೇಕೆ ಬೇಕು. ಪ್ರೇರಣೆಯಿರಲಾರದೆ ಯಾರು ಯಾವ ಹಂತದಲ್ಲೂ ಮುಂದೆ ಬರಲಾರದು. ಪ್ರತಿಯೊಬ್ಬರ ಬೆನ್ನ ಹಿಂದೆಯೂ ಯಾವ ರೀತಿಯಿಂದಲಾದರೂ ಪ್ರೇರಣೆಯು ಇದ್ದೇ ಇರುತ್ತದೆ. ಇದನ್ನು ಉಪಯೋಗಿಸುಕೊಳ್ಳುವಲ್ಲಿ ಆತನಲ್ಲಿ ಜಾಣ್ಮೆಯು ಇರಬೇಕು.

ಹೀಗಾಗಿ ಜಾಣ್ಮೆ ಎನ್ನುವುದು ಮನುಷ್ಯನ ಬೆನ್ನ ಹಿಂದೆ ಇರುತ್ತದೆ. ಅದು ನಮ್ಮ ಕಣ್ಣಿಗೆ ಕಾಣಿಸದು.

ಆದರೆ ಎಲ್ಲಿಯೂ ಎಡವಲು ಅದು ಅನುಕೂಲಮಾಡಿಕೊಡುವುದಿಲ್ಲ. ನಾವೇ ನಡೆದುಕೊಂಡು ಹೋಗಬೇಕು. ಅದು ದಾರಿ ಕಾಣದಿದ್ದಾಗ ಇನ್ನೊಬ್ಬರ ಸಹಾಯವನ್ನು ಕೇಳುತ್ತದೆ. ಆಗ ಇನ್ನೊಬ್ಬರು ಬಂದು ನಮ್ಮ ದಾರಿಯನ್ನು ತೋರಿಸುತ್ತಾರೆ. ಗುರಿ ಏನೋ ನಮ್ಮದೇ ಇರಬಹುದು. ಆದರೆ ಹೋಗುವ ಮಾರ್ಗ ತಿಳಿದಿರುವುದಿಲ್ಲ. ಅದಕ್ಕೆ ಇನ್ನೊಬ್ಬರ ಸಹಾಯ ಬೇಕೆ ಬೇಕು. ಅದುವೇ ಪ್ರೇರಣೆ ಆಗಿರಬಹುದು ಎಂದು ಶಿವಲಿಂಗಪ್ಪನವರು ನಮಗೆ ತಿಳಿದಿದ್ದನ್ನೆ ಒಮ್ಮೊಮ್ಮೆ ಅರಿಯದಿದ್ದಾಗ ಬೇರೆಯವರು ಬಂದು ಅರಿವು ಮೂಡಿಸಲು ಪ್ರಯತ್ನಿಸುತ್ತಾರೆ ಎನ್ನುವ ಉದಾಹರಣೆಯೊಂದಿಗೆ ಪ್ರೇರಣೆಯು ಯಾವ ರೀತಿಯಾಗಿ ಮವನುಷ್ಯನ ಬದುಕಿಗೆ ಸಹಕಾರಿಯಾಗಬಲ್ಲದು ಎಂಬುದನ್ನು ವಿವರಿಸುತ್ತಾರೆ.

ಕಲೆ ಮೂಲತಃ ಮಾನವನ ಸೃಷ್ಟಿ. ಅದು ಪ್ರತಿಭಾನ್ವಿತ ಮಾನವನ ಜೀವನ ಅನುಭವ ಸಮಚಿತ್ತ ಅಭಿವ್ಯಕ್ತಿ ಕಲೆ ಮಾನವತೆಯ ವಿಶಿಷ್ಟ ಆನಂದದಾಯಾನಿಯಾದ ಮಾತೃಶಕ್ತಿ, ಭೌತಿಕ ಜಗತ್ತಿನ ಬಾಹ್ಯ ಸೃಷ್ಟಿಗಿಂತ ಹೆಚ್ಚಾಗಿ ಮಾನವನ ಅಂತರಿಕ ನಿತ್ಯ ಸತ್ಯ ಕಲೆ ಭಾವ, ಬಣ್ಣ ರೇಖೆ ಮುಂತಾದ ವಿವಿಧ ಮಾಧ್ಯಮಗಳಲ್ಲಿ ಹೊಮ್ಮುವ ಸಮಾಜದ ಹೃದಯವಂತಿಕೆಯನ್ನು ಮೂಡುವಂತೆ ಮಾಡುತ್ತದೆ. ಯಾವುದೇ ಒಂದು ನಾಡಿನ ಜನಾಂಗದ, ವರ್ಗದಬದುಕಿನ ಬೆಳವಣಿಗೆಯನ್ನು ಅವರ ಪರಂಪರೆ ಹಾಗೂ ಸಂಪ್ರದಾಯಗಳನ್ನು ತಿಳಿಯಬೇಕಾದರೆ ಅವರ ಪರಿಸರದಲ್ಲಿ ಜೀವನ ಪಡೆದಿರುವ ಕಲೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಮಾನವನ ಸಾಂಸ್ಕೃತಿಕ ಲೋಕದ ಪ್ರತಿ ಹಂತದಲ್ಲೂ ಕಲೆ ಪ್ರೇರಣೆಯ ವಸ್ತು ಆಗಿರುತ್ತದೆ. ಕಲಾವಿದನಿಗೆ ಪ್ರಕೃತಿಯು ಪ್ರೇರಣೆಯನ್ನು ನೀಡಬಲ್ಲದು. ಅಲ್ಲದೆ ಅದು ಒಂದೊಂದು ಸವಾಲನ್ನು ಎದುರಿಸುವ ಸಂದರ್ಭವನ್ನು ಸೃಷ್ಟಿಸುತ್ತದೆ.

"A greatest part of my carly years was spent in obsarining the world of nature it gave me intense joy to watch thing". ಎಂದು ಪ್ರಕೃತಿಯನ್ನು ಕುರಿತು ಪತ್ರವೊಂದರಲ್ಲಿ ಮಿತ್ರರೊಬ್ಬರಿಗೆ ರವೀಂದ್ರನಾಥ ಠಾಗೂರರು ಹೇಳುತ್ತಾರೆ. ಆ ಪತ್ರದು ಅಂತಿಮ ಸಾಲುಗಳಲ್ಲಿ ಪ್ರಕ್ತಿಯ ಸೌಂದರ್ಯವನ್ನು It is the joy of every man face to face with beauty ಎಂದು ಹೇಳುತ್ತಾರೆ. ಬಹುಶಃ ಕಲಾ ಇತಿಹಾಸದಲ್ಲಿ ಸೇರಿ ಹೋಗುವ ಬಹುತೇಕ ಕಲಾವಿದರು ಪ್ರಕೃತಿಯಿಂದಲೇ ಮತ್ತು ಅದನ್ನು ನಕಲು ಮಾಡುವುದರಿಂದಲೇ ಅಲ್ಲದೆ ಅದರ ಪ್ರೇರಣೆಯಿಂದಲೇ ಚಿತ್ರಕಲೆಯ ಮೂಲ ಪಾಠಗಳನ್ನು ಕಲಿತವರು. "Beauty is one of the guat mysteries at nature whose in fluence we all see and fuel".

ಶಿವಲಿಂಗಪ್ಪನವರು ಬೆಂಗಳೂರು ಸಾಂಸ್ಕೃತಿಕ ವಾತಾವರಣದಿಂದ ಪ್ರೇರಿತಗೊಂಡವರು. ಇಲ್ಲಿಯ ಅಂಚೆ ಕಲಾಶಾಲೆಯಲ್ಲಿ ಅಭ್ಯಾಸವನ್ನು ಮಾಡುವಾಗ ಇವರಿಗೆ ಹೆಚ್ಚಿನ ಪ್ರೇರಣೆಯನ್ನು ನೀಡಿದವರೆಂದರೆ ಎಂ.ಟಿ.ವಿ. ಆಚಾರ್ಯರು ಇವರು ಶಿವಲಿಂಗಪ್ಪನವರನ್ನು ಪ್ರೇರೆಪಿಸಿದ್ದು ಅಲ್ಲದೆ ಅವರ ಪ್ರತಿಯೊಂದು ಕಲಾಚಟುವಟಿಕೆಗಳ

ಹಂತದಲ್ಲಿ ಸಲಹೆ ಸೂಚನೆಗಳನ್ನು ನೀಡಿದವರು. ಇಲ್ಲಿ ಇವರ ಪ್ರೇರಣೆಯಿಂದಲೇ ಶಿವಲಿಂಗಪ್ಪನವರು ತಮ್ಮ ಕಲಾಶಿಕ್ಷಣವನ್ನು ಸುಸಂಗತವಾಗಿ ಮುಗಿಸಿಕೊಂಡಿದ್ದಾರೆ.

ಹೀಗೆ ಈ ಅಧ್ಯಾಯದಿಂದ ನಾವು ಕಂಡುಕೊಳ್ಳಬಹುದಾದ ಅಂಶವೇನೆಂದರೆ ಶಿವಲಿಂಗಪ್ಪನವರು ಕಲಾಸೃಷ್ಟಿಯ ಹಂತದಲ್ಲಿ ಯಾವ ರೀತಿಯಲ್ಲಿ ಪ್ರಭಾವಕ್ಕೊಳಗಾದರು ಮತ್ತು ಅವರು ಪ್ರಭಾವಕ್ಕೊಳಗಾದ ವಿಷಯಗಳು, ಸಂದರ್ಭಗಳು ಅವರ ಮೇಲೆ ಯಾವ ರೀತಿಯಲ್ಲಿ ಪರಿಣಾಮ ಬೀರಿದವು. ಆಕೃತಿಗಳಿಂದ ಪ್ರಭಾವಿತರಾದ ಶಿವಲಿಂಗಪ್ಪನವರು ನಮ್ಮ ಕಲಾಕೃತಿಯಲ್ಲಿ ಅವುಗಳನ್ನು ಯಾವ ರೀತಿಯಾಗಿ ಬಳಸಿಕೊಂಡರು ಎಂಬುದನ್ನು ಅಧ್ಯಾಯನದಲ್ಲಿ ಕಂಡುಕೊಳ್ಳಲಾಗಿದೆ. ಇದಲ್ಲದೇ ಶಿವಲಿಂಗಪ್ಪನವರು ಅವರ ಕಲಾಸೃಷ್ಟಿಯ ಹಂತದಲ್ಲಿ ಪ್ರೇರಣೆ ನೀಡಿದ ಮೇಲೆ ಯಾವ ರೀತಿಯ ಪರಿಣಾಮ ಬೀರಿತು ಮತ್ತು ಆ ಪ್ರೇರಣೆಯನ್ನು ಅವರು ತಮ್ಮ ಕಲಾಕೃತಿಗೆ ಹೇಗೆ ಅಳವಡಿಸಿಕೊಂಡರು ಎಂಬುದನ್ನು ತಿಳಿದುಕೊಂಡಿದ್ದೆವೆ. ಹಾಗೆಯೇ ಇವರು ಯಾವ ರೀತಿ ತಂತ್ರಶೈಲಿಯನ್ನು ಅಳವಡಿಸಿಕೊಂಡಿದ್ದಾರೆಂಬುದನ್ನು ತಿಳಿದುಕೊಳ್ಳಬೇಕು.

ತಂತ್ರ ಶೈಲಿ

ಕಲೆಯು ಯಾವಾಗಲೂ ಜನಗಳ ಮನಸ್ಸಿನ ಮೇಲೆ ಪ್ರಭಾವ ಬೀರುವ ಒಂದು ಮುಖ್ಯ ಸಾಧನೆಯಾಗಿದೆ. ಅದಕ್ಕಾಗಿ ಚಿತ್ರಕಲೆ ಮನೋವಿಜ್ಞಾನದ ಸಿದ್ಧಾಂತಗಳ ಮೇಲೆ ಆಧಾರವಾಗಿರುವುದು. ಕಲೆಯಲ್ಲಿ ಕೇವಲ ತಾಂತ್ರಿಕ ನೈಪುಣ್ಯತೆ ಒಂದಿದ್ದರೆ ಸಾಲದು. ತಾಂತ್ರಿಕ ನೈಪುಣ್ಯತೆಯೊಂದಿಗೆ ಮನೋವಿಜ್ಞಾನದ ತತ್ವಗಳನ್ನು ಅಳವಡಿಸಿಕೊಂಡರೆ ಚಿತ್ರಕಲಾಕೃತಿಯ ನೈಪುಣಯತೆ ಇನಊ ಹೆಚ್ಚುತ್ತದೆ. ಯಾವುದೇ ಒಂದು ಕಲಾಕೃತಿಯ ಹಿಂದೇ ಕಲಾವಿದನ ಮನಸ್ಥಿತಿಯು ಮುಖ್ಯವಾಗಿ ಕಾರಣವಾಗಿರುತ್ತದೆ. ಹೀಗಾಗಿ ಚಿತ್ರಕಲೆ ಮನಶಾಸ್ತ್ರಕ್ಕೆ ಬಿಡಲಾರದ ನಂಟುತನವಿದ್ದು ಇವು ಒಂದಕ್ಕೊಂದು ಪೂರಕ ಮತ್ತು ಪ್ರೇರಕವಾದ ಸಂಬಂಧವನ್ನು ಹೊಂದಿವೆಯೆಂದು ಹೇಳಬಹುದು.

ಶಿವಲಿಂಗಪ್ಪನವರು ಕಲಾಕೃತಿಗಳನ್ನು ರಚಿಸುವಾಗ ಅವರು ಬಳಸಿದ ತಂತ್ರವಿಧಾನವನ್ನು ನಾವು ಗಮನಿಸಿದಾಗ ಅಧ್ಯಯನ ಕಾಲದ ಹಂತದಲ್ಲಿಯೂ ಕಲಾಕೃತಿಗಳಲ್ಲಿ ಬಳಸಿದ ತಂತ್ರಗಾರಿಕೆ, ವರ್ಣ ಪ್ರಭಾವ ಮತ್ತು ಕಾರ್ಖಾನೆಯ ವೃತತಿಯಲ್ಲಿ ನಿರ್ಮಾಣಗೊಂಡಿರುವ ಕಲಾಕೃತಿಗಳ ತಂತ್ರ ವಿಧಾನವಲ್ಲದೆ ನಿವೃತ್ತಿಯ ಹಂತದಲ್ಲಿ ನಿರ್ಮಾಣಗೊಂಡಿರುವ ಕಲಾಕೃತಿಗಳನ್ನು ರಚಿಸಲು ಬಳಸಿದ ತಂತ್ರವಿಧಾನವನ್ನು ಗಮನಿಸಿದಾಗ ಇಲ್ಲಿ ಆಯಾ ಒಂದು ಅವಧಿಗೆ ಸಂಬಂಧಪಟ್ಟಂತೆ ತಂತ್ರವಿಧಾನವನ್ನು ಬಳಸಿಕೊಂಡು ಶಿವವಿಂಗಪ್ಪನವರು ಕಲಾಕೃತಿಗಳನ್ನು ರಚಿಸಿದ್ದು ಕಂಡುಬರುತ್ತದೆ.

ಶಿವಲಿಂಗಪ್ಪನವರ ಕಲಾಕೃತಿಗಳನ್ನು ನೋಡಿದೊಡನೆಯೇ ಅದರಲ್ಲಿ ಏನೋ ಒಂದು ರೀತಿಯ ಮನಸ್ಸನ್ನು ಸೆಳೆಯುವ ಆಕರ್ಷಣೆಯು ತನ್ನನ್ನು ತಾನೇ ಕರೆದೊಯ್ಯುತ್ತದೆ. ಇವರೇ ಹೇಳುವ ಹಾಗೆ ವ್ಯಕ್ತಿ ಚಿತ್ರಗಳನ್ನು ರಚಿಸುವುದು ಸುಲಭವಲ್ಲ. ಏಕೆಂದರೆ ಚಿತ್ರದಲ್ಲಿ ನಾವು ವ್ಯಕ್ತಿಯನ್ನು ತೋರಿಸಬಹುದು. ಆದರೆ ಆ

ವ್ಯಕ್ತಿಯ ಹಾವ, ಭಾವಗಳನ್ನು ತೋರಿಸಬೇಕು. (Expression is very important in a portrart of life painting) ಒಂದು ವೇಳೆ ಅಲ್ಲಿ ಭಾವನೆ ಇರಲಿಲ್ಲವೆಂದರೆ ಅದು ಕಲಾಕೃತಿ ಎನಿಸುವುದಕ್ಕೆ ವ್ಯಕ್ತಿ ಚಿತ್ರಗಳ ಬಗ್ಗೆ ಹೇಳುತ್ತಾರೆ.

ಇದೇ ರೀತಿಯ ತಂತ್ರ ವಿಧಾನವನ್ನು ಒಳಪಡಿಸಿಕೊಂಡು ಇವರು ಕೆಲವು ನಿಸರ್ಗ ಚಿತ್ರಗಳನ್ನು ಮತ್ತು ಸ್ಥಿರಚಿತ್ರಗಳನ್ನು ಶಿಲ್ಪಚಿತ್ರಗಳು ಈ ತಂತ್ರ ವಿಧಾನಕ್ಕೆ ಇವರು ಬಳಸುವ ವರ್ಣಗಳು ಹೀಗಿವೆ (Burnt umber, vyndake brown, cobalt blue, sap green, emarald green, yellow, ochre, crimson lake flake white) ಮುಂತಾದ ವರ್ಣಗಳನ್ನು ಬಳಸಿಕೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಇದು ಪ್ರಾತ್ಯೇಕ್ಷಿಕೆಗಳನ್ನು ಮಾಡುವ ಸಂದರ್ಭದಲ್ಲಾದ ತಂತ್ರವಿಧಾನವಾದರೆ ಇನ್ನೂ ಬೇರೆಯವರಿಂದ ಮಾಡಿಕೊಟ್ಟ ವ್ಯಕ್ತಿಚಿತ್ರಗಳಲ್ಲಿ ದಪ್ಪವಾಗಿ ಬಳಸದೇ ತುಂಬಾ ಮೃದುವಾಗಿ ಒಂದೇ ತೆರನಾದ ವರ್ಣ ಸಂಯೋಜನೆಯನ್ನು ನಾವು ಕಾಣಬಹುದು. ಇವುಗಳಲ್ಲಿ ಹೆಚ್ಚಾಗಿ ಛಾಯಾಚಿತ್ರಗಳನ್ನು ಆಧರಿಸಿ ಮತ್ತು ವಚನ ಪುಸ್ತಕಗಳು ಆಧರಿಸಿ ಚಿತ್ರಿಸಿದ ಕಲಾಕೃತಿಗಳಾಗಿವೆ. ಈ ಸಂದರ್ಭದಲ್ಲಿ ಛಾಯಾಚಿತ್ರವು ಚಿಕ್ಕದಾದರೆ ಅದನ್ನು ಒಂದು ಹಾಳೆಗೆ ಅಂಟಿಸಿ ಅದರ ಮೇಲೆ ಪೆನ್ಸಿಲ್‌ನಿಂದ ಗೆರೆಗಳನ್ನು ಹಾಗಿ ಒಂದು ಬದಿಯಿಂದ ಇನ್ನೊಂದು ಬದಿಯಿರುವ ಗೆರೆಗಳಂತೆಯೆ ಒಂದೇ ತೆರನಾದ ಸಂಖ್ಯೆಯನ್ನು ಕೊಡುತ್ತಾ ಛಾಯಾಚಿತ್ರದ ತುಂಬಾ ಎರಡು ರೀತಿಯಿಂದ ಗೆರೆಗಲನ್ನು ಎಳೆದು ಸಿದ್ಧಪಡಿಸಿಕೊಳ್ಳುತ್ತಾರೆ. ನಂತರದಲ್ಲಿ ಆ ಛಾಯಾಚಿತ್ರದಲ್ಲಿರುವ ವ್ಯಕ್ತಿಯನ್ನು ಕ್ಯಾನವಾಸ್‌ನ ಮೇಲೆ ಬಿಡಿಸುವಾಗ ಅದರ ಮೇಲೆ ಛಾಯಾಚಿತ್ರದ ಮೇಲೆ ಹಾಕಿರುವ ಬ್ಲಾಕ್‌ಗಳಂತೆ ಎರಡು ಅಥವಾ ಮೂರು ಪಟ್ಟುಗಳಂತೆ ಬ್ಲಾಕ್‌ಗಳನ್ನು ಹಾಕುತ್ತಾರೆ. ನಮಗೆ ಎಷ್ಟು ದೊಡ್ಡ ಗ್ರಾತದಲ್ಲಿ ಬೇಕು ಅಷ್ಟು ಪಟ್ಟು ಬ್ಲಾಕ್‌ಗಳನ್ನು ಹೆಚ್ಚಿಸುತ್ತಾ ಹೋಗಬೇಕು. ಹೀಗೆ ಬ್ಲಾಕ್‌ಗಳನ್ನು ಹಾಕಿ ನಂತರ ಅದರ ಮೇಲೆ ಸಂಪೂರ್ಣವಾಗಿ ಪೆನ್ಸಿಲ್‌ನಿಂದ ವ್ಯಕ್ತಿಚಿತ್ರವನ್ನು ಬಿಡಿಸಬೇಕು. ಇದಾದ ಮೇಲೆ ಬಣ್ಣವನ್ನು ಬಳಸಿಕೊಂಡು ಕಲಾಕೃತಿಯನ್ನು ರಿಸುವುದ ಇದೂ ಕೂಡ ಒಂದು ರೀತಿಯ ತಂತ್ರವಿಧಾನ. ಇಲ್ಲಿ ಬಳಸುವ ವರ್ಣಗಾರಿಕೆಯ ಪ್ರಭಾವವೇ. ಬೇರೆ ಇಲ್ಲಿ ವರ್ಣವನ್ನು ದಪ್ಪ ದಪ್ಪವಾದ ಲೇಪಿಸದೆ ಕಡಿಮೆ ಪ್ರಮಾಣದಲ್ಲಿ ವರ್ಣವನ್ನು ಬಳಸಿಕೊಂಡು ಅದರಲ್ಲಿಯೇ ನೈಜತೆಯೊಂದಿಗೆ ಭಾವ ಪ್ರಧಾನವಾದಂಥಹ ಕಲಾಕೃತಿಗಳನ್ನು ರಚಿಸಿದ್ದಾರೆ.

ಈ ಹಂತದಲ್ಲಿ ಹೆಚ್ಚಾಗಿ ಶರಣರ ಜೀವನಕ್ಕೆ ಸಂಬಂಧಪಟ್ಟಂತೆ ಧಾರ್ಮಿಕ ವಿಷಯಗಳಿಗೆ ಸಂಬಂಧಪಟ್ಟಂತೆ ಹಲವಾರು ಕಲಾಕೃತಿಗಳು ಇವರಿಂದ ರಚಿಸಲ್ಪಟ್ಟಿವೆ. ಇವೆಲ್ಲವೂ ನೈಜ ಸಂಯೋಜನ ಮತ್ತು ಸಮಕಾಲೀನ ಕಲಾಕೃತಿಗಳಾಗಿವೆ. ಇವು ತೈಲವರ್ಣದಲ್ಲಿ ಮೂಡಿಬಂದ ಚಿತ್ರಗಳು ಮತ್ತು ಜಲವರ್ಣದಲ್ಲಿಯೂ ರಚಿಸಿದ್ದಾರೆ. ಯಾವುದೇ ಕಲಾಕೃತಿಯನ್ನು ರಚಿಸುವುದಕ್ಕಿಂತ ಪೂರ್ವದಲ್ಲಿ ಅಂಕನೆಗಳನ್ನು ಮಾಡಿ ನಂತರದಲ್ಲಿ ಅದೇ ದೊಡ್ಡ ಅಳತೆಯಲ್ಲಿ ಚಿತ್ರಿವುದು ಇವರು ರೂಢಿಯಾಗಿಸಿಕೊಂಡಿದ್ದರು. ಇದು ಶಿವಲಿಂಗಪ್ಪನವರ ಶಿಸ್ತಿನ

ಕ್ರಮವೂ ಆಗಿತ್ತು. ಏಕೆಂದರೆ ಗುರುಕುಲ ಕಲಾಶಾಲೆಯಲ್ಲಿ ಇವರು ವಿದ್ಯಾಭ್ಯಾಸವನ್ನು ಮಾಡುವಾಗ ಅಲ್ಲಿ ಒಂದು ಕಲಾಕೃತಿಗಳನ್ನು ರಚಿಸಬೇಕಾದರೆ ಅದನ್ನು ಬೇರೆ ಬೇರೆ ರೀತಿಯಿಂದ ಐದಾರು ಬಾರಿ ಪೆನ್ಸಿಲ್‌ನಿಂದ ಚಿತ್ರಿಸಬೇಕಾಗಿತ್ತು. ಇದಾದ ಮೆಲೆ ಬಣ್ಣದಿಂದ ಕಲಾಕೃತಿಯನ್ನು ರಚಿಸಬೇಕು. ಇದು ಗುರುಕುಲ ಕಲಾಶಾಲೆಯಲ್ಲಿನ ಶಿಸ್ತಿನ ಕ್ರಮವಾಗಿತ್ತು. ಅದೇ ರೀತಿ ಅಂಚೆ ಕಲಾಶಿಕ್ಷಣ ಪಡೆಯುತ್ತಿರುವಾಗ ಇವರ ಗುರುಗಳಾದ ಎಂ.ಟಿ.ವಿ. ಆಚಾರ್ಯರ ಕಲಾಶಿಕ್ಷಣದಲ್ಲಿಯೂ ಗುರುಕುಲದಲ್ಲಿರುವಂತೆ ಶಿಸ್ತಿನ ಕ್ರಮಗಳು ಇಲ್ಲಿಯೂ ಅದೇ ಕ್ರಮವನ್ನು ಹೇಳುತ್ತಿದ್ದರು.

ಕೇವಲ ರೇಖೆಗಳ ಗತಿ ಬರೀ ಚಿತ್ರರಚನೆ ಪದ್ಧತಿ ಮತ್ತು ವರ್ಣ ಸಾಮರಸ್ಯದ ವಿಂಗಡಣೆಗಳಿಂದಲೇ ಕಲಾಕೃತಿಗಳ ರೂಪ ರೇಷಗಳನ್ನು ಗುರುತಿಸಲು ಅಸಾಧ್ಯವಾದದ್ದು. ಯಾವುದೇ ಕಲಾಕೃತಿಯಲ್ಲಿಯು ಆಕಾರ ವರ್ಣಗಳ ತಾಳ, ಮೇಳ ವಿಷಯಗಳ ಸ್ವಂತಿಕೆ ತಾಂತ್ರಿಕತೆ ಕಲೆಯ ಒಳ ಅರ್ಥಗಳನ್ನು ನಾವು ಸೂಕ್ಷ್ಮವಾಗಿ ಗುರುತಿಸಲೇಬೇಕು. ಕೇವಲ ಆಕಾರ ಪ್ರಮಾಣಬದ್ಧವಾಗಿದ್ದರೆ ಮಾತ್ರ ಸಾಲದು. ಬಣ್ಣಗ ಹರಡುವಿಕೆಯಲ್ಲಿಯ ತಾಳ, ಮೇಳದಲ್ಲಿ ಸಮತೋಲನವೂ ಅಷ್ಟೇ ಪ್ರಧಾನ ಪಾತ್ರವಹಿಸುತ್ತದೆ. ಇಲ್ಲಿ ದೊಡ್ಡ ಗಾತ್ರದ ಚಪ್ಪಟೆಯಾದ ಕುಂಚದಿಂದ ಬಣ್ಣವನ್ನು ತೆಳುವಾಗಿ ಒರೆಸುತ್ತಾ ಹೋಗಿದ್ದಾರೆ. ಅವು ನೋಡಿದರೆ ಅಡ್ಡದಾದ ಮತ್ತು ಉದ್ದವಾದ ಪಟ್ಟಿಗಳ ಆಕಾರಗಳಂತೆ ಕಂಡರೂ ಅವೂ ನೋಡುವುದುಕ್ಕೆ ಕಣ್ಣಿಗೆ ಒಂದು ರೀತಿಯ ತಂಪನ್ನು ಕೊಡುತ್ತದೆ. ಇಲ್ಲಿ ಬಳಸಿದ ತಂತ್ರವಿಧಾನವನ್ನು ನಾವು ಗಮನಿಸಿದಾಗ ಎಂ.ಟಿ.ವಿ. ಆಚಾರ್ಯರು ಕಲಿಸದ ಕ್ರವನ್ನು ಇವರು ಕಲಿಯುವಾಗ ಬಳಸಿದ ತಂತ್ರವನ್ನೇ ಇಲ್ಲಿ ವಚನ ಸಾಹಿತ್ಯದಲ್ಲಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಹೀಗೆ ಶಿವಲಿಂಗಪ್ಪನವರು ಪ್ರತಿಯೊಂದು ಮಾಧ್ಯಮದಲ್ಲೂ ತಮ್ಮದೇ ಆದ ತಂತ್ರವಿಧಾನದೊಂದಿಗೆ ಕಲಾಕೃತಿಗಳನ್ನು ರಚಿಸುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ.

ನೈಜ ಶೈಲಿ : ನೈಜ ಶೈಲಿಯ ಬಗ್ಗೆ ಎಂ.ಟಿ.ವಿ. ಆಚಾರ್ಯ ಅವರು ಹೇಳುವಂತೆ ನಮ್ಮಲ್ಲಿ ನೈಜ ಶೈಲಿಯ ಕಲೆಯು ಹಿಂದೆಯೂ ಇತ್ತು ಇಂದಿಗೂ ಮುಂದೆಯೂ ಇರುವ ಹಕ್ಕು ಅದಕ್ಕಿದೆ. ಇದು ಕೆಲವರು ಕಾರ ಸ್ಥಾನದಿಂದ ಜನಮನದಿಂದ ಅದನ್ನು ಎಂದೆಂದಿಗೂ ಅಳಿಸಲು ಸಾಧ್ಯವಿಲ್ಲ. ಯಾವುದೇ ಕಾಲದಲ್ಲಿ ಯಾವುದೇ ದೇಶದಲ್ಲಿ ಶೈಲಿ ಪ್ರಭಾವಗಳನ್ನು ಅನುಸರಿಸಿ ಕಲಾವಿಧಾನ ಸ್ವಂತಿಕೆ ಭಾವನಾ ವಿಶೇಷತೆಗಳನ್ನು ನಿರೂಪಿಸಿದ ಕಲಾರೂಪ ಶೈಲಿಗಳೆಲ್ಲವೂ ಎಂದೆಂದಿಗೂ ಕಲೆಯಾಗಿಯೇ ಉಳಿದು ವಿಶ್ವದ ಸರ್ವಕಾಲೀಕ ಸಾಂಸ್ಕೃತಿಕ ನಿಧಿಯಾಗುತ್ತವೆ ಎಂಬುದನ್ನು ಸತ್ಯ ಎನ್ನುತ್ತಾರೆ. ಇಂದಿಗೂ ಪಾಶ್ಚಿಮಾತ್ಯ ಕಲಾ ಸಂಗ್ರಹಾಲಯಗಳು ರೆಂಬ್ರಾಂಟ್, ಟಿಟನ್ ವಿಲ್ಲಕಲ್ ಎಂಜೋಲ್ ಮುಂತಾದ ಕಲಾಕೃತಿಗಳನ್ನು ಅಪೂರ್ವ ನಿಧಿಯಂತೆ ರಕ್ಷಿಸಿ ಅಸಂಖ್ಯಾತ ಜನಸಾಗರಕ್ಕೆ ಪ್ರದರ್ಶಿಸಿ ಮನತಣಿಸುವಂತೆ ಮಾಡಿದ್ದಾರೆ. ನಮ್ಮಲ್ಲಿಯೂ ಇಂತಹ ಸಂಪ್ರದಾಯ ಬೆಳೆಯದಿರುವುದು ದುರದೃಷ್ಟಕರವಾಗಿದೆ.

ಪ್ರಪಂಚದ ಅತ್ಯುನ್ನತ ಕಲಾವಿದರಲ್ಲೊಬ್ಬನಾದ ಪಿಕಾಸೋ ಇದನ್ನೇ ಹೇಳುತ್ತಾನೆ. ಲಂಡನ್ನಿನ ದಿ

ಲಿವ್ವಿಂಗ್ ಮ್ಯೂಜಿಯಂ ಎಂಬ ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾದ ಅವನ ಬಿಚ್ಚು ನುಡಿಗಳಿವು. "ಜನರು ದುಃಖ ಪರಿಹಾರವನ್ನಾಗಲಿ ಚೈತನ್ಯವನ್ನಾಗಲಿ ಈಚೀನ ಕಲೆಯಿಂದ ಹೊಂದಲಾರದು. ಆದರೆ ಇಂದಿನ ಸುಸಂಸ್ಕೃತ ಶ್ರೀಮಂತ ಹಾಗೂ ಸೋಮಾರಿ ಜನ ಅಸಾಧಾರಣವೂ ಸ್ವಯಂ ಕಲ್ಪಿತವೂ ಮಿತಿಮಿರಿದ ಅಭ್ಯಾಸದ ಹೊಸದಾದ ಕಲೆಯನ್ನು ಬಯಸುವವರು ಲೀಲಾಜಾಲವಾಗಿ ಎಳೆದ ಆಕಾರದ ರೇಖೆಗಳು ಅರ್ಥವಿಲ್ಲದ ಸಮಸ್ಯಾತ್ಮಕ ಕಲಾಕೃತಿಗಳು. ನನ್ನನ್ನು ನಾನೇ ವಿನೋದಗೊಳಿಸಲಿಕ್ಕೆ ಹೂಡಿದ ಆಟಗಳು ಅದರಿಂದಾಗಿ ನಾನು ಶೀಘ್ರುವಾಗಿ ಪ್ರಸಿದ್ಧನಾದೆ.

ಭಾರತೀಯ ಕಲೆಗೆ ಧರ್ಮವೇ ಸ್ಫೂರ್ತಿಯಾಗಿದ್ದರಿಂದ ಭಾರತೀಯರಿಗೆ ಕಲೆ ಕಲೆಕಾಗಿ ಎಂದರೆ ಅಷ್ಟು ಸಮರ್ಪಕವಲ್ಲ. ತತ್ವನ್ನು ಸಚ್ಚಿದಾನಂದ ಸ್ವರೂಪವೆಂದೇ ಪರಬ್ರಹ್ಮತತ್ವದಲ್ಲಿ ಸತ್ ಚಿತ್ ಆನಂದ, ತತ್ವಗಳು ಲೀನವಾಗಿರುವುದೆಂದು ತಿಳಿದ ಭಾರತೀಯ ತಾತ್ವಿಕರಿಗೆ ಕಲೆ ಅಥವಾ ಸೌಂದರ್ಯನುಭವ ಒಂದು ಸಾಧನ ಮಾತ್ರ. ಏಕೈಕ ಧ್ಯೇಯವಲ್ಲ. ಜೀವನದ ಅಂತಿಮ ಧ್ಯೆಯವಾದ ಪರಮಾತ್ಮನ ಸಾಕ್ಷತ್ಕಾರಕ್ಕೆ ಸೌಂದರ್ಯನ್ವೇಷಣೆ ಒಂದು ಸಾಧನೆ. ಸೌಂದರ್ಯನುಭವ ನೀಡುವ ಆನಂದ ಬ್ರಹ್ಮಾನಂದದ ಒಂದು ಸ್ವರೂಪ ಆಗಿದೆ. ಇಂತಹ ಬ್ರಹ್ಮಾನಂದವನ್ನು ನೀಡುವ ಕಲೆ ಆತ್ಮದ ಶ್ರೇಯಸ್ಸನ್ನು ಸಾಧಿಸುವುದು ಕ್ಷಣಕಾಲವಾದರೂ ರಾಜಸಿಕ, ತಮಾಸಿಕಾ ವರ್ಣಗಳನ್ನು ಭಂಗಮಾಡಿ ಒಂದು ವಿಶೇಷವಾದ ಆನಂದನುಭವವನ್ನು ಸಹೃದಯದಲ್ಲಿ ಉಂಟು ಮಾಡುವುದರಿಂದ ಕಲೆ ಪ್ರೇಕ್ಷಕನ ಮೇಲೆ ಅಥವಾ ಸಹೃದಯಿಯ ಮೇಲೆ ಮಾಡುವ ಸತ್ಪರಿಣಾಮದ ಫಲವೇ ಕಲೆಯಿಂದಾಗುವ ಶ್ರೇಯಸ್ಸು. ಇಂತಹ ಶ್ರೇಯಸ್ಸನ್ನು ಶಿವಲಿಂಗಪ್ಪನವರ ಕಲಾನಿಷ್ಠೆ ಹಾಗೂ ಪರಿಶ್ರಮಗಳಿಂದ ಕೂಡಿದ ಚಿತ್ರಮಯ ಬದುಕಿನಲ್ಲಿ ಕಾಣುತ್ತೆವೆ.

ಶಿವಲಿಂಗಪ್ಪನವರು ಒಬ್ಬ ಕಲಾವಿದರಾಗಿ ಮತ್ತು ಶಿಲ್ಪಕಲಾವಿದರಾಗಿ ತಮ್ಮ ಸಮಕಾಲೀನ ಕಲೆಯನ್ನು ಬದುಕಿಸಿಕೊಂಡು ಮುಂದುವರಿಸಿಕೊಂಡು ಬಂದಂಥವರಲ್ಲಿ ಪ್ರಮುಖರು. ಕಲೆಗಳಲ್ಲಿ ಸಮಕಾಲೀನತೆಯ ಪ್ರಸ್ತುತತೆಯ ಅಗತ್ಯವಾಗಿ ಇರಲೇಬೇಕಾದಂಥ ಒಂದು ಮೌಲ್ಯ. ಒಬ್ಬ ಕಲಾವಿದ ತನ್ನ ಕಾಲದ ವಿಶಿಷ್ಟ ಜೀವಧ್ವನಿಗೆ ಸವಾಲುಗಳಿಗೆ ತನ್ನನ್ನು ಸಮ್ಮುಖವಾಗಿಸಿಕೊಂಡು ಅಭಿವ್ಯಕ್ತಿಸುವ ಮೂಲಕ ಆ ಕಾಲ ಕುರಿತು ಅವನ ಧೋರಣೆ ಅಥವಾ ನಿಲುವು ದಾಖಲಿಸುವ ಸಾಧ್ಯತೆಗಳಿವೆ. ಇಂತಹ ಕೃತಿಯ ಸಮಕಾಲೀನ ದಾಖಲೆಯಾಗಿ ಹೆಚ್ಚು ಮಹತ್ವ ಪಡೆಯುತ್ತದೆ. ಶಿವಲಿಂಗಪ್ಪನವರ ಕಲಾಕೃತಿ ರಚನೆಯ ಧೋರಣೆ ನಿಲುವುಗಳನ್ನು ಅವರ ಚಿತ್ರಗಳ ಮುಖಾಂತರ ತಿಳಿದುಕೊಳ್ಳಬಹುದು.

ಕಲಾಕೃತಿಯು ಕಲಾವಿದನ ಸಮಗ್ರ ಪ್ರತಿಬಿಂಬ. ಒಂದು ಚಿತ್ರವೆಂದರೆ ಆತನ ಆತ್ಮ ದೃಷ್ಟಿಗೆ ಬೋಧನೆಯಾದ ಒಂದು ದೃಶ್ಯ. ಹೀಗೆ ಕಲಾಕೃತಿಯ ಕಲಾವಿದನ ಸಮಗ್ರ ಜನಾಂಗದ ಪ್ರತಿಬಿಂಬ. ಸಮಾಜದ ಅಂತಃಚಕ್ಷುವಿಗೆ ಕಲಾವಿದನೆಂದರೆ ತಪ್ಪಲ್ಲ. ಆದ್ದರಿಂದ ಆಗಿನ ಸಮಾಜ ಯಾವುದನ್ನು ಒಪ್ಪಿಕೊಳ್ಳುತ್ತಿತ್ತೋ ಅದನ್ನು ಕಲಾವಿದನು ಚಿತ್ರಿಸಿದರು ಮತ್ತು ಅದರ ಬಗ್ಗೆ ಅವರಿಗೆ ಸಮಾಧನ ತೃಪ್ತಿಯು ಇತ್ತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಏಕೆಂದರೆ ನೋಡಗನು ಕಲಾಕೃತಿಯಲ್ಲಿ ತನ್ನ ಅನುಭವಕ್ಕೆ ಬಂದ ವಸ್ತುಗಳನ್ನು ಹುಡುಕುವುದು ಸಹಜ ಅದಕ್ಕಾಗಿ ಕ್ರಿ.ಶ. ೭ನೇ ಶತಮಾನದವರೆಗೆ ರೂಪಿಸಲ್ಪಟ್ಟ ಅಜಾಂತಾ ಚಿತ್ರಕಲಾ ವೈಭವವನ್ನು ಕಂಡು ಎಚ್. ಕಸಿನ್ನರು ಈ ಬಗ್ಗೆ ಬರೆಯುತ್ತಾ ಸಂಸ್ಕೃತಿಯ ಹಲವು ಉನ್ನತ ಮಟ್ಟದವರ ಸ್ವತ್ತಲ್ಲ. ಅದು ಅಪಾರ ಜನತೆಯ ಸ್ವತ್ತಾಗ ಬೇಕು. ಮಾನವನ ವಿನಾಶಕಾರಕ ದುರ್ಗುಣಗಳನ್ನು ನಿಯಂತ್ರಿಸಿ ಕ್ರಿಯಾತ್ಮಕತೆಯಿಂದ ಮಾನವರನ್ನು ಉನ್ನತಿಗೇರಿಸುವಂತಹ ಚೈತನ್ಯವೇ ಕಲೆ. ಸಂಸ್ಕೃತಿಗಳ ಹಿರಿಮೆ ಎಂದಿರುವುದು ಸರ್ವಕಾಲಕ್ಕೂ ಮನನೀಯವಾದುದೆಂದರೆ ತಪ್ಪಲ್ಲ. ನೋಡುಗ ರಸಿಕ ಅಂಥವರ ಸಹೃದಯ ಯಾರೇ ಆಗಲಿ ಆತನಲ್ಲಿ ರಸಾಯನಭೂತಿಯಾಗುತ್ತದೆ. ಆನಂದ ಉಂಟಾಗುತ್ತದೆ. ಹಾಗೆ ಕಲಾವಿದನನ್ನು ತಲುಪಲಾರದವರಿಗೆ ನಿರಾಶೆಯಾಗುತ್ತದೆ. ಈ ಮಾತು ಸಂಪ್ರದಾಯ ಹಾಗೂ ನವ್ಯ ಎರಡಕ್ಕೂ ಅನ್ವಯಿಸುತ್ತದೆ. ಸಂಪ್ರದಾಯದಲ್ಲಿ ಸಾದೃಶ್ಯದ ಅಂಶ ಹೆಚ್ಚಿರಬಹುದು. ಹೀಗಿರುವುದರಿಂದಲೆ ಈ ಕಲೆಯ ಜನರ ರಸಾನಂದಕ್ಕೆ ಹತ್ತಿರವಾಗುತ್ತದೆ. ಅಂತೆಯೇ ಶಿವಲಿಂಗಪ್ಪನರು ನೈಜ ಕಲಾ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದರು.

ತಾನು ಬೆಳೆದ ನಡೆದ ಚಿಂತಿಸಿದ ನೋವು ನಲಿವುಗಳನ್ನು ಅನುಭವಿಸಿದ ಕಲಾವಿದ ತನ್ನ ಶೈಲಿಯಲ್ಲಿ ಆ ಕಾಲದ ಸಂದರ್ಭಗಳು ಯಾವ ಸೃಷ್ಟಿ ಮಾಧ್ಯಮಗಳನ್ನು ಕೊಟ್ಟವೋ ಅವುಗಳನ್ನು ದುಡಿಸಿಕೊಂಡು ಕಾಲಕಾಲಕ್ಕೆ ಹಲವು ಉದ್ದೇಶಗಳಿಗಾಗಿ ತನ್ನ ಅಭಿವ್ಯಕ್ತಿಯ ತೀವ್ರತೆಯನ್ನು ಬಳಸಿಕೊಂಡು ಎನ್ನುವಂತೆ ಶಿವಲಿಂಗಪ್ಪನವರು ತಮ್ಮ ಕಲಾಕೃತಿಯಲ್ಲಿ ಸೃಷ್ಟಿ ಮಾಧ್ಯಮಗಳನ್ನೇ ದುಡಿಸಿಕೊಂಡು ಮುಂದೆ ಬಂದವರು.

ಶೈಲಿ : ಚಿತ್ರ ರಚನೆಯ ಕಾಲದಲ್ಲಿ ಕಲಾವಿದನಿಗಿರುವ ಮಾನಸಿಕ ಭಾವನೆಗಳಿಗಿಂತ ಅವನ ಕಲಾ ಕೌಶಲ್ಯ ಕೂಡಾ ಬದಲಾಗುತ್ತದೆ. ಒಂದೊಂದು ಬಗೆಯ ವಿಚಾರಗಳನ್ನು ತಿಳಿಸಲು ಒಂದೊಂದು ಬಗೆಯ ಕೌಶಲ್ಯ ಹಾಗೂ ಶೈಲಿ ಬೇಕಾಗಬಹುದು. ಅದನ್ನು ಕಲಾವಿದ ತನಾಗಿಯೇ ತನ್ನ ಮನಸ್ಸಿನಿಂದ ಭಾವನೆಗಳಿಗೆ ರೂಪಕೊಡಲು ಯೋಗ್ಯವೆನಿಸುವ ಶೈಲಿಯನ್ನು ಪ್ರಯೋಗಿಸುತ್ತಾನೆ. ಮಾನಸಿಕ ಭಾವಗಳನ್ನು ಹೊರಗೆಡವಲು ಪ್ರತಿಯೊಬ್ಬ ಕಲಾವಿದ ತನ್ನದೇ ಆದ ಶೈಲಿಯನ್ನು ರೂಪಿಸಿ ಗುರುತಿಸಿಕೊಳ್ಳಬೇಕಾಗುತ್ತದೆ. ಈ ಅಭಿಪ್ರಾಯದಂತೆ ಶಿವಲಿಂಗಪ್ಪನವರು ಸಮಗ್ರ ಕಲಾಕೃತಿಗಳ ಅಧ್ಯಯನ ಮಾಡಿದಾಗ ಮೊದ ಮೊದಲು ಎಂ.ಟಿ.ವಿ. ಆಚಾರ್ಯರ ಶಿಕ್ಷಣದ ಕಲಿಕೆಯಲ್ಲಿ ಪಾಶ್ಚೀಮಾತ್ಯ ಕಲೆಯ ಕಲಾವಿದರ ಹಾಗೂ ಭಾರತೀಯ ಬೇರೆ ಬೇರೆ ಕಲಾಶೈಲಿಯ ಪ್ರಭಾವಕ್ಕೆ ಒಳಗಾಗಿದ್ದರೂ ಸಹ ತದನಂತರದಲ್ಲಿ ಪಾಶ್ಚೀಮಾತ್ಯ ಮಾಧ್ಯಮ ಶೈಲಿ ರೂಪ ತಂತ್ರ ಇತ್ಯಾದಿಗಳನ್ನು ನಮ್ಮ ನೆಲದ ಸೊಗಡಿಗೆ ಹೊಂದಿಸುವ ಪ್ರಯತ್ನವನ್ನು ಶಿವಲಿಂಗಪ್ಪನವರು ಮಾಡಿದ್ದಾರೆ. ಅಂತೆಯೇ ಅಲ್ಲಿ ನಮ್ಮ ಭಾವನೆಗಳಿಗೆ ವಸ್ತು ವಿಷಯಗಳಿಗನುಸಾರವಾಗಿ ನೈಜಶೈಲಿಗೆ ಬದ್ಧರಾಗಿರುವುದು ಕೂಡ ನವ್ಯ ಕಲೆಯನ್ನು ಅದರಲ್ಲಿ ಅವರ ಸೃಜನಶೀಲತೆಯನ್ನು ಕಾಣಬಹುದಾಗಿದೆ.

ಶಿವಲಿಂಗಪ್ಪನವರು ನೈಜ ಕಲಾಕೃತಿಗಳನ್ನು ಚಿತ್ರಿಸಲು ಕಾರಣ ಆಗಿನ ಸಮಕಾಲೀನ ಜನರು ಬಹುವಾಗಿ ಒಪ್ಪಿಕೊಳ್ಳುವ ಸಂದರ್ಭವದು. ಮತ್ತು ಇವರಿಗೆ ಸಹ ಅದರಲ್ಲಿ ತೃಪ್ತಿ ಇತ್ತು. ಅದಕ್ಕೆ ಕಲಾಕೃತಿಗಳು

ಒಂದು ಯುಗದ ಆಶಕ್ತಿ ಮತ್ತು ಕುತೂಹಲಗಳ ಮೊತ್ತವಾಗಿರುತ್ತವೆ ಎಂಬ ಮಾತುಗಳು ಕಲಾ ಸೃಷ್ಟಿಯ ಮೂಲ ಮತ್ತು ಅದು ಮಾಡುವ ಪರಿಣಾಮಗಳ ಸಾಮಾಜಿಕ ಸ್ವರೂಪವನ್ನು ವ್ಯಕ್ತಪಡಿಸುತ್ತವೆ. ಇಂತಹ ನೈಜ ಶೈಲಿಯ ಪರಂಪರೆಯಲ್ಲಿ ಆಕೃತಿಗಳನ್ನು ರಚಿಸುವಲ್ಲಿ ಮಾನವನ ಅಂಗಾಂಗಳನ್ನು ಇರುವುದಕ್ಕಿಂತ ಹೆಚ್ಚು ನೀಳವಾಗಿ ತೋರಿಸುವ ಒಂದು ಲಕ್ಷಣ ಅವರ ವೈಯಕ್ತಿಕತೆಯನ್ನು ಬಿಂಬಿಸುತ್ತದೆ.

ಕಲೆಗೆ ಒಂದು ಚಾಲನೆ ಇದೆ. ಶಿವಲಿಂಗಪ್ಪನವರು ಮಾಡುವಂತಹ ಚಿತ್ರಗಳಿಗೆ ತುಂಬಾ ಮೆಚ್ಚುಗೆ ಇತ್ತು. ಆಗ ನೈಜ ರೀತಿಯಲ್ಲೇ ಚಿತ್ರಗಳನ್ನು ರಚಿಸಬೇಕಾಗುತ್ತಿತ್ತು. ಅದು ಅಲಂಕಾರಿಕವಾಗಿರಲಿ, ಮಾನವ ಆಕೃತಿಗಳನ್ನೇ ಹೊಂದಿರಲಿ ಈಗಿನ ಸಮಕಾಲೀನದಲ್ಲಿಯ ವಿಚಾರದಲ್ಲಿ ಸಾಕಷ್ಟು ಬೆಳವಣಿಗೆಯಾಗಿದೆ. ಆದರೆ ಶಿವಲಿಂಗಪ್ಪನವರು ನೋಡಿದಂತಹ ದೃಷ್ಟಿಕೋನ ಆಗಿನ ವಿಕಾಸಗೊಳ್ಳುತ್ತಿರುವಂತಹ ಕಲೆಯ ಆಕೃತಿಗಳನ್ನು ಹಿಡಿದುಕೊಂಡು ತಮಗೆ ಇಷ್ಟವಾದಂತಹ ವಿಷಯಗಳ ಮೇಲೆ ಚಿತ್ರ ರಚಿಸಿದ್ದಾರೆ. ಇದು ಅವರದೇ ಆದಂಥ ಶೈಲಿ ಎಂದು ಹೇಳಬಹುದು.

ಶಿವಲಿಂಗಪ್ಪನವರ ಚಿತ್ರಗಳಲ್ಲಿ ರೇಖೆಗೆ ಮತ್ತು ವರ್ಣಗಳ ಲೇಪನಕ್ಕೆ ಹೆಚ್ಚು ಪ್ರಾಧಾನ್ಯತೆ ಇದೆ. ಇದರ ಜೊತೆಗೆ ಸಂಯೋಜನೆಯಲ್ಲಿ ವೈವಿಧ್ಯತೆ ಇರುವ ಅಂಶಗಳನ್ನು ಕಾಣುತ್ತೇವೆ. ಆಗಿನ ಸಮಕಾಲೀನ ಚಿತ್ರಗಳಲ್ಲಿರುವ ಕೃತಿಗಳು ಅಷ್ಟೇ ಶಕ್ತಿಯುತವಾದ ಕಲಾಕೃತಿಗಳೆಂದು ಹೇಳಬಹುದು. ವಿಷಯಗಳ ಭಿನ್ನತೆಯ ಜೊತೆಗೆ ಇಡಿ ಬದುಕಿನ ಸಂಸ್ಕೃತಿಯ ಅನೇಕ ಬೆಳವಣಿಗೆಯ ಹಂತವನ್ನು ಶಿವಲಿಂಗಪ್ಪನವರು ಕಲಾಕೃತಿಗಳಲ್ಲಿ ಕಾಣುತ್ತೇವೆ. ಇಂತಹ ಬದುಕನ್ನು ಪ್ರತಿಬಿಂಬಿಸುವಂತಹದು ಕಲೆ ಆಗಿದೆ. ಆದ್ದರಿಂದ ಇವರ ಕಲಾಕೃತಿಗಳ್ಲಿ ಆ ಕಾಲವನ್ನು ಗುರುತಿಸುತ್ತ ಹೋದವು. ಇದರಿಂದಾಗಿ ಆ ಚಿತ್ರಗಳಲ್ಲಿ ಅದು ಹೊಸತಾಗಿಯೇ ಉಳಿಯಿತು. ಇಡಿ ನಮ್ಮ ಬದುಕಿನ ಹೊಸತನ ಉಡುಗೆ ತೊಡುಗೆಯ ಹೊಸತನ ಹೀಗೆ ಅನೇಕ ವಿಷಯಗಳನ್ನು ನಾವು ಶಿವಲಿಂಗಪ್ಪನವರ ಕಲಾಕೃತಿಗಳಲ್ಲಿ ಕಾಣುತ್ತೇವೆ.

ಅಂತಹ ಅನೇಕ ವಿಷಯಗಳನ್ನು ಶಿವಲಿಂಗಪ್ಪನವರು ಕಲಾಕೃತಿಗಳಲ್ಲಿ ಕಾಣುತ್ತೇವೆ. ಈ ಅಂಶಗಳನ್ನು ಹಾಗೂ ಶೈಲಿ ವೈಶಿಷ್ಟ್ಯತೆಯನ್ನು ಈ ಹಿಂದೆ ಅಧ್ಯಾಯದಲ್ಲಿ ವಿವರಿಸಲಾಗಿದೆ. ಶಿವಲಿಂಗಪ್ಪನವರು ಚಿತ್ರರೂಪದಲ್ಲಿ ಭಾವಪೂರ್ವಕವಾಗಿ ಚಿತ್ರಿಸಿವುದು ಎರಡು ಮೂರು ಸನ್ನಿವೇಶಗಳ ಪರಿಣಾಮವನ್ನು ಒಂದೇ ಅವಕಾಶದ ಮೇಲೆ ಸಂಯೋಜನೆ ಮಾಡುವ ರೀತಿ ಭಾವನೆಗಳನ್ನು ವ್ಯಕ್ತಪಡಿಸುವ ಭಾವನಾತ್ಮಕತೆ ವೇಷಭೂಷಣಗಳು, ಮೀಸೆಯ ಪ್ರಭಾವ ಸನ್ನಿವೇಶದ ಕಲ್ಪನೆ ಆಕೃತಿಗಳ ವಿವರಣೆ ಹಾಗೂ ಭಾವಚಿತ್ರಗಳ ಹಿನ್ನೆಲೆಯಲ್ಲಿ ನಿಸರ್ಗ ಚಿತ್ರ ರಚಿಸುವ ರೀತಿ ಪ್ರಾಣಿಗಳೇ ಇರಲಿ ಮನುಷ್ಯರೆ ಇರಲಿ ಅತ್ಯಂತ ಸೂಕ್ಷ್ಮವಾಗಿ ಅಭ್ಯಾಸ ಮಾಡಿರುವುದು ನಮಗೆ ಕಂಡುಬರುತ್ತದೆ.

ಒಂದೇ ಅವಕಾಶದಲ್ಲಿ ಬಸವಣ್ಣನವರ ವಚನ ಸಾಹಿತ್ಯ ಆಧಾರಿತ ಚಿತ್ರಗಳನ್ನು ಸ್ಪಷ್ಟವಾಗಿ ಚಿತ್ರಿಸುವುದಲ್ಲದೆ ಪ್ರತಿಯೊಂದು ವಚನಗಳ ದೃಶ್ಯಗಳನ್ನು ಸಾಮಾನ್ಯ ಜನರಿಗೆ ಗುರುತಿಸುವ ರೀತಿಯಲ್ಲಿ ಚಿತ್ರಿಸುವುದು ಇವರ ಇನ್ನೊಂದು ವೈಶಿಷ್ಟ್ಯವಾಗಿದೆ.

[illegible]

ಇಂತಹ ಒಂದು ಸಂಯೋಜನಾ ತಂತ್ರ ಶೈಲಿ ಅವರ ಗುರುಗಳಿಂದಲೇ ಬಂದಂಥಹವುಗಳು. ಒಂದೊಂದು ಆಕೃತಿಯ ಮೇಲೂ ಉಚಿತ ವರ್ಣವನ್ನು ಲೇಪಿಸಿದ್ದಾರೆ. ಅಷ್ಟೊಂದು ವಿಷಯಗಳು ಇದ್ದರೂ ಅದರಲ್ಲಿ ಹಿನ್ನೆಲೆ, ಮುನ್ನೆಲೆ ಆಕೃತಿಗಳ ನಡುವೆ ಇರಬೇಕಾದ ಸ್ಥಳ ಅವಕಾಶದ ಕಲ್ಪನೆ ಅದ್ಭುತವಾದದ್ದು.


ವೇಷ-ಭೂಷಣಗಳು ಅಷ್ಟೇ. ಆಯಾ ಕಾಲದ ಹಾಗೂ ವ್ಯಕ್ತಿತ್ವಕ್ಕೆ ತಕ್ಕಂತಹ ವೇಷಗಳನ್ನು ಚಿತ್ರಿಸಿದ್ದಾರೆ. ಹೆಚ್ಚಾಗಿ ಕೆಲವು ಚಿತ್ರಗಳಲ್ಲಂತೂ ವಚನ ಸಾಹಿತ್ಯ ಆಧಾರಿತ ಚಿತ್ರಿಸಿದ್ದು ಗಮನಾರ್ಹ. ಗಂಡಸರಿಗೆ ತಲೆಯ ಮೇಲೆ ರೂಮಾಲು, ಹೆಂಗಸರ ತಲೆಯ ಮೇಲೆ ಆಗ ಯಾವಾಗಲೂ ತಲೆಯ ತುಂಬಾ ಸೆರಗನ್ನು ಹೊತ್ತುಕೊಂಡಿರುವಂತದ್ದು. ಮೈ ತುಂಬಾ ಬಂಗಾರದ ಆಭರಣಗಳು ಹೀಗೆ ಆ ಕಾಲದ ಉಡುಗೆ ತೊಡುಗೆ ಜೊತೆಯಲ್ಲಿ ಸಂಸ್ಕೃತಿ, ಸಂಪ್ರದಾಯಗಳ ಆಚರಣೆ, ಅಂದಿನ ಕಾಲದಲ್ಲಿ ಉಪಯೋಗಿಸುವಂತಹ ದೈನಂದಿನ ವಸ್ತುಗಳು. ಜನ ಜೀವನದ ಮುಖವನ್ನು ತಮ್ಮ ಕಲಾಕೃತಿಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಅತ್ಯಂತ ಮೃದು ವರ್ಣಗಳನ್ನು ಬಳಸುವುದರೊಂದಿಗೆ ಗಾಢವಾದ ನೆರಳು ಬೆಳಕನ್ನು ಅತ್ಯಂತ ಪ್ರಭಾವಶಾಲಿಯಾಗಿ ಯೋಜಿಸಿದ್ದಾರೆ. ಚಿತ್ರಗಳಲ್ಲಿ ಸೂಕ್ಷ್ಮತೆಯ ಸ್ಪಷ್ಟನೆಯನ್ನು ತೋರಿಸಿದ್ದಾರೆ.

ಶಿವಲಿಂಗಪ್ಪನವರು ಕಲಾಕೃತಿ ರಚಿಸಲು ಬಳಸಿದ ಕಲಾ ಸಾಮಾಗ್ರಿಗಳು

ಇಲ್ಲಿಯವರೆಗೆ ಅವರ ಜಲವರ್ಣ, ತೈಲವರ್ಣ, ಪೆನ್ಸಿಲ್ ಮಾಧ್ಯಮದಲ್ಲಿ ಅವರದೇ ಆದ ಶೈಲಿ ವಿಶಿಷ್ಟತೆ, ವಿನ್ಯಾಸ, ವರ್ಣಗಳ ಬಳಕೆ, ಲಯಬದ್ಧತೆ ಮುಂತಾದ ವಿಷಯಗಳನ್ನು ಅವರ ಕಲಾಕೃತಿಗಳ ಮೂಲಕ ತಿಳಿದುಕೊಳ್ಳಲಾಯಿತು. ಹಾಗೆಯೇ ಈಗ ಅವರು ಅಂತಹ ಪರಿಣಾಮಬೀರುವಂತ ಚಿತ್ರಗಳಿಗಾಗಿ ಬಳಸಿರುವ ಸಾಧನೆಗಳ ಬಗ್ಗೆಯೂ ತಿಳಿದುಕೊಳ್ಳುವುದು ಅವಶ್ಯವಾಗಿದೆ.

ಜಲವರ್ಣಕ್ಕಾಗಿ ಬಳಸಿದ ಕಾಗದ ಹಾಗೂ ರಟ್ಟುಗಳು

ಶಿವಲಿಂಗಪ್ಪನವರು ಅಕ್ರಾಲಿಕ್ ಟ್ಯೂಬ್ ಮತ್ತು ಪಾರದರ್ಶಕ ಟ್ಯೂಬ್ ಜಲವರ್ಣ ಹಾಗೂ ಅಪಾರದರ್ಶಿಕೆಯಾದ ಪೋಸ್ಟರ್ ಜಲವರ್ಣಗಳನ್ನು ಬಳಸಿ ಚಿತ್ರ ರಚಿಸಿದ್ದಾರೆ. ಇಂತಹ ವರ್ಣಗಳನ್ನು ಉಪಯೋಗಿಸುವಾಗ ಅದಕ್ಕೆ ತಕ್ಕಂತಹ ಕಾಗದಗಳನ್ನು ಬಳಸಿದ್ದಾರೆ. ಪಾರದರ್ಶಕ ಜಲವರ್ಣ ನಿಸರ್ಗಚಿತ್ರ ರಚಿಸುವಲ್ಲಿ ಅದಕ್ಕಾಗಿಯೇ ವಿಶೇಷವಾಗಿ ತಯಾರಿಸಿದ ಕೈ ಕಾಗದವನ್ನು ಈ ಕಾಗದವು ಸಾಕಷ್ಟು ದೃಢತೆಯನ್ನು ಹೊಂದಿರುವಷ್ಟೇ ಅಲ್ಲ ಕಾಗದಗಳಲ್ಲಿ ಅನೇಕ ಸಾರಿ ಜಲವರ್ಣವನ್ನು ಲೇಪಿಸಿದರೂ ಕೂಡಾ ಶಿಥಲಗೊಳ್ಳುವುದಿಲ್ಲ. ಈ ಬಗೆಯ ಕಾಗದಗಳಲ್ಲಿ ಜಲದೊಂದಿಗೆ ವರ್ಣಗಳೂ ಆಳ ಪದರಗಳಿಗೆ ಇಳಿದ್ದು ಸ್ಥಿರವಾಗಿ ನಿಲ್ಲುತ್ತದೆ ಅಂತೆಯೇ ಎಷ್ಟೋ ವರ್ಷಗಳಾದರೂ ಅವು ತಾಜಾತನವನ್ನು ಹೊಂದಿವೆ. ಇನ್ನು ಅಪಾರದರ್ಶಕಗಳಾದ ಪೋಸ್ಟರ್ ವರ್ಣಗಳನ್ನು ಬಳಸುವಾಗ ಕೆಲವು ಚಿತ್ರಗಳಿಗೆ ಬಿಳಿಯ ಡ್ರಾಯಿಂಗ್ ಕಾಗದವನ್ನು ಬಳಸಿದ್ದಾರೆ. ಇನ್ನೂ ಕೆಲವು ಚಿತ್ರಗಳಿಗೆ ಬಣ್ಣ ಪೋಸ್ಟರ್ ಕಾಗದವನ್ನು ಬಳಸಿ ಆ ಬಣ್ಣವನ್ನೇ ಒಂದು ಛಾಯೆಯಾಗಿ ಬಳಸಿಕೊಂಡಿದ್ದಾರೆ. ಇನ್ನೂ ಕೆಲವು ಚಿತ್ರಗಳಿಗೆ ರಟ್ಟುಗಳನ್ನು (ತೆಳ್ಳನೆಯ ಪ್ಲೆವುಡ್) ಬಳಸಿದ್ದಾರೆ. ಹೀಗೆ ಒಟ್ಟಾರೆಯಾಗಿ ತಾವು ಚಿತ್ರಿಸಿದ ಚಿತ್ರದ ಪರಿಣಾಮ (Effect) ಅದರಲ್ಲಿ ಮೂಡಿ ಬಂದಿವೆ.



ಅಧ್ಯಾಯ ೭

ಕಲಾವಿದ ಎಲ್. ಶಿವಲಿಂಗಪ್ಪನವರ ದೃಶ್ಯಕಲಾ ಸಾಹಿತ್ಯ

ಜಗತ್ತಿನ ಯಾವುದೇ ಒಂದು ಸಾಹಿತ್ಯದ ಕೃತಿಯೊಂದನ್ನು ಆಯಾ ದೇಶೀಯ ಭಾಷಿಕ ಪದಕೋಶಗಳ ಮುಖಾಂತರ ಅಧ್ಯಾಯನ ಮಾಡಬಹುದು. ಆದರೆ ಅದರಂತೆ ಪಾರಿಭಾಷಿಕ ಶಬ್ದಕೋಶಗಳ ಮಿತಿಯಲ್ಲಿ ನಾವು ಆ ದೇಶಿಯ ಕಲಾಕೃತಿಗಳನ್ನಾಗಲಿ ಅಥವಾ ಕಲಾಕೃತಿಗೊಳಗಿನ ರಾಸಾನುಭೂತಿಯನ್ನಾಗಲಿ ಆಂತರಿಕ ತುಡಿತವನ್ನಾಗಲಿ ಪಡೆಯಲಾರೆವು.

ಇತಿಹಾಸದಂತೆಯೇ ಆದಿಮಾನವನ ಬದುಕು ಹೊರಾಟ, ಉಳಿಯುವಿಕೆಯ ಸಂಕಲ್ಪಗಳ ಅಭಿವ್ಯಕ್ತಿಗೊಂಡು ಮಾಧ್ಯಮವಾಗಿ ಬೆಳೆದುಬಂದದ್ದು. ಚಿತ್ರಕಲೆಯಾದರೆ ಇತಿಹಾಸದೊಳಗಡೆಯಿಂದ ಕಾಲಘಟ್ಟದಲ್ಲಿ ದೇಶೀಯ ಬದುಕಿನಲ್ಲಿ ಬೆಳೆದಿರುವುದು ಸಾಹಿತ್ಯವಾಗುತ್ತದೆ. ಈ ಕಾಲಘಟ್ಟಗಳ ಅಂತರವನ್ನು ಮೀರಿ ಒಂದೆಡೆಯಲ್ಲಿ ಸಂಗಮಿಸುವ ಚಿತ್ರಕಲೆ ಸಾಹಿತ್ಯದ ಜೊತೆ ಜೊತೆಯಲ್ಲಿ ಸಹಜವಾಗಿ ಬೆಳೆದುಕೊಂಡು ಬಂದಿದೆ.

ಕಲೆ ಮತ್ತು ಸಾಹಿತ್ಯಗಳು ಮಾನವನ ಬದುಕಿನ ಸಾಧನೆಯ ಎರಡು ಮಹತ್ವದ ತಾಣಗಳು. ಕಲೆಯು ಜೀವವಿಕಾಸದಲ್ಲಿ ಮಾನವನೊಂದಿಗೆ ಇದ್ದು ಅವನೊಂದಿಗೆ ಬೆಳೆದು ಬಂದ ನಿಸರ್ಗ ಮೂಲವಾದುದಾದರೆ, ಕಾಲಘಟ್ಟದಲ್ಲಿ ಅಂತರದಲ್ಲಿ ಬರುವ ಸಾಹಿತ್ಯವು ಮಾನವನ ಬೌದ್ಧಿಕ ವಿಕಾಸದ ಸೃಜನಶೀಲ ಅಭಿವ್ಯಕ್ತಿ. ಕಲೆ ಮತ್ತು ಸಾಹಿತ್ಯಗಳು ಮೂಲದಲ್ಲಿ ವಿಭಿನ್ನ ಕ್ಷೇತ್ರಗಳಾಗಿ ಕಂಡರೂ ಆಂತರ್ಯದಲ್ಲಿ ಅವುಗಳ ಮೂಲ ಧ್ಯೆಯ ಒಂದೇ ಆಗಿದೆ.



ಇಂದಿನ ಆಧುನಿಕ ಮಾನವನ ನಾಗರೀಕ ಮತ್ತು ಸಾಂಸ್ಕೃತಿಕ ಜೀವನದಲ್ಲೂ ಕಲೆ ಮತ್ತು ಸಾಹಿತ್ಯಗಳು ಹೆಣೆದುಕೊಂಡಿರುವಂತೆ ಒಂದನ್ನು ಮತ್ತೊಂದು ಅಭಿವ್ಯಕ್ತಿಗಾಗಿ ಆಶ್ರಯಿಸಿಕೊಂಡಿವೆ. ಆಯಾ ದೇಶಿಯ ನೆಲಗಳಲ್ಲಿ ಈ ಕಲೆಗಳು ತಮ್ಮ ಆಶಯಗಳನ್ನು ಭಾವಗಳನ್ನು ವ್ಯಕ್ತಪಡಿಸುತ್ತವೆ. ಮಾನವನ ಕಲಾತ್ಮಕ ಮತ್ತು ಸಾಹಿತ್ಯಿಕ ಸಂವಹನದ ಬೆಳವಣಿಗೆಯಲ್ಲಿ ಕಲೆ ಮತ್ತು ಸಾಹಿತ್ಯಗಳು ಪರಸ್ಪರ ಕೊಡುಕೊಳ್ಳುವಿಕೆಯಿಂದ ವಿನಿಮಯಗಳು ಬೆಳೆಯುತ್ತವೆ. ಹೀಗೆ ಇವೆರಡರ ಅಂತರ ಶಿಸ್ತಿಯ ಅನಾವರಣವೊಂದು ಸಾಕಾರಗೊಳ್ಳುತ್ತದೆ.

ಇಂತಹ ಕಲಾ ಸಾಹಿತ್ಯದ ಸೇತು ಬಂಧನದ ಕಾರ್ಯವನ್ನು ಚಿತ್ರಕಲಾವಿದ ಎಲ್. ಶಿವಲಿಂಗಪ್ಪನವರು ಮೊದಲಿನಿಂದಲೂ ಮಾಡುತ್ತಾ ಬಂದಿದ್ದಾರೆ. ಉದಯವಾಣಿ ಪತ್ರಿಕೆಯಲ್ಲಿ ನಮ್ಮ ಕಲಾವಿದರು ಎಂಬ ಅಂಕಣದ ಮೂಲಕ ನಾಡಿನ ಕಲಾವಿದರನ್ನು ಶಿಲ್ಪಿಗಳನ್ನು ಪರಿಚಯಿಸುತ್ತಿದ್ದು ಅದರ ಬಗ್ಗೆ ವಿವರವಾಗಿ ಬರೆದಿದ್ದಾರೆ. ಶಿವಲಿಂಗಪ್ಪನವರು ಹೊರಗಡೆ ಹೊದಡೆಯಲ್ಲಾ ಸದಾ ಅವರ ಜೊತೆಗೆ ಒಂದು ಛಾಯಾಚಿತ್ರ ಪೆಟ್ಟಿಗೆಯನ್ನು ಮತ್ತು ಒಂದು ಸಣ್ಣದಾದ ಧ್ವನಿಗ್ರಾಹಕ ಯಂತ್ರವನ್ನು ತಮ್ಮ ಜೊತೆಯಲ್ಲಿ ಕೊಂಡೊಯ್ಯುತ್ತಿರುವುದು ಅವರ ಹವ್ಯಾಸವಾಗಿದೆ.

ಇದು ಸ್ಥಳ ಪರಿಯಕ್ಕೆ ಪೂರ್ಣ ಸಹಕಾರಿಯಾಗುತ್ತದೆ. ತಮಗೆ ಬೇಕಾದ ಛಾಯಾಚಿತ್ರವನ್ನು ತೆಗೆದುಕೊಂಡು ಈ ಸ್ಥಳಕ್ಕೆ ಸಂಬಂಧಿಸಿದ ವಿಷಯಗಳನ್ನು ಸ್ಥಳೀಯರಿಂದ ಮತ್ತು ಅಲ್ಲಿನ ಅರ್ಚಕರ ಸಂದರ್ಶನದ ಮೂಲಕ ಮುದ್ರಿಸಿಕೊಳ್ಳುತ್ತಾರೆ. ಅವರು ಹೇಳಿದುದಕ್ಕೂ ಈ ಹಿಂದೆ ಮುದ್ರಣಗೊಂಡಿರುವ ಆ ಸ್ಥಳದ ಸಾಹಿತ್ಯಕ್ಕೂ ಸಾಮ್ಯವಿದೆಯೇ ಎಂಬುದನ್ನು ಪರಿಶೀಲಿಸಿ ತಾವು ನೋಡಿದುದರ ಆಧಾರದ ಮೇಲೆ ಲೇಖನ ಬರೆದು ಚಿತ್ರಸಹಿತ ಕಳಿಸುತ್ತಾರೆ. ಮುದ್ರಣಕ್ಕೆ ಅನುಕೂಲವಾಗುವ ಛಾಯಾಚಿತ್ರ, ಸ್ಥಳಕ್ಕೆ ಸಂಬಂಧಿಸಿದ ವಿಷಯ ಸಂಗ್ರಹಣೆ ಮೇಲಾಗಿ ಪುಟದ ಇತಿಮಿತಿಗೆ ಅನುಗುಣವಾದ ಬರಹವಿರುವುದರಿಂದ ಕನ್ನಡದ ಯಾವುದೇ ಪತ್ರಿಕೆಗಳಲ್ಲಾದರೂ ಅವು ಮುದ್ರಣಗೊಳ್ಳುತ್ತಿತ್ತು.

ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗಿರುವುದು ವ್ಯಕ್ತಿ ಪರಿಚಯ. ಸ್ವತಃ ಕಲಾವಿದರೂ ಶಿಲ್ಪಿಯೂ ಆಗಿರುವುದರಿಂದ ಅನೇಕ ಚಿತ್ರಕಲಾವಿದರನ್ನು ಸಾಹಿತಿಗಳನ್ನು ಸಂದರ್ಶಿಸಿ ಲೇಖನ ಬರೆದಿದ್ದಾರೆ. ಪ್ರತಿ ಮಂಗಳವಾಗರ ಕರ್ನಾಟಕ ಸಂಪದ ಎಂಬ ವಿಶೇಷ ಪುರವಾಣಿಯಲ್ಲಿ ಪ್ರಕಟಗೊಂಡಿವೆ. ಪ್ರತಿಭೆ ಇದ್ದು ಬೆಳಕಿಗೆ ಬಾರದೇ ಇರುವವರನ್ನು ಶೋಧಿಸಿ ಬರೆಯುವ ಗುಣ ಇವರದ್ದಾಗಿತು. ಬೆಂಗಳೂರಿನಲ್ಲಿ ಪ್ರದರ್ಶನವಾಗುತ್ತಿದ್ದ ಚಿತ್ರ ಮತ್ತು ಶಿಲ್ಪಗಳನ್ನು ಕುರಿತು ವಿಮರ್ಶೆಯನ್ನು ಈ ಹಿಂದೆ ಲೋಕವಾಣಿ ಮತ್ತು ಕನ್ನಡ ಪ್ರಭ ಪತ್ರಿಕೆಗಳಲ್ಲಿ ಬರೆಯುತ್ತಿದ್ದರು.

ವಚನ ಸಾಹಿತ್ಯವನ್ನುಹೆಚ್ಚಾಗಿ ಅಭ್ಯಾಸ ಮಾಡಿರುವುದರಿಂದ ಅನೇಕ ಧಾರ್ಮಿಕ ಪತ್ರಿಕೆಗಳಿಗೆ ಸಂಚಿಕೆಗಳಿಗೆ ಲೇಖನಗಳು ಬರೆದಿದ್ದಾರೆ. ಅವುಗಳಿಗೆ ಬೇಕಾದ ಛಾಯಾಚಿತ್ರ, ಪುಟವಿನ್ಯಾಸಗಳನ್ನು ಮಾಡಿರುವುದಲ್ಲದೇ ಸಹ ಸಂಪಾದಕರಾಗಿ ಕೆಲಕಾಲ ಕಾರ್ಯನಿರ್ವಹಿಸಿದ್ದಾರೆ. ಬೆಂಗಳೂರು, ಮೈಸೂರು ಆಕಾಶವಾಣಿಗಳಲ್ಲಿ ಕಲೆ ಮತ್ತು

ಕಲಾವಿದರನ್ನು ಕುರಿತಂತೆ ಭಾಷಣಗಳನ್ನು ಮಾಡಿದ್ದಾರೆ. ವ್ಯಕ್ತಿಗಳನ್ನು ಸಂದರ್ಶಿಸಿದ್ದಾರೆ. ಅವರ ಬಗ್ಗೆ ವಿವರವಾಗಿ ಬರೆಯುವ ಕಲಾಚತುರ ಎಂದು ಇವರನ್ನು ಕರೆಯಲಾಗುತ್ತಿದೆ.

ಪತ್ರಿಕೆಗಳು

ಇಂದಿನ ವಸ್ತುಸ್ಥಿತಿ ಏನಾಗಿದೆ ಎಂದರೆ ನಾವು ಯಾವುದೇ ರಾಜ್ಯಮಟ್ಟದ ಒಂದು ಕಲಾಪ್ರದರ್ಶನ ಮಾಡಿದರು ಅದು ಪಬ್ಲಿಸಿಟಿಯಾಗುವುದಿಲ್ಲ. ಅತ್ಯಂತ ಸಿಮೀತವಾಗಿ ಆಯಾ ರಾಜ್ಯಕ್ಕೆ ಮಾತ್ರ ಸಿಮೀತಗೊಳಿಸಿಕೊಂಡಿದೆ. ಹಿಂದೆ ಏನಾಗಿತ್ತು ಎಂದರೆ ಒಂದು ಚಿತ್ರಕಲಾ ಪ್ರದರ್ಶನ ಬೆಂಗಳೂರು ಅಥವಾ ಮೈಸೂರು ಯಾವುದಾದರೂ ಒಂದು ಸಿಟಿ ಸೆಂಟರ್‌ನಲ್ಲಿ ಒಂದು ಕಾರ್ಯಕ್ರಮ ಮಾಡಿದರೆ ಆ ಪತ್ರಿಕೆ ರಾಜ್ಯ ವ್ಯಾಪಿ ಎಷ್ಟು ಪಬ್ಲಿಸಿಟಿ ಮಾಡುತ್ತಿದ್ದರು. ಅಷ್ಟು ಪತ್ರಿಕೆಗಳಲ್ಲಿ ಮುದ್ರಣವಾಗುತಿತ್ತು. ಆದರೆ ಇಂದಿನ ವಾಸ್ತವ ಎಲ್ಲವೂ ಜಿಲ್ಲಾಮಟ್ಟ ಮತ್ತು ತಾಲೂಕು ಮಟ್ಟಕ್ಕೆ ಇಳಿದು ಬಿಟ್ಟಿದೆ. ಹೀಗಾಗಿ ಸಂಪೂರ್ಣವಾಗಿ ಮೈಸೂರು ಜಿಲ್ಲೆಯಲ್ಲಿ ನಾವು ಒಂದು ಪ್ರದರ್ಶನ ಅಥವಾ ವಿಚಾರಸಂಕಿರ್ಣವನ್ನು ಮಾಡಿದರೆ ಇಲ್ಲಿ ಯಾವುದಾದರೂ ಒಂದು ಕಾರ್ಯಕ್ರಮವನ್ನು ರೂಪಿಸಿದರು ಕೂಡ ಮೈಸೂರು ಜಿಲ್ಲಿಗೆ ಮಾತ್ರ ಸಿಮೀತವಾಗಿರುತ್ತದೆ. ಮಂಡ್ಯ ಜಿಲ್ಲೆಗೆ ಕೂಡಾ ಗೊತ್ತಾಗುವುದಿಲ್ಲ. ಅದೇ ರೀತಿ ಬೆಂಗಳೂರು ಹತ್ತಿರವಾಗಿ ಇರುವ ತುಮಕೂರಿನಲ್ಲಿ ಯಾವುದಾದರೂ ಕಾರ್ಯಕ್ರಮ ನಡೆದರೆ ಬೆಂಗಳೂರಿಗೆ ತಿಳಿಯುವುದಿಲ್ಲ. ಅದೇ ರೀತಿ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮ ತುಮಕೂರಿಗೆ ಗೊತ್ತಗುವುದಿಲ್ಲ. ಹೀಗಾಗಿ ಇಂದು ಎಲ್ಲವೂ ಕೂಡ ಸಂಪೂರ್ಣವಾಗಿ ಆಯಾ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರ ಸಿಮೀತ ವಿನಹಃ ಹೊರ ಜಿಲ್ಲೆಗಳಿಗೆ ಯಾವುದು ತಿಳಿಯುವುದಿಲ್ಲ. ಇಂದಿನ ಪತ್ರಿಕೆ ಮಾಧ್ಯಮದಲ್ಲಿ ನಡೆಯುವಂತಹ ಒಂದು ಕ್ರಿಯೆ ಒಂದು ವೇಳೆ ಸುಧಾ ಅಥವಾ ಮಯೂರ, ತರಂಗ ಇಂತಹ ವಾರಪತ್ರಿಕೆಗಳಲ್ಲಿ ಒಂದು ವೇಳೆ ಬಂದರೆ ಅದು ಪ್ರಾದೇಶಿಕ ಅಥವಾ ಇಡೀ ರಾಜ್ಯಮಟ್ಟದಲ್ಲಿ ಹೋಗುತ್ತದೆ. ಇವುಗಳು ಬಿಟ್ಟರೆ ದಿನಪತ್ರಿಕೆಗಳಲ್ಲಿ ಮಾತ್ರ ಸಂಪೂರ್ಣವಾಗಿ ೧೦೦ಕ್ಕೆ ೧೦೦ರಷ್ಟು ಎಲ್ಲವೂ ಆಯಾ ಜಿಲ್ಲೆಗೆ ಸಂಬಂಧಿಸಿದ್ದಾಗಿರುತ್ತದೆ. ನಾವು ಏನೆ ಕಷ್ಟಪಟ್ಟರು ಸಾವಿರಾರು ರೂಪಾಯಿ ಖರ್ಚುಮಾಡಿ ಒಂದು ಚಿತ್ರಕಲಾ ಪ್ರದರ್ಶನ ಮಾಡಿದರು ಜಿಲ್ಲೆಗೆ ಮಾತ್ರ ಸಿಮೀತವಾಗುತ್ತದೆ. ಬೇರೆ ಜಿಲ್ಲೆಗಳಿಗೆ ತಿಳಿಯುವುದಿಲ್ಲ. ಇದಕ್ಕೆ ಒಂದು ಉದಾಹರಣೆ ಈಗ ನಾವು ಬೆಂಗಳೂರು ಅಥವಾ ಬೇರೆ ಬೇರೆ ಪ್ರದೇಶದಲ್ಲಿ ಚಿತ್ರಕಲಾ ಪ್ರದರ್ಶನ ಆಗಿರಬಹುದು ಅಥವಾ ಬೇರೆ ಯಾವುದೇ ಪ್ರದರ್ಶನ ಇರಬಹುದು. ಅದಕ್ಕೆ ಖರ್ಚು ಆಗುವ ಕನಿಷ್ಠ ೩೦ ರಿಂದ ೪೦ ಸಾವಿರ ರೂಪಾಯಿಗಳು ಬೇಕಾಗುತ್ತದೆ. ಏಕೆಂದರೆ ಒಂದು ಉತ್ತಮವಾದ ಕ್ಯಾಟಲಾಗ ಮಾಡಬೇಕು ಮತ್ತು ಆರ್ಟ್ ಗ್ಯಾಲರಿ, ಅದರ ಕಟ್ಟಡ ಬಾಡಿಗೆ ಹೀಗೆ ಹಲವಾರು ವಿಷಯಗಳು. ಇವುಗಳ ಎಲ್ಲಾ ಸೇರಿ ಬರುವಂತಹ ಆದಾಯವೆಂದರೆ ಶೂನ್ಯ. ನಗರದಲ್ಲಿ ನಡೆಯುವ ಕುರಿತು ಅಪ್ಪಿತಪ್ಪಿಯೂ ಒಂದು ಚಿತ್ರ ಅಥವಾ ಜಾಹಿರಾತು ಪ್ರಕಟಣೆ ಕೂಡಾ ಮಾಡುವುದಿಲ್ಲ. ಪತ್ರಿಕೆಯಲ್ಲಿ ಇನ್ನೊಂದು ವಿಷಯವೆಂದರೆ ಒಂದು ಚಿತ್ರಕಲಾ ಪ್ರದರ್ಶನ ಇಂತಹ ದಿನ ನಡೆಯುವ ಸಮಯವನ್ನಷ್ಟೇ ಬರೆದರೆ ಸಾಲದು. ಅದಕ್ಕಾಗಿ

ಒಂದು ರಿವೀಯ್ಯೂ ಕೂಡಾ ಬರೆಯುವುದಿಲ್ಲ. ರಿವಿಯ್ಯೂ ಬರೆಯವುದಕ್ಕೆ ಅವಕಾಶ ಮಾಡಿ ಕೊಡುತ್ತಿರಲಿಲ್ಲ. ಹೀಗಾಗಿ ಚಿತ್ರಕಲಾ ವಿಭಾಗ ಸಂಪೂರ್ಣವಾಗಿ ನಶಿಸಿ ಹೋಗಿದೆ. ಯಾರೊಬ್ಬರು ಶ್ರಮವಹಿಸಿ ಅವರಿಗೆ ತೀರಾ ಪರಿಚಿತ ಮಾಧ್ಯಮದವರಿಂದ ಸಂಪೂರ್ಣವಾದ ಹಾಗೂ ಪ್ರದರ್ಶನ ನಡೆಯುವ ಸ್ಥಳದ ವರದಿಗಾರನಾದರೆ ಮಾತ್ರ ಇಂತಹ ವಿಷಯಗಳು ಸ್ವಲ್ಪಮಟ್ಟಿಗೆ ಪ್ರಚಾರ ಪಡೆಯುತ್ತವೆ. ಇದು ಇಂದಿನ ಪತ್ರಿಕೆಗಳಲ್ಲಿರುವ ಒಂದು ಕೊರತೆ ಎಂದೇ ಹೇಳಬಹುದು.

ಕನ್ನಡ ಸಂಘ ಸ್ಥಾಪನೆ

ಮೈಸೂರಿನಿಂದ (೧೯೬೬) ಬೆಂಗಳೂರಿಗೆ ಬಂದು ನೆಲೆಸಿದ ಮೇಲೆ ಕಲಾಭ್ಯಾಸ ಮತ್ತು ಕಲಾ ಚಟುವಟಿಕೆಗಳಿಗೆ ಎಷ್ಟು ಮಹತ್ವ ಕೊಟ್ಟರೋ ಅದಕ್ಕಿಂತಲೂ ದ್ವಿಗುಣವಾಗಿ ಸಾಮಾಜಿಕ ಕೆಲಸಗಳಿಗೆ ಇವರು ಮಹತ್ವ ನೀಡಿದ್ದಾರೆ. ಮೊದಲು ತಾವು ಸೇರಿದ ಬಿ.ಇ.ಎಂ.ಎಲ್.ನ್ನು ಕಾರ್ಖಾನೆಯಲ್ಲಿನ ಅನ್ಯಭಾಷಿಗರ ಹಾವಳಿಯಿಂದ ಮುಕ್ತವಾಗಿಸಿ ಕನ್ನಡ ಎಂಬ ವಾತಾವರಣ ತರಲು ಹತ್ತಾರು ವರ್ಷ ಸತತ ಪ್ರಯತ್ನ ಮಾಡಿ ಕನ್ನಡ ಸಂಘ ಸ್ಥಾಪಿಸಿ ಕನ್ನಡ ಪರವಾದ ಹೋರಾಟ, ಗೋಕಾಕ ಚಳುವಳಿಯಲ್ಲಿ ಭಾಗವಹಿಸುವಿಕೆ, ಜೈಲು ಶಿಕ್ಷೆ, ಕಾರ್ಖಾನೆಯಲ್ಲಿ ಆಡಳಿತ ಭಾಷೆ ಕನ್ನಡವಾಗಬೇಕೆಂಬ ಹೋರಾಟ, ಪುಸ್ತಕ ಭಂಡಾರ ಸ್ಥಾಪನೆ, ಅಲ್ಲಿ ಕೈಗಾರಿಕಾ ತರಬೇತಿಗೆ ಅನ್ಯಭಾಷಾ ವಿದ್ಯಾರ್ಥಿಗಳನ್ನೇ ಆಯ್ಕೆ ಮಾಡುತ್ತಿದ್ದುದರ ವಿರುದ್ಧ ಪ್ರಬಲ ಹೋರಾಟ, ತತ್ಫಲವಾಗಿ ಆಡಳಿತ ನಡೆಸುವವರ ಕೆಂಗಣ್ಣಿಗೆ ಪಾತ್ರ, ಹಿಂಬಡ್ತಿ, ನಿಲ್ಲದ ಹೋರಾಟ, ಕೊನೆಗೆ ಸರ್ಕಾರಿ ಆದೇಶದಂತೆ ಮಹಿಷಿ ವರದಿಯಂತೆ ವಿದ್ಯಾರ್ಥಿಗಳ ಆಯ್ಕೆ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಭಾಗಕ್ಕೆ ಆಧ್ಯತೆ ನೀಡಬೇಕೆಂಬ ಹೋರಾಟದ ಫಲವಾಗಿ ಇಂದು ಉತ್ತರ ಕರ್ನಾಟಕದ ಭಾಗದಿಂದ ಬಂದ ನಾಲ್ಕು ನೂರಕ್ಕೂ ಹೆಚ್ಚು ಜನ ಉದ್ಯೋಗಿಗಳಾಗಿದ್ದರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇಂದು ಬಹು ಸಂಖ್ಯೆಯಲ್ಲಿ ಕನ್ನಡಿಗರಿದ್ದಾರೆ. ಕಾರ್ಖಾನೆ ಪೂರ್ಣ ಕನ್ನಡಮಯವಾಗಿದೆ. ೧೯೬೬ರಲ್ಲಿ ಎರಡು ಮೂರು ಸಾವಿರ ಜನರಲ್ಲಿ ೩೦೦ ಜನ ಸಹ ಕನ್ನಡಿಗರಿರಲಿಲ್ಲವೆಂಬ ವಿಷಾದದ ನುಡಿ ಅವರದು.

ನಗರ ನಿರ್ಮಾಣ : ನಿಲ್ಲುವುದಕ್ಕೊಂದು ನೆಲೆ, ಬದುಕಿಗೊಂದು ಬೆಲೆ ಬರಬೇಕಾದರೆ ಅವನ ಅಸ್ತಿತ್ವ ಉತ್ತಮಗೊಂಡಿರಬೇಕು ಅನ್ನುತ್ತಾರೆ ಅವರು. ತಾವು ಪ್ರಥಮವಾಗಿ ಬಂದು ಸೇರಿದ ವಿಮಾನ ಕಾರ್ಖಾನೆಯ ಸಮೀಪದ ವಿಭೂತಿಪುರ ಮತ್ತು ಅಲ್ಲಿನ ಮಠ ಅದೊಂದು ಕುಗ್ರಾಮ, ಅನ್ಯ ಭಾಷಿಗರದೆ ಅಲ್ಲಿ ಕಾರುಬಾರು, ಸುತ್ತಲೂ ಹೊರ ನಾಗರಿಕತೆಯಿಂದ ದೂರ, ಅಂತಹ ಸ್ಥಳದಲ್ಲಿ ಚಿಕ್ಕದಾದ ಜಾಗವನ್ನು ಖರೀದಿಸಿ ಅಲ್ಲೊಂದು ಕಿರಿದಾದ ಮನೆ ಕಟ್ಟಿ, ಬಸವನಗರವೆಂಬ ಹೆಸರಿನ ನಾಮಕರಣ, ನೀರಿಲ್ಲದ, ವಿದ್ಯುತ್ ಇಲ್ಲದ ರಸ್ತೆ, ಮತ್ತಿತರ ಯಾವ ನಾಗರೀಕ ಸೌಲಭ್ಯವಿಲ್ಲದ ಹಳ್ಳಿಯೊಳಗಿನ ಮನೆಯಲ್ಲಿ ವಾಸ, ಹೋರಾಟಕ್ಕೆ ಚಾಲನೆ, ಮೊದಲು ಅಂಚೆ ತಂದು ಕೊಡಲು ಅಂಚೆ ಕಛೇರಿಗೆ ಅಹವಾಲು, ತಿರಸ್ಕಾರ, ಅವರಿಂದ ಒಂದು ಮನೆಗೆ ಪತ್ರ ತಂದುಕೊಡಲು ಸಾಧ್ಯವಿಲ್ಲವೆಂಬ ನುಡಿ. ಮನೆ ಒಂದಾಗಲೀ ಎರಡಾಗಲೀ ನಾಗರೀಕ ಕಾಯಿದೆ ಅನ್ವಯ ಪತ್ರ ಮುಟ್ಟಿಸಲೇಬೇಕೆಂಬ

ಹೋರಾಟ, ಕೊನೆಗೆ ಜಯ. ವಿದ್ಯುತ್ ಪಡೆಯಲೂ ಅಷ್ಟೇ, ಅಲ್ಲಿ ರಸ್ತೆಗೆ ದೀಪ ಹಾಕಿಸಲು ಹೋರಾಟ. ಹಲವು ವರ್ಷಗಳ ನಂತರ ಪ್ರಯತ್ನಕ್ಕೆ ತಕ್ಕ ಫಲ, ಆ ವೇಳೆಗಾಗಲೇ ಆಗ ತಾನೇ ಉತ್ತರ ಕರ್ನಾಟಕದ ಭಾಗದಿಂದ ಬಂದಿದ್ದ ಯುವಕರಿಗೆ ಆಶ್ರಯ ನೀಡುವ ಸಲುವಾಗಿ ಅವರೆಲ್ಲರ ಮನವೊಲಿಸಿ ಭೂಮಿಯನ್ನು ಖರೀದಿಸಲು ಸಲಹೆ, ಊರಿನ ಕಡೆ ಅನುಕೂಲವಿರುವ ಕೆಲವರು ಮನೆ ಅಲ್ಲಿಯೇ ಕಟ್ಟಿಕೊಳ್ಳಲು ಪ್ರೋತ್ಸಾಹ, ಇದರಿಂದಾಗಿ ಜಾಗ ಖರೀದಿಸಲು ಜನ ತಾ ಮುಂದೆ ನಾ ಮುಂದೆ. ಆ ವೇಳೆಗಾಗಲೇ ಅವರವರ ಮನೆಯಲ್ಲಿ ತೋಡಿದ್ದ ಬಾವಿ ಪೂರ್ಣ ಬತ್ತಿ ೨-೩ ಕಿ.ಮೀ. ದೂರ ನಡೆದು ನೀರು ತರಬೇಕಾದ ಪರಿಸ್ಥಿತಿ ನಿರ್ಮಾಣ, ರಾಜ್ಯದಲ್ಲಿ ಎಲ್ಲೆಲ್ಲೂ ಬರಗಾಲ (ಆಗ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದರು) ನೀರಿಗೆ ಹಾಹಾಕಾರ. ಬಡಾವಣೆಗಳಿಗೆ ಬೋರ್‌ವೆಲ್ ನಿರ್ಮಾಣ ಮಾಡಲು ಹೋರಾಟ ಮಾಡುವ ಸಂದರ್ಭ ಆಗ.

ಶಿವಲಿಂಗಪ್ಪನವರೇ ಸ್ವಂತ ಬೋರ್‌ವೆಲ್ ಹಾಕಿಸಿಕೊಳ್ಳಬಹುದಾಗಿತ್ತು. ಆದರೆ, ಅವರು ಆ ರೀತಿ ಮಾಡಲಿಲ್ಲ. ನನ್ನನ್ನು ನೆಚ್ಚಿಕೊಂಡು ಕೆಲವೊಂದು ಜನ ಜಾಗ ಖರೀದಿಸಿದ್ದಾರೆ. ನನ್ನ ಹಾಗೆಯೇ ಬಡತನದ ರೇಖೆಯಿಂದ ಬಂದವರು ಎಂದು ಚಿಂತಿಸಿ, ಸ್ಥಳದ ಮಾಲೀಕನ ಒಪ್ಪಿಗೆಯೊಡನೆ ತಮ್ಮ ಸ್ವಂತ ಹಣ ತೊಡಗಿಸಿ ಬೋರ್‌ವೆಲ್ ತೆಗೆದು ಮನೆ ಮನೆಗೂ ನೀರು ಹಂಚಿಕೆ. ಇಂದೂ ಸಹ ೧೦೦ ಮನೆಗಳಿಗಿಂತ ಮಿಗಿಲಾಗಿ ಒಂದೇ ಬೋರವೆಲ್‌ನಿಂದ ನೀರಿನ ಹಂಚಿಕೆಯಾಗುತ್ತದೆ.

ನಾಗರೀಕ ಸೌಲಭ್ಯದ ಮುಖ್ಯ ಭಾಗವಾದ ಸಾರಿಗೆ ವ್ಯವಸ್ಥೆ ಇಲ್ಲದೆ ೩-೪ ಕಿ.ಮೀ. ನಡೆದು ಬಸ್ ಹತ್ತಬೇಕಾದ ಸನ್ನಿವೇಶದಲ್ಲಿ ಸಂಜೆಯಾದೊಡನೆ ತಿರುಗಾಡುವ ಸ್ಥಿತಿಯಿರಲಿಲ್ಲ. ಅಲ್ಲಿ ಆಗ ಮತ್ತೊಮ್ಮೆ ಸ್ನೇಹಿತರೊಡಗೂಡಿ ಹೋರಾಟ. ಬಸವನಗರಕ್ಕೆ ಬೆಂಗಳೂರು ನಗರದ ಕೇಂದ್ರ ಬಸ್ ನಿಲ್ದಾಣದಿಂದ ಬಸ್ ಬಿಡಲು ಸಾರಿಗೆ ಅಧಿಕಾರಿಗಳ ಒಪ್ಪಿಗೆ. ಕಾರ್ಯ ಸಾಧನೆಯಾಯಿತೆಂದು ಉಸಿರು ಬಿಡುವಷ್ಟರಲ್ಲಿಯೇ ಸ್ಥಳೀಯ ಅನ್ಯ ಭಾಷಿಗರಿಂದ ಕಡುವಿರೋಧ. ಬಸವ ಎಂದು ಹೆಸರು ತೆಗೆಯಿರಿ, ಸ್ಥಳೀಯರಾದ ನಮ್ಮಲ್ಲಿ ಹಿರಿಯರಾದವರ ಹೆಸರನ್ನಿಟ್ಟು ಅವರ ನಗರ ಎಂದು ಕರೆಯಿರಿ. ಆ ಹೆಸರಿನಲ್ಲಿಯೇ ಬಸ್ ಬರಲಿ ಇಲ್ಲವೆ ಬಸ್ ಬರಲು ಬಿಡುವುದಿಲ್ಲವೆಂಬ ಹಠಮಾರಿತನ. ಕನ್ನಡವನ್ನು ಮಾತ್ರವಲ್ಲ ಮಾನವ ಕುಲಕೋಟಿಯನ್ನು ಉದ್ಧರಿಸಿದ ಬಸವಣ್ಣನ ಹೆಸರೇ ಬೇಡವೆಂದು ಹೇಳುವ ಸ್ವಭಾವ ಜನರ ಕುಮ್ಮಕ್ಕು ಸೇರಿತ್ತು. ಕೊನೆಗೆ ಹೋರಾಟಕ್ಕೆ ಜಯ, ಶಿವಲಿಂಗಪ್ಪನವರ ಮುಂದಾಳ್ತನದಲ್ಲಿ ಬಸವನಗರ ನಿರ್ಮಾಣವಾಯಿತು. ಇನ್ನು ಕಾರ್ಖಾನೆಗೆ ಸಂಬಂಧಿಸಿದಂತೆ, ಬಸವ ಬಳಗದ ಸ್ಥಾಪನೆ ಮಾಡಿ ಅದರ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಸುಭದ್ರನೆಲೆ ಒದಗಿಸಿದ ಕೀರ್ತಿ ಅವರದು, ಬಿ.ಇ.ಎಂ.ಎಲ್. ಕಾರ್ಮಿಕರ ಸಹಕಾರಿ ಮುದ್ರಣಾಲಯ ಸ್ಥಾಪಕ ನಿರ್ದೇಶಕರಾಗಿ ಹಲವಾರು ವರ್ಷದ ಸೇವೆ.

ಮುದ್ರಣಾಲಯ ಸ್ಥಾಪನೆ : ಕಾರ್ಮಿಕರ ಹಿತರಕ್ಷಣೆ ದೃಷ್ಟಿಯಿಂದ ಆರಂಭಿಸಿದ. ಬಿ.ಇ.ಎಂ.ಎಲ್. ಕಾರ್ಮಿಕ ಸಹಕಾರಿ ಮುದ್ರಣಾಲಯದ ಸ್ಥಾಪಕ ನಿರ್ದೇಶಕರಾಗಿ ಅದರ ಸರ್ವಾಂಗೀಣ ಬೆಳವಣಿಗೆಗೆ ಪಾತ್ರರಾಗಿದ್ದಾರೆ.

ಮುದ್ರಣದ ಒಳ ಹೊರಗುಗಳಾದ ವಿವಿದ ಅಳತೆಯ ಮತ್ತು ಗುಣಮಟ್ಟದ ಕಾಗದಗಳನ್ನು ತರುವಿಕೆ, ತಂದ ಕಾಗದ ಅಪವ್ಯಯ ಆಗದಂತೆ ಮುನ್ನೆಚ್ಚರ ವಹಿಸುವಿಕೆ. ಆಗ ಮೊಳೆ ಜೋಡಿಸಿ ಅಕ್ಷರಗಳನ್ನು ಬೇಕಾದ ಅಳತೆಗಳಿಗೆ ವಿನ್ಯಾಸಗೊಳಿಸಬೇಕಾಗಿತ್ತು. ಎರಡು ಅಥವಾ ಮೂರು ವರ್ಣದ ಮುದ್ರಣವಾಗಬೇಕಾದರೆ ಒಂದೊಂದಕ್ಕೂ ಪ್ರತ್ಯೇಕ ಅವುಗಳಿಗೆ ಅವಶ್ಯವಿದ್ದ ರೀತಿಯಲ್ಲಿಯೇ ಅಕ್ಷರ ಜೋಡಣೆ ಮಾಡಿ ಪ್ರತ್ಯೇಕ ಪ್ರತ್ಯೇಕವಾಗಿ ಮುದ್ರಿಸಬೇಕಾಗಿತ್ತು. ಹೀಗೆ ಮುದ್ರಿಸುವ ಮುನ್ನ ಸೂಕ್ತ ಜೋಡಣೆ ಅತ್ಯಾವಶ್ಯಕವಾಗಿದ್ದು, ಕಿಂಚಿತ್ ವ್ಯತ್ಯಯವಾದರೂ ಒಂದರ ಮೇಲೆ ಒಂದು ವರ್ಣಗಳು ಅಕ್ಷರವಿರಬಹುದು ಅಥವಾ ಚಿತ್ರವಿರಬಹುದು ಕುಳಿತು ನಿರೀಕ್ಷಿತ ಸ್ವರೂಪ ಬಾರದೇ ಹೋಗುವ ಸಂದರ್ಭಗಳು ಹೆಚ್ಚು. ಆಗ್ಗೆ ಮುದ್ರಣ ತಂತ್ರ ಈಗಿನ ಹಾಗೆ ಮುಂದುವರೆದಿರಲಿಲ್ಲ. ಏಕವರ್ಣ, ದ್ವಿವರ್ಣ ಅಥವಾ ತ್ರಿವರ್ಣಗಳ ಚಿತ್ರ ಮುದ್ರಿಸಬೇಕಾದರೆ ಒಂದೊಂದು ವರ್ಣಕ್ಕೂ ಒಂದೊಂದು ಬ್ಲಾಕ್ ತಯಾರಿಸಿ ಅದರ ಮೂಲಕ ಮುದ್ರಣ ಮಾಡಬೇಕಾಗಿತ್ತು. ಬ್ಲಾಕ್ ಮತ್ತು ಅಕ್ಷರ ಜೋಡಣೆಯಲ್ಲಿ ಕೊಂಚ ವ್ಯತ್ಯಾಸವಾದರೂ ಎರಡನೆಯ ಅಥವಾ ಮೂರನೆಯ ಮುದ್ರಣದಲ್ಲಿ ವ್ಯತ್ಯಯವಾಗಿ ನಿರೀಕ್ಷಿತ ಫಲಿತಾಂಶ ಬಾರದಂತಾಗುತ್ತಿತ್ತು.

ಇಂತಹ ಸಂದರ್ಭಗಳೆಲ್ಲವನ್ನೂ ನುರಿತ ಮುದ್ರಣಕಾರರೊಡಗೂಡಿ ತಿಳಿದುಕೊಂಡು, ಪೇಪರ್ ಕಟಿಂಗ್, ಬೈಡಿಂಗ್, ಪರ್‌ಫರೇಟರಿಂಗ್ ಸ್ಕ್ರೀನ್ ಪ್ರಿಂಟ್ ತಯಾರಿಕೆ, ಇದೆಲ್ಲ ಸೂಕ್ಷ್ಮಗಳನ್ನು ಅಲ್ಲಿನ ಕಾರ್ಮಿಕರೊಡನೆ ತಾವೇ ಸ್ವತಃ ಕೆಲಸ ಮಾಡುತ್ತಾ ಲೇಟರ್ ಪ್ರೆಸ್ ಮುದ್ರಣದ ಸರ್ವಾಂಗೀಣವನ್ನು ಆಡಳಿತ ನಡೆಸುತ್ತಲೇ ಅಭ್ಯಾಸ ಮಾಡಿದುದರಿಂದ ಇಂದು ಯಾವುದೇ ಪುಸ್ತಕ ಮಾಡಬೇಕಾದಲ್ಲಿ ಅನುಸರಿಬೇಕಾದ ಕ್ರಮಗಳ ಬಗ್ಗೆ ಈ ಎಲ್ಲಾ ಅನುಭವವು ಒತ್ತಾಸೆಯಾಗುತ್ತದೆನ್ನುತ್ತಾರೆ.

ಸಾಂಸ್ಕೃತಿಕ ಸಮಿತಿಗಳನ್ನು ಸ್ಥಾಪಿಸುವಲ್ಲಿ ಇವರುದು ಮಹತ್ತರ ಪಾತ್ರವೆನ್ನಬಹುದು. ತಾವು ನೆಲೆ ಕಂಡಿದ್ದ ಬಿ.ಇ.ಎಂ.ಎಲ್. ಕಾರ್ಖಾನೆಯಲ್ಲಿ ಬಸವ ಬಳಗ ಎಂಬ ಸಂಸ್ಥೆ ಆರಂಭಿಸಿ ವಚನ ಸಾಹಿತ್ಯ ಪ್ರೀತಿಸುವ ಜನರೆಲ್ಲರನ್ನು ಒಗ್ಗೂಡಿಸಿ ಬಸವ ಜಯಂತಿ ಆಚರಿಸುವ ಸಂದರ್ಭದಲ್ಲಿ ಸದಸ್ಯರ ಮಕ್ಕಳಿಗೆ ಕುಟುಂಬದವರಿಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನೇರ್ಪಡಿಸಿ ಬಹುಮಾನಗಳನ್ನು ವಿತರಿಸುವ ಮೂಲಕ ಒಗ್ಗೂಡಿಸುವಿಕೆಗೆ ಸುಭದ್ರ ಬುನಾದಿ ಹಾಕಿದುದು ಇಂದು ಅದು ಹೆಮ್ಮರವಾಗಿ ಮೂವತ್ತೈದನೇ ವರ್ಷಕ್ಕೆ ಕಾಲಿಡುತ್ತಿದ್ದು ಉತ್ತಮ ಬೆಳವಣಿಗೆಯತ್ತ ಸಾಗುತ್ತಿದೆ. ಮತ್ತೊಂದು ಸಂಸ್ಥೆಯಾದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ವರ್ತೂರು ಘಟಕವನ್ನು ಆರಂಭಿಸಿ ಸುಮಾರು ಹತ್ತು ವರ್ಷ ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಸಂಗೀತ ಕ್ಷೇತ್ರಕ್ಕೆ ಅಪಾರ ಶಿಷ್ಯರನ್ನು ಕೊಟ್ಟ ಸಂಸ್ಥೆಯಾದ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಇಂದಿನ ಗುರುವಾಗಿರುವ ಪುಟ್ಟರಾಜ ಗವಾಯಿಗಳು ಹುಟ್ಟು ಕುರುಡರಾಗಿದ್ದು ಸಂಗೀತ ಕಲಿಯಲಿಚ್ಛಿಸುವ ಅಂಗವಿಕಲ ಮಕ್ಕಳೆಲ್ಲರಿಗೂ ಆಶ್ರಯದಾತರಾಗಿದ್ದುದರಿಂದ ಅವರಿಗೆ ಬೆಂಗಳೂರಿನಲ್ಲಿ ತುಲಾಭಾರವನ್ನೇರ್ಪಡಿಸಿ ಅವರು ತೂಗುವಷ್ಟು ಹಣವನ್ನು ಸಂಸ್ಥೆಗೆ ನೀಡಿದುದು ಶಿವಲಿಂಗಪ್ಪನವರ ಕಾರ್ಯ ಸಾಧನೆಯಲ್ಲಿನ ಮೈಲಿಗಲ್ಲು ಎನ್ನಬಹುದು. ಹಾಗೆಯೇ ಅಂಥ ಕಲಾವಿದರನ್ನೇ ಒಗ್ಗೂಡಿಸಿ ವಾದ್ಯಗೋಷ್ಠಿ ಏರ್ಪಡಿಸಿದುದು ಮತ್ತೊಂದು ದಾಖಲೆ ಕೆಲಸವೆನ್ನಬಹುದು.

ಕನ್ನಡೇತರರಿಗೆ ಕನ್ನಡ ಬೆಂಗಳೂರಿನಲ್ಲಿ ಅನ್ಯಭಾಷಿಕರೇ ಅಧಿಕವಾಗಿದ್ದು ಕನ್ನಡ ಮರೆಯಾಗುತ್ತಿರುವ ಸಂದರ್ಭದಲ್ಲಿ ಕನ್ನಡೇತರರಿಗೆ ಕನ್ನಡ ಕಲಿಸುವ ಕೆಲಸ ಮಾಡಿದುದು ಸಾಮಾನ್ಯ ವಿಷಯವೇನಲ್ಲ. ಉಚಿತವಾಗಿ ಕನ್ನಡ ಬೋಧನೆಯನ್ನು ಮೂರು ವರ್ಷವಾರಕ್ಕೆ ಮೂರು ದಿನಗಳಂತೆ ಪಾಠ ಮಾಡಿ ಕಾರ್ಖಾನೆ ಒಳಗೆ ಮತ್ತು ಹೊರಗೆ ಕನ್ನಡತನವನ್ನು ಬೆಳೆಸುವಲ್ಲಿ ಹಾಗೂ ದೈನಂದಿನ ವ್ಯವಹಾರಗಳೆಲ್ಲವನ್ನು ಕನ್ನಡದಲ್ಲಿಯೆ ಮಾಡಲು ಒತ್ತಡ ತಂದದ್ದು, ಅನ್ಯಭಾಷಿಕರು ಕೆಂಗಣ್ಣಿನಿಂದ ನೋಡಿ ಅನೇಕ ತರಹದ ಹಿಂಸೆ ನೀಡಿದುದನ್ನು ಸಹಿಸಿಕೊಂಡು ನಂಜು ಉಂಡ ನಂಜುಂಡನಂತೆ ತಮ್ಮ ಗುರಿಯತ್ತ ಸಾಗಿ ಸಾಧಕರು ಮಾತ್ರವಲ್ಲ ಬೋಧಕರೂ ಆಗಿದ್ದಾರೆನ್ನಲು ಯಾವ ಅಡ್ಡಿಯೂ ಇಲ್ಲ.

ಸಂಸ್ಕೃತಿ ಅರಿವು ಇದೊಂದು ಮಾಸಿಕ ಪ್ರತಿ ತಿಂಗಳ ಎರಡನೆಯ ಭಾನುವಾರದಂದು ಸಂಜೆ ಕಾರ್ಯಕ್ರಮ ಏರ್ಪಡಿಸಿ ಲಲಿತ ಕಲೆಗಳ ವಿವಿಧ ಶಾಖೆಗಳನ್ನು ಹಾಗೂ ವಚನ ಸಾಹಿತ್ಯ, ಸಂಸ್ಕೃತಿಗಳನ್ನೊಳಗೊಂಡಂತೆ ಅಯಾಯ ಕ್ಷೇತ್ರದಲ್ಲಿ ನುರಿತ ತಜ್ಞರನ್ನು ಕರೆಸಿ ಉಪನ್ಯಾಸ, ಪ್ರಾತ್ಯಕ್ಷಿಕೆ ಏರ್ಪಡಿಸಿದುದರ ಪರಿಣಾಮ ಆ ಭಾಗದಲ್ಲಿ ಇವರು ವಾಸಿಸುತ್ತಿದ್ದ ಸ್ಥಳ ಸಾಂಸ್ಕೃತಿಕ ಕೇಂದ್ರವಾಗಿದ್ದು ಎಲ್ಲಾ ಬಗೆಯ ಸಣ್ಣ ಪ್ರಮಾಣದ ಸಭೆ ಸಮಾರಂಭಗಳಿಗೆ ಕೇಂದ್ರ ಸ್ಥಾನವಾಗಿತ್ತು ಎಂದು ಮುದ್ರಿತ ಆಹ್ವಾನ ಪತ್ರಗಳ ಕಟ್ಟುಗಳನ್ನೇ ತೋರಿಸುತ್ತಾರೆ. ನೋಡುತ್ತಾ ಹೋದಂತೆ ಅಚ್ಚರಿ ತರುತ್ತದೆ.

ವಿಚಾರ ಸಂಕಿರಣ

ವಿಚಾರ ಸಂಕಿರಣಗಳಲ್ಲಿ ನಿರ್ದಿಷ್ಟ ವಿಚಾರಗಳನ್ನು ಮಂಡಿಸುವುದು, ಸ್ಮರಣ ಸಂಚಿಕೆ, ಅಭಿನಂದನಾ ಗ್ರಂಥಗಳಿಗೆ ವಿಶೇಷ ಪ್ರಬಂಧ ಬರೆದು ಕೊಡುವುದು. ಇದು ಅವರ ಸಾಮಾನ್ಯ ದಿನಚರಿ ಎನ್ನಬಹುದು. ಒಂದಲ್ಲಾ ಒಂದು ರೀತಿಯ ಕಲಾಸಂವಹನ ನಡೆದೇ ಇರುತ್ತದೆ. ಲಲಿತಕಲಾ ಅಕಾಡೆಮಿ ಪ್ರಕಟಿಸುತ್ತಿರುವ ತ್ರೈಮಾಸಿಕ ಕಲಾ ವಾರ್ತೆ, ಬೆಂಗಳೂರಿನಲ್ಲಿ ಪ್ರಕಟವಾಗುತ್ತಿದ್ದ ಉದಯವಾಣಿಯ ದಿನ ಪತ್ರಿಕೆಯ ವಾರದ ವಿಶೇಷ ಕರ್ನಾಟಕ ಸಂಪದ ಪುಟದಲ್ಲಿ 'ನಮ್ಮ ಕಲಾವಿದರು' ಎಂಬ ಅಂಕಣದ ಮೂಲಕ ರಾಜ್ಯದ ಚಿತ್ರಕಲಾವಿದರು ಮತ್ತು ಶಿಲ್ಪಿಗಳನ್ನು ಕುರಿತು ನಾಲ್ಕೈದು ವರ್ಷ ತಪ್ಪದೇ ಬರೆದಿದ್ದು, ನಂತರದಲ್ಲಿ ಕಲಾವಿಮರ್ಶೆ ಬರೆಯುತ್ತಿದ್ದುದು, ತದನಂತರದಲ್ಲಿ ಮೈಸೂರಿನಲ್ಲಿ ವಾಸ್ತವ ಹೂಡಿದ ಮೇಲೆ ೨೦೦೮ರಿಂದ ಪ್ರಜಾವಾಣಿಯ ಮೆಟ್ರೊ ಮೈಸೂರು ವಿಭಾಗಕ್ಕೆ ಕಲೆ ಕಲಾವಿದ ಶಿಲ್ಪಿಗಳನ್ನು ಕುರಿತು ಬರೆಯುತ್ತಿರುವುದು ಸಾಂದರ್ಭಿಕವಾಗಿ ರಾಜ್ಯದ ವಾರಪತ್ರಿಕೆಗಳಾದ ಸುಧಾ, ತರಂಗ, ಕರ್ಮವೀರ, ದಿನಪತ್ರಿಕೆಗಳಾದ ಕನ್ನಡಪ್ರಭ, ಸಂಯುಕ ಕರ್ನಾಟಕ, ಮಾಸ ಪತ್ರಿಕೆಯಾದ 'ಹೊಸತು' ಪತ್ರಿಕೆಗಳಲ್ಲಿ ಬರೆದಿರುವುದು ಇವೆಲ್ಲಾ ಸೇರಿದರೆ ೫೦೦ಕ್ಕೂ ಮಿಗಿಲಾದ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಮುದ್ರಣಗೊಂಡಿವೆ ಎಂಬುದು ಅವರ ನಿರಂತರ ತೊಡಗಿಕೊಳ್ಳುವಿಕೆಯ ದ್ಯೋತಕವಾಗಿದೆ.

ಲೋಕವಾಣಿ ಪತ್ರಿಕೆಯ ಸಹ ಸಂಪಾದಕರಾಗಿ ಪುರವಣಿಗೆ ಬರೆದುದವಂತೂ ಅನೇಕ. ಇದರಲ್ಲಿ ಕಲಾವಿದರದ್ದು ಮಾತ್ರವಲ್ಲದೆ ನಾಡು ನುಡಿಗೆ ಸೇವೆಗೈದ ಪ್ರಖ್ಯಾತ ಸಾಹಿತಿಗಳು. ಮಠಮಾನ್ಯಗಳು, ಗುರುಪೀಠಗಳು, ಸ್ಥಳ

ಪರಿಚಯ ಸೇರಿದಂತೆ ಬರೆದಿರುವುದಲ್ಲದೆ ಪುರವಣಿಗೆ ಬರುತ್ತಿದ್ದ ಆಯ್ದ ಕತೆಗಳಿಗೆ ಸಾಂದರ್ಭಿಕ ಚಿತ್ರ ರಚಿಸುತ್ತಿದ್ದುದು ಮತ್ತು ಅಂದಿನ ಪ್ರಖ್ಯಾತ ಪತ್ರಿಕೆ ಪ್ರಜಾಮತ ವರ್ಣ ಮುಂದ್ರಣಕ್ಕೆ ಹೆಸರಾಗಿದ್ದು, ಹಾ.ವೆಂ. ನಾಗರಾಜರವರ ಸಂಪಾದಕತ್ವದಲ್ಲಿ ಮುದ್ರಣಗೊಳ್ಳುತ್ತಿದ್ದಾಗ ಅಲ್ಲಿ ಪ್ರಕಟಿಸುತ್ತಿದ್ದ ಕತೆಗಳಿಗೆ ಸಾಂದರ್ಭಿಕ ವಿನ್ಯಾಸಕಾರನಾಗಿ ಕೆಲಕಾಲ ಕೆಲಸ ಮಾಡಿದುದು. ಟೆಕ್ಸ್‌ಟೈಲ್ ಕಂಪನಿಗೆ ಡಿಸೈನ್ ವಿನ್ಯಾಸಗೊಳಿಸುವುದು ಸೇರಿದಂತೆ ಅನುಭವದ ರಾಶಿಯೇ ಅವರಲ್ಲಿದೆ.

ನಿರರ್ಗಳವಾಗಿ ಮಾತನಾಡಬಲ್ಲವರಾದ ಇವರು ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ರವೀಂದ್ರ ಕಲಾನಿಕೇತನ ಚಿತ್ರಕಲಾ ಮಹಾವಿದ್ಯಾಲಯ ತುಮಕೂರು ಸಹಭಾಗಿತ್ವದಲ್ಲಿ ನಡೆದ ಕರ್ನಾಟಕ ಚಿತ್ರಕಲಾ ಪರಂಪರೆ ವಿಚಾರ ಸಂಕಿರಣದ ಗೋಷ್ಠಿಯೊಂದರ ಅಧ್ಯಕ್ಷರಾದದ್ದು, (೨೦೦೯) ಎಸ್.ಎನ್. ಸ್ವಾಮಿ ಮತ್ತು ಆರ್.ಎಸ್. ನಾಯಿಡುರವರ ಶತಾಬ್ದಿ ಸ್ಮರಣೆಯನ್ನು ಸಂಸ್ಕೃತಿ ಇಲಾಖೆ ಮತ್ತು ಅಕಾಡೆಮಿಗಳು ಹಮ್ಮಿಕೊಂಡಿದ್ದಾಗ ಮೈಸೂರು ಮತ್ತು ಬೆಳಗಾಂನಲ್ಲಿ ಎಸ್.ಎನ್. ಸ್ವಾಮಿಯವರನ್ನು ಕುರಿತು ಪಾಂಡಿತ್ಯಪೂರ್ಣ ಭಾಷಣ ಮಾಡಿದ್ದುದು, ರಾಷ್ಟ್ರೀಯ ದೃಶ್ಯ ಕಲಾ ಅಕಾಡೆಮಿ ಆಯೋಜಿಸಿದ ಎರಡನೇ (ಏಪ್ರಿಲ್ ೧೮-೧೯, ೨೦೦೯) ಅದರ ಸರ್ವಾಧ್ಯಕ್ಷತೆ ವಹಿಸಿದುದು ಇವೆಲ್ಲಾ ತನ್ನ ಜೀವನದ ಮೈಲಿಗಲ್ಲುಗಳು ಎನ್ನುತ್ತಾರೆ.

ಸಾಹಿತ್ಯ ಸೃಷ್ಟಿ

ಶಿವಲಿಂಗಪ್ಪನವರ ಸಾಹಿತ್ಯ ಕೃಷಿಯನ್ನು ಎರಡು ರೀತಿಯಲ್ಲಿ ವಿಭಾಗಿಸಿಕೊಂಡು ವಿವೇಚಿಸಬಹುದಾಗಿದೆ.

೧. ಪ್ರಕಟಿತ ಲೇಖನಗಳು

೨. ಪ್ರಕಟಿತ ಗ್ರಂಥಗಳು

೧. ಪ್ರಕಟಿತ ಲೇಖನಗಳು : ಶಿವಲಿಂಗಪ್ಪನವರು ಕಳೆದ ಮೂರು ದಶಕಗಳಿಂದ ಪತ್ರಿಕಾ ಮಾಧ್ಯಮಗಳೊಡನೆ ನಿಕಟ ಸಂಪರ್ಕ ಹೊಂದಿದ್ದು ಅವರು ಬರೆದ ಲೇಖನಗಳು ಸುಮಾರು ಐನೂರರ ಗಡಿದಾಟಿವೆ. ಈ ಲೇಖನಗಳಲ್ಲಿ

೧. ಸ್ಥಳ ಪರಿಚಯ

೨. ವ್ಯಕ್ತಿ ಪರಿಚಯ

೩. ಕಲಾವಿಮರ್ಶೆ

೪. ಧಾರ್ಮಿಕ ಲೇಖನಗಳು

೫. ಆಕಾಶವಾಣಿ ಬರಹಗಳು

೬. ಹಾಸ್ಯ ಲೇಖನಗಳು

೭. ಚುಟುಕುಗಳು, ಕವನಗಳು ಇವೆಲ್ಲಾ ಅಡಕಗೊಂಡಿವೆ.

ಶಿವಲಿಂಗಪ್ಪನವರು ಹೋದೆಡೆಯಲ್ಲೆಲ್ಲಾ ಛಾಯಾಚಿತ್ರ ಪೆಟ್ಟಿಗೆಯನ್ನು (ಕ್ಯಾಮರಾ) ಮತ್ತು ಒಂದು ಸಣ್ಣದಾದ ಧ್ವನಿಗ್ರಾಹಕ ಯಂತ್ರವನ್ನು ತಮ್ಮ ಜೊತೆಯಲ್ಲಿ ಕೊಂಡೊಯ್ಯುತ್ತಾರೆ. ಇದು ಸ್ಥಳ ಪರಿಚಯಕ್ಕೆ

ಪೂರ್ಣ ಸಹಕಾರಿಯಾಗುತ್ತದೆ. ತಮಗೆ ಬೇಕಾದ ಛಾಯಾ ಚಿತ್ರವನ್ನು ತೆಗೆದುಕೊಂಡು, ಈ ಸ್ಥಳಕ್ಕೆ ಸಂಬಂಧಿಸಿದ ವಿಷಯಗಳನ್ನು ಸ್ಥಳೀಯರಿಂದ ಮತ್ತು ಅಲ್ಲಿನ ಅರ್ಚಕರ ಸಂದರ್ಶನದ ಮೂಲಕ ಮುದ್ರಿಸಿಕೊಳ್ಳುತ್ತಾರೆ. ಅವರು ಹೇಳಿದುದಕ್ಕೂ, ಈ ಹಿಂದೆ ಮುದ್ರಣಗೊಂಡಿರುವ ಆ ಸ್ಥಳದ ಸಾಹಿತ್ಯಕ್ಕೂ ಸಾಮ್ಯವಿದೆಯೇ ಎಂಬುದನ್ನು ಪರಿಶೀಲಿಸಿ, ತಾವು ನೋಡಿದುದರ ಆಧಾರದ ಮೇಲೆ ಲೇಖನ ಬರೆದು ಚಿತ್ರ ಸಹಿತ ಕಳಿಸುತ್ತಾರೆ. ಮುದ್ರಣಕ್ಕೆ ಅನುಕೂಲವಾಗುವ ಛಾಯಾಚಿತ್ರ, ಸ್ಥಳಕ್ಕೆ ಸಂಬಂಧಿಸಿದ ವಿಷಯ ಸಂಗ್ರಹಣೆ, ಮೇಲಾಗಿ ಪುಟದ ಇತಿಮಿತಿಗನುಗುಣವಾದ ಬರಹವಿರುವುದರಿಂದ ಕನ್ನಡದ ಯಾವುದೇ ಪತ್ರಿಕೆಗಳಲ್ಲಾದರೂ ಅವು ಮುದ್ರಣಗೊಳ್ಳುತ್ತವೆ.

ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗಿರುವುದು ವ್ಯಕ್ತಿ ಪರಿಚಯ. ಸ್ವತಃ ಕಲಾವಿದರೂ ಶಿಲ್ಪಿಯೂ ಆಗಿರುವುದರಿಂದ ಅನೇಕ ಚಿತ್ರಕಲಾವಿದರನ್ನು ಸಾಹಿತಿಗಳನ್ನು, ಸಂದರ್ಶಿಸಿ ಲೇಖನ ಬರೆದಿದ್ದಾರೆ.

೨೦೦ನೇ ವರ್ಷದ ಆದಿಯಿಂದ ಉದಯವಾಣಿ ಪತ್ರಿಕೆಯಲ್ಲಿ ನಮ್ಮ ಕಲಾವಿದರು ಎಂಬ ಅಂಕಣದ ಮೂಲಕ ನಾಡಿನ ಕಲಾವಿದರನ್ನು, ಶಿಲ್ಪಿಗಳನ್ನು ಪರಿಚಯಿಸಿದುದು, ಪ್ರತಿ ಮಂಗಳವಾರ ಕರ್ನಾಟಕ ಸಂಪದ ಎಂಬ ವಿಶೇಷ ಪುರವಣಿಯಲ್ಲಿ ಪ್ರಕಟವಾಗಿವೆ. ಪ್ರತಿಭೆ ಇದ್ದು ಬೆಳಕಿಗೆ ಬಾರದೆ ಇರುವವರನ್ನು ಹುಡುಕಿ ಬರೆಯುವ ಗುಣ ಇವರದು. ಬೆಂಗಳೂರಿನಲ್ಲಿ ಪ್ರದರ್ಶನವಾಗುತ್ತಿದ್ದ ಚಿತ್ರ ಮತ್ತು ಶಿಲ್ಪಗಳನ್ನು ಕುರಿತು ವಿಮರ್ಶೆಯನ್ನು ಈ ಹಿಂದೆ ಲೋಕವಾಣಿ ಮತ್ತು ಕನ್ನಡಪ್ರಭ ಪತ್ರಿಕೆಗಳಲ್ಲಿ ಬರೆಯುತ್ತಿದ್ದರು.

ವಚನ ಸಾಹಿತ್ಯವನ್ನು ಹೆಚ್ಚಾಗಿ ಅಭ್ಯಾಸ ಮಾಡಿರುವುದರಿಂದ ಅನೇಕ ಧಾರ್ಮಿಕ ಪತ್ರಿಕೆಗಳಿಗೆ, ಸಂಚಿಕೆಗಳಿಗೆ, ಲೇಖನ ಬರೆದಿದ್ದಾರೆ. ಅವುಗಳಿಗೆ ಬೇಕಾದ ಛಾಯಾಚಿತ್ರ, ಪುಟ ವಿನ್ಯಾಸಗಳನ್ನು ಮಾಡಿರುವುದಲ್ಲದೇ ಸಹ ಸಂಪಾದಕರಾಗಿ ಕೆಲಕಾಲ ಕಾರ್ಯನಿರ್ವಹಿಸಿದ್ದಾರೆ.

ಬೆಂಗಳೂರು, ಮೈಸೂರು ಆಕಾಶವಾಣಿಗಳಲ್ಲಿ ಕಲೆ ಮತ್ತು ಕಲಾವಿದರನ್ನು ಕುರಿತಂತೆ ಭಾಷಣೆಗಳನ್ನು ಮಾಡಿದ್ದಾರೆ. ವ್ಯಕ್ತಿಗಳನ್ನು ಸಂದರ್ಶಿಸಿದ್ದಾರೆ. ಪ್ರಕಟವಾಗಿರುವ ಅನೇಕ ಲೇಖನಗಳಲ್ಲಿ ಕಲಾ ಸಂಬಂಧಿತವಾದ ವಿದ್ವತ್‌ಪೂರ್ಣ ಲೇಖನಗಳನ್ನು ಆಯ್ದು ಅವುಗಳ ಸ್ಥೂಲವಾದ ಚರ್ಚೆಮಾಡಲಾಗಿದೆ.

೧. ಚುಕ್ಕಿ ಚಿತ್ರಗಳಲ್ಲಿ ಗಜಲ್ ಮತ್ತು ರುಮ್ರಿ (ವಿಜಯ ಕರ್ನಾಟಕ, ೧೮.೬.೨೦೦೦)

೨. ದೃಶ್ಯ ಮಾಧ್ಯಮದಲ್ಲಿ ಬಸವಣ್ಣ (ಉದಯವಾಣಿ ೨೦.೪.೨೦೦೪)

೩. ಕರ್ನಾಟಕ ಕಂಡ ನವೋದಯ ('ಹೊಸತು' ಮಾಸಿಕದ ವಿಶೇಷ ಸಂಚಿಕೆ ಜನವರಿ ೨೦೦೪)

೪. ಉದ್ಯಾನವನದಲ್ಲಿ ಕಲಾರಾಗ (ಕರ್ಮವೀರ, ೨೧.೧೨.೨೦೦೩)

೫. ಶತಾಬ್ದಿ ಸ್ಮರಣೆ ಉದಯವಾಣಿ, ೨೦ ಕಲಾವಿದರ ಸ್ಮರಣೆ ೨೦ ವಾರ

೬. ಅರಮನೆಯ ಅಂಗಳದ ಚಿತ್ರಶಾಲೆ (ಕರ್ಮವೀರ, ೨೦.೧೦.೨೦೦೨)

೭. ಸರಸ್ವತಿಯ ಸುಪುತ್ರಿಯೊಡನೊಂದು ಸಂದರ್ಶನ ಕಲಾವಾರ್ತೆ ಸಂಚಿಕೆ ೬೪

[illegible]

೮. ಅರಮನೆಯ ಚಿತ್ರಕಲಾವಿದರು (ಕರ್ಮವೀರ ೨೮.೧೦.೨೦೦೧)

೯. ಶಿಲೆ ದೇವರ ಸೃಷ್ಟಿ, ಕಲೆ ಶಿಲ್ಪಿಯ ಸೃಷ್ಟಿ (ಕರ್ಮವೀರ ೮.೪.೨೦೦೧)

೧. **ಚುಕ್ಕಿ ಚಿತ್ರಗಳಲ್ಲಿ ಗಜಲ್ ಮತ್ತು ಠುಮ್ರಿ :** ಗಜಲ್ ಮತ್ತು ಠುಮ್ರಿ ಹಿಂದೂಸ್ತಾನಿ ಸಂಗೀತದಲ್ಲಿ ಬರುವ ಪ್ರಕಾರ. ಇದಕ್ಕೂ ಬುರಾನಪುರ ಅವರ ಚಿತ್ರಕ್ಕೂ ಏನು ಸಂಬಂಧ ಅನ್ನುವಿರಾ! ನೋಡಿ ಅವರ ಹೋಲಿಕೆಯನ್ನು, ಗಜಲ್ ಶೃಂಗಾರ ರಸ ಪ್ರಧಾನವಾದದ್ದು, ಪ್ರಿಯ-ಪ್ರಿಯಕರನ ವರ್ಣನೆ ಮುಖ್ಯವೆಂದೆನಿಸುತ್ತದೆ. ಬುರಾನಪುರ ಅವರ ಚಿತ್ರಗಳಲ್ಲಿ ಹಿನ್ನೆಲೆಯ ಒಂದೊಂದು ಬೆಸೆದು ಬಾಹುಗಳಿಂದ ಆಲಂಗಿಸುವಂತೆ ಶೃಂಗಾರ ರಸವನ್ನು ಪ್ರತಿಪಾದಿಸುತ್ತವೆನೋ ಎಂಬಂತೆ ಚಿತ್ರಗಳಲ್ಲಿ ಕಾಣುತ್ತದೆನ್ನುತ್ತಾರೆ.

ಅತಿ ಕಡಿಮೆ ಶಬ್ದಗಳಿಂದಲೇ ಪ್ರಚಾರ ಪಡಿಸಬಹುದಾದ ಹಾಗೂ ಹಾವಭಾವಗಳಿಂದಲೇ ಇಡೀ ಗೀತೆಯ ಅರ್ಥವನ್ನು ವ್ಯಕ್ತಪಡಿಸುವ ಇಲ್ಲದ ಸ್ಪಷ್ಟವಾದ ಆಕಾರವಿಲ್ಲದ, ಬಣ್ಣಗಳ ಬೆಡಗಿನಿಂದಲೇ ಭಾವನೆಗಳನ್ನು ಬಿಂಬಿಸುವ ಕೈಚಳಕ ಚಿತ್ರಗಳಲ್ಲಿ ಎದ್ದು ಕಾಮುತ್ತದೆಂದು ಹೋಲಿಕೆ ನೀಡುತ್ತಾ ಹೋಗುತ್ತಾರೆ.

ಸಾಮಾನ್ಯವಾಗಿ ಕಲೆಯನ್ನು ಕುರಿತು ಬರಹಗಾರರು, ತಾವು ನೋಡಿದ ಚಿತ್ರವನ್ನಾಗಲೀ, ಶಿಲ್ಪವನ್ನಾಗಲೀ, ನೃತ್ಯವನ್ನಾಗಲೀ, ನಾಟಕ ಕುರಿತು ಬರೆಯುವವ ನೃತ್ಯದ ವಿಷಯ ಕುರಿತು ತಿಳಿಯಲು ಪ್ರಯತ್ನಿಸುವುದಿಲ್ಲ. ಹಾಗೆಯೇ ಚಿತ್ರಗಳ ಬಗ್ಗೆ ಬರೆಯುವವರು ಇನ್ನೊಂದು ಲಲಿತಕಲೆಯ ಬಗ್ಗೆ ವಿಚಾರ ಮಾಡಲು ಹೋಗುವುದಿಲ್ಲ.

ಆದರೆ ಈ ಮಾತುಗಳಿಗೆ ಅಪವಾದವೆಂಬಂತೆ ಶಿವಲಿಂಗಪ್ಪನವರು ಸಾಧ್ಯವಾದಷ್ಟು ಲಲಿತಕಲೆಯ ಇತರ ಪ್ರಕಾರಗಳನ್ನು ಅವುಗಳ ಶೈಲಿಯನ್ನು ಅಭ್ಯಾಸ ಮಾಡಿ ತಾವು ಬರೆಯುವ ಚಿತ್ರದ ಅಥವಾ ಶಿಲ್ಪದ ವಿಚಾರ ವಿಮರ್ಶೆಗಳಿಗೆ ತೌಲನಿಕವಾದ ಸಾದೃಶ್ಯವನ್ನು, ಹೋಲಿಕೆಯನ್ನು ತರಲು ಯತ್ನಿಸುತ್ತಾರೆಂಬುದಕ್ಕೆ ಈ ಲೇಖನ ಸಾಕ್ಷಿ ಒದಗಿಸುತ್ತದೆ. ಹಾಗೆಯೇ ಬುರಾನಪುರ ಅವರ ಆಪ್ಟಿಕಲ್ ಡಿಸೈನ್ ಕಲಾತಂತ್ರದ ಬಗ್ಗೆ ವಿವರ ನೀಡುತ್ತಾ. ಇವರಲ್ಲಿನ ಕಲಾ ತಂತ್ರದ ವಿಶೇಷತೆಯನ್ನು ಲೇಖನದಲ್ಲಿ ದಾಖಲಿಸುತ್ತ ಹೋಗುತ್ತಾರೆ. ಅಂಗವಿಕಲತೆ ಇವರ ಪಾಲಿಗೆ ವರವಾಗಿದೆ. ರಾಷ್ಟ್ರದೆಲ್ಲೆಡೆ ಸುತ್ತಾಡಿ ಪ್ರದಶನ ಮಾಡಿದವರು ಎಂಬುದನ್ನು ಲೇಖನದಲ್ಲಿ ಉಲ್ಲೇಖಿಸುತ್ತಾ, ಬುರಾನಪುರ ಎಲ್ಲಿಗೆ ಹೋದರೂ ಅವರ ಚಿತ್ರಗಳ ಕಟ್ಟು ಜೊತೆಯಲ್ಲಿರುತ್ತದೆ. ಅವರೊಂದು ಚಲಿಸುವ ಪ್ರದರ್ಶನಾಂಗಣವಿದ್ದಂತೆ ಎಂದು ಬರೆಯುತ್ತಾರೆ.

೨. **ದೃಶ್ಯ ಮಾಧ್ಯಮದಲ್ಲಿ ಬಸವಣ್ಣ :** ಇದೊಂದು ಅತ್ಯಂತ ಅಪರೂಪದ ಲೇಖನ. ೧೨ನೇ ಶತಮಾನದ ಕ್ರಾಂತಿಯೋಗಿ, ವಿಚಾರವಾದಿ, ಭಕ್ತಿ ಎಂದೆಲ್ಲಾ ವ್ಯಾಖ್ಯಾನಿಸುವ ಬಸವಣ್ಣನವರನ್ನು ಕುರಿತು ೨೦೦೪ನೇ ಇಸವಿವರೆಗೆ ದೃಶ್ಯ ಮಾಧ್ಯಮದಲ್ಲಿ ಬಂದಿರುವುದನ್ನು ವಿವರಿಸುತ್ತಾ ಹೋಗುತ್ತಾರೆ. ಈ ಲೇಖನದಲ್ಲಿ ಚಿತ್ರಕಲೆಯ ಮೂಲಕ ಬಸವಣ್ಣ ರೂಪಿತವಾಗಿರುವುದನ್ನೇ ಹೆಚ್ಚಾಗಿ ವಿವರಿಸುತ್ತಾ ಗದುಗಿನ ಎಂ.ಎ. ಚೆಟ್ಟಿ ಹುಬ್ಬಳ್ಳಿಯ ಎಂ.ವಿ. ಮಿಣಜಗಿ, ಮೈಸೂರಿನ ಎಂ. ವೀರಪ್ಪ ಬೆಂಗಳೂರಿನ ಎಂ.ಟಿ.ವಿ. ಆಚಾರ್ಯ ಮುಂತಾದವರು ಶರಣರ ಚಿತ್ರ ಬರೆದುದನ್ನು ಉಲ್ಲೇಖಿಸುತ್ತಾ ನಂತರದ ಹಲವು ಕಿರಿಯ ಕಲಾವಿದರು ಶರಣರ, ವಚನಗಳ ಆಧಾರಿತ

ಚಿತ್ರಗಳನ್ನು ಬರೆದು ಸೂಕ್ತ ಪ್ರೋತ್ಸಾಹವಿಲ್ಲದೇ ದೃಶ್ಯಕಲೆಯ ಮತ್ತೊಂದು ಮಗ್ಗುಲಾದ ನೃತ್ಯ, ನಾಟಕಗಳಲ್ಲಿ ಬಂದಂತಹವುಗಳನ್ನು ಉಲ್ಲೇಖಿಸಿ, ಸಾಹಿತ್ಯದ ರೂಪದಲ್ಲಿ ಅಂದರೆ ಪುಸ್ತಕ ರೂಪದಲ್ಲಿ ಬರುತ್ತಿರುವಷ್ಟು ಬಸವಣ್ಣನವರ ಮತ್ತವರ ಸಮಕಾಲೀನ ವಿಚಾರ ಧಾರೆಗಳು ಚಿತ್ರಗಳ ಅರ್ಥಾತ್ ದೃಶ್ಯಗಳ ಮೂಲಕ ಬರುತ್ತಿಲ್ಲ. ಹಾಗಾಗಿ ಅಕ್ಷರಸ್ಥನಿಗೆ ಅದರಲ್ಲೂ ಆಸಕ್ತಿ ಇದ್ದವನಿಗೆ ಮಾತ್ರ ಸಾಹಿತ್ಯ ಮುಟ್ಟುತ್ತಿದೆಯೇ ವಿನಃ ಎಲ್ಲಾ ಜನ ಸಾಮಾನ್ಯರಿಗೂ ಅರ್ಥವಾಗುವಂತಹ, ಒಪ್ಪಿಕೊಳ್ಳುವಂತಹ ದೃಶ್ಯ ಮಾಧ್ಯಮದಲ್ಲಿ ಬರುತ್ತಿಲ್ಲವೆಂಬ ಹೋಲಿಕೆಯನ್ನು ಈ ಲೇಖನದಲ್ಲಿ ಬರೆದಿದ್ದಾರೆ. ಅವರ ಭಾಷೆಯಲ್ಲೇ ಹೇಳುವುದಾದರೇ ಬಸವಣ್ಣನವರ ಬಗ್ಗೆ ಶಬ್ದ ಸೃಷ್ಟಿ ಅಪಾರ, ಕಲಾಸೃಷ್ಟಿ ಗೌಣ ಪ್ರಮಾಣದಲ್ಲಿದೆ ಎಂದು ವ್ಯಾಖ್ಯಾನಿಸುತ್ತಾರೆ.

೩. **ಕರ್ನಾಟಕ ಕಂಡ ನವೋದಯ :** ಸಾಹಿತ್ಯದಲ್ಲಿ ಹಳೆಗನ್ನಡ, ನಡುಗನ್ನಡ, ಹೊಸಗನ್ನಡದ ನಂತರದಲ್ಲಿ ನವೋದಯ, ನವ್ಯ, ದಲಿತ, ಬಂಡಾಯ ಎಂಬ ಹಂತಗಳನ್ನು ಗುರ್ತಿಸುತ್ತೇವೆಯೋ ಹಾಗೆ ಚಿತ್ರಕಲಾ ಬೆಳವಣಿಗೆಯ ಹಂತವನ್ನು ಹೇಳುವಾಗ ನವೋದಯ ಕಲಾವಿದರು ಅಥವಾ ರಮ್ಯ ಕಲಾವಿದರು ಎಂದು ವ್ಯಾಖ್ಯಾನಿಸುತ್ತಾರೆ.

ಈ ನವೋದಯ ಕಲೆಗೆ ಸೇರಿದ ಕಲಾವಿದರಲ್ಲಿ ಅನೇಕರು ನಮ್ಮೊಡನೆ ಇಲ್ಲ. ಜೊತೆಗೆ ಅವರ ಶೈಲಿಯ ಚಿತ್ರಗಳನ್ನು ನೋಡಲು ಲಭ್ಯವಿಲ್ಲದಂತೆ ಅಲ್ಲಲ್ಲಿ ಹರಿದು ಹಂಚಿಹೋಗಿವೆ. ಮನೆಯವರ ಅವಜ್ಞೆಗೆ ಒಳಗಾಗಿ ಬೇಡವಾಗಿಯೋ ಅಥವಾ ಸೂಕ್ತ ಪ್ರಚಾರವಿಲ್ಲದೆಯೋ ಈ ತಲೆಮಾರಿನ ಕಲಾಸಕ್ತರಿಗೆ ನೋಡಲು ಸಹ ಲಭ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಂದರ್ಭದಲ್ಲಿ ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತು ನಾಡಿನ ಎಲ್ಲಾ ಹಿರಿಯ ಕಲಾವಿದರ ಒಂದೊಂದು ಚಿತ್ರವನ್ನಾದರೂ ಸಂಗ್ರಹಿಸಿ ಪ್ರಕಟಿಸುವುದರೊಂದಿಗೆ ಹತ್ತಾರು ದಿನಗಳ ಪ್ರದರ್ಶನ ಏರ್ಪಡಿಸಿದ್ದ ಸಂದರ್ಭದಲ್ಲಿ ಬರೆದ ಲೇಖನದಲ್ಲಿ ಕಲಾವಿದರುಗಳಲ್ಲಿನ ವಿವಿಧ ಶೈಲಿಗಳನ್ನು ವಿವರಿಸಿ ಅವರು ಕಲಿತು ಬಂದ ಪರಿಸರ, ಪಾಶ್ಚಾತ್ಯ ಕಲಾವಿದರ ಶೈಲಿಯ ಅನುಕರಣೆ, ಪ್ರಭಾವ, ಇವುಗಳನ್ನು ತೌಲನಿಕವಾಗಿ ಚರ್ಚಿಸಿ ಲೇಖನಕ್ಕೊಂದು ಆಯಾಮ ನೀಡಿದ್ದಾರೆ. ಯುವ ಪೀಳಿಗೆಗೆ ಹಿಂದಿನ (ನವೋದಯ) ಕಲಾವಿದರ ಶೈಲಿ, ತಂತ್ರಗಳನ್ನು ತಿಳಿಯಲು ಈ ಲೇಖನ ಸಹಕಾರಿಯಾಗಿದೆ.

೪. **ಉದ್ಯಾನವನದಲ್ಲೊಂದು ಕಲಾರಾಗ :** ಕರ್ನಾಟಕ ಸರ್ಕಾರದ ಸಂಸ್ಕೃತಿ ಇಲಾಖೆಯು ಮುಂಜಾನೆಯ ಮುಸುಕಿನಲ್ಲಿ ಉದ್ಯಾನಕ್ಕೆ ಹೋಗುವ ವಿಹಾರಿಗಳಿಗೆ ಮತ್ತು ಕಲಾವಿದರಿಗೆ ಅನುಕೂಲವಾಗಲಿ ಎಂಬ ಉಭಯ ದೃಷ್ಟಿಯಿಂದ ಬೆಂಗಳೂರಿನ ಉದ್ಯಾನದಲ್ಲಿ ಉದಯರಾಗ ಎಂಬ ತಲೆಬರಹದೊಂದಿಗೆ ಕಾರ್ಯಕ್ರಮ ನಡೆಸುತ್ತಾ ಬಂದಿದೆ.

ಈ ಶೀರ್ಷಿಕೆಯನ್ನು ಗಮನದಲ್ಲಿರಿಸಿಕೊಂಡು ೭ನೇ ಕರ್ನಾಟಕ ಕಲಾ ಮೇಳ ಕಬ್ಬನ್ ವನದಲ್ಲಿರುವ ವೆಂಕಟಪ್ಪ ಚಿತ್ರಶಾಲೆಯಲ್ಲಿ (ನವೆಂಬರ್ ೨೬-೩೦/೨೦೦೩) ನಡೆದ ಸಂದರ್ಭದಲ್ಲಿ ಬರೆದ ಲೇಖನದಲ್ಲಿ ಉದರಾಗಕ್ಕೆ ಸರಿ ಸಾಟಿಯಾಗಿ ಕಲಾರಾಗ ಹೊಮ್ಮಿದೆ ಅನ್ನುತ್ತಾರೆ. ಉದಯರಾಗ ನಿರಂತರ ನಡೆದರೆ ಕಲಾರಾಗ ಅರ್ಥಾತ್ ಕಲಾ ಮೇಳ ಅಪರೂಪಕ್ಕೊಮ್ಮೆ ನಡೆಯುವುದು. ಒಂದು ಶ್ರವ್ಯ ಮಾಧ್ಯಮ, ಮತ್ತೊಂದು ದೃಶ್ಯ

ಮಾಧ್ಯಮ ಈ ಎರಡು ಮಾಧ್ಯಮಗಳಿಗೂ ಅವುಗಳದೆ ಆದ ಪ್ರೇಕ್ಷಕರು, ಪೋಷಕರು ಇರುತ್ತಾರೆ. ಈ ಎಲ್ಲಾ ಅಂಶಗಳನ್ನು ವಿವರಿಸುತ್ತಾ ಕಲಾಮೇಳದಲ್ಲಿ ಪಾಲ್ಗೊಂಡವರ ಬಗ್ಗೆ ಅಲ್ಲಿ ಕಲಾರಚನೆ ಮಾಡಿದವರ ಬಗ್ಗೆ ಪ್ರದರ್ಶಿತವಾದ ಕಲೆ ಮತ್ತು ಕಲಾ ಮಳಿಗೆಗಳ ಬಗ್ಗೆ ಎಲ್ಲ ವಿವರವನ್ನೂ ನೀಡುತ್ತಾರೆ.

೫. ಶತಾಬ್ದಿ ಸ್ಮರಣೆ : ಸರ್ಕಾರಕ್ಕೆ ಸಂಬಂಧಿಸಿದ ಸಂಸ್ಕೃತಿ ಇಲಾಖೆ ಮತ್ತು ಅದರಡಿಯಲ್ಲಿ ಬರುವ ಅಕಾಡೆಮಿಗಳಕಣ್ತೆರೆಸುವ ಲೇಖನ ಮಾಲೆಯಿದೆ.

ಸಂಸ್ಕೃತಿ ಇಲಾಖೆ ವಿದೇಶಿ ಸಂಜಾತ ರೋರಿಚ್‌ರವರ ಜನ್ಮ ಶತಾಬ್ದಿ ಆಚರಿಸಲು ಕೋಟಿಗಟ್ಟಲೆ ಹಣದ ಯೋಜನೆ ಹಾಕಿಕೊಂಡ ಹಿನ್ನೆಲೆಯಲ್ಲಿ ಎದ್ದ ಕೂಗು ಸರ್ಕಾರಕ್ಕೆ ಮುಟ್ಟಿದಾಗ ಸ್ಥಳೀಯರ ಜನ್ಮಶತಾಬ್ದಿ ಆಚರಿಸಲು ಸಹ ವಿಚಾರಮಾಡಿ ಕೇವಲ ೫-೬ ಕಲಾವಿದರ ಬಗ್ಗೆ ಶತಾಬ್ದಿ ಕಾರ್ಯಕ್ರಮ ನಡೆಸಿ, ಸ್ಥಳೀಯರಿಗೂ ಮಹತ್ವ ನೀಡಿದ್ದೇವೆಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವ ಯತ್ನ ಮಾಡಿದಾಗ, ಗತಿಸಿದ ಇನ್ನಿತರ ಹಿರಿಯ ಕಲಾವಿದರಿಗೂ ಈ ಗೌರವ ಸಲ್ಲಬೇಕೆಂಬ ಕೂಗು ಸರ್ಕಾರದ ಇಲಾಖೆಗಳಿಗೆ ಮುಟ್ಟಲೇ ಇಲ್ಲ. ಉದಯವಾಣಿ ಪತ್ರಿಕೆಗೆ ಪ್ರತಿ ಮಂಗಳವಾರ ಬರೆಯುತ್ತಿದ್ದ ನಮ್ಮ ಕಲಾವಿದರು ಎಂಬ ಅಂಕಣದಲ್ಲಿ ಬರೆದಿದ್ದಾರೆ. ಇದರಲ್ಲಿ ಕಲಾಗುರು ದಂಡಾವತಿಮಠ, ಎನ್.ಜಿ. ಪಾವಂಜೆ, ಸ್ವರ್ಣಶಿಲ್ಪಿ ಸಿಂಗಣ್ಣಾಚಾರ್ಯ, ಅ.ನ. ಸುಬ್ಬರಾವ್, ಎಸ್.ಆರ್. ಅಯ್ಯಂಗಾರ್, ಶಿಲ್ಪಿ ರಂಜಾಳ ಗೋಪಾಲಶೆಣೈ, ಅಮಿನಸಾಹೇಬ ಕಮಡೊಳ್ಳಿ, ಶಿಲ್ಪಿ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಎಂ.ವಿ. ಮಿಣಜಗಿ, ಡಿ.ಜಿ. ಬಡಿಗೇರ, ರೂಪಶಿಲ್ಪ ಬಸವಯ್ಯ, ಅಂಕಪ್ಪಾಚಾರ, ಮತಕೂರು ನಂಜುಂಡ ಶಿವಯೋಗಿ, ಎಚ್.ಎಸ್. ಇನಾಮತಿ, ಮುಡಗೋಡು ಹಿರಣ್ಯಪ್ಪ, ಬಸವಯ್ಯ, ಹಳಜೋಳ, ಯಲವಟ್ಟಿ ಕೊನೆಯಲ್ಲಿ ಸೆಟಾಸ್ಲೋವ್ ರೋರಿಚ್ ಹೀಗೆ ಕ್ರಮಬದ್ಧವಾಗಿ ಈ ಕಲಾವಿದರುಗಳ ಸಾಧನೆಯನ್ನು ಸ್ಮರಿಸಿ ಶಿವಲಿಂಗಪ್ಪನವರು ಬರಹ ಮೂಲಕ ಅಕ್ಷರ ನಮನ ಸಲ್ಲಿಸಿದ್ದಾರೆ. ಕಲಾ ಸಂಬಂಧಿಸಿದವರೆಲ್ಲರಿಗೂ ಇದೊಂದು ದಾಖಲೆಯ ಲೇಖನ. ಇದು ಉದಯವಾಣಿಯಲ್ಲಿ (೫.೮.೨೦೦೩ರಿಂದ ಆರಂಭವಾಗಿ ೨೩.೧೨.೨೦೦೩ರವರೆಗೆ) ೨೦ ಕಂತುಗಳಲ್ಲಿ ಪ್ರಕಟವಾಗಿದೆ.

೬. ಅರಮನೆಯ ಅಂಗಳದ ಚಿತ್ರಶಾಲೆ : ಮೈಸೂರು ಅರಮನೆಯನ್ನು ನೋಡದಿದ್ದವರಿಗೆ ಕಣ್ಣಿಗೆ ಕಟ್ಟುವ ಹಾಗೆ ಅದರ ವಾಸ್ತುಶಿಲ್ಪದ ವಿವರ, ನೋಡಿದವರಿಗೆ ನಾನು ಅನೇಕ ಬಾರಿ ಅರಮನೆಗೆ ಹೋಗಿರುವೆ ಇದನ್ನು ನೋಡಲೇ ಇಲ್ಲವಲ್ಲ ಎಂಬ ಕುತೂಹಲ ಬರುವಂತೆ ಚಿತ್ರಗಳ ಸಹಿತ ಲೇಖನ ಬರೆದಿದ್ದಾರೆ.

ಯಾತ್ರಿಕರು ವರಾಹಸ್ವಾಮಿ ದ್ವಾರದಿಂದ ಒಳಹೊಕ್ಕರೆ ಸಿಗುವುದೇ ಮೊದಲನೆಯದಾದ ವರಾಹಸ್ವಾಮಿ ದೇವಾಲಯ ನಂತರ ಉತ್ತರಾಭಿಮುಖವಾಗಿ ಹೋಗುವಾಗ ಕಾಣುವ ಅರಮನೆಯ ಹೊರಾಂಗಣ. ಹಾಗೆಯೇ ನೋಡುತ್ತಾ ಸಾಗಿದಂತೆ ಸಿಗುವ ಭುವನೇಶ್ವರಿ ದೇವಾಲಯ ಇವುಗಳ ಹಿಂದಿನ ಸಾಲಿನಲ್ಲಿ ಗಾಯತ್ರಿ, ತ್ರಿನೇಶ್ವರ ದೇವಾಲಯ, ಕೋಡಿ ಭೈರವೇಶ್ವರ ಇವುಗಳನ್ನು ನೋಡಿ ಹಾಗೆಯೇ ಅರಮನೆಯ ಪೂರ್ವಕ್ಕಿರುವ ದೊಡ್ಡ ಕೆರೆ ಮೈದಾನಕ್ಕೆ ಅಂಟಿಕೊಂಡಂತಿರುವ ಮಹಾದ್ವಾರಗಳನ್ನು ಅಲ್ಲಿನ ಕುದುರೆ ಮೇಲೆ ಕುಳಿತ ಸಿಪಾಯಿಗಳನ್ನು ಕಂಡು

ಪಶ್ಚಿಮಕ್ಕೆ ಹೊರಟರೆ ಲಕ್ಷ್ಮೀ ನಾರಾಯಣ, ಕಿಲ್ಲೇ ವೆಂಕಟರಮಣ, ಪ್ರಸನ್ನ ವೆಂಕಟರಮಣ, ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ ದರ್ಶಿಸಿ, ಅರಮನೆ ಪುಸ್ತಕ ಭಂಡಾರದ ಬಾಹ್ಯನೋಟವನ್ನು ಮಾತ್ರ ನೋಡಿ, ಒಂದಿಷ್ಟು ನೀರು ಕುಡಿದು ಗ್ಯಾಲರಿಯ ಕಡೆಗೆ ಹೊರಟರೆ ಎರಡು ಮುಖ್ಯವಾದ ಗ್ಯಾಲರಿಗಳನ್ನು ನೋಡಬಹುದೆನ್ನುತ್ತಾರೆ. ೧. ಸರ್ಕಾರಿ ಒಡತನದ ಗ್ಯಾಲರಿ, ೨. ಖಾಸಗಿ ಒಡೆತನದ ಗ್ಯಾಲರಿ.

೧. ಸರ್ಕಾರಿ ಒಡೆತನದ ಗ್ಯಾಲರಿ : ಯಾತ್ರಿಕ ಹಣಕೊಟ್ಟು ರಶೀದಿ ಪಡೆಯುವುದು ಈ ಗ್ಯಾಲರಿ ನೋಡಲು ಮಾತ್ರ. ಅರಮನೆ ಹೊರ ಆವರಣ ನೋಡಲು ಯಾವ ಹಣವು ಇಲ್ಲ. ಇಲ್ಲಿನ ಗೊಂಬೆ ತೊಟ್ಟಿ, ಕಲ್ಯಾಣ ಮಂಟಪ, ಹಿತ್ತಾಳೆ ಬಾಗಿಲು, ದರ್ಬಾರು ಹಾಲ್, ಬಣ್ಣದ ಚಿತ್ತಾರದ ಕಂಭ, ಮೇಲ್ಛಾವಣಿಯ ದೇವತೆಗಳ ಚಿತ್ರ ಕಣ್ಣು ಕೋರೈಸುವ ಭಾವಣೆಯ ಚಿತ್ತಾರ, ಗೊಂಚಲ ದೀಪ, ಸುಂದರ ಮರಗೆತ್ತನೆ, ಸ್ವರ್ಣಮಯವಾದಂತೆ ತೋರುವ ಕಂಬಂಗಳು, ಇವುಗಳೆಲ್ಲದರ ವಿವರ ನೀಡುತ್ತಾರೆ.

೨. ಖಾಸಗಿ ಒಡೆತನದ ಗ್ಯಾಲರಿ : ಇದು ಜಯಚಾಮರಾಜ ಒಡೆಯರ್ ಅವರ ಪುತ್ರ ಶ್ರೀಕಂಠದತ್ತ ನರಸರಾಜ ಒಡೆಯರ್ ಅವರ ಒಡೆತನಕ್ಕೆ ಸೇರಿದ್ದು. ಖಾಸಗಿ ಅನ್ನುವ ಪದಕ್ಕೆ ಅನುಗುಣವಾಗಿ ಮಹಾರಾಜರು ಬಳಸುತ್ತಿದ್ದ ಜರೀ ಪೇಟ, ಕೋಟು, ನಿಲುವಂಗಿ, ರುಮಾಲು, ಛತ್ರಿ, ಛಾಮರ, ಬಾಣ ಬತ್ತಳಿಕೆ, ಭರ್ಚಿ, ದಂಡ, ವಿವಿಧ ನಮೂನೆ ಬೆಳ್ಳಿ ಕುರ್ಚಿ, ಉನ್ನತಾಸನಗಳು, ವಿವಿಧ ಗ್ರಾಮಾಫೋನು, ಅರಮನೆ ಕುಟುಂಬದ ಚಿತ್ರಗಳು, ರಾಜ ವೈಭೋಗದ ಎಲ್ಲಾ ಹಂತಗಳನ್ನು ಕಣ್ಣಿಗೆ ಕಾಣುವಂತೆ ಬರಹದ ದೃಶ್ಯ ರೂಪ ನೀಡಿದ್ದಾರೆ.

ಅಲ್ಲಿಂದ ಹೊರಟು ಅರಮನೆ ವಾಸ್ತುಗಳ ಹೊರ ಆವರಣ ನೋಡುತ್ತಾ ದಕ್ಷಿಣದಿಂದ ಉತ್ತರಕ್ಕೆ ಸಾಗಿದರೆ ಗಣಪತಿ ಮತ್ತು ಆಂಜನೇಯ ದೇವಾಲಯ, ಅದರ ಮುಂದೆ ಮಹಾರಾಜರ ಸೊಗಸಾದ ಅಮೃತ ಶಿಲಾ ಪುತ್ಥಳಿ ಅದಕ್ಕೊಂದು ಸುಂದರ ಮಂಟಪ, ಜಗದ್ವಿಖ್ಯಾತವಾದ ದೊಡ್ಡ ಗಡಿಯಾರ ಈ ಎಲ್ಲಾ ವಿವರಗಳನ್ನು ಅಂಕಿ ಅಂಶ ಸಹಿತ ನೀಡಿ ಓದುಗನನ್ನು ಮಂತ್ರ ಮುಗ್ಧರನ್ನಾಗಿಸುತ್ತಾರೆ. ಇದೊಂದು ಸಚಿತ್ರವಾದ ಪ್ರವಾಸ ಲೇಖನ.

೭. ಸರಸ್ವತಿಯ ಪುತ್ರಿಯೊಡನೊಂದು ಸಂದರ್ಶನ : ಈ ಲೇಖನದಲ್ಲಿ ವಿವಾಹವಾಗದೇ ಕಲೆಗಾಗಿಯೇ ತನ್ನನ್ನು ತಾ ಅರ್ಪಿಸಿಕೊಂಡ ಮೈಸೂರಿನ ಓರ್ವ ಕಲಾರಾಧಕಿಯ ಬದುಕಿನ ನೋಟದ ಚಿತ್ರಣವನ್ನು ಕೊಡುತ್ತಾರೆ ಶಿವಲಿಂಗಪ್ಪನವರು. ವರ್ಣ ಶಿಲ್ಪಿ ಕೆ. ವೆಂಕಟಪ್ಪನವರ ಬಳಿಯಲ್ಲಿ ಚಿತ್ರಕಲೆ ಕಲಿಯಬೇಕೆಂದು ಬಯಸಿದರೂ ಯಾರಿಗೂ ಹೇಳಿಕೊಡದ ಅವರು ಗುಣ, ನಂತರದಲ್ಲಿ ಸಿದ್ಧಲಿಂಗಸ್ವಾಮಿಗಳವರಲ್ಲಿ ಚಿತ್ರ ಮತ್ತು ಶಿಲ್ಪಕಲೆಯನ್ನು ಕಲಿತದ್ದು, ನವದೆಹಲಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ವರ್ಷದ ಅಂಗವಾಗಿ ನಡೆದ ಕಲಾ ಪ್ರದರ್ಶನದಲ್ಲಿ ಕರ್ನಾಟಕದ ಪರವಾಗಿ ಭಾಗವಹಿಸಿದ ಏಕೈಕ ಮಹಿಳಾ ಶಿಲ್ಪಿ ಎಂಬ ಹೆಗ್ಗಳಿಕೆಗೆ ಪಾತ್ರರಾದದ್ದು, ಇಂದಿರಾಗಾಂಧಿ ಯವರು ಮೆಚ್ಚುಗೆ ಸೂಚಿಸಿದ್ದು, ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಎಂ.ಟಿ.ವಿ. ಆಚಾರ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಪಡೆದ ಕಲಾಸಾಧಕಿಯ ಕೊನೆಯ ಜೀವನ ಒಂಟಿಯಾಗಿ ಹೇಗೆ ಅವಸಾನಗೊಂಡಿತೆಂಬುದರ ಪಾತ್ರ ಚಿತ್ರಣವಿದೆ.

ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಕಾಂಗ್ರೆಸ್ ಕಾರ್ಯಕರ್ತೆಯಾಗಿದ್ದು, ಆಕೆ ತನ್ನ ಆಸ್ತಿಯ ಬಹುಭಾಗವನ್ನು ಹೆಣ್ಣು ಮಕ್ಕಳ ಕಲ್ಯಾಣಕ್ಕಾಗಿ ದಾನಮಾಡಿ, ಬದುಕಿದ ಜೀವ. ಶಾಲೆಗೆ ಹೋಗದಿದ್ದರೂ ಕನ್ನಡ, ಇಂಗ್ಲೀಷ್, ಹಿಂದಿ ಬಲ್ಲ ಇವರು ತಾನು ಸರಸ್ವತಿಯ ಪುತ್ರಿ ಎಂದೇ ಭಾವಿಸುತ್ತಿದ್ದರು, ಸರಸ್ವತಿಯ ಚಿತ್ರವನ್ನು ಬರೆದು ಅದನ್ನು ಮುದ್ರಿಸಿ ಎಲ್ಲರಿಗೂ ಕೊಡುತ್ತಿದ್ದರು. ಈ ಕಲಾವಿದೆಯ ಬದುಕನ್ನು ಅಕ್ಷರಗಳ ಮೂಲಕ ಒಡಮೂಡಿಸಿದ್ದಾರೆ.

೮. ಅರಮನೆಯ ಚಿತ್ರಕಲಾವಿದರು : ಲೇಖನಗಳಲ್ಲಿ ಮೈಸೂರು ಅರಮನೆಯ ಚಿತ್ರಕಲಾವಿದರ ಸಮಗ್ರ ನೋಟದಲ್ಲಿ ಕೇಶವಯ್ಯ, ವೈ. ನಾಗರಾಜು, ಆರ್.ಎಸ್. ನಾಯಿಡು, ವೈ. ಸುಬ್ರಮಣ್ಯ ರಾಜು, ಸಿದ್ಧಲಿಂಗ ಸ್ವಾಮಿಗಳು, ಶಂಕರರಾಜು, ಕೆ. ವೆಂಕಟಪ್ಪ, ಎಸ.ಆರ್. ಅಯ್ಯಂಗಾರ್, ಮಧುಗಿರಿ ರಾಮು, ಎಸ್.ಎನ್. ಸ್ವಾಮಿ, ಅಬ್ದುಲ್ ಅಜೀಜ್, ಲಕ್ಷ್ಮಣ ಕೃಷ್ಣರಾವ್, ಗೋಪಾಲಯ್ಯ, ಇಂದು ನಮ್ಮೊಡನೆ ಇರುವ ಹಿರಿಯ ಕಲಾಚೇತನ ರಾಮ ನರಸಯ್ಯ ಇವರೆಲ್ಲರೂ ಬರೆದ ಚಿತ್ರಗಳ ವಿವರಗಳನ್ನು ಅರಮನೆಯಲ್ಲಿ ಎಲ್ಲೆಲ್ಲಿ ಪ್ರದರ್ಶನಗೊಂಡಿವೆ ಎಂಬುದರ ಬಗ್ಗೆ ಸಮಗ್ರ ಮಾಹಿತಿಯನ್ನು ಲೇಖನದಲ್ಲಿ ಕೊಡುತ್ತಾರೆ. ಸರಕಾರಿ ಗ್ಯಾಲರಿ, ಖಾಸಗಿ ಗ್ಯಾಲರಿ ಮತ್ತು ಜಗನ್ಮೋಹನ ಅರಮನೆಯಲ್ಲಿರುವ ಕಲಾಕೃತಿಗಳನ್ನು ಬರೆದವರ ಸಂಕ್ಷಿಪ್ತ ಮಾಹಿತಿ ಇಲ್ಲಿ ಒದಗಿಸಿದ್ದಾರೆ.

೯. ಶಿಲೆ ದೇವರ ಸೃಷ್ಟಿ ಕಲೆ ಶಿಲ್ಪಿಯ ಸೃಷ್ಟಿ : ಈ ಲೇಖನ ರಾಷ್ಟ್ರೀಯ ಮಟ್ಟದ ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿದವರ ಸಾಧನೆಯ ಮಾಹಿತಿ ಒದಗಿಸುತ್ತದೆ. ದೇವತಾ ಶಿಲ್ಪಗಳನ್ನೇ ನೋಡಿದ್ದ ಕಣ್ಣಿಗೆ ಹೊಸತನ್ನು ಕಂಡ ಅನುಭವ. ಆಧುನಿಕ ಯಂತ್ರ ಸಲಕರಣೆಗಳಾದ ಗ್ರೈಂಡಿಂಗ್, ಕಟ್ಟಿಂಗ್, ಡ್ರೆಸಿಂಗಂ, ಟೂಲ್‌ಗಳನ್ನು ಬಳಸಿ ಶೀಘ್ರಗತಿಯಲ್ಲಿ ನವ್ಯ ಶಿಲ್ಪಗಳನ್ನು ಮಾಡಿದವರ ಮನೋಭಾವನೆಗಳನ್ನು ಬಿಂಬಿಸುತ್ತಾರೆ. ಲೇಖಕರಾದ ಶಿವಲಿಂಗಪ್ಪನವರು. ಕಲ್ಲಿನ ಮಾಧ್ಯಮಕ್ಕಿಂತ ಹೊಸದಾದ ಮರಳಚ್ಚಿನ ಶಿಲ್ಪ ಮಾಡುವ ಮೂಲಕ ಶಿಲ್ಪ ಶಿಬಿರದಲ್ಲಿ ತಮ್ಮ ಹೊಸತನವನ್ನು ರಾಷ್ಟ್ರೀಯತೆಗೊಳಿಸಿದ್ದಾರೆ.

ಹಾಸ್ಯ ಲೇಖನಗಳು : ಪಾಟೀಲರ ಪಂಕ್ಚೇರು, ಗೌಡಸಾನಿಯ ಗಮ್ಮತ್ತು ಮತ್ತು ಮುತ್ತಣ್ಣನ ಮುದ್ರಣಾಲಯ ಎಂಬ ಇವರ ಹಾಸ್ಯ ಲೇಖನಗಳು ಪ್ರಕಟವಾಗಿವೆ.

ಇವರು ಬರೆದ ಕವನ ಚಂಪಾರವರ ಸಂಕ್ರಮಣ ಸ್ಪರ್ಧೆಯಲ್ಲಿ ಆಯ್ಕೆಯಾಗಿ ಪ್ರಕಟವಾಗಿದೆ. ರಾಜ್ಯದ ಹಲವಾರು ಕಡೆ ಬಹುಮಾನ ಬಂದಿದೆ. ಚುಟಕ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ರಾಜ್ಯದ ಪ್ರಮುಖ ಪತ್ರಿಕೆಗಳಾದ ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಉದಯವಾಣಿ, ವಾರಪತ್ರಿಕೆಗಳಾದ ಸುಧಾ, ತರಂಗ, ಕರ್ಮವೀರಗಳಲ್ಲಿ ಒಂದಲ್ಲಾ ಒಂದು ಲೇಖನಗಳು ನಿರಂತರವಾಗಿ ಪ್ರಕಟವಾಗುತ್ತಾ ಬರುತ್ತಿದೆ. ಇದು ಅವರ ಸಾಹಿತ್ಯ ಚಟುವಟಿಕೆಯನ್ನು ಗುರುತಿಸಬಹುದಾದ ಅಂಶ.

೨. ಪ್ರಕಟಿತ ಗ್ರಂಥಗಳು

ಶಿವಲಿಂಗಪ್ಪನವರು ಗ್ರಂಥಗಳನ್ನು ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳೆಂದು ವಿಂಗಡಿಸಿಕೊಂಡು ಚರ್ಚಿಸಬಹುದಾಗಿದೆ. ಇಲ್ಲಿ ಪ್ರಕಟಿತ ಗ್ರಂತಗಳನ್ನು ಅತ್ಯಂತ ಸ್ಥೂಲವಾಗಿ ವಿವೇಚಿಸಲಾಗಿದೆ.

೧. ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು

೨. ಸಾತ್ವಿಕ ಶಿಲ್ಪಿ ನಾಗೇಂದ್ರ ಸ್ಥಪತಿ

೩. ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು : ಚಿತ್ರ ಸಂಪುಟ

೪. ಲೋಹ ಶಿಲ್ಪಿ ನೀಲಕಂಠಚಾರ್

೫. ಆದರ್ಶ ಕಲಾಶಿಕ್ಷಕ ಕಾಳಪ್ಪ

೬. ಕಲಾವಿದ ಎಚ್.ಎಸ್. ಇನಾಮತಿ

೭. ಲೋಹ ಶಿಲ್ಪಿ ವೆಂಕಟಾಚಾರ್

೮. ಕರ್ನಾಟಕದಲ್ಲಿ ಚಿತ್ರಕಲಾ ಬೆಳವಣಿಗೆ : ಒಂದು ಸಮೀಕ್ಷೆ

೯. ವಚನ ಸಾಹಿತ್ಯಕ್ಕೆ ಚಿತ್ರಕಾರರ ಕೊಡುಗೆ

೧೦. ಶಿಲಾ ಶಿಲ್ಪಿ ಬಸವಣ್ಣ

೧೧. ರೇಖಾಚಿತ್ರ ನಿಪುಣ ಮ.ಈ. ಗುರು

೧೨. ಮಹಿಳಾ ಶಿಲ್ಪಿ ಕಲಾವಿದೆ ಸುಭಾಷಿಣಿ ದೇವಿ

೧೩. ಕಲಾಶಿಕ್ಷಕ ಸಾಧಕ ಬಸವಣ್ಣಚಾರ್

೧೪. ವಚನಗಳಿಗೆ ದೃಶ್ಯರೂಪ

೧೫. ಬಹುಮುಖಿ ಸಂ : (ಅಭಿನಂದನಾ ಗ್ರಂಥ)

೧. ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು : ಅನ್ವೇಷಣೆಯೇ ಗುರಿಯಾಗುಳ್ಳ ಶಿವಲಿಂಗಪ್ಪನವರ ಮೊದಲ ಪುಸ್ತಕ ಪ್ರಕಟವಾದದ್ದು ಸಿದ್ಧಲಿಂಗಸ್ವಾಮಿಗಳ ಬಗ್ಗೆ (೧೯೯೯). ಇದರಲ್ಲಿ ಶಿಲ್ಪ ಸಿದ್ಧಾಂತಿ ಎಂಬ ಅಂಕಿತವನ್ನು ತಮ್ಮ ಹೆಸರಿನ ಹಿಂದೆ ಅಂಟಿಸಿಕೊಂಡಿದ್ದ ಕಾರಣವೋ ಏನೋ ನಮ್ಮ ಇದುವರೆಗಿನ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಲೀ, ಸದಸ್ಯರಾಗಲೀ ಅಥವಾ ಕಲೆಯ ಬಗ್ಗೆ ಬರೆಯುವ ಇತರೆ ಲೇಖಕರಾಗಲೀ ಯಾರೂ ಗಮನಿಸದೇ ಅವರೋರ್ವ ಉತ್ತಮ ಕಲಾವಿದ ಎಂಬುದನ್ನೇ ತಿಳಿಯಲಿಲ್ಲವೆಂಬ ವಿಷಾದದ ನುಡಿ ಉಲ್ಲೇಖಿಸುತ್ತಾರೆ.

ಅವರ ಸಮಕಾಲೀನರೆ ಆದ ಕೆ. ವೆಂಕಟಪ್ಪನವರ ಬಗ್ಗೆ ಬಂದಷ್ಟು ಪ್ರಚಾರದಲ್ಲಿ ಶತಾಂಶ ಒಂದರಷ್ಟು ಸಹ ಇವರ ಬಗ್ಗೆ ಬರಲಿಲ್ಲ. ಇದು ನಮ್ಮ ಕಲಾವಿದರಲ್ಲಿನ ಅವಜ್ಞೆಯನ್ನು ಬಿಂಬಿಸುತ್ತದೆ. ಈರ್ವರೂ ಮೈಸೂರು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿದ್ದ ಕಲಾವಿದರು (ಸ್ವಾಮಿಗಳ ಜನನ ೧೮೮೫, ಮರಣ

೧೯೫೨; ಕೆ. ವೆಂಕಟಪ್ಪನವರ ಜನನ, ೧೮೮೬, ಮರಣ ೧೯೬೫) ಸ್ವಾಮಿಗಳು ಕಲಾವಿದ, ಶಿಲ್ಪಿ ಮತ್ತು ಸಂಸ್ಕೃತ ಪಾಂಡಿತ್ಯವುಳ್ಳ ಆಗಮ ಶಾಸ್ತ್ರ ವಿಶಾರದರು. ಕೆ. ವೆಂಕಟಪ್ಪನವರು ಕಲಾವಿದ, ವೈಣಿಕ ಮತ್ತು ಶಿಲ್ಪಿ.

ಸ್ವಾಮಿಗಳ ಕಲಾರಚನೆಯ ದೇವ ದೇವತೆಗಳನ್ನು ಕುರಿತಾದ ಚಿತ್ರ ಪಟಗಳು ಮೈಸೂರು ಅರಮನೆಯ ದರ್ಬಾರ್ ಹಾಲ್‌ನಲ್ಲಿ ಈಗಲೂ ಕಂಗೊಳಿಸುತ್ತಿವೆ. ರಾಜರಾಜೇಶ್ವರಿ, ನವದುರ್ಗಾದೇವಿ, ಭುವನೇಶ್ವರಿ, ಚಾಮುಂಡೇಶ್ವರಿ, ಕಾಳಿಕಾದೇವಿ, ಲಕ್ಷ್ಮೀ, ಸರಸ್ವತಿ, ಗಾಯತ್ರಿ ಇವು ಅವರ ಅಮೂಲ್ಯ ಕಲಾಕೃತಿಗಳು ವೆಂಕಟಪ್ಪನವರದು, ಊಟಿಯ ನಿಸರ್ಗದ ಜಲವರ್ಣಚಿತ್ರಗಳು. ಈರ್ವರೂ ಕಲಾವಿದರನ್ನು ಕುರಿತು ತೌಲನಿಕ ಅಧ್ಯಯನ ಮಾಡಿದರೇ ಒಂದು ಗ್ರಂಥ ರಚಿಸಬಹುದಾದಷ್ಟು ಸಾಹಿತ್ಯ ಸಿಗುತ್ತದೆನ್ನುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿಕೊಂಡು ಬರೆದ ಲೇಖನದಲ್ಲಿ ಆ ಶಕ್ತಿದೇವತೆಗಳ ಎಲ್ಲಾ ಲಕ್ಷಣಗಳನ್ನು ಅಂದರೆ ವರ್ಣ, ವಸ್ತ್ರ, ನಿಂತ ನಿಲುವುಗಳು, ಕುಳಿತ ಆಸನಗಳು, ಮುಖ ಲಕ್ಷಣಗಳು, ಹಿನ್ನೆಲೆಯ ಪ್ರಭಾವಳಿ, ಆಯಾಯ ದೇವತೆಗೆ ಅನುಗುಣವಾದ ಪರಿವಾರ ದೇವತೆಗಳು, ದಿಕ್ಪಾಲಕರು, ವಾಹನಗಳು ಇವೆಲ್ಲವನ್ನು ಶಿಲ್ಪಶಾಸ್ತ್ರ ಮತ್ತು ಆಗಮಶಾಸ್ತ್ರದ ಹಿನ್ನೆಲೆಯಲ್ಲಿ ಹೇಗೆ ಚಿತ್ರ ರಚಿಸಿದ್ದಾರೆಂಬುದನ್ನುಪ ಸವಿವರವಾಗಿ ವಿವರಿಸುತ್ತಾ ಹೋಗುತ್ತಾರೆ. ತಮ್ಮ ಲೇಖನಕ್ಕೆ ಆಧಾರವನ್ನು ಕಾಶ್ಯಪ ಶಿಲ್ಪಶಾಸ್ತ್ರದ ಮೂಲಕ ನೀಡುತ್ತಾ ಹೋಗುತ್ತಾರೆ. ಹಲವಾರು ದೇವತಾ ಚಿತ್ರಗಳನ್ನು ಅರಮನೆಗೆ ಮಾತ್ರವಲ್ಲದೆ ಕ್ಯಾಲೆಂಡರ್‌ಗಾಗಿ ಬರೆದುಕೊಟ್ಟಿರುವುದನ್ನು ಉಲ್ಲೇಖಿಸುತ್ತಾರೆ. ಶಿಲ್ಪಗಳನ್ನು ಕುರಿತು ಬರೆಯುವಾಗಲು ಸಹ ಎಲ್ಲೆಲ್ಲೂ ಕಂಡುಬರುವ ಒಮ್ಮುಖದ ಶಿಲ್ಪಗಳಿಗಿಂತ ಸ್ವಾಮಿಗಳು ಮಾಡಿರುವ ದ್ವಿಮುಖ ಅಂದರೆ ಎರಡು ಕಡೆಯೂ ಒಂದೇ ತೆರನಾಗಿ ಕಾಣುವಂತೆ ಮಾಡಿರುವುದನ್ನು ಪತ್ತೆ ಹಚ್ಚಿ ಅವುಗಳ ವಿವರ ನೀಡುತ್ತಾರೆ.

ಸ್ವಾಮಿಗಳಲ್ಲಿನ ಪಂಚಭಾಷಾ ಪಾಂಡಿತ್ಯವನ್ನು ಅದರಲ್ಲೂ ವಿಶೇಷವಾಗಿ ಸಂಸ್ಕೃತದಲ್ಲಿದ್ದ ಅಗಾಧ ಜ್ಞಾನದ ಫಲವಾಗಿ ಸಂಸ್ಕೃತ ವೇದಗಳನ್ನು ಕನ್ನಡಕ್ಕೆ ತರುವ ಅವರ ಮೊದಲ ಪ್ರಯತ್ನವನ್ನು ವಿವರಿಸುತ್ತಾರೆ. ಮೈಸೂರನ್ನಾಳಿದ ಮಹಾರಾಜರಲ್ಲಿ ಕೊನೆಯವರಾದ ಶ್ರೀ ಜಯಚಾಮರಾಜ ಒಡೆಯರ್ ಅವರಿಗೆ ರಾಜುಗುರವಾಗಿ, ಶಿಲ್ಪ ಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಪುಸ್ತಕ ಪ್ರಕಟಿಸುವುದಕ್ಕೆ ಕಾರಣವಾಗಿರುವುದನ್ನು, ಹಾಗೆಯೆ ತಮ್ಮ ಶ್ರೀ ಗುರುಕುಲದಿಂದ ಪ್ರಕಟಿಸಿದ ವಿವರಗಳನ್ನು ನೀಡುತ್ತಾರೆ. ಇವರ ಪ್ರಯತ್ನದ ಫಲವಾಗಿ 'ಋಗ್ವೇದ ಸಂಹಿತಾ' ಎಂಬ ಕನ್ನಡಾನುವಾದ ಪುಸ್ತಕ ಪ್ರಪ್ರಥಮವಾಗಿ ಮಹಾರಾಜರ ಗ್ರಂಥಮಾಲಾದಿಂದ ಬರಲು ಕಾರಣವಾಯಿತೆಂಬುದರ ವಿವರ ನೀಡುತ್ತಾರೆ. ಪುರಾವೆ ಒದಗಿಸುತ್ತಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಕಟಿಸಿರುವ ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳು ಎಂಬ ಪುಸ್ತಕದಲ್ಲಿ ಇನ್ನಿತರ ಅವರ ಶಿಷ್ಯರು ಬರೆದಿರುವರಾದರೂ ಶಿವಲಿಂಗಪ್ಪನವರು ವಿಷಯ ಸಂಗ್ರಹಿಸಿದಷ್ಟು ಇತರರಲ್ಲಿ ಕಂಡುಬರುವುದಿಲ್ಲ. ಸ್ವಾಮಿಗಳ ಬಗ್ಗೆ ಯಾರೇ ಬರೆಯಬೇಕೆಂದರೂ ಶಿವಲಿಂಗಪ್ಪನವರು ಸಂಶೋಧಿಸಿ ಬರೆದ ಲೇಖನ ಮತ್ತು ಕಲಾಕೃತಿಗಳೇ ಆಧಾರವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ತೌಲನಿಕ ಅಧ್ಯಯನ ಸೇರಿದಂತೆ ಪುಸ್ತಕದ ಪುಟ ಮಿತಿಯ ಕಾರಣದಿಂದ ಬರೆಯಲಾಗದೆ ಬಿಟ್ಟ

ಸ್ವಾಮಿಗಳ ಅನೇಕ ವಿಚಾರವನ್ನು ವಿವರವಾಗಿ ಪತ್ರಿಕೆಗಳಿಗೆ ಬರೆದಿದ್ದಾರೆ. ಮುಖ್ಯವಾಗಿ ಲಲಿತಕಲಾ ಅಕಾಡೆಮಿ ಪ್ರಕಟಿಸುವ ಕಲಾವಾರ್ತೆಗಾಗಿ ಘಟ ಚಿತ್ರ ರಚನೆಯಲ್ಲಿ ರಾಜಾ ರವಿವರ್ಮ ಮತ್ತು ಸಿದ್ಧಲಿಂಗಸ್ವಾಮಿಗಳು ಎಂಬ ತೌಲನಿಕ ಬರಹ ಬರೆದಿದ್ದಾರೆ. ಒಂದೇ ರಾಜಾಶ್ರಯದಲ್ಲಿದ್ದ ಈರ್ವರು ಪ್ರತಿಭಾನ್ವಿತ ಕಲಾವಿದರು ಎಂಬ ಮತ್ತೊಂದು ಲೇಖನದಲ್ಲಿ ಸಿದ್ಧಲಿಂಗಸ್ವಾಮಿಗಳು ಮತ್ತು ಕೆ. ವೆಂಕಟಪ್ಪನವರುಗಳ ಕಲೆಯ ತೌಲನಿಕ ಅಧ್ಯಯನವನ್ನು ಮಾಡಿ ಹಸ್ತಪ್ರತಿ ಸಿದ್ಧಪಡಿಸಿದ್ದು ಅದು ಆಗ ಮುದ್ರಣಕ್ಕಾಗಿ ಕಾಯುತ್ತಿದೆ.

೨. **ಸಾತ್ವಿಕ ಶಿಲ್ಪ ನಾಗೇಂದ್ರ ಸ್ಥಪತಿ :** ಸ್ಥಪತಿಗಳ ಶಿಷ್ಯರಾದ ಶಿವಲಿಂಗಪ್ಪನವರು ತಮ್ಮ ಗುರುವಿನ ಬಗ್ಗೆ ಹಾಗೂ ಅವರು ನಡೆಸುತ್ತಿದ್ದ ಗುರುಕುಲ ವಾತಾವರಣದ ಹಿನ್ನೆಲೆಯನ್ನು ವಿವರಿಸಿದ್ದಾರೆ. ಸ್ಥಪತಿಯವರು ಕಲಾವಿದರಾಗಿ, ಶಿಲ್ಪಿಯಾಗಿ ಅವರ ತಂದೆ ಸಿದ್ಧಲಿಂಗಸ್ವಾಮಿಗಳ ಜೊತೆಯಲ್ಲಿ ಕೆಲಸ ಮಾಡಿದವರು. ಪರಮೇಶ್ವರನ ಪಂಚವಿಂಶತಿ ಲೀಲೆಗಳನ್ನು ಕುರಿತು ಶಿಲ್ಪಗಳನ್ನು ಮೈಸೂರಿನ ಕಾಮಕಾಮೇಶ್ವರಿ ದೇವಾಲಯದಲ್ಲಿ ಕೆತ್ತಿರುವ ಹಾಗೂ ಅತ್ಯುನ್ನತ ಕುಸುರಿ ಕೆಲಸದಿಂದ ಶಾಸ್ತ್ರೋಕ್ತವಾಗಿ ಕೆತ್ತಿರುವ ನಂದಿ ಮೂರ್ತಿಯ ಕೆತ್ತನೆಯಲ್ಲಿ ಸ್ಥಪತಿಯವರ. ಪಾತ್ರ ಹಿರಿದು, ಸ್ಮರಿಸುವಂತಹದ್ದು ಎನ್ನುತ್ತಾರೆ. ಮತ್ತೊಂದು ಬೆಂಗಳೂರಿನ ವಿಧಾನಸೌಧದ ವಾಸ್ತುಶಿಲ್ಪಕ್ಕೆ ಕಲಾತ್ಮಕ ರೂಪ ನೀಡಿದವರು ಸ್ಥಪತಿಯವರು. ಇಂದು ಕಾಣುವ ಸೌದ ಗೋಪುರದ ಆಕೃತಿ, ಸೌಧದ ಒಳಗೆ ಕಾಣುವ ಬಗೆಬಗೆಯ ಚಿತ್ರಗಳು, ಕಂಭಗಳಲ್ಲಿ ಕಲಾತ್ಮಕತೆ, ಇವೆಲ್ಲ ಸ್ಥಪತಿಯವರ ಸಾಧನೆಯ ಫಲ. ಜೊತೆಗೆ ಅರಮನೆಗಾಗಿ ಮಾಡಿದ ಚಿತ್ರಗಳು ಇತ್ಯಾದಿ ವಿವರಗಳನ್ನು ಆ ಪುಸ್ತಕದಲ್ಲಿ ದಾಖಲಿಸಿದ್ದಾರೆ.

೩. **ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು : ಚಿತ್ರ ಸಂಪುಟ :** ಸಿಲ್ಪಿ ಶ್ರೀ ಸಿದ್ಧಲಿಂಗಸ್ವಾಮಿಗಳ ಪ್ರಮುಖ ಕಲಾಕೃತಿಗಳು ಈ ಚಿತ್ರಸಂಪುಟದಲ್ಲಿ ಮುದ್ರಣಗೊಂಡು ಸಂಗ್ರಹಗೊಂಡಿವೆ.

೪. **ಲೋಹ ಶಿಲ್ಪಿ ನೀಲಕಂಠಾಚಾರ್ :** ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರಾಗಿದ್ದ ನೀಲಕಂಠಾಚಾರ್ಯರವರನ್ನು ಕುರಿತು ಬರೆದಿರುವ ಪುಸ್ತಕ, ಶಿಲ್ಪಿಯ ವಿದ್ಯಾಭ್ಯಾಸ ಸಾಧನೆ, ಪಡೆದಿರುವ ಪ್ರಶಸ್ತಿ, ಗೌರವ ಇತ್ಯಾದಿ ಸಾಧಾರಣ ವಿವರಗಳಿಗಿಂತ ವಿಭಿನ್ನ ರೀತಿಯಲ್ಲಿ ಆಲೋಚಿಸಿ, ಮುಂದಿನ ತರುಣ ಪೀಳಿಗೆಗೆ ಲೋಹ ಶಿಲ್ಪವೆಂದರೇನು ಯಾವ ಯಾವ ಲೋಹಗಳನ್ನು ಬಳಕೆ ಮಾಡುತ್ತಾರೆ ಎಂಬುದನ್ನು ಈ ರೀತಿ ತಿಳಿಸಿದ್ದಾರೆ.

೧. ಉತ್ಸವ ಮೂರ್ತಿ ಮತ್ತು ಮೂಲ ಮೂರ್ತಿಗಳಿಗೆ ಇರುವ ವ್ಯತ್ಯಾಸ.

೨. ಉತ್ಸವ ಮೂರ್ತಿಗೆ ಉಪಯೋಗಿಸುವ ಲೋಹಕ್ಕೂ ಸ್ಮಾರಕ ವಿಗ್ರಹ ಮಾಡುವುದಕ್ಕೆ ಉಪಯೋಗಿಸುವ ಲೋಹಕ್ಕೂ ಇರುವ ವ್ಯತ್ಯಾಸ.

೩. ಪ್ರಭಾವಳಿ ಮಾಡುವ ವಿಧಾನ

೪. ಮೇಣ ಕಟ್ಟುವ ಕಲೆ

೫. ಬೆಸುಗೆಯ ವಿಧಾನ

೬. ಪಾಲಿಶ್ ಮಾಡುವ ಕ್ರಮ

[illegible]

೭. ನಿತ್ಯ ಉಪಯೋಗ ಮಾಡುವ ಪೂಜಾ ಪರಿಕರಗಳು ಮತ್ತು ದೇವರುಗಳನ್ನು ಮಾಡುವ ವಿಧಾನಕ್ಕೂ ಉತ್ತಮವಾದ ಒಂದೇ ವಿಗ್ರಹ ಮಾಡುವ ಕ್ರಮಕ್ಕೂ ಇರುವ ವ್ಯತ್ಯಾಸ.

೮. ರೇಖಿನ ಕೆಲಸ ಇಂತಹ ಅನೇಕ ವಿಷಯಗಳನ್ನು ಅವರ ಸಂದರ್ಶನದ ಮೂಲಕ ಸಂಗ್ರಹಿಸಿ ದಾಖಲಿಸಿದ್ದಾರೆ.

೫. ಆದರ್ಶ ಕಲಾಶಿಕ್ಷಕ ಕಾಳಪ್ಪ : ರೋಮ್ಯಾಂಟಿಕ್ ಶೈಲಿಯ ಚಿತ್ರಕಲಾವಿದರಲ್ಲಿ ಮೈಸೂರಿನ ಕಾಳಪ್ಪನವರು ಒಬ್ಬರು. ಅವರ ಜೀವನ, ಕಲಾಸಾಧನೆ, ಪ್ರಶಸ್ತಿ, ಇತ್ಯಾದಿ ಮಾಹಿತಿಗಳೊಡನೆ ಒಂದು ಕಲಾ ಶಾಲೆಯನ್ನು ಕಟ್ಟುವುದು, ಹಾಗೆಯೇ ಅದಕ್ಕಾವ ಅನುದಾನವಿಲ್ಲದಿದ್ದಲ್ಲಿ ಮುನ್ನಡೆಸುವುದು ಎಷ್ಟು ಕಷ್ಟ! ಆ ದಿಸೆಯಲ್ಲಿ ಕಾಳಪ್ಪನವರು ಪಟ್ಟ ಶ್ರಮದ ಪಕ್ಷಿನೋಟವಿದೆ.

ರಮ್ಯ ಶೈಲಿಯ ಅವರ ಚಿತ್ರಗಳ ರಚನಾ ತಂತ್ರದ ಬಗ್ಗೆ ಹಾಗೂ ಇಂಪ್ರೆಷ್‌ನಿಷ್ಟ್ ಶೈಲಿಯ ನಿಸರ್ಗ ಚಿತ್ರರಚನಾ ವಿಧಾನದ ಬಗ್ಗೆ ಮಾಹಿತಿಯನ್ನು ಸಹ ಲೇಖನದಲ್ಲಿ ಒದಗಿಸಿದ್ದಾರೆ.

೬. ಕಲಾವಿದ ಎಚ್.ಎಸ್. ಇನಾಮತಿ : ೮೦ರ ಇಳಿ ವಯಸ್ಸಿನಲ್ಲಿಯೂ ಸೈಕಲ್ ಸವಾರಿ ಮಾಡಿಕೊಂಡೇ ಚಿತ್ರಕಲಾವಿದರ ಮಹಾಪರಿಷತ್ತು ಎಂಬ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ಆ ಸಂಸ್ಥೆಯ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಮಾಡಿದ ಅನುಪಮ ಸೇವೆ, ಮಕ್ಕಳಿಗೆ ಚಿತ್ರ ಸ್ಪರ್ಧೆ, ಪ್ರದರ್ಶನ ಏರ್ಪಡಿಸುವಲ್ಲಿ ಅವರ ಪಾತ್ರ, ಹೆಚ್ಚಿನ ವರ್ಣಗಳನ್ನು ಬಳಸದೇ ಮಿತವಾದ ವರ್ಣಗಳನ್ನೇ ಬಳಸಿ ನಿಸರ್ಗ ದೃಶ್ಯ ರಚನೆ ಮಾಡುತ್ತಿದ್ದ ವಿಧಾನ, ವಿದ್ಯಾರ್ಥಿಗಳೊಡನೆ ಅತ್ಯಂತ ಸರಳವಾಗಿ ಹೊಂದಿಕೊಳ್ಳುತ್ತಿದ್ದ ಅವರ ನಡೆ, ನುಡಿ, ಮಕ್ಕಳನ್ನು ಸ್ನೇಹಿತರಂತೆ ಕಾಣುವ ಗುಣ, ಕಲಾಸಾಧನೆ, ಭಿತ್ತಿ ಚಿತ್ರರಚನೆ ಇತ್ಯಾದಿ. ವೈಯಕ್ತಿಕ ಹಾಗೂ ಸಾರ್ವತ್ರಿಕ ಕಲಾ ಸೇವೆಯ ಬಗ್ಗೆ ಅಂಕಿ ಅಂಶ ಸಹಿತ ಬರೆದಿದ್ದಾರೆ. ಈ ಎರಡೂ ಪುಸ್ತಕಗಳನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಕಟಿಸಿದೆ.

೭. ಲೋಹ ಶಿಲ್ಪಿ ವೆಂಕಟಾಚಾರ್ : ಶಿಲ್ಪಕಲಾ ಅಕಾಡೆಮಿಗಾಗಿ ಸಿದ್ಧಪಡಿಸಿರುವ ಈ ಪರಿಚಯ ಪುಸ್ತಕದಲ್ಲಿ ಈ ಹಿಂದೆ ಲೋಹಶಿಲ್ಪಿ ನೀಲಕಂಠಾಚಾರ್ಯರವರ ಪರಿಚಯ ಪುಸ್ತಕದಲ್ಲಿ ಸ್ಥಳಾಭಾವದಿಂದ ಹೇಳಲಾರದೆ ಬಿಟ್ಟ ವಿಷಯಗಳನ್ನು ಕುರಿತು ಬರೆದಿದ್ದಾರೆ.

೧. ಎರಕ ಹುಯ್ಯುವ ವಿಧಾನ.

೨. ದೇವತಾ ವಾಹನಗಳನ್ನು ಮಾಡುವ ವಿಧಾನ.

೩. ರೂಪ ಶಿಲ್ಪ ಮಾಡುವ ಕ್ರಮ.

೪. ಮೇಣದ ವಿಗ್ರಹ ಅದರ ಅವಶ್ಯಕತೆ.

೫. ದೇವರುಗಳಿಗೆ ಮುಖವಾಡ ಮಾಡುವ ವಿಧಾನ.

೬. ಚಿನ್ನ ಬೆಳ್ಳಿಯ ರೇಖಿನ ಕೆಲಸಕ್ಕೂ ಇತರ ಲೋಹದ ರೇಖಿನ ಕೆಲಸಕ್ಕೂ ಇರುವ ವ್ಯತ್ಯಾಸ.

೭. ರೇಖಿನ ಕೆಲಸಕ್ಕೆ ಬೇಕಾದ ಸಾಧನ ಸಲಕರಣೆಗಳು.

೮. ಲೋಹ ಶಿಲ್ಪಕ್ಕೆ ಹೆಸರಾದ ಮಂಡ್ಯ ಜಿಲ್ಲೆಯ ನಾಗಮಂಗಲದ ಶಿಲ್ಪಗಳನ್ನು ಕುರಿತ ವಿವರ ಇತ್ಯಾದಿ.

೮. ಕರ್ನಾಟಕದಲ್ಲಿ ಚಿತ್ರಕಲಾ ಬೆಳವಣಿಗೆ ಒಂದು ಸಮೀಕ್ಷೆ : ಶಿರೋನಾಮೆಯಲ್ಲಿ ಹೇಳಿರುವಂತೆ ಆದಿ ಮಾನವ ಕಾಲದಿಂದ ಆರಂಭಿಸಿ ಇಂದಿನ ಅಪೂರ್ವ ಕಲಾ ಬೆಳವಣಿಗೆಯಾದ ಕಂಪ್ಯೂಟರ್ ಗ್ರಾಫಿಕ್ಸ್‌ನವರೆಗೆ ಯಾವ ಹಂತದಲ್ಲಿ ಸ್ವರೂಪದಲ್ಲಿ, ಯಾರ ಕಾಲದಲ್ಲಿ ಹೇಗೆ ಬದಲಾವಣೆಗೊಂಡಿತು. ಇವುಗಳಿಗೆ ಸಂಬಂಧಿಸಿದಂತೆ ಪ್ರೇರಣೆ, ಧೋರಣೆ, ಅನುಸರಣೆ, ಪರಿಣಾಮ, ಇವೆಲ್ಲವುಗಳನ್ನೊಳಗೊಂಡಂತೆ ಉತ್ತಮ ಮಾಹಿತಿ ನೀಡಿದ್ದಾರೆ. ಇವರು ಕಲಾ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾಗಿದೆ ಎನ್ನಬಹುದು.

೯. ವಚನ ಸಾಹಿತ್ಯಕ್ಕೆ ಚಿತ್ರಕಾರರ ಕೊಡುಗೆ : ಈ ಪುಸ್ತಕದಲ್ಲಿ ೧೯ನೇ ಶತಮಾನದಿಂದೀಚೆಗೆ ಯಾರು ಯಾವ ಸ್ವರೂಪದಲ್ಲಿ ಚಿತ್ರ ರಚಿಸಿದ್ದಾರೆ? ಅವುಗಳ ಲಕ್ಷಣಗಳೇನು? ಎಲ್ಲಿ ಸಂಗ್ರಹಿತವಾಗಿವೆ? ಅವರುಗಳಿಗೆ ಸಹಕಾರ ಸಿಕ್ಕಿತೆ? ಸ್ವಯಂ ಪ್ರೇರಿತ ಚಿತ್ರಗಳೇ? ಎಂಬೆಲ್ಲಾ ವಿಚಾರಗಳನ್ನು ಅವರವರ ಬದುಕಿನ ಸಮಗ್ರತೆ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

೧೦. ಶಿಲಾ ಶಿಲ್ಪಿ ಬಸವಣ್ಣ : ಈ ಪುಸ್ತಕದಲ್ಲಿ ಶಿಲ್ಪಿ ಬಸವಣ್ಣನವರ ಕಲಾಸಾಧನೆ ಮತ್ತು ಬದುಕಿನ ವಿವಿಧ ಹಂತಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಬೆಳಕಿಗೆ ಬಾರದೆ ಅಜ್ಞಾತವಾಗಿರುವ ಮತ್ತು ಯಾವುದೇ ಪ್ರಚಾರಕ್ಕೆ ಹೋಗದ ಶಿಲ್ಪ ಕಲಾವಿದನ ಜೀವನಗಾಥೆ ಈ ಪುಸ್ತಕದಲ್ಲಿ ಚಿತ್ರಣಗೊಂಡಿದೆ.

೧೧. ರೇಖಾಚಿತ್ರ ನಿಪುಣ ಮ.ಈ. ಗುರು : ಮ.ಈ. ಗುರು ಅವರು ಮೂಲತಃ ಬಳ್ಳಾರಿ ಜಿಲ್ಲೆಯವರಾದರೂ ಅವರು ಪ್ರಖ್ಯಾತಿ ಹೊಂದಿರುವುದು ಮೈಸೂರಿನಲ್ಲಿ. ಪಿ.ಆರ್. ತಿಪ್ಪೇಸ್ವಾಮಿಯವರ ಒಡನಾಟದಲ್ಲಿ ತಮ್ಮ ಇಳಿವಯಸ್ಸಿನಲ್ಲಿ ಸಾಕಷ್ಟು ಕಲಾಸಾಧನೆ ಮಾಡಿದವರು ಮ.ಈ. ಗುರು ಅವರು. ಇವರ ರೇಖಾ ಚಿತ್ರ ವರ್ಣಚಿತ್ರಗಳ ಕುರಿತು ವಿವೇಚನೆಯನ್ನು ಮತ್ತು ಗುರು ಅವರ ಬದುಕನ್ನು ಈ ಗ್ರಂಥದಲ್ಲಿ ಪರಿಚಯಿಸುವ ವಿಶೇಷ ಪ್ರಯತ್ನ ಮಾಡಲಾಗಿದೆ.

೧೨. ಮಹಿಳಾ ಶಿಲ್ಪಿ, ಕಲಾವಿದೆ ಸುಭಾಷಿಣಿ ದೇವಿ : ಈ ಗ್ರಂಥದ ಮೂಲಕ ಮಹಿಳಾ ಶಿಲ್ಪ ಕಲಾವಿದೆಯೊಬ್ಬರು ಕರ್ನಾಟಕದ ಕಲಾ ಪ್ರಪಂಚಕ್ಕೆ ಪ್ರಥಮ ಬಾರಿಗೆ ಪರಿಚಯಗೊಂಡಿದ್ದಾರೆ. ಸುಭಾಷಿಣಿ ದೇವಿಯ ಚಿತ್ರಕಲಾವಿದೆಯಾಗಿ ಕಲಾಕೃತಿ ರಚಿಸಿದರೂ ಅವರು ಗುರುತಿಸಿಕೊಂಡಿರುವುದು ಶಿಲ್ಪ ಕಲಾವಿದೆಯಾಗಿ. ಕೆ. ವೆಂಕಟಪ್ಪನವರ ಒಡನಾಟವನ್ನು ಹೊಂದಿದ ಸುಭಾಷಿಣಿ ದೇವಿಯವರ ಜೀವನ ಸಾಧನೆ ಚಿತ್ರಣವನ್ನು ಈ ಪುಸ್ತಕದಲ್ಲಿ ಕಲಾಕೃತಿಗಳ ವಿವೇಚನೆಯೊಂದಿಗೆ ವಿವರಣೆಯನ್ನು ಮಾಡಲಾಗಿದೆ.

೧೩. ಕಲಾಶಿಕ್ಷಕ ಸಾಧಕ ಬಸವಣ್ಣಚಾರ್ : ಬಸವಣ್ಣಾಚಾರ್ಯರ ವ್ಯಕ್ತಿಚಿತ್ರಣವನ್ನು ಅವರ ಕಲಾಕೃತಿಗಳ ವಿಶ್ಲೇಷಣೆಯೊಂದಿಗೆ ಈ ಗ್ರಂಥದಲ್ಲಿ ವಿವರಿಸಲಾಗಿದೆ. ಲೇಖಕರದೇ ಆದ ವಿಶಿಷ್ಟವಾದ ಬರವಣಿಗೆಯಿಂದ ಈ ಪುಸ್ತಕ ಸಾಮಾನ್ಯ ಜನರನ್ನು ಆಕರ್ಷಿಸುತ್ತದೆ. ಸರಳವಾದ ಭಾಷೆಯಲ್ಲಿ ಬಸವಣ್ಣಾಚಾರ್ಯರ ಜೀವನ ಮತ್ತು ಪ್ರಮುಖ ಕಲಾಕೃತಿಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ.

೧೪. **ವಚನಗಳಿಗೆ ದೃಶ್ಯರೂಪ :** ಈ ಕಿರು ಪುಸ್ತಕದಲ್ಲಿ ವಚನಕಾರರ ಕೆಲವು ವಚನಗಳಿಗೆ ಲೇಖಕ ಎಲ್. ಶಿವಲಿಂಗಪ್ಪನವರು ವರ್ಣಚಿತ್ರಗಳನ್ನು ರಚಿಸಿದ್ದು, ಇಲ್ಲಿ ವಚನ ಮತ್ತು ಆ ವನಚಕ್ಕೆ ಸಂಬಂಧಿಸಿದ ಚಿತ್ರವನ್ನು ಜೊತೆ ಜೊತೆಯಲ್ಲಿ ಮುದ್ರಿಸಿದ್ದು ವಚನ ಓದಿದವರಿಗೆ ಆ ವಚನದ ಆಂತರ್ಯದ ಅನುಭವವನ್ನು ಕಲಾವಿದನ ಕಲ್ಪನಾತ್ಮಕತೆಯನ್ನು ಎರಡನ್ನೂ ತೌಲನಿಕವಾಗಿ ನೋಡುವ ಮತ್ತು ವಿವೇಚನೆಗೆ ಒಳಪಡಿಸುವ ವಿಶಿಷ್ಟವಾದ ಕಿರುಪುಸ್ತಕ ಇದಾಗಿದೆ. ವಚನಗಳನ್ನು ದೃಶ್ಯಮಾಧ್ಯಮಕ್ಕೆ ತರುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

೧೫. **ಬಹುಮುಖಿ (ಅಭಿನಂದನಾ ಗ್ರಂಥ) :** ಸಾಹಿತಿಗಳಿಗೆ ಅವರ ಸಾಧನೆಯನ್ನು ಕುರಿತಾದ ಅಭಿನಂದನ ಗ್ರಂಥಗಳು ಸಾಕಷ್ಟು ಪ್ರಮಾಣದಲ್ಲಿ ಬರುತ್ತಿರುವ ಈ ಸಂದರ್ಭದಲ್ಲಿ ದೃಶ್ಯಕಲಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕಲಾವಿದರಿಗೆ ಸಹಅಭಿನಂದನ ಗ್ರಂಥಗಳು ಬರುತ್ತಿರುವುದು ಸ್ವಾಗತಾರ್ಹವಾದುದು. ಕಲಾವಿದ ಶ್ರೀ ಎಸ್.ಎಂ. ಜಂಬುಕೇಶ್ವರ ಅವರ ಕುರಿತು ಅವರ ಸಹಪಾಠಿಗಳು, ಅಭಿಮಾನಿಗಳು ಈ ಕಲಾವಿದನನ್ನು ಕುರಿತು ಮತ್ತು ಕಲಾಕ್ಷೇತ್ರದ ವಿವಿಧ ವಸ್ತುವಿಷಯದ ಹಲವಾರು ಲೇಖನಗಳು ಇಲ್ಲಿ ಒಂದೆಡೆಗೆ ಸಂಗ್ರಹಗೊಂಡಿವೆ. ಈ ಎಲ್ಲಾ ವಿಷಯಗಳೊಡನೆ ಅವರ ಸಾಧನೆ, ಪಡೆದ ಪ್ರಶಸ್ತಿ ಇತ್ಯಾದಿ, ಅವರ ವೈಯಕ್ತಿಕ ಬದುಕಿನ ಹಾಗೂ ಸಾರ್ವತ್ರಿಕ ಕೆಲಸಗಳ ವಿವರಗಳನ್ನು ಇಲ್ಲಿ ದಾಖಲಿಸಿದ್ದಾರೆ.

ಚಿತ್ರ ಶಿಲ್ಪ ಮತ್ತು ಕಲಾಸಾಹಿತ್ಯ ಈ ಮೂರು ಕ್ಷೇತ್ರಗಳಲ್ಲಿ ಅನುಭವ ಪಡೆದಿರುವ ಶಿವಲಿಂಗಪ್ಪನವರು ಹೇಳುವಂತೆ ಇಂದು ಶಿಬಿರಗಳಲ್ಲಿ ರಚನೆಯಾಗುತ್ತಿರುವ ಕಲಾಕೃತಿಗಳನ್ನು ಹಾಗೂ ಪ್ರಕಟಿತ ಲೇಖವನ್ನಾಗಲೀ ಪುಸ್ತಕವನ್ನಾಗಲೀ ಒರೆಗೆ ಹಚ್ಚಿ ವಿಮರ್ಶೆಯ ಮಾನದಂಡದಿಂದ ಅವಲೋಕಿಸಿದರೆ ಕಲಾಕೃತಿ ರಚನೆಯ ಕಾಲಕ್ಕಿಂತ ಲೇಖನ ರೆಯುವ ಕಾಲದ ಅಧಿಕವಾಗಿರುತ್ತದೆ. ಪುಸ್ತಕ ಬರೆಯುವುದಂತೂ ಕನಿಷ್ಟ ಮೂರ್‍ನಾಲ್ಕು ತಿಂಗಳು ಬೇಕು. ಗತಿಸಿದ್ದ ಕಲಾವಿದ ಅಥವಾ ಶಿಲ್ಪಿ ಬಗ್ಗೆ ಬರೆಯಬೇಕೆಂದಾಗ ಮಾಹಿತಿ ಸಂಗ್ರಹ, ಅದಕ್ಕೆ ಪೂರಕವಾದ ಚಿತ್ರ ಸಂಗ್ರಹ ಸಾಧಾರಣವಾದ ಕೆಲಸವಲ್ಲ. ದೈಹಿಕ ಮತ್ತು ಮಾನಸಿಕ ಪರಿಶ್ರಮ ಅಗತ್ಯ. ಜೊತೆಗೆ ಸಾಕಾಷ್ಟು ಹಣವನ್ನು ಖರ್ಚು ಮಾಡಬೇಕು. ಈ ಎಲ್ಲಾ ವಿಚಾರಗಳನ್ನು ಗಂಭೀರವಾಗಿ ಚಿಂತಿಸಿದಾಗ ಲೇಖನ ಕಲೆ ಚಿತ್ರ ರಚಿಸುವುದಕ್ಕಿಂತ ಕಷ್ಟ ಹಾಗೂ ಕ್ಲಿಷ್ಟವೆನ್ನುತ್ತಾರೆ ಅವರು.

ತಮ್ಮ ಅಪಾರವಾದ ಅನುಭವದ ಹಿನ್ನೆಲೆಯಲ್ಲಿ ಹೀಗೆ ಹೆಳುತ್ತಾರೆ. ಆದರೆ ಒಂದೆರಡು ದಿನದಲ್ಲಿ ರಚಿಸುವ ಒಂದು ಕಲಾಕೃತಿಗೆ ಕೊಡುವ ಸಂಭಾವನೆಗಿಂತ ಹಲವಾರು ಪಟ್ಟು ಕಡಿಮೆಯಾದ ಸಂಭಾವನೆಯನ್ನು ತಿಂಗಳುಗಟ್ಟಲೇ ಶ್ರಮಿಸಿ ಬರೆದ ಬರಹಗಾರನಿಗೆ ಅಕಾಡೆಮಿ, ಸಂಸ್ಕೃತಿ ಇಲಾಖೆ, ಮುಂತಾದವು ನೀಡುತ್ತವೆಂಬುದು ವಿಷಾದದ ಸಂಗತಿಯೆನ್ನುತ್ತಾರೆ.

ಕರ್ನಾಟಕದಲ್ಲಿ ಕಲಾವಿದರ ಶಿಲ್ಪಿಗಳ ಸಂಖ್ಯೆ ಲೆಕ್ಕಕ್ಕೆ ಸಿಗದಷ್ಟು ಇವೆ. ಪ್ರತಿ ವರ್ಷಕ್ಕೂ ಕಲಾಶಾಲೆಗಳಿಂದ ಕನಿಷ್ಟ ಸಾವಿರ ಮಂದಿಯಾದರೂ ಪರೀಕ್ಷಾ ಉತ್ತೀರ್ಣತೆ ಪಡೆದು ಹೊರಬರುತ್ತಾರೆ. ಆದರೆ ಕಲಾಸಾಹಿತ್ಯ ಬರೆಯುತ್ತಿರುವವರು ಬೆರಳೆಣಿಕೆಯ ಮಂದಿ ಮಾತ್ರ. ಅದರಲ್ಲೂ ಪತ್ರಿಕಾ ಮಾಧ್ಯಮಗಳಿಗೆ ನಿತ್ಯವೂ ಬರೆಯುತ್ತಾ

[illegible]

ಕಲಾ ಜೀವಂತಿಕೆ ಕಾಪಾಡುತ್ತಿರುವವರು ಇಡೀ ಕರ್ನಾಟಕದಲ್ಲಿ ನಾಲ್ಕೈದು ಮಂದು ಮಾತ್ರ. ಅವರಲ್ಲಿ ಶಿವಲಿಂಗಪ್ಪನವರ ಸಾಧನೆ ದಾಖಲಿಸುವಂತಹದ್ದು.

ಕಲಾ ಸಾಹಿತ್ಯವನ್ನು ಆಮುಲಾಗ್ರವಾಗಿ ಪರಿಶೀಲಿಸಿದಾಗ ವ್ಯಕ್ತಿ ಪರಿಚಯವು ಅಗ್ರ ಸ್ಥಾನದಲ್ಲಿದೆಯೆನ್ನಬಹುದು. ಚಿತ್ರಕಲಾವಿದರು ಮತ್ತು ಶಿಲ್ಪಿಗಳನ್ನು ಕುರಿತು ಬರೆದದ್ದು ಎರಡು ಸಮಪ್ರಮಾಣದಲ್ಲಿ ಪುಸ್ತಕ ರೂಪ ಪಡೆದಿವೆ. ಸಿದ್ಧಲಿಂಗಸ್ವಾಮಿಗಳು ಮತ್ತು ನಾಗೇಂದ್ರಸ್ಥಪತಿ ಚಿತ್ರ ಮತ್ತು ಶಿಲ್ಪ ಕ್ಷೇತ್ರಗಳೆರಡರಲ್ಲೂ ಸಾಧಿಸಿದ ಮೇಲುಗೈ ವಿಚಾರ ಮಂಡನೆ ಮಾಡಿದ್ದಾರೆ. ಲೋಹಶಿಲ್ಪಿಗಳಾದ ನೀಲಕಂಠಾಚಾರ್ ಮತ್ತು ವೆಂಕಟಾಚಾರ್‌ರವರ ಜೀವನ ಸಾಧನೆಯನ್ನು ಬರೆಯುವುದರ ಜೊತೆಗೆ ಪಂಚಲೋಹಗಳು, ಎರಕದ ಕೆಲಸ, ನಕಾಶೆ ಕೆಲಸ ಇತ್ಯಾದಿ ಲೋಹದ ವಿಗ್ರಹ ತಯಾರಿಕೆಯ ವಿವಿಧ ಮಜಲುಗಳನ್ನು ಪ್ರಸ್ತಾಪಿಸಿದ್ದಾರೆ. ಶಿಲಾಶಿಲ್ಪಿ ಬಸವಣ್ಣನವರ ವ್ಯಕ್ತಿಪರಿಚಯದ ಜೊತೆಗೆ ಕೃಷ್ಣ ಶಿಲೆ ಸಿಗುವ ಗಣಿಗಳು ಮತ್ತದರ ಸ್ವರೂಪಗಳನ್ನು ವಿವರಿಸಿದ್ದಾರೆ. ಮುದ್ರಣಕ್ಕೆ ಸಿದ್ಧಪಡಿಸಿರುವ ಮತ್ತೊಂದು ಪುಸ್ತಕ ಮೌಲ್ಡ್‌ರಾಜಣ್ಣನವರನ್ನು ಕುರಿತು ಜೀವನ ಸಾಧನೆಯೊಂದಿಗೆ ಪೇಪರ್‌ಪಲ್ಪ್ ಮೌಲ್ಡ್, ಮದ್ರಾಸ್‌ನಿಂದ ಕರ್ನಾಟಕಕ್ಕೆ ಬಂದ ಬಗೆ, ಮಾಡುವ ವಿಧಾನ, ಹತ್ತಿಪ್ಪತ್ತು ಅಡಿಯ ವಿಗ್ರಹಗಳನ್ನು ಸಹ ತೂಕ ರಹಿತವಾಗಿ ಅಲಂಕಾರಯುಕ್ತವಾಗಿ ಮಾಡುವ ಕ್ರಿಯೆ, ಮೂಕಿಯಿಂದ ಟಾಕಿಯವರೆಗೆ ಚಲನಚಿತ್ರ ನಡೆದು ಬಂದ ದಾರಿ, ಕಲಾನಿರ್ದೇಶನ ಪಾತ್ರ, ನಾಟಕಗಳಿಗೆ ಬೇಕಾದ ರಂಗ ಪರಿಕರ ಮಾಡುವಿಕೆ ಸೇರಿದಂತೆ ವಿಗ್ರಹ ಮಾಡುವ ಸಕಲ ಕ್ರಮಗಳನ್ನು ಸವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ.

ಚಿತ್ರಕಲೆಗೆ ಸಂಬಂಧಿಸಿದಂತೆ ಎಚ್.ಎಸ್. ಇನಾಮತಿ, ಕಲಾಶಿಕ್ಷಕ ಕಾಳಪ್ಪ ಎಂ.ಇ. ಗುರು, ಶುಭಾಷಿಮಿದೇವಿ, ಬಸವಣ್ಣಚಾರಂ ಮತ್ತು ಪ್ರಕಟಗೊಳ್ಳಲು ಸಿದ್ಧತೆ ಮಾಡಿರುವ ಕುಪ್ಪಾಚಾರ್ ಮತ್ತು ಎಂ. ವೀರಪ್ಪನವರುಗಳನ್ನು ಕುರಿತ ವ್ಯಕ್ತಿ ಚಿತ್ರಗಳಲ್ಲಿ ಅವರವರ ಕಲಾಶೈಲಿಯ ಹಿನ್ನೆಲೆ ಮತ್ತು ಮುನ್ನೆಲೆ ಪ್ರಸ್ತಾಪಿಸಿ ೧೮ನೇ ಶತಮಾನದ ಅಂತ್ಯದಲ್ಲಿ ಬ್ರಿಟಿಷರ ಬಳುವಳಿಯಾಗಿ ಕಾಲಿಟ್ಟ ನೈಜಕಲೆ ಭಾರತವನ್ನು ಆಕ್ರಮಿಸಿದ ರೀತಿ, ನಮ್ಮ ಕಲಾವಿದರು ಸಾಂಪ್ರದಾಯಿಕ ಕಲೆಯಿಂದ ದೂರ ಸಾಗಿ ನೈಜಕಲೆಯನ್ನು ಅಪ್ಪಿಕೊಂಡ ರೀತಿ ರಿವಾಜುಗಳನ್ನು ಆಯಾಯ ಸಾಂದರ್ಭಿಕವಾಗಿ ಪ್ರಸ್ತಾಪಿಸಿರುವುದು ವಿಶಷವೆನಿಸುತ್ತದೆ. ಅಂತೆಯೇ ಕಲಾದಾರ್ಶನಿಕನ ದಶಮುಖಗಳು ಪುಸ್ತಕವು ಸಹ ಮುದ್ರಣ ಹಂತದಲ್ಲಿದ್ದು ಕರ್ನಾಟಕದಲ್ಲಿ ಕಲಾಸಾಹಿತ್ಯ ಸಮೃದ್ಧಿಗೊಳ್ಳಲು ಅನವರತ ಶ್ರಮಿಸುತ್ತಿರುವ ಕಲಾ ಪದವೀಧರ ರಾಗ ಬಯಸುವವರು ಮತ್ತು ಕಲಾ ಸಂಶೋಧಕರಿಗೆ ಮಾರ್ಗದರ್ಶಕರಾಗಿರುವ, ಸ್ವತಃ ಹಲವಾರು ಡಿಗ್ರಿ ಪಡೆದಿರುವ ಸಾಧಕ ಡಾ. ಎಸ್.ಸಿ. ಪಾಟೀಲರನ್ನು ಕುರಿತು ಸಮಗ್ರ ಸಾಧನೆಯ ಸ್ಪಷ್ಟ ಚಿತ್ರಣ ನೀಡುವಂತಹ ಶಬ್ದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಮತ್ತೊಂದು ಪುಸ್ತಕ ವಚನ ಸಾಹಿತ್ಯಕ್ಕೆ ಚಿತ್ರಕಾರರ ಕೊಡುಗೆ ಎಂಬ ಪ್ರಕಟವಾಗಿರುವ ಪುಸ್ತಕವು ಸಹ ಕರ್ನಾಟಕದಲ್ಲಿ ಹಲವಾರು ಕಲಾವಿದರಿದ್ದರೂ ಸಾಹಿತ್ಯಕ್ಕೆ ಇಲ್ಲವೇ ಶರಣ ಜೀವನ, ಭಕ್ತಿ ಮಾರ್ಗಗಳನ್ನು ಕುರಿತಂತೆ ಯಾರ್‍ಯಾರು ಚಿತ್ರ ರಚಿಸಿದ್ದಾರೆಂಬುದನ್ನು ಸವಿವರವಾಗಿ ಬರೆದಿದ್ದಾರೆ.

'ನಮ್ಮ ಕಲಾವಿದರು' ಎಂಬ ಅಂಕಣದ ಮೂಲಕ ಉದಯವಾಣಿ ಪತ್ರಿಕೆಯಲ್ಲಿ ನಾಲ್ಕೈದು ವರ್ಷ ಕಲಾವಿದರ ಪರಿಚಯವನ್ನು ಪ್ರತಿವಾರ ಬರೆದಿರುವ ಮೂಲಕ ನಾಡಿನ ಹಿರಿಯ ತಲೆಮಾರಿನ ಅನೇಕ ಚೇತನಗಳ ಬಗ್ಗೆ ತಿಳಿಯಲು ಶಕ್ಯವಾಗಿದೆ ಆದರೆ ಅವೆಲ್ಲದರ ಸಂಗ್ರಹಿತ ರೂಪದಲ್ಲಿ ಪುಸ್ತಕ ಪ್ರಕಟವಾದರೆ ಮಾತ್ರ ಕಲಾಭ್ಯಾಸಿಗಳಿಗೊಂದು ಕೈಪಿಡಿಯಾಗಬಹುದು. 'ನಮ್ಮ ಕಲಾವಿದರು' ಅಂಕಣ ಬರಹ ನಿಲುಗಡೆ ಆಗುತ್ತಿದ್ದಂತೆ ಮತ್ತೊಂದು ಅಂಕಣ 'ಕಲರವ' ಆರಂಭವಾಯಿತು. ಅದೆ ಪತ್ರಿಕೆಯಲ್ಲಿ, ಆದರೆ ಈ ಅಂಕಣ ನಮ್ಮ ಬೆಂಗಳೂರು ಎಂಬ ಸ್ಥಳೀಯ ಸಾಂಸ್ಕೃತಿಕ ಪುರವಣಿ ಆಗಿದ್ದು, ಪ್ರತಿ ನಿತ್ಯ ನಡೆಯುತ್ತಿದ್ದ ಬೆಂಗಳೂರಿನ ಕಲಾಪ್ರದರ್ಶನಗಳನ್ನು ಕುರಿತು ವಿಮರ್ಶಾತ್ಮಕವಾಗಿ ಬರೆಯುವುದಾಗಿತ್ತು. (ಸುಮಾರು-೨೦೦೨-೨೦೦೪). ನಂತರ ಬೆಂಗಳೂರಿನಿಂದ ಮೈಸೂರಿಗೆ ಸ್ಥಳಾಂತರಗೊಂಡಿದ್ದರಿಂದ ಒಂದೆರಡು ವರ್ಷ ನಿಲುಗಡೆ ಹೊಂದಿ ಮತ್ತೆ ೨೦೦೮ರಿಂದ ಪ್ರಜಾವಾಣಿ ಮೈಸೂರು ಮೆಟ್ರೋ ವಿಭಾಗದಲ್ಲಿ ಕಲೆ ಮತ್ತು ಕಲಾವಿದರನ್ನು ಕುರಿತು ಬರೆಯುವುದಕ್ಕೆ ಆರಂಭಿಸುವ ಮೂಲಕ ಬರವಣಿಗೆಗೆ ಮತ್ತೆ ಚಾಲನೆ ದೊರಕಿದೆ. ಬೆಂಗಳೂರಿನ ಇತರೆ ಪತ್ರಿಕೆಗಳಿಗೆ, ಇವುಗಳ ಮಧ್ಯೆ ಕನ್ನಡ ಸಾಹಿತ್ಯ ಧುರೀಣರು ಎಂಬ ಶೀರ್ಷಿಕೆಯಲ್ಲಿ ನಾಡು ನುಡಿಗೆ ಸೇವೆಗೈದ ಮಹನೀಯರ ಸ್ಮರಣೆ ಬರೆದದ್ದು ಸಾಂದರ್ಭಿಕವಾಗಿ ಮಾತ್ರ ಎನ್ನುತ್ತಾರೆ.

ಕಲೆಯ ಬಗ್ಗೆ ಬರೆಯುವಾಗ ಆಗುತ್ತಿರುವ ಅನ್ಯಾಯ, ಸಂಬಂಧಿಸಿದ ಇಲಾಖೆಗಳು ಮಾಡುವ ತಾರತಮ್ಯ, ಶಿಬಿರಗಳಲ್ಲಿ ಚಿತ್ರರಚಿಸುವ ಕಲಾವಿದರು ಸಂದರ್ಭೋಚಿತವಾಗಿ ರಚಿಸದೆ ಅಸಂಬಂಧ ಚಿತ್ರರಚಿಸುವಿಕೆ, ಇಲ್ಲವೇ ಶಿಲ್ಪ ಮಾಡುವಿಕೆ, ಸರ್ಕಾರ ಅಕಾಡೆಮಿ ಮರು ರಚನೆ ಮಾಡುವಲ್ಲಿ ವಿಳಂಬ, ಒಂದೇ ವರ್ಗದ ಜನರನ್ನೇ ಅಕಾಡೆಮಿಗಳಿಗೆ ನೇಮಕ ಮಾಡುವುದು, ಕಲಾಶಿಕ್ಷಣದಲ್ಲಿರುವ ವೈಪರಿತ್ಯ ಹೀಗೆ ಹಲವು ಕುಂದು ಕೊರತೆಗಳನ್ನು ಕುರಿತು ಬರೆದವಂತೂ ಹೇರಳವಾಗಿ ಮಾಡಿದ್ದಾರೆ. ಬಹುತೇಕ ಕನ್ನಡ ಪತ್ರಿಕೆಗಳೆಲ್ಲದರಲ್ಲಿ ಇವರ ನಾನಾರೂಪದ ಪ್ರತಿಭಟನಾತ್ಮಕ ಬರವಣಿಗೆ ಪ್ರಕಟವಾಗಿವೆ ಎಂಬುದನ್ನು ದಾಖಲೇ ಸಹಿತ ತೋರಿಸುತ್ತಾರೆ.

ಪುಸ್ತಕ ಭಂಡಾರವು ಅವರ ಮನೆಯ ಬಹು ಭಾಗವನ್ನು ಆಕ್ರಮಿಸಿದೆ. ಲಲಿತಕಲೆಯ ಎಲ್ಲಾ ಪ್ರಕಾರಗಳು, ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ವಚನ ಸಾಹಿತ್ಯಕ್ಕೆ ಸಂಬಂಧಿಸಿದವು. ಚಿತ್ರಕಲೆಯ ಸಮಗ್ರ ಬೆಳವಣಿಗೆ ಕುರಿತಂತೆ ಬೇರೆ ಬೇರೆ ಘಟ್ಟಗಳಲ್ಲಿ ಮುದ್ರಣವಾದವು. ಅತ್ಯಂತ ಅಪರೂಪದ ನಾಲ್ಕೈದು ದಶಕದ ಹಿಂದೆ ಪ್ರಕಟವಾಗುತ್ತಿದ್ದ ಇಲ್ಯುಸ್ಟ್ರೇಟೆಡ್‌ವೀಕ್ಲಿ ಧರ್ಮಯುಗದಣತಹ ಸಂಚಿಕೆಗಳು ಇದುವರೆಗೆ ಪ್ರಕಟವಾಗಿರುವ ಅನೇಕ ಕಲಾ ಲೇಖನಗಳ ಸಂಗ್ರಹ, ಕೇಂದ್ರ ಮತ್ತು ರಾಜ್ಯ ಅಕಾಡೆಮಿಗಳು ಪ್ರಕಟಿಸಿರುವ ಪುಸ್ತಕಗಳು ಸೇರಿದಂತೆ ಸುಮಾರು ೫ ಸಾವಿರ ಪುಸ್ತಕಗಳನ್ನೊಳಗೊಂಡ ಸಂಗ್ರಹ ಮಾಡಿರುವುದು ಶಿವಲಿಂಗಪ್ಪನವರ ಕಲಾ ಸಾಹಿತ್ಯ ಪ್ರೇಮಕ್ಕೆ ಸಾಕ್ಷಿಯಾಗಿದೆ ಎನ್ನಬಹುದು.

ಅಧ್ಯಾಯ ೮

ಸಮಾರೋಪ

ಕಲೆ ಸಂಸ್ಕೃತಿಯ ಒಂದು ಅಂಗ. ಒಂದು ಸಮುದಾಯದ ಕಲೆ, ಜನ ಜೀವನಗಳು ಆ ನಾಡಿನ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತವೆ. ಸಂಸ್ಕೃತಿಯ ಜೀವಂತಿಕೆಯ ಹಿಂದೆ ಹಲವು ವ್ಯಕ್ತಿಗಳ ಕಾಯಕದ ಶಕ್ತಿ ಚೈತನ್ಯವಿದೆ. ಬದುಕನ್ನೇ ಕಲೆ ಸಂಸ್ಕೃತಿಗಾಗಿ ಮುಡುಪಾಗಿಟ್ಟು ಬೆಳಸಿಕೊಂಡು ಬಂದವರು ಎಲ್. ಶಿವಲಿಂಗಪ್ಪನವರು. ನಾಡಿನ ಚಿತ್ರಕಲೆಯ ಅಧ್ಯಾಯದಲ್ಲಿ ಅಂತಹ ಕಲಾವಿದರ ಜೀವನ ಹಾಗೂ ಅವರ ಸಾಧನೆ ಕಲಾಕೃತಿಗಳ ಕೊಡುಗೆ ಅಷ್ಟೇ ಮಹತ್ವಪೂರ್ಣವಾದುದು. ನಾಡಿನ ಸಾಂಸ್ಕೃತಿಯನ್ನು ಪ್ರತಿಬಿಂಬಿಸುವ ಹಿನ್ನೆಲೆಯಲ್ಲಿ ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು ಒಂದು ಅಧ್ಯಯನ ಸಂಪ್ರಬಂಧದ ರೂಪಗೊಂಡಿದೆ. ಒಟ್ಟಾರೆ ಎಂಟು ಅಧ್ಯಾಯಗಳಲ್ಲಿ ವಿಷಯ ವಸ್ತುವಿನ ನಿರೂಪಣೆಯಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನಗಳನ್ನು ಹೇಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಚಿತ್ರಕಲಾ ಪ್ರಪಂಚಕ್ಕೆ ತಮ್ಮ ಜೀವನವನ್ನು ಮುಡಪಾಗಿಟ್ಟ ಕಲಾವಿದ ಎಲ್. ಶಿವಲಿಂಗಪ್ಪನವರ ಜನನ, ಬಾಲ್ಯ, ಪ್ರಾಥಮಿಕ ಶಿಕ್ಷಣದಲ್ಲಿ ಅವರೊಂದಿಗಿರುವ ಗೆಳೆಯರು, ಗುರುವೃಂದ ಅಲ್ಲದೇ ಇವರು ಕಲಾವಿದರಾಗಿ ರೂಪಗೊಳ್ಳುವಲ್ಲಿ ಪ್ರಭಾವ ಬೀರಿದ ಸಾಂಸ್ಕೃತಿಕ ಅಂಶಗಳು. ಅವರ ತಂದೆಯ ಮರಣಾಂತರ ಅವರ ಮೇಲೆ ಹಾಗೂ ಮನೆಯ ಪರಿಸ್ಥಿತಿ ಮತ್ತು ಕೌಟುಂಬಿಕ ಜೀವನದ ಬದುಕಿನ ವಿವರಗಳನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕಲಾವಿದ ಎಲ್. ಶಿವಲಿಂಗಪ್ಪನವರು ಬೆಂಗಳೂರಿನಲ್ಲಿ ಬಿ.ಇ. ಎಂ.ಎಸ್. ಕಾರ್ಖಾನೆಯಲ್ಲಿ ಕೆಲಸ ಮಾಡಿಕೊಂಡೆ ಅವರಲ್ಲಿ ಚಿತ್ರಕಲೆ ಕಲಿಯಬೇಕು ಎನ್ನುವ ಹಂಬಲ ಪ್ರಾರಂಭವಾಯಿತು. ಆದರೆ ಕಲಿಯುವುದಕ್ಕೆ ಸಾಧ್ಯವಾಗಿಲ್ಲ ಕಾರಣ ಇವರು ಕಾರ್ಖಾನೆಯಲ್ಲಿ ಕೆಲಸ ಮಾಡಿಕೊಂಡು ಕಲಿಯಬೇಕು ಎಂದು ಬಯಸಿದವರು. ಆದರೆ ಕರ್ನಾಟಕದಲ್ಲಿ ಕಲಾಶಾಲೆಗೆ ದಿನವು ಹೋಗಬೇಕಾಗಿತ್ತು. ಇದರಿಂದಾಗಿ ಇವರಿಗೆ ಸಾಧ್ಯವಾಗುತ್ತಿರಲಿಲ್ಲ. ಒಂದು ದಿನಪತ್ರಿಕೆಯಲ್ಲಿ ಅಂಚೆಯ ಮೂಲಕ ಕಲಾಶಿಕ್ಷಣ ಪಡೆಯುವ ಕುರಿತು ವರದಿಯನ್ನು ನೋಡಿದರು. ಎಂ.ಟಿ.ವಿ. ಆಚಾರ್ಯರು ಈ ಅಂಚೆ ಕಲಾಶಿಕ್ಷಣದ ಮೂಲ ಪುರುಷರಾಗಿದ್ದರು. ಅಂಚೆ ಕಲಾಶಿಕ್ಷಣಕ್ಕೆ ಹಲವಾರು ತೊಂದರೆಗಳು ಎದುರಾದವು ಇವುಗಳನ್ನು ಹೊರತುಪಡಿಸಿ ಅಂಚೆ ಕಲಾಶಿಕ್ಷಣ ಪ್ರಾರಂಭಿಸಿದರು. ಅದಕ್ಕೆ ಪ್ರಥಮ ಗುಂಪಿನ ವಿದ್ಯಾರ್ಥಿಗಳಾಗಿ ಶಿವಲಿಂಗಪ್ಪನವರು ಪ್ರವೇಶ ಪಡೆದರು. ಅಂಚೆ ಕಲಾಶಿಕ್ಷಣದ ಪಾಠ್ಯಕ್ರಮ ಮತ್ತು ಅಲ್ಲಿ ಕಲಿಯುವ ಕಲೆಯ ಶಿಕ್ಷಣದ ಬಗ್ಗೆ ಮತ್ತು ಇವರು ಮಾಡಿದ ಹೋರಾಟಗಳು, ಚಿತ್ರಕಲಾ ಪ್ರದರ್ಶನಗಳು. ಎಂ.ಟಿ.ವಿ. ಆಚಾರ್ಯರ ಕಲಾಶಿಕ್ಷಣ ಪದ್ಧತಿಯಿಂದ ಪ್ರಭಾವಿತರಾದ ಇವರು ವಿದ್ಯಾರ್ಥಿಗಳಲ್ಲಿ ಕಲಾ ಪ್ರಜ್ಞೆ ಮೂಡಿಸುವಲ್ಲಿ ಮತ್ತು ಚಿತ್ರಕಲಾ ಭವನದ ಏಳ್ಗೆಗಾಗಿ ಇವರು ದುಡಿದರು. ಇವರ ಕಲಾಬದುಕನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಶಿವಲಿಂಗಪ್ಪನವರ ಕಲಾಕೃತಿಗಳನ್ನು ಕುರಿತು ವಿಶೇಷವಾಗಿ ಚರ್ಚಿಸಲಾಗಿದೆ. ಎಂ.ಟಿ.ವಿ. ಆಚಾರ್ಯರ ಬಳಿಗೆ ಶಿಕ್ಷಣವನ್ನು ಪಡೆದ ಇವರು ಅನೇಕ ಕಲಾಕೃತಿಗಳನ್ನು ರಚಿಸಿದ್ದು ಅವುಗಳನ್ನು ನಾಲ್ಕು ಹಂತಗಳಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಮೊದಲನೆಯದು ಸಂಯೋಜಿಸಿದ ಕಲಾಕೃತಿಗಳು, ಎರಡನೆಯದು ಭಾವಚಿತ್ರ ಕಲಾಕೃತಿಗಳು, ಮೂರನೆಯದು ಸಿಂಪರಣೆ ಚಿತ್ರಗಳು ಹಾಗೂ ನಾಲ್ಕನೆಯದಾಗಿ ಸಾಂದರ್ಭಿಕ ಚಿತ್ರಗಳು, ನಿಸರ್ಗ ಚಿತ್ರಗಳನ್ನು ಕುರಿತು ವಿಶ್ಲೇಷಣಾತ್ಮಕ ಅಧ್ಯಾಯನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಕಲಾವಿದ ಶಿವಲಿಂಗಪ್ಪನವರು ಒಬ್ಬ ಬಹುಮುಖ ಪ್ರತಿಭಾ ಕಲಾವಿದರಾಗಿ ಅಂದರೆ ಚಿತ್ರಕಲಾವಿದರು ಮತ್ತು ಶಿಲ್ಪಕಲಾವಿದರು ಆಗಿದ್ದರು. ಇವರ ಮನೆಯ ಮುಂದೆ ಇರುವ ಗುರುಕುಲದಲ್ಲಿ ಇವರ ಶಿಲ್ಪಕಲಾ ಅಭ್ಯಾಸ ನಡೆಯಿತು. ಚಿಕ್ಕ ವಯಸ್ಸಿನಲ್ಲಿ ಇವರ ಕಲಾ ಚಟುವಟಿಕೆಗಳು ಪ್ರಾರಂಭವಾಯಿತು. ಇವರು ಆಧುನಿಕ ಶಿಲ್ಪಕಲಾವಿದರು ಎಂದು ಹೇಳಬಹುದು. ಅಂದರೆ ಇವರು ಮಾಡುವ ಶಿಲ್ಪಗಳನ್ನು ನೋಡಿದರೆ ಅವುಗಳ ಆಧುನಿಕ ಆಕಾರಗಳಲ್ಲಿವೆ. ಹಲವಾರು ಮಾಧ್ಯಮದಲ್ಲಿ ಶಿಲ್ಪಗಳನ್ನು ತಯಾರಿಸಿದ್ದಾರೆ. ಅದರಲ್ಲಿ ಕೆಲವು ಮರಳಚ್ಚಿನ ಶಿಲ್ಪಗಳು ಮತ್ತು ಬೆಂಡಿನ ಶಿಲ್ಪಗಳು. ಶಿವಲಿಂಗಪ್ಪನವರು ಮಾಡಿರುವ ಶಿಲ್ಪಗಳು ಅಸಂಪ್ರಾದಾಯಿಕ ಶಿಲ್ಪಗಳು ಅರ್ಥತ್ ಸಮಕಾಲೀನ ಶಿಲ್ಪ ಅಥವಾ ಅನ್ಯ ಶಿಲ್ಪಗಳಾಗಿದ್ದು ಇವೆಲ್ಲಾವುಗಳಿಗಿಂತ ಭಿನ್ನವಾದ ಮರಳಚ್ಚಿನಲ್ಲಿ ಮಾಡಿರುವುದು ವಿಶೇಷವೆನಿಸುತ್ತದೆ. ಶಿವಲಿಂಗಪ್ಪನವರು ಶುದ್ಧವಾದ ಸಣ್ಣ ಮರಳನ್ನು ಕೆಲವು ಅಂಟು ದ್ರಾವಣಗಳಿಂದ ಒಂದು ಘನ ರೂಪಕ್ಕೆ

ತಂದು ನಂತರದಲ್ಲಿ ಅದನ್ನು ಕೆತ್ತನೆ ಮೂಲಕ ಶಿಲ್ಪವನ್ನಾಗಿ ಮಾಡಿರುವುದು ವಿಶೇಷ. ಈ ತೆರನಾದ ಮಾಧ್ಯಮದಿಂದ ಮಾಡಿದವುಗಳನ್ನು ದೇವತಾಮೂರ್ತಿಗಳೆಂದು ಮಾತ್ರ ಪರಿಗಣಿಸುವುದಿಲ್ಲ. ಶಿಲ್ಪ ಕಲಾಕೃತಿಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಪ್ರಸ್ತುತವಾಗಿ ಬಹಳಷ್ಟು ಕಲಾವಿದರು ಒಂದೇ ಶೈಲಿಗೆ ಅಂಟಿಕೊಂಡಿದ್ದಾರೆ. ಅವರ ಕಲಾಕೃತಿಗಳನ್ನು ನೋಡಿದಾಕ್ಷಣ ಇದು ಇಂತಹ ಕಲಾವಿದರದೇ ಎಂದು ಗುರುತಿಸುವಷ್ಟು ಶೈಲಿಗೆ ಒತ್ತುಕೊಟ್ಟು ಸ್ಥಿರವಾಗಿದ್ದಾರೆ. ಆದರೆ ಶಿವಲಿಂಗಪ್ಪನವರು ಯಾವುದೇ ಒಂದು ಶೈಲಿಗೆ ಬದ್ಧರಾಗಿಲ್ಲ. ವಿಭಿನ್ನ ನೋಟಗಳ ಶೈಲಿಗಳ ಅಭಿವ್ಯಕ್ತಿಯನ್ನೇ ಪ್ರತ್ಯೇಕ ಶೈಲಿಯೆಂದು ನಾವು ಗುರುತಿಸಬಹುದಾಗಿದೆ. ಇವರು ಮಾಡುವ ವಚನಾಧಾರಿತ ಚಿತ್ರಗಳು ಮತ್ತು ಸಾಂದರ್ಭಿಕ ಚಿತ್ರಗಳು ಹಲವಾರು ಶೈಲಿಗಳಲ್ಲಿ ಕೃತಿ ರಚನಾ ತಂತ್ರ ಅವರಲ್ಲಿರುವುದರಿಂದ ಕಾಲಕಾಲಕ್ಕೆ ವಿವಿಧ ಆಯಾಮಗಳ ಕಲಾಕೃತಿಗಳು ರೂಪಗೊಂಡಿವೆ. ಈ ಹಿನ್ನೆಲೆಯಲ್ಲಿ ಅವರ ಕಲಾಕೃತಿಗಳಿಂದ, ಕಲಾಶಿಕ್ಷಣದ ಮೇಲಾದ ಪ್ರಭಾವ, ಪ್ರೇರಣೆಗಳ ಕುರಿತು ಇಲ್ಲಿ ಸಮಗ್ರವಾಗಿ ಅಧ್ಯಾಯನ ಮಾಡಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಶಿವಲಿಂಗಪ್ಪನವರು ಕರ್ನಾಟಕದಲ್ಲಿ ಚಿತ್ರಕಲಾ ವಿಭಾಗಕ್ಕೆ ಹಲವಾರು ಕಲಾ ಸಾಹಿತ್ಯದ ಪುಸ್ತಕಗಳನ್ನು ಬರೆದಿದ್ದಾರೆ ಮತ್ತು ಹಲವಾರು ಕಲಾವಿದರ ಜೀವನಾಧಾರವಾಗಿಟ್ಟುಕೊಂಡು ಲೇಖನಗಳನ್ನು ಬರೆದಿದ್ದಾರೆ. ಕನ್ನಡ ಪ್ರಭ ಮತ್ತು ಪ್ರಜಾವಾಣಿ ದೈನಂದಿನ ಪತ್ರಿಕೆಗಳಲ್ಲಿ ಇವರದೇ ಆದ ಛಾಪನ್ನು ಮೂಡಿಸಿದರೆಂದು ಹೇಳಬಹುದು. ಶಿವಲಿಂಗಪ್ಪನವರು ಬರೆದ ಹಲವಾರು ಪುಸ್ತಕಗಳನ್ನು ಈ ಅಧ್ಯಾಯದಲ್ಲಿ ಅಳವಡಿಸಿಕೊಂಡು ಇವುಗಳ ಬಗ್ಗೆ ವಿವರಿಸಲಾಗಿದೆ. ಪತ್ರಿಕಾ ವರದಿಗಳನ್ನು ಇಲ್ಲಿ ಅಧ್ಯಾಯನಕ್ಕೆ ಒಳಪಡಿಸಲಾಗಿದೆ.

ಎಂಟನೆಯ ಅಧ್ಯಾಯವು ಸಮರೋಪವಾಗಿದ್ದು. ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯಗಳಲ್ಲಿ ಕಂಡು ಬರುವ ವಿಶೇಷವಾದ ಫಲಿತಾಂಶಗಳನ್ನು ಗುರುತಿಸಿ ಅವುಗಳ ಮೂಲ ಅಂಶಗಳನ್ನು ಬರೆದಿಡುವ ಕೆಲಸ ಮಾಡಲಾಗಿದೆ. ಇಡೀ ಸಂಶೋಧನೆಯ ಮೂಲ ತಿರುಳನ್ನು ಪ್ರತ್ಯೇಕಿಸಿ ವಿವರಿಸಿ ಅವಲೋಕಿಸಿ ಸ್ಪಷ್ಟಿಕರಿಸಲಾಗಿದೆ.

ಅಧ್ಯಯನದ ಪ್ರಮುಖ ಫಲಿತಗಳು

೧. ಎಲ್. ಶಿವಲಿಂಗಪ್ಪನವರ ಚಿತ್ರಗಳ ಮುಖಾಂತರ ನಮ್ಮ ಕಾಲದ ಕಲಾವಿದರು ರಚಿಸಿದ ನಾಡಿನ ಸಂಸ್ಕೃತಿ ಜನ ಜೀವನದ ಚಿತ್ರಣದ ಜೊತೆಗೆ ಆನಂದವನ್ನು ನೀಡುವ ಸನ್ನಿವೇಶಗಳನ್ನು ನಮ್ಮ ಕಣ್ಮುಂದೆ ನಿಲ್ಲಿಸುವ ಶಕ್ತಿ ಪಡೆದಿರುವುದನ್ನು ಕಾಣುತ್ತೇವೆ.

೨. ಎಂ.ಟಿ.ವಿ. ಆಚಾರ್ಯರ ಶೈಲಿಯನ್ನು ರೂಢಿಸಿಕೊಂಡ ಶಿವಲಿಂಗಪ್ಪನವರು ಜಲವರ್ಣಗಳನ್ನು ಪ್ರಾಯೋಗಿಸಿ ಅಭಿವ್ಯಕ್ತಿಸಿದ ಚಿತ್ರಗಳು ಹಾಗೂ ಅನೇಕ ಪ್ರಾಣಿ ಪಕ್ಷಿಗಳ ಮತ್ತು ಸಾಂದರ್ಭಿಕ

[illegible]

ಜಲವರ್ಣಗಳನ್ನು ಅದರ ಬಿಳುಪನು ಕುಂಚದಿಂದಲೇ ನಿಯಂತ್ರಿಸುವುದನ್ನು ಕಾಣುತ್ತೇವೆ. ಇದರಿಂದ ಜಲವರ್ಣಗಳ ಮೇಲಿನ ಅವರ ಹಿಡಿತ ಪ್ರೌಢಿಮೆಯ ಅರಿವಾಗುತ್ತದೆ. ಭಾವಚಿತ್ರಗಳಲ್ಲಿ ಬಳಸಿದ ಜಲವರ್ಣಗಳು ನೈಜ ಅನುಭವ ನೀಡುವುದರೊಂದಿಗೆ ಮಾಸದಂತೆ ತಾಜಾತನವನ್ನು ಹೊಂದಿದೆ.

೩. ಎಲ್. ಶಿವಲಿಂಗಪ್ಪನವರು ಚಿತ್ರಗಳನ್ನು ಸ್ವತಂತ್ರವಾಗಿ ರಚಿಸುವುದರ ಜೊತೆಗೆ ಸಂಯೋಜನಾ ಚಿತ್ರಗಳಲ್ಲಿ ಹಿನ್ನೆಲೆಯನ್ನು ಸಾಕಷ್ಟು ದುಡಿಸಿಕೊಂಡಿದ್ದಾರೆ. ನಮ್ಮ ಭಾರತೀಯ ಶೈಲಿಯ ಸೊಗಡು ಅವರಲ್ಲಿದೆ. ಗಿಡ, ಮರ, ಬಳ್ಳಿ ಎಲ್ಲವನ್ನು ವಿವರವಾಗಿ ನೈಜ ವರ್ಣಗಳ ಲೇಪನವನ್ನು ಹೊಂದಿ ನಮ್ಮ ಭ್ರಮಾಲೋಕಕ್ಕೆ ಕರೆದೊಯ್ಯುತ್ತದೆ.

೪. ಸಂಯೋಜನಾ ಸರಣಿಯ ಚಿತ್ರಗಳು ಸೆಮಿ ರಿಯಲಿಸ್ಟಿಕ್ ಕ್ರಿಯೇಟಿವ್ ಶೈಲಿಯಲ್ಲಿವೆ. ಶಿವಲಿಂಗಪ್ಪನವರು ರಚಿಸಿದಂತಹ ಸೆಮಿ ರಿಯಾಲಿಸ್ಟಿಕ್ ಚಿತ್ರಗಳಲ್ಲಿ ಬೇರೆ ಬೇರೆ ವಿಧಾನ ಮತ್ತು ಶೈಲಿಗಳನ್ನು ಗುರುತಿಸಲಾಗಿದೆ. ಏಕ ಸರಣಿಯ ಚಿತ್ರದಲ್ಲಿ ಹೆಚ್ಚಾಗಿ ನಿಸರ್ಗವನ್ನು ಚಿತ್ರಿಸಿದ್ದು ಕಂಡುಬರುತ್ತದೆ.

೫. ಪೋಸ್ಟರ್ ವರ್ಣದಿಂದ ಭಾವಚಿತ್ರಗಳ ವಿನ್ಯಾಸದ ಚಿತ್ರಗಳು ಹಾಗೂ ಸಂಯೋಜನಾ ಚಿತ್ರಗಳು ತುಂಬಾ ನೈಜ ಕಲಾಶೈಲಿಯಲ್ಲಿ ಕಲಾಕೃತಿಗಳ ರಚನೆಯನ್ನು ಮಾಡಿದ್ದು ತಮ್ಮ ಕಣ್ಣಲ್ಲಿ ಮನಸ್ಸಿನ ಭಾವನೆಗಳಲ್ಲಿ ಜೀವನದ ಕಣಕಣದಲ್ಲಿ ಆವರಿಸಿಕೊಂಡಿರುವ ಕಲೆಗೆ ತಮ್ಮದೇ ಆದ ವಿಶಿಷ್ಟ ಮೆರಗನ್ನು ಕೊಟ್ಟು ಆಹ್ಲಾದಕರ ರೀತಿಯಲ್ಲಿ ಮನಸ್ಸಿಗೆ ಆನಂದವನ್ನು ನೀಡುವಂಥ ಜನಮನ ಸೂರೆಗೊಳ್ಳುವಂತ ರೀತಿಯಲ್ಲಿ ಚಿತ್ರಿಸಿರುವುದನ್ನು ಅವರ ವರ್ಣಚಿತ್ರಗಳ ಅಧ್ಯಯನದಿಂದ ತಿಳಿದುಬರುತ್ತದೆ.

೬. ನಾಗೇಂದ್ರ ಸಪ್ಥತಿಯವರಲ್ಲಿ ಶಿಲ್ಪಾಕಲಾ ಅಭ್ಯಾಸವನ್ನು ಮಾಡಿಕೊಂಡು ನಂತರ ಬೆಂಗಳೂರಿನಲ್ಲಿ ಎಂ.ಟಿ.ವಿ. ಆಚಾರ್ಯರ ಅಂಚೆ ಕಲಾಶಿಕ್ಷಣವನ್ನು ಪಡೆದರು. ಆ ಶಾಲೆಯ ಸಾಂಸ್ಕೃತಿಕ ಪರಿಸರವು ಶಿವಲಿಂಗಪ್ಪನವರ ಮೇಲೆ ಪ್ರಭಾವ ಬೀರಿ ಅವರೊಬ್ಬ ದೊಡ್ಡ ಕಲಾವಿದರಾಗಿ ರೂಪಗೊಳ್ಳಲು ಕಾರಣವಾಗಿದೆ. ಅಂಚೆ ಕಲಾಶಾಲೆಯಲ್ಲಿ ಚಿತ್ರಕಲೆಯನ್ನು ನೈಜ ಶೈಲಿಯಲ್ಲಿ ಕಲಿತ ಇವರು ನಂತರದಲ್ಲಿ ತಮ್ಮದೇ ಆದ ಶೈಲಿಯನ್ನು ರೂಪಿಸಿಕೊಂಡು ನಾಡಿನ ಕಲಾರಂಗದಲ್ಲಿ ಗುರುತಿಸುವಂತಾದರು. ಎಲ್. ಶಿವಲಿಂಗಪ್ಪನವರು ಕಲಾಕ್ಷೇತ್ರಕ್ಕೆ ಕೊಟ್ಟ ಕೊಡುಗೆಯನ್ನು ಚರ್ಚಿಸಲಾಗಿದೆ. ಈ ಸಂದರ್ಭದಲ್ಲಿ ಅವರ ಇತರ ಕಾರ್ಯಕ್ಷೇತ್ರಗಳ ಬಗ್ಗೆ ಚರ್ಚಿಸಲಾಗಿದೆ.

೭. ಎಲ್. ಶಿವಲಿಂಗಪ್ಪನವರು ತಮ್ಮ ಮನಸ್ಸಿನ ಪಕ್ವತೆಯ ಭಾವನೆಗಳಿಗೆ ತಕ್ಕಂತೆ ಬಣ್ಣಗಳನ್ನು ಆಯ್ದುಕೊಂಡಿದ್ದು ಜಲವರ್ಣ, ಪೋಸ್ಟರ್ ವರ್ಣ, ತೈಲವರ್ಣಗಳಲ್ಲಿ ರಚಿಸಿದ ಚಿತ್ರಗಳಲ್ಲಿ ಕಾಣಬಹುದು. ಈಚಿತ್ರಗಳು ಸಹೃದಯನ ಮನಸ್ಸನ್ನು ಸೂರೆಗೊಳ್ಳುವಂತೆ ವರ್ಣ ಸಂಯೋಜನೆ, ರೇಖೆಗಳ ಲಯಾತ್ಮಕತೆ ಬಣ್ಣಗಳ ಘನತ್ವ, ಕುಂಚಗಳ ಹರಿದಾಟ ಹಾಗೂ ಆಕರ್ಷಣೆ, ಅರ್ಥವಂತಿಕೆ ಹೊಂದಿರುವುದನ್ನು ಗಮನಿಸಲಾಗಿದೆ.

೯. ಸಂಯೋಜನೆಯ ಆಕೃತಿಗಳು ವಸ್ತುವಿನ್ಯಾಸಗಳಲ್ಲಿ ತೆಳುವಾಗಿ ಕುಂಚ ಪ್ರಾಯೋಗಿಸಿ ನೀಡುವ ವರ್ಣ ಲೇಪನ ಕಲಾಕೃತಿಯ ಮೌಲ್ಯವನ್ನು ಹೆಚ್ಚಿಸುತ್ತದೆ. ತೈಲವರ್ಣ ಚಿತ್ರಗಳನ್ನು ರಚಿಸುವಲ್ಲಿಯೂ ಅಷ್ಟೇ ಪ್ರಭುತ್ವವನ್ನು ಸಾಧಿಸಿದದಾರೆ. ಭಾವಚಿತ್ರಗಳಲ್ಲಿ ಜೀವಂತಿಕೆಯನ್ನು ಮೂಡಿಸಿದ್ದಾರೆ. ಒಟ್ಟಾರೆ ವ್ಯಕ್ತಿತ್ವದ ಭಾವನೆಗಳನ್ನು ಮೂಡಿಸುವುದರೊಂದಿಗೆ ತಾದ್ರೂಪ್ಯತೆಯನ್ನು ಹೊಂದಿವೆ. ಭಾವಚಿತ್ರಗಳ ಕಣ್ಣಿನಲ್ಲಿ ಜೀವ ಚೈತನ್ಯ ತುಂಬಿದ್ದಾರೆ. ಬಟ್ಟೆಗಳ ಮೈವಳಿಕೆಯನ್ನು ನೈಜತೆಯನ್ನು ಮೆರೆದಿದ್ದಾರೆ. ಅನೇಕ ಚಿತ್ರಗಳಲ್ಲಿ ಕುಂಚದ ನೇರ ಹೊಡೆತಗಳಲ್ಲದೇ ಬಣ್ಣಗಳನ್ನು ಬೆರೆಸಿ ಮೃದುವಾಗಿ ಲೇಪಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ಇವರ ಚಿತ್ರಗಳು ಎಂ.ಟಿ.ವಿ. ಆಚಾರ್ಯರ ಕಲಾಶಿಕ್ಷಣದ ರೀತಿಯನ್ನು ಹೊಂದಿದ್ದರೂ ಭಾವನೆಗಳೂ ಅನುಭವಗಳು ಪ್ರತಿಬಿಂಬಿಸುತ್ತವೆ.

೧೦. ಭಾವಚಿತ್ರಗಳು ಮತ್ತು ಪೂರ್ಣ ಭಾವಚಿತ್ರಗಳು ವೇಗವಾದ ಚಲನೆಯಿಂದ ಕೂಡಿದ ಕುಂಚದ ಸೆಳೆತಗಳು ವರ್ಣ ವೈಖರಿ ಹಿನ್ನೆಲೆ ಮುನ್ನಲೆಯಲ್ಲಿ ಅಳವಡಿಸುವ ಸ್ಥಳಾವಕಾಶ ವಿಶಿಷ್ಟ ಅಂಶಗಳಾಗಿವೆ. ಕಲಾಕೃತಿಗಳಲ್ಲಿ ಎಲ್. ಶಿವಲಿಂಗಪ್ಪನವರು ಅಳವಡಿಸಿರುವ ವರ್ಣ ವೈವಿಧ್ಯತೆ ಕಣ್ಣಿಗೆ ಆನಂದವನ್ನುಂಟು ಮಾಡುವ ಬಣ್ಣಗಳಾಗಿವೆ.

೧೧. ಎಲ್. ಶಿವಲಿಂಗಪ್ಪನವರು ಶಿಲ್ಪಿಕಲಾವಿದರಲ್ಲಿ ಒಬ್ಬರು. ಶಿಲ್ಪಿಗಳು ಜೀವಂತಿಕೆಯಿಂದ ಕೂಡಿದ್ದು ಭಾವನೆಗಳ ಜೊತೆಗೆ ಸ್ಪಂದಿಸುತ್ತವೆ. ಇವರ ಕೆಲವು ಶಿಲ್ಪಗಳು ಮರಳಚ್ಚಿನ ಶಿಲ್ಪಗಳು ಮತ್ತು ಬೆಂಡಿನ ಶಿಲ್ಪಗಳನ್ನು ರಚಿಸಿದ್ದಾರೆ. ನೈಜತೆಯನ್ನು ಮೂಡಿಸಿ ದಿನನಿತ್ಯದ ಶಿಲ್ಪಿಗಳು ಒಂದು ಬಗೆಯಾದರೆ ಬೆಂಡಿನ ಶಿಲ್ಪಿಗಳು ಸಂಯೋಜನೆ ಆಧುನಿಕ ಮತ್ತು ನೈಜ ರೂಪದಲ್ಲಿ ಚಿತ್ರಣಗೊಂಡಿವೆ.

೧೨. ಎಲ್. ಶಿವಲಿಂಗಪ್ಪನವರು ಕಲಾ ಸಾಹಿತ್ಯದಲ್ಲಿ, ಶಿಲ್ಪಕಲೆ ಮತ್ತು ಚಿತ್ರಕಲೆ. ಚಿತ್ರಕಲಾವಿದರು ಇವರ ಬಗ್ಗೆ ಹಲವಾರು ಲೇಖನಗಳನ್ನು ಬರೆದು ಕರ್ನಾಟಕದಲ್ಲಿ ಇವರ ಛಾಪು ಮೂಡಿಸಿದ್ದಾರೆ. ಶಿವಲಿಂಗಪ್ಪನವರಿಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಇವರಿಗೆ ದೊರೆತಿವೆ. ಹಾಗೂ ವಿವಿಧ ಸ್ಮರಣ ಸಂಚಿಕೆಗಳಿಗೆ ಬರೆದ ಪ್ರೌಢ ಲೇಖನಗಳು, ಪ್ರಕಟಿತ ಪುಸ್ತಕಗಳು, ವಿಚಾರ ಸಂಕಿರಣಗಳು ಮತ್ತು ರಾಜ್ಯದ ವಿವಿಧ ಸಂಘಟನೆಗಳಲ್ಲಿ, ವಿಚಾರ ವೇದಿಕೆಗಳು ಏರ್ಪಡಿಸಿದ್ದ ಕಾರ್ಯಕ್ರಮಗಳಲ್ಲಿ ಪ್ರಮುಖ ಉಪನ್ಯಾಸಕರಾಗಿ ಹೀಗೆ ಹಲವಾರು ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ.

ಗ್ರಂಥಋಣ

* ಎಂ.ವಿ. ಮಿಣಜಗಿ — ಗವೀಶ್ ಹಿರೇಮಠ
  ಕರ್ನಾಟಕ ಲಲಿತಕಲಾ ಅಕಾಡೆಮಿ,
  ಬೆಂಗಳೂರು, ೧೯೯೩

* ಕಟ್ಟಿಂಗೇರಿ ಕೃಷ್ಣಹೆಬ್ಬಾರ ಕಲೆ ಮತ್ತು ಬದುಕು — ಕು.ಶಿ. ಹರಿದಾಸ ಭಟ್ಟ
  ಗೋವಿಂದ ಪೈ ಸಂಶೋಧನ ಸಂಸ್ಥೆ, ಉಡುಪಿ

* ಕರ್ನಾಟಕ ಇತಿಹಾಸ — ಆರ್.ಎಸ್. ಪಂಚಮುಖಿ
  ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ
  ಧಾರವಾಡ, ೧೯೬೭

* ಕರ್ನಾಟಕದ ಜನಪದ ಚಿತ್ರಕಲೆ — ಡಾ. ಎಸ್.ಸಿ. ಪಾಟೀಲ
  ವೀರಶೈವ ಅಧ್ಯಯನ ಸಂಸ್ಥೆ,
  ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ
  ಗದಗ, ೧೯೯೩

* ಕರ್ನಾಟಕದ ದೃಶ್ಯಕಲಾ ಸಾಹಿತ್ಯ — ಡಾ. ಪ್ರೇಮಾನಂದ ಲಕ್ಷ್ಮಣವರ
  ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ
  ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮

* ಕಲಾಕೋಶ — ಎನ್. ಮರಿಶಾಮಾಚಾರ್
  ಕರ್ನಾಟಕ ಲಲಿತಕಲಾ ಅಕಾಡೆಮಿ,
  ಬೆಂಗಳೂರು, ೧೯೯೯

* ಕಲಾನುಭವ — ವಿ. ಸಿತಾರಾಮಯ್ಯ
  ಬೆಂಗಳೂರು ವಿಶ್ವವಿದ್ಯಾಲಯ
  ಬೆಂಗಳೂರು, ೧೯೭೬

* ಕಲಾ ಪ್ರಪಂಚ — ಡಾ. ಶಿವರಾಮ ಕಾರಂತ
  ವ್ಯಾಸಂಗ ವಿಸ್ತರಣಾ ಪ್ರಕಟಣಾ ವಿಭಾಗ,
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೩

* ಕಲಾವಿದ ಎಂ.ಎ. ಚಟ್ಟಿಯವರ ಜೀವನ ಕಲಾಕೃತಿಗಳ ಒಂದು ಅಧ್ಯಯನ ಲಕ್ಷ್ಮೀದೇವಿ ಗವಾಯಿ
ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨

* ಕಲಾ ಸಂವೇದನೆಯ ಒಳನೋಟಗಳು ಕೆ.ವಿ. ಸುಬ್ರಮಣ್ಯಮ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೯೭

* ಕಲಾ ಸಿದ್ಧಾಂತ ವಿ.ಕೃ. ಗೋಕಾಕ
ಸಾಹಿತ್ಯ ಭಂಡಾರ, ಹುಬ್ಬಳ್ಳಿ

* ಕಲೆಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆ (ಸಂ.) ಆರ್.ವಿ. ಶಾಂತರಾಜ
ಸ್ಪಂದನಾ ಚಿತ್ರಕಲಾವಿದರ ಯುವಬಳಗ,
ಬೆಂಗಳೂರು, ೧೯೮೯

* ಕಲೆಯ ನೆಲೆ ವಿ.ಕೃ. ಗೋಕಾಕ
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ,
ಮೈಸೂರು, ೧೯೭೮

* ಕೆ.ಕೆ. ಹೆಬ್ಬಾರ ಎನ್. ಮರಿಶಾಮಾಚಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೮೭

* ಚಿತ್ರ-ಚಿತ್ತ ಚಿ.ಸು. ಕೃಷ್ಣಶೆಟ್ಟಿ
ಇಳಾ ಪ್ರಕಾಶನ, ಬೆಂಗಳೂರು

* ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು (ಸಂ.) ಎಸ್.ಸಿ. ಪಾಟೀಲ
ವಜ್ರಮಹೋತ್ಸವ ಸ್ಮರಣ ಸಂಚಿಕೆ
ಹಾಲಭಾವಿ ಸ್ಕೂಲ್ ಆಫ್ ಆರ್ಟ್,
ಧಾರವಾಡ, ೧೯೯೬

* ಚಿತ್ರಕಲಾ ಪ್ರಪಂಚ (ಪ್ರ.ಸಂ.) ಪಿ.ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೯೩

* **ಚಿತ್ರಕಲಾ ಚಿಂತನೆ** — ಶಂಕರ ಪಾಟೀಲ
ಪ್ರಗತಿ ಪ್ರಕಾಶನ, ಕಲಾಭವನ
ದಾವಣಗೆರೆ, ೧೯೯೫

* **ಚಿತ್ರಾಂತರಂಗ** — ಶಂಕರ ಪಾಟೀಲ
ಪ್ರಗತಿ ಪ್ರಕಾಶನ, ಕಲಾಭವನ
ದಾವಣಗೆರೆ

* **ಚಿತ್ರಕಲಾವಿದ ಜೆ.ಎಸ್. ಖಂಡೇರಾವ ಒಂದು ಅಧ್ಯಯನ** — ಮಲ್ಲಿಕಾರ್ಜುನ ಸಿ. ಬಾಗೋಡಿ
ಎಂ.ಫಿಲ್ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

* **ಜೆ.ಎಸ್. ಶೆಣೈ** — ಡಾ. ಕಾಸರವಳ್ಳಿ ಕೆ.ಜಿ. ರವೀಶ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೯೫

* **ಡಿ.ವಿ. ಹಾಲಭಾವಿ** — ಎಸ್.ಕೆ. ಹೂಗಾರ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೮೭

* **ದೃಶ್ಯಕಲೆ ಎಂದರೇನು** — ಚಿ.ಸು. ಕೃಷ್ಣಶೆಟ್ಟಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೯೫

* **ದೃಶ್ಯಕಲಾವಿದರು** — ಎನ್. ಮರಿಶಾಮಾಚಾರ್
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೨೦೦೩

* **ದೃಶ್ಯನುಭವ** — ಡಾ. ಮೋಹನರಾವ್ ಬಿ. ಪಂಚಾಳ
ಅನ್ನಪೂರ್ಣ ಪ್ರಕಾಶನ
ಬೀದರ, ೨೦೧೦

* **ದೃಶ್ಯಕಲಾ ವಿಮರ್ಶೆ** — (ಸಂ.) ಪ್ರೊ. ವಿ.ಜಿ. ಅಂದಾನಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೯೮

* ಪ್ರಶಸ್ತಿ ಪಡೆದ ಕಲಾವಿದರು (ಸಂ.) ಪಿ.ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೯೩

* ಭಾರತೀಯ ಸಂಸ್ಕೃತಿ ಎಸ್. ಶ್ರೀಕಂಠ ಶಾಸ್ತ್ರಿ
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ,
ಮೈಸೂರು, ೧೯೭೫

* ಭಾರತದ ದೃಶ್ಯ ಕಲಾವಿದರು ಎನ್. ಮರಿಶಾಮಾಚಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೯೨

* ಮುಖಗಳೊಂದಿಗೆ ಮುಖಾಮುಖಿ ಕೆ.ವಿ. ಸುಬ್ರಮಣ್ಯಂ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೨೦೦೪

* ವಚನಗಳಿಗೆ ದೃಶ್ಯರೂಪ ಎಲ್. ಶಿವಲಿಂಗಪ್ಪ
ಸಚಿತ್ರ ಲೇಖನ

* ವಚನ ಸಾಹಿತ್ಯಕ್ಕೆ ಚಿತ್ರಕಾರರ ಕೊಡುಗೆ ಎಲ್. ಶಿವಲಿಂಗಪ್ಪ
ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು
ಮೈಸೂರು, ೨೦೦೯

* ವರ್ಣ ಸಂಚಯ ಡಾ. ಎಸ್.ಸಿ. ಪಾಟೀಲ
ವಿಜಯ ಚಿತ್ರಕಲಾ ಮಹಾವಿದ್ಯಾಲಯ
ಇಲಕಲ್, ೨೦೦೧

* ವರ್ಣಾ ವರಣ ಚಿ.ಸು. ಕೃಷ್ಣಶೆಟ್ಟಿ
ಚಿತ್ತಾರ ಪ್ರಕಾಶನ, ಬೆಂಗಳೂರು, ೨೦೦೧

* ವ್ಹಿ.ಟಿ. ಕಾಳೆ ಡಾ. ಎಸ್.ಸಿ. ಪಾಟೀಲ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು, ೨೦೦೪

* ವ್ಹಿ.ಜಿ. ಅಂದಾನಿ — ಡಾ. ಶಿವಾನಂದ ಬಂಟನೂರು
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೨೦೦೪

* ಶರಣ ಬಸವೇಶ್ವರರು ಹಾಗೂ ಅವರ ಪರಿಸರದ ಸಾಹಿತ್ಯ — ಡಾ. ಎಸ್.ಎಂ. ಹಿರೇಮಠ
ಪಿಎಚ್.ಡಿ. ಪ್ರಕಟಿತ ಮಹಾಪ್ರಬಂಧ
ಅಶ್ವಿನಿ ಪ್ರಕಾಶನ, ಕಲಬುರ್ಗಿ.

* ಶಿಲ್ಪಕಲಾ ಪ್ರಪಂಚ — ಪಿ.ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೯೪

* ಸಾಧನೆಯ ಸಮುಚ್ಚಯ ಎಲ್. ಶಿವಲಿಂಗಪ್ಪ — ಡಾ. ಎಸ್.ಸಿ. ಪಾಟೀಲ
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ೨೦೦೭
ಧಾರವಾಡ.

* ಸಾಹಿತ್ಯ ಮತ್ತು ಚಿತ್ರಕಲೆ — ಎಂ.ವಿ. ಸೀತಾರಾಮಯ್ಯ
ರಾಘವ ಪ್ರಕಾಶನ,
ಬೆಂಗಳೂರು, ೧೯೮೫

* ಸೌಂದರ್ಯ ಮೀಮಾಂಸೆ — ವಿ.ಕೃ. ಗೋಕಾಕ
ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ, ೧೯೯೩

* ಸೌಂದರ್ಯ ಸಮೀಕ್ಷೆ — ಜಿ.ಎಸ್. ಶಿವರುದ್ರಪ್ಪ
ಸತ್ಯಶ್ರೀ ಪಿಂಟರ್ಸ್,
ಬೆಂಗಳೂರು, ೧೯೯೫

ಸಂದರ್ಶನ ವಕ್ತೃಗಳ ಮಾಹಿತಿ

ಸಂ.	ಹೆಸರು	ವಿಳಾಸ
೧.	ಡಾ. ಎಸ್.ಸಿ. ಪಾಟೀಲ	ಕನ್ನಡ ವಿಶ್ವವಿದ್ಯಾಲಯ, ಹಂಪಿ
೨.	ಸಿ. ಚಂದ್ರಶೇಖರ	ಬೆಂಗಳೂರು
೩.	ಎಂ.ಬಿ. ಪಾಟೀಲ	ಧಾರವಾಡ
೪.	ಶ್ರೀ ಚನ್ನವೀರ ಕಣವಿ	ಧಾರವಾಡ
೫.	ಆರ್ಯ ಆಚಾರ್ಯ	ಧಾರವಾಡ
೬.	ಕೆ.ಎನ್. ರಾಮಚಂದ್ರನ್	ಬೆಂಗಳೂರು
೭.	ಅಶೋಕ ಅಕ್ಕಿ	ಗದಗ
೮.	ಯಾದಪ್ಪ ಪರದೇಶಿ	ವಾಸ್ತುಶಿಲ್ಪ ಪ್ರತಿಮಾಶಾಸ್ತ್ರ ವಿಭಾಗ, ಬಾದಾಮಿ
೯.	ಶಿವಾನಂದ ಬಂಟನೂರು	ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೦.	ಮೋಹನರಾವ್ ಪಾಂಚಳ	ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಕ್ಷೇಪಗಳು

ಕ.ಲ.ಕ.ಅ.	- ಕರ್ನಾಟಕ ಲಲಿತಕಲಾ ಅಕಾಡೆಮಿ
ಕ.ವಿ.ವಿ.ಹಂ.	- ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕ.ವಿ.ವಿ.ಧಾ.	- ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಕು.ವಿ.ವಿ.	- ಕುವೆಂಪು ವಿಶ್ವವಿದ್ಯಾಲಯ
ಕೇಂ.ಲ.ಕ.ಅ.	- ಕೇಂದ್ರ ಲಲಿತಕಲಾ ಅಕಾಡೆಮಿ, ದೆಹಲಿ
ಗು.ವಿ.ವಿ.	- ಗುಲಬರ್ಗಾ ವಿಶ್ವವಿದ್ಯಾಲಯ
ಚಿ.ಕ.ಪ.	- ಚಿತ್ರಕಲಾ ಪರಿಷತ್ತು
ಬೆ.ವಿ.ವಿ.	- ಬೆಂಗಳೂರು ವಿಶ್ವವಿದ್ಯಾಲಯ
ಮ.ವಿ.ವಿ.	- ಮಂಗಳೂರು ವಿಶ್ವವಿದ್ಯಾಲಯ
ಮೈ.ವಿ.ವಿ.	- ಮೈಸೂರು ವಿಶ್ವವಿದ್ಯಾಲಯ


ಪ್ರಶಸ್ತಿಗಳು


ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ
KARAVALI CULTURAL FOUNDATION
ಕಾಸರಗೋಡು
ಗಡಿನಾಡ ಉತ್ಸವ-2006
25, 26 ದಶಂಬರ 2006
ಲಲಿತಕಲಾ ಸದನ (ರಿ.), ಕಾಸರಗೋಡು
ಎಲ್. ಶಿವಲಿಂಗಪ್ಪ
ಚಿತ್ರಕಲೆ, ಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ
ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಸುವರ್ಣ ಕನ್ನಡಿಗ ಪ್ರಶಸ್ತಿ
ನೀಡಿ ಗೌರವಿಸಲಾಗಿದೆ.


ಸನ್ಮಾನ ಪತ್ರ
"ಸುವರ್ಣ ಕನ್ನಡಿಗ ಪ್ರಶಸ್ತಿ"


ಸಾಧಕರಿಗೆ ಸನ್ಮಾನ

ಪ್ರಶಸ್ತಿಗಳು


ಸವಿನೆನಪು
ಸುವರ್ಣ ಕರ್ನಾಟಕ 2006
ಸಮ್ಮೇಳನದ ಸರ್ವಾಧ್ಯಕ್ಷರು
ನಾಡೋಜ ಶ್ರೀ ಜಿ.ಎಸ್.ಖಂಡೇರಾವ
ಅಖಿಲ ಕರ್ನಾಟಕ ದೃಶ್ಯಕಲಾ ಸಾಹಿತ್ಯ
ಪ್ರಥಮ ಸಮ್ಮೇಳನ
ಸಪ್ಟಂಬರ್ 21 ರಿಂದ 23.2005
ಸ್ಥಳ : ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ,ಬನಶಂಕರಿ ಬಾದಾಮಿ
ಕೊಡುಗೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ , ಬಾಗಲಕೋಟೆ


ಬೆಳ್ಳಿ ಹಬ್ಬದ ಸವಿನೆನಪು
ಆಚಾರ್ಯ ಚಿತ್ರಕಲಾ ಭವನ
ಶ್ರೀ ಎಲ್. ಶಿವಲಿಂಗಪ್ಪ ಅವರಿಗೆ


ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ
ಧಾರವಾಡ (ಕೇಂದ್ರ ಕಛೇರಿ)
ವಿಜಯ ಚಿತ್ರಕಲಾ ಮಹಾವಿದ್ಯಾಲಯ ಇಲಕಲ್ಲ
ಎರಡನೆಯ
ರಾಷ್ಟ್ರೀಯ ದೃಶ್ಯಕಲಾ ಸಾಹಿತ್ಯ ಸಮ್ಮೇಳನ 2006
ವಿಜಯ ಚಿತ್ರಕಲಾ ಮಹಾವಿದ್ಯಾಲಯ ಇಲಕಲ್ಲ
ಹದಿನಾರನೆಯ ವಸಂತೋತ್ಸವ
ಶ್ರೀ ಎಲ್.ಶಿವಲಿಂಗಪ್ಪ



ಪ್ರಶಸ್ತಿಗಳು


ನೆನಪಿನ ಕಾಣಿಕೆ ದಿನಾಂಕ: 16.1.2006
ಶ್ರೀ ಬಸವೇಶ್ವರ ಮೂರ್ತಿ ಪ್ರತಿಷ್ಠಾಪನ ಸಮಿತಿ


ಚಿತ್ರ ಹಬ್ಬದ ಸವಿನೆನಪು



ಪ್ರಶಸ್ತಿಗಳು










ಪ್ರಶಸ್ತಿಗಳು









ಪ್ರಶಸ್ತಿ ಪುರಸ್ಕಾರಗಳು

- ಬಸವ ಶ್ರೀ ಪ್ರಶಸ್ತಿ - ೨೦೦೧
  ಬಿ.ಇ.ಎಂ.ಎಲ್.ಬಸವ ಬಳಗ, ಬೆಂಗಳೂರು
- ಕುವೆಂಪು ಶ್ರೀ ಪ್ರಶಸ್ತಿ - ೨೦೦೪
  ಕನ್ನಡ ಅಭಿವೃದ್ಧಿ ಬಳಗ, ಬೆಂಗಳೂರು-೪೦
- ಗಣರೋಜ್ಯೋತ್ಸವ ಪ್ರಶಸ್ತಿ - ೨೦೦೪
  ಗಣರಾಜ್ಯೋತ್ಸವ ಸಮಿತಿ ವರ್ತೂರು ವಿಧಾನ ಸಭಾ ಕ್ಷೇತ್ರ ಬೆಂಗಳೂರು
- ಬೆಳ್ಳಿ ಹಬ್ಬದ ನೆನಪಿನ ಪ್ರಶಸ್ತಿ - ೨೦೦೬
  ಬಿ.ಹೆಚ್.ಇ.ಎಲ್., ಬಸವ ಕಲ್ಯಾಣ ಸಮಿತಿ, ಬೆಂಗಳೂರು
- ತೃತೀಯ ಕನ್ನಡ ಸಾಹಿತ್ಯ ಸಮ್ಮೇಳನ - ೨೦೦೬
  ಕನ್ನಡ ಸಾಹಿತ್ಯ ಪರಿಷತ್ತು ವರ್ತೂರು ವಿಧಾನ ಸಭಾ ಕ್ಷೇತ್ರ, ಬೆಂಗಳೂರು
- ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಸುವರ್ಣ ಕನ್ನಡಿಗ ಪ್ರಶಸ್ತಿ - ೨೦೦೬ ಕಾಸರಗೋಡು
- ರಾಜ್ಯಮಟ್ಟದ ಪ್ರಜ್ಞಾಪೀಠ ಪ್ರಶಸ್ತಿ - ೨೦೦೭
  ಜನಮನ ಕನ್ನಡ ಸಂಘಟನೆ, ಬೆಂಗಳೂರು
- ಸುವರ್ಣ ಕರ್ನಾಟಕ ವರ್ಷದ ನೆನಪಿನ ಗೌರವ ಸನ್ಮಾನ - ೨೦೦೭
  ಕ. ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
- ಕ. ಲಲಿತ ಕಲಾ ಅಕಾಡಮಿ ಪ್ರಶಸ್ತಿ - ೨೦೦೮
  ಪ್ರಶಸ್ತಿ ನೀಡಿಕೆ ೩೦.೫.೨೦೦೯ ಚಿಕ್ಕಮಗಳೂರು

ಸನ್ಮಾನ

ಬಸವ ಕೇಂದ್ರ ಮೈಸೂರು ಮಹಾಲಿಂಗೇಶ್ವರ ಮಠ ೯.೭.೨೦೦೮

ಬಿ.ಇ.ಎಂ.ಎಲ್ ಬಸವ ಸಮಿತಿ ಮೈಸೂರು ವೀಣೆ ಶೇಷಣ್ಣ ಭವನ ೨೮.೦೬.೨೦೦೯

ಬವ ಸಮಿತಿ ಬಸವನಗರ ಬೆಂಗಳೂರು-೩೭, ೧೨.೦೭.೨೦೦೯

ಕಲಾ ಪ್ರದರ್ಶನಗಳು

೧೯೭೪ರಿಂದ ೧೯೯೦ರವರೆಗೆ ಹಾಗೂ ಹೊರಗೆ ನಡೆದ ಅನೇಕ ಕಲಾ ಪ್ರದರ್ಶನದಲ್ಲಿ ಭಾಗವಹಿಸಿ ಅನೇಕ ಬಹುಮಾನಗಳ ಗಳಿಕೆ, ಅಕಾಡಮಿ ಪ್ರದರ್ಶನ, ಗುಂಪು ಪ್ರದರ್ಶನ ಇತ್ಯಾದಿ.

೧೯೮೦,೮೬,೮೭	: ಏಕವ್ಯಕ್ತಿ ಕಲಾ ಪ್ರದರ್ಶನ, ಬೆಂಗಳೂರು - ಮಂಗಳೂರು - ಕಾಸರಗೋಡು
೧೯೮೧,೮೩,೮೫,೯೩,೨೦೦೩	: ಕರ್ನಾಟಕ ಕಲಾ ಮೇಳದಲ್ಲಿ ಪ್ರದರ್ಶನ
೧೯೯೦	: ಪ್ರಥಮ ಸಿಂಪರಣೆ ಚಿತ್ರಗಳ ಪ್ರದರ್ಶನ ಅತ್ಯಂತ ಪ್ರಶಂಸೆಗಳಿಸಿದ ಪ್ರದರ್ಶನವಿದು

೧೯೯೫	:	ರಾಷ್ಟ್ರೀಯ ಕಲಾ ಪ್ರದರ್ಶನ, ಬೆಂಗಳೂರು
೧೯೯೬	:	ಮರಳಚ್ಚಿನಲ್ಲಿ ಮಾಡಿದ ಶಿಲ್ಪಗಳ ಪ್ರದರ್ಶನ
೧೯೯೭	:	ಗುಂಪು ಪ್ರದರ್ಶನ, ಬೆಂಗಳೂರು
೧೯೯೭	:	ಶಿಲ್ಪಕಲಾ ಅಕಾಡೆಮಿ ಶಿಲ್ಪೋತ್ಸವದಲ್ಲಿ ಶಿಲ್ಪಗಳ ಪ್ರದರ್ಶನ, ವೆಂಕಟಪ್ಪ ಆರ್ಟ್ ಗ್ಯಾಲರಿ
೧೯೯೭	:	ಚಿತ್ರ ಮತ್ತು ಶಿಲ್ಪಗಳ ಪ್ರದರ್ಶನ, ಮೈಸೂರು
೧೯೯೯-೨೦೦೦	:	ಮರಳಚ್ಚಿನ ಶಿಲ್ಪಕಾರ್ಯಗಾರದ ನಿರ್ದೇಶನ
೨೦೦೦	:	ಶಿಲ್ಪೋತ್ಸವದಲ್ಲಿ ಭಾಗವಹಿಸುವಿಕೆ
೨೦೦೧	:	ಅಖಿತ ಭಾರತ ಶಿಲ್ಪ ಶಿಬಿರದಲ್ಲಿ ಭಾಗವಹಿಸುವಿಕೆ.
೨೦೦೩	:	ಪ್ರಾಚ್ಯ ವಸ್ತು ಸಂಶೋಧನ ಇಲಾಖೆ ಹಂಪೆ ಇವರು ರೂಪಿಸಿದ ಶ್ರೀರಂಗಪಟ್ಟಣ ಶಿಬಿರದಲ್ಲಿ ಭಾಗವಹಿಸುವಿಕೆ.
೨೦೦೩	:	ಶಿಲ್ಪ ಪ್ರದರ್ಶನ, ಮೈಸೂರು.
೨೦೦೩,೦೪,೦೫,೦೬	:	ಕರ್ನಾಟಕ ಚಿತ್ರಕಲಾ ಪರಿಷತ್ ಏರ್ಪಡಿಸಿದ ಚಿತ್ರಸಂತೆಯಲ್ಲಿ
	:	ಪಾಲ್ಗೊಳ್ಳುವಿಕೆ.
೨೦೦೬	:	ಕಾಸರಗೋಡಿನಲ್ಲಿ ಪ್ರದರ್ಶನ.
೨೦೦೮	:	ಆಕ್ಲೆಂಡ್, ನ್ಯೂಜಿಲೆಂಡ್‌ನಂತಹ ವಿದೇಶಿ ನೆಲದಲ್ಲಿ ಕಲಾ ಪ್ರದರ್ಶನ.
ಸಂಗ್ರಹ	:	ತಂಜಾವೂರು ಶೈಲಿಯಲ್ಲಿ ರಚಿಸಿದ ದೇವತಾ ಮೂರ್ತಿಗಳ ಚಿತ್ರಗಳು, ಬಿದಿರು ತೆಂಗಿನ ಕರಟಗಳಿಂದ ಮಾಡಿದ ಕರಕುಶಲ ಕಲೆಗಳು, ಬೈಲೋರಷ್ಯಾ, ಜರ್ಮನ್, ತಾಂಜಾನಿಯಗಳಲ್ಲಿ ಖಾಸಗಿ ಸಂಗ್ರಹಣ, ತೈಲ ಚಿತ್ರಗಳು, ಬಿ.ಇ.ಎಂ.ಎಲ್. ಮತ್ತಿತರ ಖಾಸಗೀ ಕಾರ್ಖಾನೆಗಳಲ್ಲಿ ಸಂಗ್ರಹವಾಗಿದೆ. ರಾಷ್ಟ್ರೀಯ ಕೇಂದ್ರ ಅಕಾಡೆಮಿಯಲ್ಲಿ ಸಂಗ್ರಹ.

ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳು ಕಲೆಗಳನ್ನು ಕುರಿತು

- **ಕರ್ನಾಟಕದ ಕಲಾ ಜಗತ್ತಿಗೆ ರವಿವರ್ಮ ಸಿದ್ಧಲಿಂಗ ಸ್ವಾಮಿಗಳು ಮತ್ತು ಕೆ. ವೆಂಕಟಪ್ಪ ಇವರ ಕೊಡುಗೆ**
  ಎ.ಸಿ.ಬಿ.ಕಲಾಸಂಘ, ಗಾಂಧಿನಗರ ಬೆಂಗಳೂರು - ೯, (೧೯೯೬)
- **ಅಭಿವ್ಯಕ್ತಿ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಇಂದು ರಚಿತವಾಗುತ್ತಿರುವ ಕಲೆಗಳು ಅರ್ಥಹೀನ.**
  ಕರ್ನಾಟಕ ಚಿತ್ರಕಲಾವಿದರ ಮಹಾಪರಿಷತ್ತು ಜಯನಗರ, ಬೆಂಗಳೂರು, (೧೯೯೬)
- **ಅ.ನ.ಕೃ. ದೃಷ್ಟಿಯಲ್ಲಿ ರಾಜಾ ರವಿವರ್ಮ**
  ಎ.ಸಿ.ಬಿ.ಕಲಾಸಂಘ, ಬೆಂಗಳೂರು
- **ಅನುಕರಣೆ ಅಥವಾ ಅನುಸೃಷ್ಟಿ ಒಂದು ಕಲೆಯೇ?**
- **ಧರ್ಮ ಮತ್ತು ಕಲೆ**
  ಕರ್ನಾಟಕ ಚಿತ್ರಕಲಾವಿದರ ಮಹಾಪರಿಷತ್ತು ಜಯನಗರ, ಬೆಂಗಳೂರು. (೧೯೯೯)
- **ನಮ್ಮ ಕಲಾವಿದರಲ್ಲಿ ಶಾಸ್ತ್ರಪ್ರಜ್ಞೆ ಮತ್ತು ಸಾಹಿತ್ಯ ಪ್ರಜ್ಞೆಯ ಕೊರತೆ.**
  ಎ.ಸಿ.ಬಿ.ಕಲಾಸಂಘ, ಗಾಂಧಿನಗರ ಬೆಂಗಳೂರು-೯, (೧೯೯೬)

[illegible]

- ಪತ್ರಿಕಾ ವಿಮರ್ಶಾ ಬರಹಗಳು ಜನರನ್ನು ಎಷ್ಟು ತಲುಪುತ್ತಿವೆ.
  ಸಾಹಿತ್ಯ ವೇದಿಕೆ, ಬಸವನಗುಡಿ, ಬೆಂಗಳೂರು, (೨೦೦೧)
- ಸಂಗೀತ, ನೃತ್ಯದ ತರಗತಿಗಳನ್ನು ಬೆಳಿಗ್ಗೆ - ಸಂಜೆ ನಡೆಸಲು ಅನುಮತಿ ಇತ್ತಿರುವ ಹಾಗೆ ಲಲಿತ ಕಲೆಗಳಲ್ಲಿ ಒಂದಾದ ಚಿತ್ರಕಲೆಗೇಕೆ ಸರ್ಕಾರ ಅವಕಾಶ ನೀಡುತ್ತಿಲ್ಲ ಒಂದು ಚರ್ಚೆ.
  ಆಚಾರ್ಯ ಚಿತ್ರಕಲಾ ಭವನ, ಬೆಂಗಳೂರು-೩೭, (೨೦೦೧)
- ರಮ್ಯ ಶೈಲಿಯ ಚಿತ್ರರಚನೆಯಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳು "ರೊಮ್ಯಾಂಟಿಕ್ ಕಲಾವಿದರು"
  ವಿಚಾರ ಸಂಕಿರಣ ಮತ್ತು ಪ್ರದರ್ಶನ (೨೦೦೨), ಆಚಾರ್ಯ ಚಿತ್ರಕಲಾ ಭವನ, ಬೆಂಗಳೂರು.
- ಭಾರತೀಯ ಚಿತ್ರ ಹಾಗೂ ಶಿಲ್ಪಗಳಲ್ಲಿ ಆಸನಗಳು ಮತ್ತು ಕೇಶವಿನ್ಯಾಸ
  ದೃಶ್ಯ ಕಲಾ ಪರಿಷತ್ ಶಿರಶಿ (೨೦೦೩)
- ಶತಮಾನೋತ್ಸವ ಸ್ಮರಣೆ ಅರಮನೆ ಕಲಾವಿದ ಎಸ್.ಶಂಕರರಾಜು
  ಕ.ಲಲಿತ ಕಲಾ ಅಕಾಡಮಿ ಮತ್ತು ಚಿತ್ರಕಲಾ ಪರಿಷತ್ತು, ಬೆಂಗಳೂರು (೨೦೦೪)
- ಜನ್ಮ ಶತಮಾನೋತ್ಸವದ ನೆನಪಿನಲ್ಲಿ ಎಸ್.ನಂಜುಂಡಸ್ವಾಮಿ
  ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಮೈಸೂರು (೨೦೦೫)
- ಕರ್ನಾಟಕ ಚಿತ್ರಕಲಾ ಪರಂಪರೆಯಲ್ಲಿ ಮೈಸೂರು ಶೈಲಿ
  ಅಖಿಲ ಕರ್ನಾಟಕ ದೃಶ್ಯ ಕಲಾ ಸಾಹಿತ್ಯ ಪ್ರಥಮ ಸಮ್ಮೇಳನ ಕರ್ನಾಟಕ ದೃಶ್ಯಕಲಾ ಅಕಾಡಮಿ ಬಾದಾಮಿ (೨೦೦೫)
- ಕ. ಚಿತ್ರಕಲಾ ಪರಂಪರೆ ವಿಚಾರ ಸಂಕಿರಣ ಅಧ್ಯಕ್ಷತೆ ೩೧.೩.೨೦೦೯ ತುಮಕೂರು.
  ಕನ್ನಡ ವಿಶ್ವವಿದ್ಯಾಲಯ ಹಂಪಿ ಮತ್ತು ರವೀಂದ್ರಕಲಾನಿಕೇತನ ತುಮಕೂರು ಸಂಯುಕ್ತವಾಗಿ.
- ಎರಡನೇ ರಾಷ್ಟ್ರೀಯ ದೃಶ್ಯಕಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ೧೮/೧೯.೪.೨೦೦೯ ಇಲಕಲ್ಲ, ಬಾಗಲಕೋಟೆ
- ಶಿಲ್ಪ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳ ಸಾಧನೆ ಉಪನ್ಯಾಸ

ಮಾಧ್ಯಮಗಳಲ್ಲಿ ಸಂದರ್ಶನ

೦೨.೦೨.೨೦೦೦	ಉದಯ ಟಿ.ವಿ.	ಬೆಳಿಗ್ಗೆ ೮-೦೦ರಿಂದ ೮-೪೫
೧೪.೦೯.೨೦೦೦	ಆಕಾಶವಾಣಿ	ರಾತ್ರಿ ೯-೧೫ ರಿಂದ ೯-೪೫
೨೧.೧೦.೨೦೦೫	ದೂರದರ್ಶನ, ಚಂದನ (ಬೆಳಗು ಕಾರ್ಯಕ್ರಮ)	ಬೆಳಿಗ್ಗೆ ೭-೦೦ ರಿಂದ ೭-೪೫
೧೨.೦೫.೨೦೦೯	ಉದಯ ಟಿ.ವಿ.	ಬೆಳಿಗ್ಗೆ ೮-೦೦ ರಿಂದ ೮-೩೦

ಎಲ್. ಶಿವಲಿಂಗಪ್ಪನವರ ಬಿಡುಗಡೆಯಾದ ಪುಸ್ತಕಗಳು

೧.	ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳು	೧೯೯೯	ಕ.ಶಿ.ಅ.
೨.	ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳು ಚಿತ್ರ ಸಂಪುಟ	೧೯೯೯	ಕ.ಶಿ.ಅ.
೩.	ಸಾತ್ವಿಕ ಶಿಲ್ಪ ನಾಗೇಂದ್ರ ಸ್ಥಪತಿ	೧೯೯೯	ಕ.ಶಿ.ಅ.

೪.	ಲೋಹಶಿಲ್ಪಿ ನೀಲಕಂಠಾಚಾರ್	೨೦೦೧	ಕ.ಶಿ.ಅ.
೫.	ಚಿತ್ರಕಲಾವಿದ ಎಚ್.ಎಸ್.ಇನಾಮತಿ	೨೦೦೪	ಕ.ಶಿ.ಅ.
೬.	ಕಲಾ ಶಿಕ್ಷಕ ಕಾಳಪ್ಪ	೨೦೦೪	ಲ.ಕ.ಅ.
೭.	ವಚನಗಳಿಗೆ ದೃಶ್ಯರೂಪ (ಸಚಿತ್ರ ಲೇಖನ ಸಹಿತ)	೨೦೦೪	ಬಸವ ಪ್ರಕಾಶನ
೮.	ಶತಮಾನೋತ್ಸವ ಸವಿನೆನಪಿನ ಕಿರುಸಂಚಿಕೆ	೨೦೦೪	ಕ.ಲ.ಕ.ಅ.
೯.	ಕರ್ನಾಟಕದಲ್ಲಿ ಚಿತ್ರಕಲಾ ಬೆಳವಣಿಗೆ ಒಂದು ಸಮೀಕ್ಷೆ	೨೦೦೬	ಕ.ಸಾ.ಪ.
೧೦.	ಲೋಹಶಿಲ್ಪಿ ವೆಂಕಟಾಚಾರ್	೨೦೦೬	ಕ.ಶಿ.ಅ.
೧೧.	ಪ್ರಥಮ ಮಹಿಳಾ ಶಿಲ್ಪಿ, ಕಲಾವಿದೆ ಸುಭಾಷಿಣಿದೇವಿ	೨೦೦೯	ಕ.ಲ.ಕ.ಅ.
೧೨.	ಕಲಾದಾರ್ಶನಿಕನ ದಶಮುಖಗಳು	೨೦೦೯	ರಾ.ದೃಶ್ಯಕಲಾ ಅಕಾಡಮಿ
೧೩.	ಶಿಲಾಶಿಲ್ಪಿ ಬಸವಣ್ಣ	೨೦೦೮	ಕ.ಶಿ.ಅ.
೧೪.	ರೇಖಾಚಿತ್ರ ನಿಪುಣ ಮ.ಈ.ಗುರು	೨೦೦೯	ಕ.ಲ.ಕ.ಅ.
೧೫.	ವಚನಗಳಿಗೆ ದೃಶ್ಯರೂಪ ಎರಡನೇ ಮುದ್ರಣ	೨೦೦೮	ಬಸವ ಪ್ರಕಾಶನ
೧೬.	ನಮ ಶಿಲ್ಪಾಚಾರ್ಯರು		ಮುದ್ರಣದಲ್ಲಿ
೧೭.	ವಚನ ಸಾಹಿತ್ಯಕ್ಕೆ ಕಲಾವಿದರ ಕೊಡುಗೆ	೨೦೦೯	ಅ.ಕ.ವಚನ ಸಾಹಿತ್ಯ ಪರಿಷತ್ತು, ಮೈಸೂರು.

ವಿವಿಧ ಸ್ಮರಣ ಸಂಚಿಕೆಗಳಿಗೆ ಬರೆದ ಪ್ರೌಢ ಲೇಖನಗಳು

- ಸಂಸ್ಕೃತವನ್ನು ಸಾರ್ವತ್ರಿಕಗೊಳಿಸಿದ ವಿದ್ವಾನ್ ಎಂ.ಜಿ.ಎನ್.
  ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರ ಸಂಸ್ಮರಣ ಸಂಪುಟ ಅಮರವಾಣಿ - ೧೯೯೪
- **ಶಿಕ್ಷಣ ಸಂವರ್ಧನೆಯಲ್ಲಿ ಲಿಂಗಾಯಿತ ಮಠಗಳು**
  ಬಿ.ಇ.ಎಂ.ಎಲ್.ಬಸವ ಬಳಗದ ಬೆಳ್ಳಿ ಹಬ್ಬದ ನೆನಪಿನ ಸಂಚಿಕೆ - ೨೦೦೧
- **ಕೀರ್ತನಕಾರ ಶಿವಲಿಂಗಸ್ವಾಮಿ ಹಿರೇಮಠ**
  ಕಲಾಚೇತನ ಸಂಗೀತ ನೃತ್ಯ ಅಕಾಡಮಿ ಕನ್ನಡ ಭವನ ಬೆಂಗಳೂರು - ೨೦೦೪
- **ಕನ್ನಡ ನಾಡಿನ ವೀರಶೈವ ಚಿತ್ರಕಲಾವಿದರು**
  ನಿರ್ವಾಣ ಶ್ರೀ ಮ.ಪ್ರ.ಸ್ವ.ಶ್ರೀ ಮುಮ್ಮುಡಿ ನಿರ್ವಾಣ ಮಹಾಸ್ವಾಮಿಗಳು
  ಪಟ್ಟಾಧಿಕಾರ ರಜತ ಮಹೋತ್ಸವ ಸಂಪುಟ ಕನಕಪುರ - ೨೦೦೫
- **ಸಾಂಪ್ರದಾಯಿಕ ಕಲಾ ಬೆಳವಣಿಗೆ**
  ಸುವರ್ಣ ಕರ್ನಾಟಕ ನೆನಪಿನ ಸಂಚಿಕೆ ನವ ಕರ್ನಾಟಕ ಪ್ರಕಾಶನ - ೨೦೦೬ (ಮುದ್ರಣದಲ್ಲಿ)
- **ಮೈಸೂರು ಜಿಲ್ಲೆಯ ಶಿಲ್ಪ ಸಂಪತ್ತು**
  ಮೈಸೂರು ಜಿಲ್ಲೆ ಕ.ಸಾ.ಸಮ್ಮೇಳನ ಸ್ಮರಣಸಂಚಿಕೆ ಅಂಬಾರಿ - ೨೦೦೮
- **ಕಲಾಗುರು ವೈ. ಸುಬ್ರಮಣ್ಯರಾಜು**
  ಜನ್ಮ ಶತಮಾನೋತ್ಸವ ಸಂಚಿಕೆ ಕ. ಚಿತ್ರಕಲಾ ಪರಿಷತ್ತು - ೨೦೦೮
- ಸಂಪಾದಕ ಶ್ರೀ ಜಂಬುಕೇಶ್ವರ ಅಭಿನಂದಾ ಗ್ರಂಥ - ೨೦೦೯

ರಾಜ್ಯದ ವಿವಿಧ ಸಂಘಟನೆಗಳು, ಮಠ ಪೀಠಗಳು, ವಿಚಾರ ವೇದಿಕೆಗಳು ಏರ್ಪಡಿಸಿದ್ದ ಕಾರ್ಯಕ್ರಮಗಳಲ್ಲಿ ಮಂಡಿಸಿದ ಪ್ರಮುಖ ಉಪನ್ಯಾಸಗಳು

೧. ಅಕ್ಕನ ವಚನಗಳಲ್ಲಿ ಮನೋನಿಗ್ರಹ.

೨. ವಾಚ್ಯಾರ್ಥ ಮತ್ತು ಸೂಚ್ಯಾರ್ಥಗಳ ಸಂಗಮ ಅಲ್ಲಮನ ಬೆಡಗಿನ ವಚನಗಳು.

೩. ಪ್ರವಚನ ಪಿತಾಮಹ ಸದ್ಗುರು ಲಿಂಗಾನಂದ ಸ್ವಾಮಿಗಳು.

೪. ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಚಿಂತನೆ.

೫. ಜಯದೇವಿ ತಾಯಿ ಲಿಗಾಡೆಯವರ ಬದುಕು ಮತ್ತು ಬರಹ.

೬. ತ್ರಿಪದಿ ಸಾಹಿತ್ಯಕ್ಕೆ ಸರ್ವಜ್ಞನ ಕೊಡುಗೆ.

೭. ಶಿಕ್ಷಣ ಸಂವರ್ಧನೆಯಲ್ಲಿ ವೀರಶೈವ ಮಠಗಳ ಪಾತ್ರ.

೮. ಮಠಗಳು ಆಂಗ್ಲಶಿಕ್ಷಣ ಕಲಿಸುತ್ತದೆಯೇ ವಿನಃ ಆತ್ಮಾಭಿವೃದ್ಧಿಯ ಶಿಕ್ಷಣ ನೀಡುತ್ತಿಲ್ಲ.

೯. ದೇವತಾ ಶಿಲ್ಪಗಳು ಏಕತೆಗೆ ಪೂರಕವೇ ಅಥವಾ ಮಾರಕವೆ.

೧೦. ಧಾರ್ಮಿಕ ನೇತಾರರೆನ್ನುವ ಗುರುಗಳಿಂದಲೇ ಒಳಪಂಗಡಗಳು ಜೀವಂತವಾಗಿವೆ.

೧೧. ಲಿಂಗೋದ್ಭವ ಮೂರ್ತಿ ಕಲ್ಪನೆ ಬಂದಿದ್ದು ೯ನೇ ಶತಮಾನದ ಆದಿಯಲ್ಲಿ.

೧೨. ಗದ್ದುಗೆಗಳ ನಿರ್ಮಾಣ ಮತ್ತು ಪೂಜೆ ಬಹುದೇವತಾ ಉಪಾಸನೆಯ ಮತ್ತೊಂದು ಮುಖ.

೧೩. ಅರ್ಚನೆಗೆ ಸಂಸ್ಕೃತ ಅತ್ಯಾವಶ್ಯಕವೇ ಎಂಬ ವಿಚಾರ ಸಂಕಿರಣದಲ್ಲಿ ಸ್ವತಂತ್ರ ಪ್ರಜ್ಞೆ, ವೈಚಾರಿಕತೆ ಬೆಳೆಸಿಕೊಳ್ಳಲು ಸಂಸ್ಕೃತ ವ್ಯಾಮೋಹ ಒಂದು ದೊಡ್ಡ ತೊಡಕಾಗಿದೆ ಎಂಬ ಪ್ರಬಂಧ ಮಂಡನೆ.

೧೪. ಕನ್ನಡ ಸಾಹಿತ್ಯ ಪರಿಷತ್ ಬೆಳವಣಿಗೆಯಲ್ಲಿ ಪಂಡಿತರತ್ನಂ ಬಿ.ಶಿವಮೂರ್ತಿ ಶಾಸ್ತ್ರಿಗಳು ಮತ್ತು ಜಿ. ನಾರಾಯಣ ಅವರ ಕೊಡುಗೆ.

೧೫. ವಚನ ಸಾಹಿತ್ಯಕ್ಕೆ ದೃಶ್ಯರೂಪ ನೀಡಿದ ಕಲಾವಿದರು.

೧೬. ಸಾಹಿತ್ಯ ಸೃಷ್ಟಿಯಲ್ಲಿ ಡಾ.ಜ.ಚ.ನಿ.ಯವರ ಕೊಡುಗೆ.

೧೭. ಕರ್ನಾಟಕದ ರಂಗಭೂಮಿ ಬೆಳವಣಿಗೆಯಲ್ಲಿ ಕಂಪನಿ ನಾಟಕಗಳು ಮತ್ತು ಹವ್ಯಾಸಿ ತಂಡಗಳು.

೧೮. ಕಾರ್ಖಾನೆಗಳಲ್ಲಿ ಕನ್ನಡಪರ ಸಂಘಟನೆಗಳ ಅವಶ್ಯಕತೆ.

೧೯. ಕನ್ನಡ ಭಾಷಾಭಿವೃದ್ಧಿಗೆ ವಚನಕಾರರ ಕೊಡುಗೆ.

೨೦. ದಲಿತರ ಧ್ವನಿಯಾಗಿದ್ದ ಬಸವಣ್ಣ.



